5. ನಿಲುವಳಿ ಸೂಚನೆ (ಅನುಮತಿ ಕೋರಿ ಚರ್ಚೆ)

ವಿಷಯ:- ಕಾವೇರಿ ಜಲ ವಿವಾದ ಕುರಿತು

+ **ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಅಧ್ಯಕ್ಷರೆ, ಇವತ್ತು ಪ್ರಮುಖವಾದಂಥ ಪ್ರಸ್ತಾಪವನ್ನು ನಾನು ಇಲ್ಲಿ ಮಾಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು:- ಈ ದಿನ ಶೂನ್ಯ ವೇಳೆ ಇಲ್ಲ. ನಿಲುವಳಿ ಸೂಚನೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಸಹ ನೋಟೀಸ್ ಕೊಟ್ಟಿದ್ದಾರೆ. ನೀವೆಲ್ಲರೂ ಸಹ ಒಂದೇ ವಿಷಯದ ಮೇಲೆ ನಿಲುವಳಿ ಸೂಚನೆ ಕೊಟ್ಟಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಯಾವುದೇ ಸಂದರ್ಭದಲ್ಲಿ ಕಾವೇರಿ ಜಲಾನಯನ ಪ್ರದೇಶದ ಸಮಸ್ಯೆ ಬಂದಾಗ ಅಥವಾ ಕೃಷ್ಣಾ ನೀರಿನ ಯಾವುದೇ ಒಂದು ವಿವಾದ ಬಂದಾಗ . . .

ಅಧ್ಯಕ್ಷರು:- ಇದನ್ನು ಪ್ರಾಸ್ತಾವಿಕ ಮನ್ನಣೆ ಎಂದು ಹೇಳಿ ತೆಗೆದುಕೊಳ್ಳುತ್ತಿದ್ದೇವೆ. ನಿಲುವಳಿ ಸೂಚನೆ ಬಗ್ಗೆ ಎಲ್ಲಾ ವಿರೋಧ ಪಕ್ಷದ ನಾಯಕರಿಂದ ಬಂದಿರುವುದರಿಂದ ಎಲ್ಲರಿಗೂ ಅವಕಾಶ ಕೊಡುತ್ತೇನೆ. ತಾವು ಪ್ರಾಸ್ತಾವಿಕವಾಗಿ ಏನು ಮನವಿ ಸಲ್ಲಿಸಬೇಕೆಂದು ಇದ್ದೀರೋ ಅದರ ಬಗ್ಗೆ ದಯ ಮಾಡಿ ಮನವಿ ಸಲ್ಲಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಈ ನಾಡಿನ ರೈತನ ಹಿತದ ಪ್ರಶ್ನೆ ಬಂದಾಗ, ನೀರಿನ ಪ್ರಶ್ನೆ ಬಂದಾಗ, ಯಾವುದೇ ಸಂದರ್ಭದಲ್ಲಿ ರಾಜಕಾರಣವನ್ನು ಮಾಡಲಿಕ್ಕೆ ನಾವು ಹೋಗಲಿಲ್ಲ. ಸದನದಲ್ಲಿ ಪ್ರಸ್ತಾಪ ಮಾಡುವುದು ಅಗತ್ಯವಿಲ್ಲವೆಂದು ತಾವು ಹೇಳಿದಾಗ, ಮುಖ್ಯ-ಮಂತ್ರಿಗಳು ಸಭೆ ಕರೆದಾಗ ಅಲ್ಲಿ ನಾವು ಅನೇಕ ಸಂದರ್ಭಗಳಲ್ಲಿ ನಿಮ್ಮ ಜೊತೆ ಪ್ರತಿಪಕ್ಷದ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದೇವೆ. ಸದನದಲ್ಲಿ ಕೆಲವು ಪ್ರಮುಖವಾದಂಥ ವಿಷಯಗಳನ್ನು ರಾಜ್ಯದ ಹಿತ ದೃಷ್ಟಿಯಿಂದ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ ಎಂದು ತಾವು ಹೇಳಿದಾಗ ಅಧ್ಯಕ್ಷರ ಕೊಠಡಿಗೆ ಬಂದು ಅನೇಕ ಸಂದರ್ಭಗಳಲ್ಲಿ ಪ್ರಮುಖವಾದ ವಿಷಯಗಳನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಆದರೆ ಇವತ್ತು ನನಗೆ ನೋವು ತರುವಂಥ ಸಂಗತಿ ಏನೆಂದರೆ, ಕಳೆದ ಅನೇಕ ವರ್ಷಗಳಿಂದ ಸದನದ ಒಳಗೆ ಮತ್ತು ಹೊರಗೆ ಹೋರಾಟ ಮಾಡಿಕೊಂಡು ಬರುತ್ತಿರುವಂಥ ಕಾವೇರಿ ಜಲವಿವಾದದ ಬಗ್ಗೆ ಅನೇಕ ರೀತಿಯ ಪ್ರಯತ್ನಗಳು ಅದರೂ ಇದುವರೆಗೆ ಯಾವುದೇ ಸಮಸ್ಯೆ ಬಗೆಹರಿದಿಲ್ಲ. ಅನಿವಾರ್ಯವಾಗಿ ಸುಪ್ರೀಂ ಕೋರ್ಟ್ ಮಧ್ಯೆ ಪ್ರವೇಶ ಮಾಡಿ ಟ್ರಿಬ್ಯುನಲ್ ಅನ್ನು ನೇಮಕ ಮಾಡುವಂಥ ಒಂದು ವಿಶೇಷವಾದಂಥ ಪರಿಸ್ಥಿತಿ ಜನತಾ ಪಕ್ಷ ಅಧಿಕಾರದಲ್ಲಿ ಇದ್ದಂಥ ಕಾಲದಲ್ಲಿ, ತಮ್ಮ ಕಾಲದಲ್ಲಿ ಆ ಒಂದು ಸಂದರ್ಭದಲ್ಲಿ ಕಾವೇರಿ ಸಮಸ್ಯೆ ಇಲ್ಲಿ ಉದ್ಭವವಾಯಿತು. ಆವತ್ತಿನಿಂದ ಇವತ್ತಿನವರೆಗೆ

ಸದನದ ಒಳಗಡೆ ಅನೇಕ ಸಂದರ್ಭಗಳಲ್ಲಿ ಗಂಭೀರವಾದ ಚರ್ಚೆಯಾಗಿದೆ. ಯಾವುದೇ ಕಾರಣಕ್ಕೂ ಟ್ರಿಬ್ಯುನಲ್ ಮುಂದೆ ನೀವು ಹೋಗಬಾರದು, ಬಹಿಷ್ಕಾರ ಹಾಕಬೇಕು, ರಾಷ್ಟ್ರೀಯ ಜಲನೀತಿ ಮಾರ್ಗಸೂಚಿ ಇಲ್ಲದೆಯೇ ಯಾವುದೇ ಟ್ರಿಬ್ಯುನಲ್, ಯಾವುದೇ ಕೋರ್ಟು ಒಮ್ಮತದ ಒಂದು ತೀರ್ಮಾನ ಕೊಡುವುದಕ್ಕೆ ಸಾಧ್ಯವಿಲ್ಲ. ಈ ಹಿನ್ನಲೆಯಲ್ಲಿ ಈ ಸದನದಲ್ಲಿ ಒಂದು ನಿರ್ಣಯ ಸರ್ವಾನುಮತದಿಂದ ಮಾಡಿದ್ದೇವೆ. ಕಾವೇರಿ ಟ್ರಿಬ್ಯುನಲ್ 11 ಟಿ.ಎಂ.ಸಿ. ನೀರನ್ನು ತಮಿಳುನಾಡಿಗೆ ಬಿಡಬೇಕೆಂದು ಹೇಳಿದಾಗ ಮಾನ್ಯ ಪ್ರಧಾನಿಯವರು ಮಧ್ಯೆ ಪ್ರವೇಶ ಮಾಡಿ ತಜ್ಞರನ್ನು ಕಳುಹಿಸಿ 6 ಟಿ.ಎಂ.ಸಿ. ನೀರನ್ನು ಬಿಡಬೇಕು ಎನ್ನುವ ಒತ್ತಾಯ ಬಂದಾಗ ಜನರ ಅಭಿಪ್ರಾಯಕ್ಕೆ ವಿರುದ್ಧವಾಗಿ ಅಂದಿನ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟ ಮೇರೆಗೆ, ಇನ್ನು ಮುಂದೆ ಟ್ರಿಬ್ಯುನಲ್ ಮುಂದೆ ಯಾವುದೇ ಕಾರಣಕ್ಕೂ ಹೋಗುವುದಿಲ್ಲ, ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಬರುವುದಕ್ಕೆ ಮುಂಚೆ ಟ್ರಿಬ್ಯುನಲ್ ಮುಂದೆ ಹೋಗುವುದಿಲ್ಲವೆಂದು ಹೇಳಿ ಲಿಖಿತ ಮೂಲಕ ನೂರಾರು ಜನ ಪತ್ರಕರ್ತರು, ಟಿ.ವಿ. ಹೀಗೆ ಎಲ್ಲರ ಸಾಕ್ಷಿಗಳ ಎದುರುಗಡೆ ನೀವು ಒಪ್ಪಿಕೊಂಡ ಮೇಲೆ ನಾವು 6 ಟಿ.ಎಂ.ಸಿ. ನೀರನ್ನು ಬಿಡುವುದಕ್ಕೆ ಒಪ್ಪಿಕೊಂಡೆವು. ಮುಖ್ಯಮಂತ್ರಿಯವರು, ಉಪಮುಖ್ಯಮಂತ್ರಿ-ಯವರು ಮತ್ತು ನೀರಾವರಿ ಸಚಿವರು ತಮಿಳುನಾಡು ಮುಖ್ಯಮಂತ್ರಿಗಳ ಜೊತೆಗೆ ಮಾತುಕತೆಗೆ ಹೋಗುವಂಥ ಸಂದರ್ಭದಲ್ಲಿ ಯಾವ ಆಧಾರದ ಮೇಲೆ, ಯಾವ ಹಿನ್ನಲೆಯಲ್ಲಿ ಮಾತುಕತೆಗೆ ಹೋಗುತ್ತಿದ್ದೀರೆಂದು ಸದನದ ಒಳಗಡೆ ನೀವು ಪ್ರಸ್ತಾಪ ಮಾಡಲಿಲ್ಲ. ನಾವು ಒತ್ತಾಯ ಮಾಡಿದ ಮೇಲೂ ಸಹ ನೀವು ಮಾತುಕತೆಗೆ ತಮಿಳುನಾಡಿಗೆ ಹೋಗುವುದಕ್ಕೆ ಮುಂಚೆ ಪ್ರತಿಪಕ್ಷದ ನಾಯಕ-ರನ್ನು ಕರೆದು, ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು 'ನಾವು ಇಂತಹ ಆಧಾರದ ಮೇಲೆ ಮಾತುಕತೆಗೆ ಹೋಗುತ್ತಿದ್ದೇವೆ' ಎನ್ನುವಂಥ ಮಾತನ್ನು ಸಹ ತಾವು ಹೇಳಲಿಲ್ಲ. ಆದರೆ ತಮಿಳುನಾಡಿನ ಅಲ್ಲಿಯ ಮುಖ್ಯಮಂತ್ರಿಗಳು "ಟ್ರಿಬ್ಯುನಲ್ ಆದೇಶದ ಚೌಕಟ್ಟಿನ ಒಳಗಡೆಯೇ ನಾವು ಮಾತುಕತೆ ಆಡುವ-ವರಿದ್ದೇವೆ, ಅದನ್ನು ಬಿಟ್ಟು ನಾವು ಮಾತನಾಡುವುದಿಲ್ಲ"ವೆಂದು ನಿರ್ಭೀತಿಯಿಂದ ಬಹಳ ಸ್ಪಷ್ಟವಾಗಿ ತಮ್ಮ ನಿಲುವನ್ನು ಹೇಳಿದ್ದಾರೆ. ಇಷ್ಟು ಸ್ಪಷ್ಟವಾಗಿ ತಮಿಳುನಾಡು ಸರ್ಕಾರ ಹೇಳಬೇಕಾದರೆ, ಇವತ್ತು ಏಕಾಏಕಿ ಈ ಸದನ ನಡೆಯುವಂಥ ಕಾಲದಲ್ಲಿ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆಯೇ, ಪ್ರತಿ-ಪಕ್ಷದವರ ಜೊತೆ ಮಾತನಾಡದೆಯೇ ಅಥವಾ ಈ ನಾಡಿನ ಜನರಿಗೆ ತಾವು ಯಾವ ಆಧಾರದ ಮೇಲೆ ಮಾತುಕತೆಗಾಗಿ ತಮಿಳುನಾಡಿಗೆ ಹೋಗುತ್ತಿದ್ದೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳದೆಯೇ ತಾವು ಮಾತುಕತೆಗೆ ಹೋಗಿದ್ದೀರಿ. ಹೀಗೆ ಮಾತುಕತೆ ಆಡಿದಂಥ ಸಂದರ್ಭದಲ್ಲಿ ಪತ್ರಿಕೆಯ ಒಕ್ಕಣೆ ನೋಡಿದಾಗ ಅದರಲ್ಲಿ ಹೀಗೆ ಇದೆ. " ತಾತ್ಕಾಲಿಕ ಒಪ್ಪಂದ:" ಉಭಯ ರಾಜ್ಯಗಳ ಹಿತದೃಷ್ಟಿಯಿಂದ ಇರುವ ನೀರನ್ನು ಎರಡು ರಾಜ್ಯಗಳವರು ಪರಸ್ಪರ ಲಾಭವಾಗುವಂತೆ ಹಂಚಿಕೊಳ್ಳುವಂತಹ ತಾತ್ಕಾ-ಲಿಕವಾದ ವ್ಯವಸ್ಥೆ, ಈ ಕರ್ನಾಟಕ ಹಾಗೂ ತಮಿಳುನಾಡು ಮುಖ್ಯಮಂತ್ರಿಗಳು ಇಂದು ಇಲ್ಲಿ ಒಪ್ಪುವ ಮೂಲಕ ಶತಮಾನದಷ್ಟು ಹಳೆಯ ಶೀತಲ ಸಮರಕ್ಕೆ ತೆರೆ ಎಳೆಯಲಾಗಿದೆ. ಈ ರೀತಿ ಅನೇಕ ಪತ್ರಿಕೆಗಳ ಮುಖ ಪುಟಗಳಲ್ಲಿ ವರದಿಯಾಗಿದೆ. ಇದು ಒಂದು ಕ್ರಾಂತಿಯಾಗಿದೆ. ಹಿಂದೆಂದೂ

ಆಗದಿರುವಂಥ ಸುಮಧುರ ವಾತಾವರಣದಲ್ಲಿ ಮಾತುಕತೆಯಾಗಿದೆ. ತಾತ್ಕಾಲಿಕವಾದ ಒಂದು ಒಪ್ಪಂದಕ್ಕೆ ನಾವು ಬಂದಿದ್ದೇವೆ, ಎನ್ನುವಂಥ ಅನೇಕ ಸಂಗತಿಗಳು ಪತ್ರಿಕೆಗಳಲ್ಲಿ ಬಂದಿದೆ. ಅಲ್ಲಿ ಕರುಣಾನಿಧಿಯವರನ್ನು ಕಾವೇರಿ ಬಗ್ಗೆ ಏನು ಮಾತುಕತೆಯಾಯಿತು, ಇದರ ಬಗ್ಗೆ ಸ್ಪಷ್ಟೀಕರಣಬೇಕು ಎಂದು ಪತ್ರಕರ್ತರು ಕೇಳಿದಾಗ ಅವರು ಸದನದ ಒಳಗಡೆ ಹೋಗಿ ಮಾತುಕತೆಯಲ್ಲಿ ಏನಾಗಿದೆ ಅದನ್ನು ಮಾತನಾಡುತ್ತೇವೆಂದು ಹೇಳಿದ್ದಾರೆಯೇ ಹೊರತು ಒಂದು ಶಬ್ದವನ್ನೂ ಅವರು ಪತ್ರಿಕಾ-ಗೋಷ್ಠಿಯಲ್ಲಿ ಮಾತನಾಡಲಿಲ್ಲ. ನಿಮ್ಮ ಜೊತೆಗೆ ತಮಿಳುನಾಡು ಮುಖ್ಯಮಂತ್ರಿಗಳು ಮಾತನಾಡು-ವುದಕ್ಕೆ ಮುಂಚೆ ಅವರ ಸದನದ ಒಳಗಡೆ ಟ್ರಿಬ್ಯುನಲ್ ತೀರ್ಮಾನದ ಆಧಾರದ ಒಳಗಡೆಯೇ ನಾನು ಮಾತುಕತೆ ಆಡುತ್ತೇನೆ ಎನ್ನುವಂಥ ಮಾತನ್ನು ಅವರು ಬಹಳ ಸ್ಪಷ್ಟವಾಗಿ ಹೇಳಿದರು. ಆದರೆ ನೀವು ಮಾತ್ರ ಬಹಳ ಆನಂದದಿಂದ ಏನೋ ಕ್ರಾಂತಿಯಾಗಿದೆ ಎನ್ನುವ ರೀತಿಯಲ್ಲಿ ಅಲ್ಲಿ ಮಾತನಾಡದೆ ಇರುವಂಥದ್ದು ಇಲ್ಲಿಯ ಪತ್ರಿಕೆಗಳಲ್ಲಿ ವರದಿಯಾಗಿದೆ. ಇಲ್ಲಿಗೆ ಬಂದ ಮೇಲೂ ಸಹ ಯಾವುದೇ ಒಂದು ಸಂದರ್ಭದಲ್ಲಿ ಪತ್ರಕರ್ತರು ಪ್ರಶ್ನೆಯನ್ನು ಕೇಳಿದಾಗ ಅಲ್ಲಿ ನಡೆದಂಥ ಮಾತುಕತೆಯನ್ನು ಬಹಿರಂಗವಾಗಿ ತಾವು ಹೇಳಲಿಲ್ಲ. ನಮಗೆ ಅರ್ಥವಾಗದೇ ಇರುವಂಥದ್ದು ಏನೆಂದರೆ ಅಲ್ಲಿ ಮಾತು-ಕತೆಯಾಗಿದ್ದು ಆ ಮಾತುಕತೆಯನ್ನು ಇಲ್ಲಿ ತಿಳಿಸುವುದಕ್ಕೆ ಏಕೆ ಮುಚ್ಚುಮರೆ? ಪಾರದರ್ಶಕತೆ ಏಕೆ ಇಲ್ಲ? ಮಾತುಕತೆ ಬಗ್ಗೆ ಯಾವ ಒಪ್ಪಂದಕ್ಕೆ ಬಂದಿದ್ದೀರಿ? ಇದರ ಬಗ್ಗೆ ಏಕೆ ವಿವರವಾದಂಥ ವರದಿ-ಯನ್ನು ತಾವು ಕೊಡಲಿಲ್ಲ? ಯಾವುದೋ ಒಂದು ರಾಜಕೀಯ ಒತ್ತಡಕ್ಕೆ ತಾವೇನಾದರೂ ಮಣಿ-ದಿದ್ದೀರೋ? ಯಾವುದಾದರೂ ಒಂದು ರಾಜಕೀಯ ಪ್ರಭಾವಕ್ಕೆ ಏನಾದರೂ ತುತ್ತಾಗಿ ನೀವು ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡು ನಮ್ಮನ್ನು ಸಹ ಏನಾದರೂ ಇಕ್ಕಟ್ಟಿನಲ್ಲಿ ಸಿಕ್ಕಿಸಿಬಿಡುತ್ತೀರೋ ಎನ್ನು-ವಂಥ ಭಯ ಇವತ್ತು ನಮ್ಮನ್ನು ಕಾಡುತ್ತಿದೆ. ನಿಜವಾಗಲೂ ರಾಜ್ಯದ ಜನರ ಹಿತದೃಷ್ಟಿಯಿಂದ ಎರಡು ರಾಜ್ಯಕ್ಕೂ ಒಳ್ಳೆಯದಾಗಬೇಕು ಎನ್ನುವಂಥ ಕಳಕಳಿಯಿಂದ ತಾವು ಹೋಗಿದ್ದೀರೋ ಎಂದು ನಾನು ನಿಮಗೆ ಕೇಳುತ್ತಿದ್ದೇನೆ. ಎರಡೂ ರಾಜ್ಯದ ಮುಖ್ಯಮಂತ್ರಿಗಳು ತಾವು ಒಟ್ಟಿಗೆ ಒಂದು ಕಡೆ ಸೇರುವಂಥ ಕಾಲದಲ್ಲಿ ನಿಮ್ಮ ಮೊದಲನೆಯ ಒತ್ತಾಯ, ಆದ್ಯತೆ ಏನು ಇರಬೇಕಾಗಿತ್ತು ಎಂದರೆ ಅದು ರಾಷ್ಟ್ರೀಯ ಜಲನೀತಿಯ ಮಾರ್ಗಸೂಚಿಯನ್ನು ಜಾರಿಗೆ ತರಬೇಕು, ಅದನ್ನು ರೂಪಿಸುವಂಥ ಒಂದು ವ್ಯವಸ್ಥೆ-ಯನ್ನು ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯ ತರುವಂಥ ಮೊದಲನೇ ಒಂದು ಪ್ರಾಮಾ-ಣಿಕ ಪ್ರಯತ್ನ ನಿಮ್ಮಿಬ್ಬರಿಂದ ಆಗಬೇಕಾಗಿತ್ತು. ಈ ರೀತಿಯ ಒಂದು ಒತ್ತಾಯ ಕೇಂದ್ರ ಸರ್ಕಾರಕ್ಕೆ ಮಾಡುವಂಥದ್ದನ್ನು ನೀವೇನಾದರೂ ಮಾಡಿದ್ದರೆ ಒಂದು ಸಾರ್ಥಕವಾದ ಕೆಲಸವನ್ನು ಮಾಡಿದ್ದಾ-ರೆಂದು ನಾವು ಹೇಳಬಹುದಾಗಿತ್ತು. ಅಥವಾ ಮಾತುಕತೆ ಆಡಿದಂಥ ಸಂದರ್ಭದಲ್ಲಿ ಟ್ರಿಬ್ಯುನಲ್ ಯಾವುದೇ ಒಂದು ನ್ಯಾಯವನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನುವಂಥದ್ದನ್ನು ನಾವು ಈ ಸದನದ ಒಳಗಡೆ ಹೇಳಿದ್ದೆವು. ಇದಕ್ಕಾಗಿ ಅನೇಕ ಹೋರಾಟಗಳು ಆಯಿತು, ಅನಾಹುತಗಳು ಆಯಿತು, ಈ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ ಕಾವೇರಿ ಟ್ರಿಬ್ಯುನಲ್ ಇದರ ಮಧ್ಯಂತರ ಆಜ್ಞೆ ಏನು ಇದೆ, ಇದನ್ನು ಹೊರಗಡೆ ಇಟ್ಟುಕೊಂಡು ಯಾವುದೇ ಒಂದು ಒತ್ತಾಯಕ್ಕೆ ಮಣಿಯದೆ ಈ ಒಂದು

ಕಾವೇರಿ ಟ್ರಿಬ್ಯುನಲ್ ಆದೇಶದ ಚೌಕಟ್ಟು ಒಳಗೆ ಮಾತುಕತೆ ಆಡುವುದಿಲ್ಲ, ಅದರ ಹೊರಗಡೆ ಇದ್ದೇ ಮಾತುಕತೆ ಮೂಲಕ ನಾವು ಸೌಹಾರ್ದಯುತವಾಗಿ ಈ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎನ್ನುವುದನ್ನು ನೀವು ಎಂದೂ ಸಹ ಹೇಳಲಿಲ್ಲ. ಒಂದು ರೀತಿಯಾಗಿ ಪ್ರತಿಪಕ್ಷವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆಯೇ ಯಾವುದೋ ಒಂದು ಗೊಂದಲದಲ್ಲಿ ಸಿಕ್ಕಿಹಾಕಿಕೊಂಡು ತಾವು ಯಾವುದೋ ಒಡಂಬಡಿಕೆಗೆ ಬಂದಿದ್ದೀರಿ ಎನ್ನುವಂಥಾದ್ದು ಪತ್ರಿಕೆಯ ಹೇಳಿಕೆ ಮೂಲಕ ನಮಗೆ ಸ್ಪಷ್ಟವಾಗುತ್ತದೆ. ತಾವು ಅನೇಕ ಸಂದರ್ಭಗಳಲ್ಲಿ ಈ ಸುಪ್ರೀಂಕೋರ್ಟ್ ಆದೇಶಕ್ಕೆ ಗೌರವ ನೀಡಿ ಆ ಸಮಸ್ಯೆಯನ್ನು ಈ ಒಂದು ಪರಿಧಿಯೊಳಗೆ ಚರ್ಚೆ ಮಾಡಬೇಕೆನ್ನುವಂಥ ವರದಿಯಾಗಿದೆ. ಇದರ ಬಗ್ಗೆ ಈ ಸುಪ್ರೀಂ ಕೋರ್ಟಿನ ಆದೇಶದ ಒಂದು ಚೌಕಟ್ಟಿನಲ್ಲಿ ಏನಾದರೂ ಮಾತುಕತೆ ಆಗಿದೆಯೇ ಎಂಬುದನ್ನು ತಾವು ಸ್ಪಷ್ಟಮಾಡಬೇಕು. ಈ ಮಾಹಿತಿಯನ್ನು ನೀಡಿ ಎಂದು ಪತ್ರಕರ್ತರು ಕೇಳಿದಾಗ ಅದಕ್ಕೂ ಸಹ ನೀವು ಯಾವುದೇ ಸ್ಪಷ್ಟವಾದಂಥ ಉತ್ತರವನ್ನು ಕೊಟ್ಟಿಲ್ಲ. ಮುಂದಿನ ಜನವರಿವರೆಗೆ ತಮಿಳುನಾಡು ರೈತರಿಗೆ ಸುಮಾರು 179 ಟಿ.ಎಂ.ಸಿ. ನೀರು ಬೇಕು. ಈ ಹಿನ್ನಲೆಯಲ್ಲಿ ತಮಿಳುನಾಡು ರೈತರನ್ನು ಕಾಪಾಡು-ತ್ತೀರಾ ಎನ್ನುವ ಪ್ರಶ್ನೆಯನ್ನು ಸಹ ಅವರು ಕೇಳಿದಾಗ ಒಂದು ರೀತಿಯಾಗಿ ಹಾರಿಕೆಯ ಉತ್ತರವನ್ನು ತಾವು ಕೊಟ್ಟಿದ್ದೀರಿ. ಇದರ ಹಿಂದೆ ಇರುವಂಥ ಗೂಡಾರ್ಥ ಏನು ಎನ್ನುವುದು ನಮಗೆ ಅರ್ಥವಾಗ-ಲಿಲ್ಲ. ನಮಗೆ ಬಂದಿರುವಂಥ ಸುದ್ಧಿ ಪ್ರಕಾರ ನಮ್ಮ ಕನ್ನಂಬಾಡಿ, ಕಬಿನಿ, ಹಾರಂಗಿ, ಹೇಮಾವತಿ ಮುಂತಾದ ಡ್ಯಾಂಗಳು ಏನಿವೆ, ಅಲ್ಲಿಂದ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ನಿರಂತರವಾಗಿ ನೀರು ಬಿಡುತ್ತೇವೆಂದು ಹೇಳಿ ತಾವು ಮಾತನಾಡುವಂಥ ಸಂದರ್ಭದಲ್ಲಿ ಒಪ್ಪಿಕೊಂಡಿದ್ದೀರಿ ಎಂದು ನಮಗೆ ಸುದ್ಧಿ ಬಂದಿದೆ. ಆ ನಿರ್ದಿಷ್ಟವಾದ ಪ್ರಮಾಣ ಎಂದರೆ ಎಷ್ಟು? ಆ ರೀತಿ ಏನಾದರೂ ಮಾತುಕತೆ ಆಗಿದೆಯೇ? ಆ ರೀತಿ ಏನಾದರೂ ನೀವು ಮಾತುಕತೆ ಆಡುವಂಥ ಕಾಲದಲ್ಲಿ ಕೇಂದ್ರ ಸಚಿವರಾದ ಶ್ರೀ ಮುರುಸೋಳಿ ಮಾರನ್ ಅವರು ಹಾಜರಿದ್ದರು. ಹಾಗಾದರೆ ಕೇಂದ್ರ ಸಚಿವರು ಅಲ್ಲಿ ಭಾಗವಹಿ-ಸುವಂಥ ಸಂದರ್ಭದಲ್ಲಿ ಅವರ ಪಾತ್ರ ಏನು? ಅವರು ಮಾತುಕತೆ ಸಂದರ್ಭದಲ್ಲಿ ಏನು ಹೇಳಿದರು? ಕೇಂದ್ರದ ಒಬ್ಬ ಸಚಿವರು ಅಲ್ಲಿ ಅಗತ್ಯವಿತ್ತು ಎಂದು ಆ ಮುಖ್ಯಮಂತ್ರಿಗೆ ಅನಿಸಿದಾಗ ನಮ್ಮ ರಾಜ್ಯದ ಅನೇಕ ಕೇಂದ್ರದ ಸಚಿವರು ಇದ್ದರು, ಆ ಮಾತುಕತೆ ಸಂದರ್ಭದಲ್ಲಿ ಅವರು ಇದ್ದರೆ ಮುಂದೆ ಅನುಕೂಲವಾಗಬಹುದು ಎನ್ನುವ ದೃಷ್ಟಿಯಿಂದ ನಮ್ಮ ರಾಜ್ಯವನ್ನು ಪ್ರತಿನಿಧಿಸುವಂಥ ಸಚಿವರು ನಿಮ್ಮ ಜೊತೆಗೆ ಇಲ್ಲದಿರುವುದಕ್ಕೆ ಬೇರೆ ಏನಾದರೂ ಗೂಡಾರ್ಥ ಇದೆಯೇ? ಇದಕ್ಕೆ ಏನಾದರೂ ಕಾರಣ ಇದೆಯೇ? ಇವತ್ತು ಕೇಂದ್ರ ಸರ್ಕಾರವನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕು ಎನ್ನು-ವಂಥ ರೀತಿಯಲ್ಲಿ ಮಾಡುತ್ತಿದ್ದಾರೆ ಎಂದು ಜನ ಬಹಳ ಸ್ಪಷ್ಟವಾಗಿ ಮಾತನಾಡುತ್ತಿದ್ದಾರೆ. ಇದನ್ನು ಯಾರೂ ಒಪ್ಪಲಿ ಅಥವಾ ಬಿಡಲಿ ವಿರೋಧ ಪಕ್ಷದ ನಾಯಕನಾದ ನಾನು ರಾಜ್ಯದಲ್ಲಿ ಪ್ರವಾಸ ಮಾಡಿ ನೋಡಿದಾಗ ಜನ ಕುಳಿತಲ್ಲಿ ನಿಂತಲ್ಲಿ ಮಾತನಾಡುತ್ತಿದ್ದಾರೆ. ಇದನ್ನು ನಾನೂ ಸಹ ಹೇಳು-ತ್ತಿದ್ದೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ರಾಜ್ಯದ ಜನ ಹೇಳುತ್ತಿಲ್ಲ. ಯಡಿಯೂರಪ್ಪನವರು ಹೇಳುತ್ತಿದ್ದಾರಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಪ್ರತಿಪಕ್ಷದ ನಾಯಕನಾಗಿ ನಾನು ಹೇಳುತ್ತಿದ್ದೇನೆ. ಇದು ನನಗೆ ಬಹಳ ಸ್ಪಷ್ಟವಾಗಿ ಅನುಮಾನ ಬರುವಂಥದ್ದು. ಈ ಹಿಂದೆ ತಮಿಳುನಾಡಿನ ಯಾವುದೇ ಮುಖ್ಯ ಮಂತ್ರಿ ತೋರದೆ ಇದ್ದಂಥ ಮಾತುಕತೆಗೆ ಅವರು ಮುಂದಾಗಿದ್ದಾರೆ. ನೀವು ತಮಿಳುನಾಡಿಗೆ ಹೋಗಿ ಸೌಹಾರ್ದಯುತವಾಗಿ ಮಾತುಕತೆ ಆಯಿತು. ಕ್ರಾಂತಿಯಾಗಿದೆ, ಈ ಮಾತನ್ನು ಕೇಳಿದಾಗ ನನಗೆ ಏನು ಭಯ ಇದೆ ಎಂದರೆ ತಮಿಳುನಾಡು ಬಗ್ಗೆ ಇರಬಹುದು.

12.40 ಪಿ.ಎಂ.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಅಧ್ಯಕ್ಷರೇ, ನಾವು ತಮಿಳುನಾಡಿಗೆ ಹೋಗಿ ಮಾತುಕತೆಯನ್ನು ಆಡಿಕೊಂಡು ಬಂದಿರುವ ಬಗ್ಗೆ ತಮಗೇನಾದರೂ ಮನಸ್ಸಿಗೆ ನೋವಾಗಿದೆಯೇ? ತಮಿಳುನಾಡು ಮತ್ತು ಕರ್ನಾಟಕ ರಾಜ್ಯದಲ್ಲಿ ಸುಮಾರು ವರ್ಷಗಳಿಂದ ಜಲ ವಿವಾದಲ್ಲಿ ಇತ್ಯರ್ಥವಾಗದೇ ಇರತಕ್ಕಂತಹ ವಿಚಾರ ಯಾವುದು ಇದೆ, ಇದನ್ನು ಇತ್ಯರ್ಥ ಮಾಡಿ ಬಗೆಹರಿಸುವುದಕ್ಕೆ ನಾವು ಮಾಡಿರತಕ್ಕಂತದ್ದು ಯಾವುದು ಇದೆ ಅದು ನಿಮ್ಮ ಮನಸ್ಸಿಗೆ ನೋವಾಗಿದೆಯೇ? ಅದನ್ನು ನೇರವಾಗಿ ಹೇಳಿಬಿಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಿಮಗೆ ದೊಡ್ಡ ಕಿರೀಟವನ್ನು ಹಾಕಬೇಕಾಗಿದೆ.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಬಹಳಷ್ಟು ಸಮಸ್ಯೆಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಬಗೆಹರಿಸಿಕೊಂಡೇ ಬಂದಿದ್ದೇವೆ.

ಶ್ರೀ ಎಂ. ಶ್ರೀನಿವಾಸ್:- ನಾವು, ನೀವು ಹೇಳುವ ಉತ್ತರವನ್ನು ಗಂಭೀರವಾಗಿ ಕೇಳುತ್ತೇವೆ. ನಾವು ಮಾತನಾಡುವಾಗ ಗಂಭೀರವಾಗಿ ಕೇಳುವುದಕ್ಕೆ ಆಗುವುದಿಲ್ಲವೇ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅವರು ಮಾತನಾಡುವುದನ್ನು ಕೇಳಲಿ, ನಂತರ ಅವರು ಉತ್ತರವನ್ನು ಕೊಡಲಿ.

ಶ್ರೀ ವೈ. ರಾಮಕೃಷ್ಣ:- ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅವರು ಮಾತನಾಡುವುದನ್ನು ಅವರು ಕೇಳಲಿ. ನಂತರ ಸರ್ಕಾರದ ವತಿಯಿಂದ ಉತ್ತರವನ್ನು ಕೊಡಲಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಕರ್ನಾಟಕದಲ್ಲಿ ಇವರು ಸಮಸ್ಯೆಗಳನ್ನು ಬಗೆಹರಿಸುತ್ತಿಲ್ಲ, ಕರ್ನಾಟಕವನ್ನು ಸಮಾಧಿಯನ್ನು ಮಾಡುತ್ತಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ:- ಬಾಕಿ ವಿಷಯದ ಬಗ್ಗೆ ಮುಖ್ಯಮಂತ್ರಿಗಳು ಉತ್ತರವನ್ನು ಹೇಳುತ್ತಾರೆ. ನಾನು ಹೇಳುವುದೇನೆಂದರೆ, ಈಗ ನಾವು ನೀವು ಹೇಳುತ್ತಿರತಕ್ಕಂತಹ ಸಮಸ್ಯೆಗಳನ್ನು ಇತ್ಯರ್ಥ ಮಾಡಬೇಕೆಂದು ಚರ್ಚೆ ಮಾಡಿಕೊಂಡು ಬಂದಿರುವುದು. ಅದನ್ನು ಇಲ್ಲ ಎನ್ನುವುದಕ್ಕೆ ಸಾಧ್ಯವಿಲ್ಲ. ಈ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಿರತಕ್ಕಂಥದ್ದು ಏನಾದರೂ ಇರಿಸು ಮುರಿಸು ಆಯಿತಾ ಎನ್ನುವುದು ನನಗೆ ಗೊತ್ತಿಲ್ಲ.

ಶ್ರೀ ಬಿ.ಎಸ್. ಯಡೀಯೂರಪ್ಪ:- ಮಾನ್ಯ ಅಧ್ಯಕ್ಷರೇ, ಆಡಳಿತ ಪಕ್ಷದ ಹಿರಿಯ ಸಚಿವರು, ಮಾನ್ಯ ಮುಖ್ಯಮಂತ್ರಿಗಳು ಎದೆಯನ್ನು ಮುಟ್ಟಿಕೊಂಡು ಒಂದು ಮಾತನ್ನು ಹೇಳಲಿ, ಹಿಂದಿನ ಮಾಜಿ ಮುಖ್ಯಮಂತ್ರಿಗಳು, ಹಾಲಿ ಪ್ರಧಾನ ಮಂತ್ರಿಗಳು ಸನ್ಮಾನ್ಯ ಶ್ರೀ ಹೆಚ್.ಡಿ. ದೇವೇಗೌಡರು ಇದೇ ವಿಷಯ ಪ್ರಸ್ತಾಪಕ್ಕೆ ಬಂದಾಗ ವಿರೋಧ ಪಕ್ಷದವರನ್ನು ಯಾವ ರೀತಿಯಲ್ಲಿ ನೋಡಿದರು. ಯಾವುದಾದರೂ ಒಂದು ಸಮಯದಲ್ಲಿ ಈ ಕಾವೇರಿ ಸಮಸ್ಯೆಯಾಗಲಿ, ಕೃಷ್ಣಾ ಜಲಾಯನ ಪ್ರದೇಶದ ಸಮಸ್ಯೆಯು ಬಂದಾಗ ರಾಜಕಾರಣವನ್ನು ಬೆರಸಿರತಕ್ಕಂಥ ಒಂದು ಉದಾಹರಣೆಯನ್ನು ನನಗೆ ಕೊಡಿ. 6 ಟಿ.ಎಂ.ಸಿ. ನೀರನ್ನು ಬಿಡುವ ಸಂದರ್ಭದಲ್ಲಿ ಸಭೆ ಮಧ್ಯಾಹ್ನಕ್ಕೆ ಮುಂದೂಡಿದಾಗ ಇದೇ ಶ್ರೀ ಹೆಚ್.ಎನ್. ನಂಜೇಗೌಡರು ಮಧ್ಯಸ್ಥಿಕೆಯನ್ನು ವಹಿಸಿ ಮಾತನಾಡಿದರು. ಇವತ್ತು ರಾಜಕಾರಣವನ್ನು ಬೆಳೆಸಬಾರದು, 6 ಟಿ.ಎಂ.ಸಿ. ನೀರನ್ನು ನಮ್ಮ ಜಲಾಶಯದಲ್ಲಿ ನೀರು ಇಲ್ಲದೇ ಇರತಕ್ಕಂತಹ ಸಂದರ್ಭದಲ್ಲಿ ನೀರನ್ನು ಬಿಡುತ್ತಿದ್ದರೂ ಸಹ ಮಾತುಕತೆಯ ಮೂಲಕ ಈ ಸಮಸ್ಯೆ ಬಗೆಹರಿಯಬೇಕು. ಸುಪ್ರೀಂಕೋರ್ಟ್‌ನ ಆದೇಶವನ್ನು ಇವರು ಉಲ್ಲಂಘನೆ ಮಾಡಿದರು. ಪ್ರಧಾನಿಯವರ ಮಾತನ್ನು ಉಲ್ಲಂಘನೆ ಮಾಡಿದರು ಎಂದು ಬರಬಾರದು ಎಂದು ತಾನೇ ನಾವು ನಿಮ್ಮ ಜೊತೆಗೆ ಸೇರಿದ್ದು. ಪಕ್ಷ ಭೇದವನ್ನು ಮರೆತು ಒಟ್ಟಾಗಿ ಒಂದು ಪತ್ರಿಕಾಗೋಷ್ಠಿಯನ್ನು ಮಾಡಿ ನಾವು ಒಂದಾಗಿ ನಿಮ್ಮ ಹಿಂದೆ ನಿಂತದ್ದು ತಾನೇ. ನಾನು ಇವತ್ತು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ತಾವು ಮಾತುಕತೆಗೆ ಹೋಗುವುದಕ್ಕೆ ಮುಂಚೆ ಪ್ರತಿಪಕ್ಷವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಹಂತ ಹಂತವಾಗಿ ನಮ್ಮನ್ನು ಕರೆದು ವಿಶ್ವಾಸಕ್ಕೆ ತೆಗೆದುಕೊಳ್ಳುವಂತಹ ಕಾಲದಲ್ಲಿ ಈ ಬಾರಿ ತಾವು ಮಾತುಕತೆಗೆ ಹೋಗುವಂತಹ ಕಾಲದಲ್ಲಿ ಏಕೆ ಪ್ರತಿಪಕ್ಷಗಳ ಜೊತೆಯಲ್ಲಿ ಮಾತುಕತೆ ಆಡಲಿಲ್ಲ. ನಮ್ಮ ಅಗತ್ಯ ನಿಮಗೆ ಬರಲಿಲ್ಲವೇ?

ಶ್ರೀ ಸಿದ್ದರಾಮಯ್ಯ:- ನೀವು ಸದನದಿಂದ ವಾಕ್ ಔಟ್ ಮಾಡಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಯಾರು ವಾಕ್ ಔಟ್ ಮಾಡಿದ್ದುದು? ಇಲ್ಲ, ತಮಿಳುನಾಡಿನ ಮುಖ್ಯಮಂತ್ರಿಗಳು ಇದರ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಮಗೆ ಏಕೆ ಅನುಮಾನ, ಏಕೆ ತರಾತುರಿ? ಜಲಾಶಯಗಳು ತುಂಬಿದೆ ಮಳೆಗಾಲ ಇದು. ಆಂಧ್ರಪ್ರದೇಶದ ಬಗ್ಗೆಯಾಗಲಿ,

ತಮಿಳುನಾಡಿನ ಬಗ್ಗೆಯಾಗಲಿ, ಈ ಮಾತುಕತೆಗಳ ಮಾತು ಪ್ರಾರಂಭವಾಗುತ್ತಿರುವ ಕಾಲದಲ್ಲಿಯೇ ನಮ್ಮ ರೈತರಿಗೆ ಎಲ್ಲಾ ಹಂತದಲ್ಲಿಯೂ ದ್ರೋಹವಾಗುತ್ತಿದೆ. ಇವತ್ತು ಅಲ್ಲ, ನಾಳೆ ಇರತಕ್ಕಂತಹ ಸತ್ಯಸಂಗತಿ ಹೊರಗಡೆ ಬರುತ್ತದೆ. ನಿಮ್ಮ ತರಾತುರಿಯ ಈ ಮಾತುಕತೆಗೆ ಕೇಂದ್ರ ಸರ್ಕಾರ ಒಂದು ಗೊಂದಲದಲ್ಲಿ ಸಿಕ್ಕಿರುವಂತಹ ಸಂದರ್ಭದಲ್ಲಿ ಹೇಗಾದರೂ ಮಾಡಿ ನಿಮ್ಮ ಕೇಂದ್ರ ಸರ್ಕಾರಕ್ಕೆ ಬೆಂಬಲವನ್ನು ಕೊಡುತ್ತಿರುವ ತಮಿಳುನಾಡಿಗೆ ಸಹಕಾರವನ್ನು ಕೊಟ್ಟು, ಆಂಧ್ರಪ್ರದೇಶಕ್ಕೆ ಸಹಕಾರ-ವನ್ನು ಕೊಡುವುದಕ್ಕೆ ರಾಜ್ಯದ ಜನರ ಹಿತವನ್ನು ಬಲಿಕೊಟ್ಟು, ಏನೋ ನಿಮ್ಮ ಕುರ್ಚಿಯನ್ನು ಉಳಿಸಿ-ಕೊಳ್ಳುವುದಕ್ಕೆ ನೀವು ಏನೋ ಒಂದು ಸಂಚು ಮಾಡುತ್ತಿದ್ದೀರೋ ಆ ರಾಜಕೀಯ ಪ್ರಭಾವಕ್ಕೆ ನೀವು ಏನಾದರೂ ಸಿಕ್ಕುತ್ತಿದ್ದೀರೋ ಎಂಬ ಭಯ ನಮ್ಮನ್ನು ಕಾಡುತ್ತಿರುವುದರಿಂದ ಇವತ್ತು ನಾವು ಪ್ರಸ್ತಾಪ-ವನ್ನು ಮಾಡುತ್ತಿದ್ದೇವೆ. ಹಾಗಿದ್ದರೆ ಪತ್ರಿಕಾಗೋಷ್ಠಿಯಲ್ಲಿ, ಇದರ ಬಗ್ಗೆ ಏನಿದೆ ಗುಟ್ಟು? ಅಧಿಕಾರಿಗಳ ಸಮಕ್ಷಮ ಒಬ್ಬ ಕೇಂದ್ರದ ಸಚಿವರನ್ನು ಇಟ್ಟಕೊಂಡು ಒಬ್ಬರು ಮುಖ್ಯಮಂತ್ರಿಗಳು ಬಹಿರಂಗವಾಗಿ ಮಾತನಾಡಿದಂತಹ ಕಾಲದಲ್ಲಿ ಇಲ್ಲಿಗೆ ಬಂದ ತಕ್ಷಣ ಮಾತುಕತೆಯಲ್ಲಿ ಏನಾಯಿತು ಎಂದು ಪತ್ರಿಕಾ ಗೋಷ್ಠಿಯಲ್ಲಿ ಹೇಳಲಿಲ್ಲ. ಇದರಲ್ಲಿ ಏನಿದೆ ಗುಟ್ಟು? ನನಗೆ ಏನು ಅನುಮಾನ ಬಂದಿದೆ ಎಂದರೆ ಇವತ್ತು ಮಾತುಕತೆಯಲ್ಲಿ ಏನು ನಡೆಯಿತು ಎಂದು ಇಲ್ಲಿಯಾದರೂ ಸ್ಪಷ್ಟವಾಗಿ ಹೇಳಿ. ಯಾವುದೇ ಕಾರಣಕ್ಕೆ ಈ ಟ್ರಿಬ್ಯೂನಲ್ ಮಧ್ಯಂತರ ಆಜ್ಞೆಗೆ ನಾವು ಬದ್ಧರಾಗಿಲ್ಲ. ನಾವು ತಮಿಳುನಾಡಿನ ಮುಖ್ಯ ಮಂತ್ರಿಗೆ ಇದರ ಬಗ್ಗೆ ಸ್ಪಷ್ಟಮಾಡಿದ್ದೇವೆ ಎಂದರೆ ನಾವು ನಿಮ್ಮನ್ನು ಸ್ವಾಗತ ಮಾಡುತ್ತೇವೆ. ನಾವು ಒಟ್ಟಾಗಿ ಕೇಂದ್ರ ಸರ್ಕಾರದಲ್ಲಿ ನಮ್ಮವರೇ ಪ್ರಧಾನಿಗಳು ಇರತಕ್ಕಂತಹ ಈ ಕಾಲದಲ್ಲಿ ಇವರು ಬಾಯಿಯನ್ನು ಮುಚ್ಚಿಕೊಂಡಿದ್ದಾರೆ, ಇಲ್ಲಿ ಏಕೆ ಇದರ ಬಗ್ಗೆ ಪ್ರಸ್ತಾಪ ಮಾಡುತ್ತಿಲ್ಲವೋ ಗೊತ್ತಿಲ್ಲ. ನ್ಯಾಷನಲ್ ವಾಟರ್ ಪಾಲಿಸಿಗೆ ಗೈಡ್‌ಲೈನ್ಸ್ ಫ್ರೇಮ್ ಮಾಡುತ್ತಾರೆ ಎನ್ನುವ ಆಧಾರದ ಮೇಲೆಯೇ 6 ಟಿ.ಎಂ.ಸಿ. ನೀರನ್ನು ಬಿಡುವುದಕ್ಕೆ ನಾವುಗಳು ಒಪ್ಪಿಕೊಂಡೆವು. ಈಗಾಗಲೇ ಎರಡು ತಿಂಗಳುಗಳು ಕಳೆದುಹೋಯಿತು. ಈಗ ಮುಖ್ಯಮಂತ್ರಿಗಳ ಬಾಯಿಂದಾಗಲಿ, ನೀರಾವರಿ ಸಚಿವರ ಬಾಯಿಂದಾ-ಗಲಿ ಇದರ ಬಗ್ಗೆ ಮಾತುಗಳು ಬರುತ್ತಿಲ್ಲ. ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್‌ನ್ನು ಫ್ರೇಮ್ ಮಾಡುವುದಕ್ಕೆ ನೀವುಗಳು ಒತ್ತಾಯವನ್ನು ಸಹ ಮಾಡುತ್ತಿಲ್ಲ. ನೀವು ಮಾತುಕತೆಗೆ ಹೋದಂತಹ ಸಂದರ್ಭದಲ್ಲಿ ಸರ್ವಾನುಮತವಾಗಿ ಇಬ್ಬರು ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರವನ್ನು ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್‌ನ್ನು ಫ್ರೇಮ್ ಮಾಡಿ ಎಂದು ಒತ್ತಾಯವನ್ನು ತರಬಹುದಾಗಿತ್ತು. ಆ ಟ್ರಿಬ್ಯೂನಲ್‌ನ ಮಧ್ಯದಲ್ಲಿಟ್ಟುಕೊಂಡು, ಕೇಂದ್ರದ ಅವರ ಕಡೆಯ ಆ ರಾಜ್ಯದ ಸಚಿವರೊಬ್ಬರನ್ನು ಅಲ್ಲಿ ಇಟ್ಟುಕೊಂಡು ಏನೋ ಕ್ರಾಂತಿಯಾಗಿದೆ, ಹಿಂದೆ ಯಾವಾಗಲೂ ಆಗದೇ ಇರತಕ್ಕಂತಹ ಮಾತುಕತೆಯಾಗಿದೆ ಎಂದರೆ, ಮಾನ್ಯ ಅಧ್ಯಕ್ಷರೆ, ನಾನು ನಿಮ್ಮನ್ನು ಕೇಳುತ್ತೇನೆ, ಅವರಿಗೆ ಲಾಭ-ವಾಗದಿದ್ದರೆ ಅವರು ಮಾತುಕತೆಗೆ ಏಕೆ ಬರುತ್ತಾರೆ? ಅವರಿಗೆ ಹೆಚ್ಚು ಅನುಕೂಲವಾಗದಿದ್ದರೆ ಅವರು ಏಕೆ ನಿಮ್ಮ ಮುಂದೆ ಮಾತುಕತೆಗೆ ಬರುವುದಕ್ಕೆ ಇಷ್ಟವನ್ನು ಪಡುತ್ತಾರೆ. ಅದಕ್ಕಾಗಿ ನಾನು ನಿಮ್ಮನ್ನು ಒತ್ತಾಯ ಮಾಡುತ್ತಿರುವುದೇನೆಂದರೆ, ಕೇಂದ್ರ ಸರ್ಕಾರ ಉಳಿಯಬೇಕು ಎಂಬ ಒಂದೇ ಒಂದು

ಕಾರಣಕ್ಕೋಸ್ಕರ ಎಲ್ಲಿ ನಮ್ಮ ರಾಜ್ಯದ ರೈತರ ಹಿತವನ್ನು ಬಲಿ ಕೊಡುತ್ತಿರೋ ಎನ್ನುವ ಭಯ ಈ ರಾಜ್ಯದ ಜನರನ್ನು ಆವರಿಸಿದೆ ಮತ್ತು ನನ್ನನ್ನು ಇವತ್ತು ಕಾಡುತ್ತಿದೆ. ಈ ಸದನದಲ್ಲಿ ಸರ್ವಾನುಮತದ ನಿರ್ಣಯಕ್ಕೆ ಇವತ್ತು ಏನು ಬೆಲೆ ಇದೆ? ಕಾವೇರಿ ಟ್ರಿಬ್ಯೂನಲ್‌ನ್ನು ಬಾಯ್‌ಕಾಟ್ ಮಾಡಬೇಕೆಂದು ಆವತ್ತಿನಿಂದ ಇವತ್ತಿನವರೆಗೂ ಒತ್ತಾಯವನ್ನು ಮಾಡುತ್ತಿದ್ದೇವೆ. ನ್ಯಾಷನಲ್ ವಾಟರ್ ಪಾಲಿಸಿ ಗೈಡ್-ಲೈನ್ಸ್‌ನ್ನು ಫ್ರೇಮ್ ಮಾಡಬೇಕೆಂದು ಒತ್ತಾಯವನ್ನು ಮಾಡುತ್ತಿದ್ದೇವೆ. ಅದು ಯಾವುದೂ ಇಲ್ಲದೇ ಮಾತುಕತೆಯಾಗುವುದು ಇದ್ದರೆ, ಸ್ವಲ್ಪ ವರ್ಷಗಳ ಹಿಂದೆಯೇ ಆ ಸಮಸ್ಯೆಯು ಬಗೆಹರಿಯುತ್ತಿತ್ತು. ನ್ಯಾಷನಲ್ ವಾಟರ್ ಪಾಲಿಸಿಯ ಗೈಡ್‌ಲೈನ್ಸ್‌ನ್ನು ಫ್ರೇಮ್ ಮಾಡಿ, ಕಾವೇರಿ ಟ್ರಿಬ್ಯೂನಲ್ ಚೌಕಟ್ಟ-ನ್ನು ಹೊರಗೆ ಇಟ್ಟುಕೊಂಡು, ಮಾತುಕತೆ ಮೂಲಕ ಎರಡೂ ರಾಜ್ಯಗಳ ರೈತರ ಹಿತವನ್ನು ಇಟ್ಟು-ಕೊಂಡು ಒಪ್ಪಂದಕ್ಕೆ ಬರುವುದಾದರೆ, ಭಾರತೀಯ ಜನತಾ ಪಾರ್ಟಿಯವರು ಇದನ್ನು ಸಂಪೂರ್ಣ-ವಾಗಿ ಸ್ವಾಗತವನ್ನು ಮಾಡುತ್ತೇವೆ. ಪ್ರತಿಪಕ್ಷದಲ್ಲಿ ಕುಳಿತುಕೊಂಡಿರುವ ನಾವುಗಳು ಆವತ್ತಿನಿಂದ ಇವತ್ತಿನವರೆಗೂ ಮಾತುಕತೆಯ ಮೂಲಕವೇ ಸೌಹಾರ್ದಯುತವಾಗಿ ಈ ಸಮಸ್ಯೆ ಬಗೆಹರಿಯ-ಬೇಕೆಂದು ಹೇಳುತ್ತಿದ್ದೇವೆ. ಒಂದು ಕಡೆ ಸುಪ್ರೀಂಕೋರ್ಟ್‌ನ ಆದೇಶ, ಸುಪ್ರೀಂಕೋರ್ಟ್‌ನ ಮುಂದೆ ನೀವು ಮಾತುಕತೆಯನ್ನು ಆಡುತ್ತೇವೆ ನೀವು ಟ್ರಿಬ್ಯೂನಲ್‌ನ್ನು ತೆಗೆದುಹಾಕಿ ಎಂದು ಹೇಳಬೇಕಾಗಿತ್ತು. ಮತ್ತೆ ಇದಕ್ಕೆ ಛೇರ್ಮನ್ ಮಾಡುವ ಅಗತ್ಯವಿಲ್ಲ. ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್‌ನ್ನು ಫ್ರೇಮ್ ಮಾಡಿಕೊಂಡು ಅದರ ಆಧಾರದ ಮೇಲೆ ಮಾತುಕತೆಯನ್ನು ಆಡುತ್ತೇವೆ ಎನ್ನುವ ಮಾತನ್ನು ತಾವು ಎಂದೂ ಸಹ ಹೇಳಿಲ್ಲ. ಹೀಗಾಗಿ ನಿಮ್ಮ ಮಾತುಕತೆಯ ಬಗ್ಗೆ ಸಂಪೂರ್ಣವಾಗಿ ಇವತ್ತು ಅನುಮಾನ ಬರುತ್ತಿದೆ. ಮೈಸೂರು ವಿಭಾಗದಲ್ಲಿ 5.8.1996ರಂದು ಮಳೆಯ ಪರಿಸ್ಥಿತಿಯು ಏನಿದೆ ಎಂದು ಹೇಳಿದ್ದಾರೆ. ಮೈಸೂರು ಜಲಾನಯನ ಪ್ರದೇಶದಲ್ಲಿ ಮೂರು ತಾಲ್ಲೂಕುಗಳಲ್ಲಿ ಮಾ-ಮೂಲಿ ಮಳೆಯಾಗಿದೆ. 16 ತಾಲ್ಲೂಕುಗಳಲ್ಲಿ ಸಾಧಾರಣ ಮಳೆಯಾಗಿದೆ. ಇನ್ನು 15 ತಾಲ್ಲೂಕುಗಳಲ್ಲಿ ಅತ್ಯಲ್ಪ ಮಳೆಯಾಗಿದೆ. ಇನ್ನು 7 ತಾಲ್ಲೂಕುಗಳಲ್ಲಿ ಮಳೆಯೇ ಆಗಿಲ್ಲ. ನಿನ್ನೆ ಮೊನ್ನೆಯವರೆಗೆ ಇರ-ತಕ್ಕಂತಹ ಪರಿಸ್ಥಿತಿ ಇದು. ಇದು ನಿಮ್ಮ ಅಧಿಕಾರಿಗಳೇ ಕೊಟ್ಟಿರುವಂತಹ ಅಂಕಿ ಅಂಶಗಳನ್ನು ಹೇಳುತ್ತಿದ್ದೇನೆ. ಜುಲೈ ಮೊದಲನೇ ವಾರದಿಂದ ಕಬಿನಿ ಜಲಾಶಯದಿಂದ ತಮಿಳುನಾಡಿಗೆ ಪ್ರತಿನಿತ್ಯ 1.2 ಟಿ.ಎಂ.ಸಿ. ನೀರು ಬಿಡಲಾಗುತ್ತಿದೆ. ಇದುವರೆಗೆ 40 ಟಿ.ಎಂ.ಸಿ. ನೀರನ್ನು ಹರಿದು ಬಿಟ್ಟಿದ್ದೀರಿ. ಇವತ್ತು ಕೆ.ಆರ್.ಎಸ್.ನಿಂದ ಪ್ರತಿನಿತ್ಯ 3206 ಕ್ಯೂಸೆಕ್ಸ್ ನೀರು ಹರಿದು ಹೋಗುತ್ತಿದೆ. ಈ ಮಾತು-ಕತೆಯನ್ನು ಆಡುವಂತಹ ಸಂದರ್ಭದಲ್ಲಿ ಬಹಳ ಪ್ರಾಮುಖ್ಯವಾಗಿರತಕ್ಕಂತಹ ಮೇಕೆದಾಟಿನ ಬಗ್ಗೆ 70 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಂಡು ವಿದ್ಯುತ್ ಉತ್ಪಾದನೆಯನ್ನು ಮಾಡುವಂಥಾದ್ದು ಒಂದು ಯೋಜನೆ ಏನಿತ್ತು ಇದರ ಬಗ್ಗೆ ತಾವು ಪ್ರಸ್ತಾಪವನ್ನು ಮಾಡಿದಿರಾ? ಇದರ ಬಗ್ಗೆ ಮಾತುಕತೆ ಏನಾಯಿತು ಎಂಬುದನ್ನೂ ಸಹ ತಿಳಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ದಯಮಾಡಿ ತಮಿಳುನಾಡಿನ ಜೊತೆಗೆ ಮಾತನಾಡುವ ಸಂದರ್ಭದಲ್ಲಿ ಏನು ಒಪ್ಪಂದಗಳಾಗಿವೆ, ಮೌಖಿಕವಾಗಿ ಅಥವಾ ಬೇರೆ ರೂಪದಲ್ಲಿ ಯಾವ ರೂಪದಲ್ಲಿ ಆಗಿದೆ ಅದರ ವಿವರವನ್ನು ತಾವು ಬಹಿರಂಗ

ಪಡಿಸಬೇಕು. ಕಾವೇರಿ ಜಲಮಂಡಳಿಯನ್ನು ರದ್ದುಪಡಿಸಿದ ನಂತರವೇ ಇಂತಹ ಒಂದು ಸೌಹಾರ್ದ-ಯುತವಾದಂತಹ ಮಾತನ್ನು ಆಡುತ್ತೇವೆ. ಆ ರೀತಿಯಾಗಿ ಮಾತುಕತೆಗೆ ಮುಂದಾಗಿದ್ದೀರಾ ಅಥವಾ ಇದರ ಹಿನ್ನಲೆ ಏನು ಎಂದು ಸ್ಪಷ್ಟಪಡಿಸಬೇಕು. ಮತ್ತೆ ನೀವು ಯಾವುದೇ ಮಾತುಕತೆಯ ಮೂಲಕ ಒಂದು ಒಪ್ಪಂದಕ್ಕೆ ಬರುವುದಕ್ಕೆ ಮುಂಚೆ ಪ್ರತಿಪಕ್ಷವನ್ನೂ ಸಹ ವಿಶ್ವಾಸಕ್ಕೆ ತೆಗೆದುಕೊಂಡು ವಾಸ್ತವಿಕ ಸತ್ಯಸಂಗತಿಯನ್ನು ಮುಚ್ಚುಮರೆ ಇಲ್ಲದೇ ಈ ಸದನಕ್ಕೆ ತಿಳಿಸಿ ತಾವು ಮಾತುಕತೆಯನ್ನು ಆಡ-ಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ, 7.8.1996ಕ್ಕೆ ಕೆ.ಆರ್.ಎಸ್. ಜಲಾಶಯದಲ್ಲಿ ನೀರು ಇರತಕ್ಕದ್ದು 115.25 ಅಡಿ ಮಾತ್ರ. ಇನ್ ಫ್ಲೋ 6890 ಕ್ಯೂಸೆಕ್ಸ್ ಇದೆ. ಔಟ್ ಫ್ಲೋ 5206 ಕ್ಯೂಸೆಕ್ಸ್ ಇದೆ. ಕೆ.ಆರ್.ಎಸ್.ನ ರಿಸರ್ವಾಯರ್ ಲೆವೆಲ್ 124 ಅಡಿ ಇರ-ಬೇಕು. ನಾನು ನಿನ್ನೆ ಇದ್ದಂಥ ನೀರಿನ ಬಗ್ಗೆ ಹೇಳುತ್ತಿದ್ದೇನೆ. ಇವತ್ತು ಸ್ವಲ್ಪ ಜಾಸ್ತಿ ಇರಬಹುದು. ಇಲ್ಲ-ವೆಂದು ನಾನು ಹೇಳುತ್ತಿಲ್ಲ. ಇವತ್ತು ಇರತಕ್ಕ ಪ್ರಶ್ನೆ ಕೆ.ಆರ್.ಎಸ್.ನ ಲೆವೆಲ್, ಕಬನಿ ಲೆವೆಲ್, ಹಾರಂಗಿ ಲೆವೆಲ್, ಹೇಮಾವತಿ ಲೆವೆಲ್ ಏನಿದೆ ಎಂಬುದು ಅಲ್ಲ. ಪ್ರಶ್ನೆ ಇರತಕ್ಕದ್ದು ಎಂದರೆ, ತಾವು ನೀರನ್ನು ಯಥೇಚ್ಛವಾಗಿದ್ದಾಗ ಬಿಡಬೇಡಿ ಎಂದು ಯಾರೂ ಕೂಡ ನಿಮ್ಮನ್ನು ಒತ್ತಾಯ ಮಾಡಿಲ್ಲ. ನಮ್ಮ ಉದ್ದೇಶ ಎಂದರೆ, ನೀರು ಇಲ್ಲದೇ ಇರತಕ್ಕ ಕಾಲದಲ್ಲಿ ನಮ್ಮ ರಾಜ್ಯದ ಹಿತವನ್ನು ಬಲಿಕೊಟ್ಟು ನೀರನ್ನು ಕೊಡುವಂಥ ಪ್ರವೃತ್ತಿಯನ್ನು ಕಳೆದ ನಾಲ್ಕಾರು ವರ್ಷಗಳಿಂದ ನೋಡುತ್ತಿದ್ದೇವೆ. 6 ಟಿ.ಎಂ.ಸಿ. ನೀರನ್ನು ಮಾನ್ಯ ಪ್ರಧಾನಿಯವರ ಆದೇಶದ ಮೇರೆಗೆ ಕೊಟ್ಟಿದ್ದು ಇರಬಹುದು, ಅಥವಾ ಬೇರೆ ಸಂದರ್ಭದಲ್ಲಿ ಇರಬಹುದು. ಅಥವಾ ಇಲ್ಲಿ ಸದನ ನಡೆಯುವಾಗ ಕದ್ದುಮುಚ್ಚಿ 5 ಟಿ.ಎಂ.ಸಿ. ನೀರನ್ನು ಬಿಟ್ಟು ಅನಂತರ ಮತ್ತೆ 5 ಟಿ.ಎಂ.ಸಿ. ನೀರನ್ನು ಬಿಟ್ಟಿದ್ದು ಇರಬಹುದು, ಹೀಗೆ ಯಾವುದೇ ಸಂದರ್ಭವನ್ನು ತೆಗೆದುಕೊಂಡರೂ ನೀವು ತಮಿಳುನಾಡನ್ನು ತೃಪ್ತಿಪಡಿಸುವುದಕ್ಕಾಗಿ ಈ ರಾಜ್ಯದ ಹಿತವನ್ನು ಸಂಪೂರ್ಣವಾಗಿ ಬಲಿಕೊಟ್ಟು ಈ ಕೆಲಸವನ್ನು ನೀವು ಮಾಡುತ್ತಿದ್ದೀರಿ. ಇವತ್ತು ತಮಗೆ ಒಂದು ಮಾತನ್ನು ಕೇಳಬಯಸುತ್ತೇನೆ. ಅಲ್ಲಿ ಏನು ಮಾತುಕತೆ ಆಗಿದೆ? ಎಷ್ಟು ಸತ್ಯ ಸಂಗತಿಗಳನ್ನು ಹೇಳುತ್ತೀರಿ? ಇವತ್ತಲ್ಲ ನಾಳೆ ಸತ್ಯ ಹೊರಗಡೆ ಬರಲೇಬೇಕಲ್ಲಾ. ಮಾನ್ಯ ನಾಣಯ್ಯನವರು ಅಲ್ಲಿ ಕುಳಿತುಕೊಂಡು ಕೇಂದ್ರದಲ್ಲಿ ತಮ್ಮ ಸರ್ಕಾರ ಇದೆ ಎಂಬ ಒಂದೇ ಒಂದು ಕಾರಣಕ್ಕಾಗಿ ಮಾನ್ಯ ಜೆ.ಹೆಚ್. ಪಟೇಲರಂಥ ಹಿರಿಯರು ಇರುವಂಥ ಕಾಲದಲ್ಲಿ . . .

ಶ್ರೀ ಎಂ.ಸಿ. ನಾಣಯ್ಯ:- ಕೇಂದ್ರ ಸರ್ಕಾರದಲ್ಲಿ ನಮ್ಮವರು ಇದ್ದರೆ ಎಂಬ ಒಂದೇ ಕಾರಣ ನಿಮಗೇನಾದರೂ ಬೇಸರ ತಂದಿದೆಯೇ? ಬಹುಶಃ ಅದೇ ಇರಬೇಕೆಂದು ಕಾಣಿಸುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಖಂಡಿತ ಇಲ್ಲ.

ಶ್ರೀ ಎಂ.ಸಿ. ನಾಣಯ್ಯ:- ಕೇಂದ್ರ ಸರ್ಕಾರ, ಕೇಂದ್ರ ಸರ್ಕಾರ ಎಂದು ನೀವು ಹೇಳುತ್ತಿರುವ ಮಾತಿನ ಅರ್ಥ ಏನೆಂದರೆ, ಬಹುಶಃ ಅಲ್ಲಿ ನಮ್ಮವರು ಒಬ್ಬರಿದ್ದಾರಲ್ಲಾ ಅದು ನಿಮಗೆ ಹಿಡಿಸಿದಂತೆ ಕಾಣುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನೀವು ಪ್ರತಿ ಕ್ಷಣದಲ್ಲೂ ರಾಜಕೀಯವನ್ನು ಮಾಡುತ್ತೀರಿ. ಆದರೆ ನಾವು ಅಂಥ ರಾಜಕೀಯವನ್ನು ಮಾಡುತ್ತಿಲ್ಲ.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ:- ಎಲ್ಲಾ ಸಮಸ್ಯೆಗಳೂ ಪರಿಹಾರವಾಗಿರುವುದರಿಂದ ಇನ್ನು ಹೆಚ್ಚಿಗೆ ಚರ್ಚೆ ಮಾಡುವುದಕ್ಕೆ ನಿಮಗೆ ಯಾವುದೇ ವಸ್ತು ಸಿಕ್ಕುತ್ತಿಲ್ಲ. ನಮ್ಮ ಎಲ್ಲಾ ಸಮಸ್ಯೆಗಳೂ ಪರಿಹಾರವಾಗಿದೆ. ಇನ್ನು ಹೆಚ್ಚು ಚರ್ಚೆ ಮಾಡುವುದಕ್ಕೆ ನಿಮಗೆ ವಸ್ತು ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಈಲ್ಡ್ ಆಗಿಲ್ಲ.

ಶ್ರೀ ಎಂ. ಶ್ರೀನಿವಾಸ್:- ಅವರು ನಮ್ಮ ಹತ್ತಿರ ಬಂದು ಕೇಳಬೇಕಾಗಿತ್ತು. ಆದರೆ ನೀರನ್ನು ಕೊಡುವಂಥ ನೀವು ಅವರ ಹತ್ತಿರ ಹೋಗಿದ್ದೀರಿ. ಅವರು ಇಲ್ಲಿಗೆ ಬರಬೇಕಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ:- ತಾವು ಒಂದು ಸತ್ಯ ಸಂಗತಿಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ನಾನು ಮಾತನಾಡುತ್ತಿರುವುದು ಈ ಸದನದ ರೆಕಾರ್ಡ್‌ಗೆ ಹೋಗಬೇಕು, ಮತ್ತು ವಾಸ್ತವಾಂಶ ಈ ರಾಜ್ಯದ ಜನತೆಗೆ ಗೊತ್ತಾಗಬೇಕು. ಇಷ್ಟು ಮಾತ್ರ ನಿಶ್ಚಿತ. ಕೇಂದ್ರದಲ್ಲಿ ನಮ್ಮವರೇ ಪ್ರಧಾನಿಯಾಗಿರುವುದು ಸ್ವಾಗತಾರ್ಹ ಮತ್ತು ಸಂತೋಷದ ಸಂಗತಿ. ಆದರೆ ಇದೇ ಸಂದರ್ಭದಲ್ಲಿ ಇಲ್ಲಿನ ಮಾಜಿ ಮುಖ್ಯಮಂತ್ರಿಗಳು ಕೇಂದ್ರದಲ್ಲಿ ಪ್ರಧಾನಿ ಆಗಿರುವ ಸಂದರ್ಭದಲ್ಲಿ ಅವರ ಕುರ್ಚಿಯ ಉಳಿವಿಗಾಗಿ ಆಂಧ್ರ ಮತ್ತು ತಮಿಳ್ನಾಡಿಗೆ ನಮ್ಮ ರಾಜ್ಯದ ಹಿತವನ್ನು ಬಲಿಕೊಟ್ಟು ಎಲ್ಲಾ ರೀತಿಯಲ್ಲೂ ನೀರನ್ನು ಅವರಿಗೆ ಬಿಟ್ಟುಕೊಟ್ಟು, ನಮ್ಮನ್ನು ಸಂಕಷ್ಟದಲ್ಲಿ ಸಿಕ್ಕಿಸುವಂಥ ಗೊಂದಲದ ಪರಿಸ್ಥಿತಿಯನ್ನು ತರುತ್ತಿದ್ದೀರಿ. ಅಂಥ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಬರುತ್ತಿದೆ. . .

ಶ್ರೀ ಎಂ.ಸಿ. ನಾಣಯ್ಯ:- ಒಂದು ಮಾತನ್ನು ತಾವು ತಿಳಿದುಕೊಳ್ಳಿ. . .

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಈಲ್ಡ್ ಆಗಿಲ್ಲ. ತಾವು ಅನಂತರ ಮಾತನಾಡಿ.

ಶ್ರೀ ಎಂ.ಸಿ. ನಾಣಯ್ಯ:- ರಾಜ್ಯದ ಜನತೆಯ ಹಿತವನ್ನು ಬಲಿಕೊಟ್ಟು, ನಮ್ಮ ರಾಜ್ಯದ ರೈತಾಪಿ ಜನರ ಹಿತವನ್ನು ಬಲಿಕೊಟ್ಟು ಅವರು ಅಲ್ಲಿ ಪ್ರಧಾನಿಯಾಗಿ ಒಂದು ಕ್ಷಣವೂ ಕೂಡ ಕುಳಿತುಕೊಳ್ಳುವುದಿಲ್ಲ. ಅಂಥ ಅವಶ್ಯಕತೆ ಇಲ್ಲ. ಅಂಥ ಪರಿಸ್ಥಿತಿ ಬಂದರೆ ಅವರು ಒಂದು ಕ್ಷಣದಲ್ಲಿ ಹೊರಗಡೆ ಬರುತ್ತಾರೆ. ಇದನ್ನು ತಿಳಿದುಕೊಳ್ಳಿ. ಹತ್ತಾರು ವರ್ಷಗಳಿಂದ ನಾವು ಮಾಡುತ್ತಿರುವ ಹೋರಾಟ ಈ ರಾಜ್ಯದ ಜನರ ಹಿತಕ್ಕಾಗಿ. ಅದಕ್ಕಾಗಿ ಅವರು ಪ್ರಧಾನಿಯಾಗಿದ್ದಾರೆ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್:- ಜನರು ಬೀದಿಗೆ ಬಂದರೆ ಗೊತ್ತಾಗುತ್ತದೆ. ನಿಮ್ಮಷ್ಟು ಅನ್ಯಾಯವನ್ನು ಮಾಡಿದವರು ಬೇರೆ ಯಾರೂ ಇಲ್ಲ. ಇವತ್ತಲ್ಲ ನಾಳೆ ಈ ಕರ್ನಾಟಕದ ಜನರು ನಿಮಗೆ ತೋರಿಸುತ್ತಾರೆ.

(ಗೊಂದಲ)

ಶ್ರೀ ಜಿ. ಚಂದ್ರಕಾಂತ ಬೆಲ್ಲದ:- ಕನ್ನಡದ ಜನರು ನಿಮಗೆ ಕ್ಷಮೆ ಮಾಡುವುದಿಲ್ಲ.

ಶ್ರೀ ಎಂ. ಶ್ರೀನಿವಾಸ್:- ನೀವು ಇವತ್ತು ಏನೋ ತಿಳಿದುಕೊಂಡಿರಬಹುದು. ಮುಂದೆ ಗೊತ್ತಾಗುತ್ತದೆ. ನಿಮಗೆ ರಾಜ್ಯದ ಹಿತ ಮುಖ್ಯವಲ್ಲ, ಕುರ್ಚಿಯ ಹಿತ ಮುಖ್ಯ. ಹಿಂದೆ ಇಲ್ಲಿ ನೀವು ಕುಳಿತಿದ್ದಾಗ ಏನು ಹೇಳುತ್ತಿದ್ದೀರಿ? ಕಾವೇರಿಯ ನೀರನ್ನು ಬಿಟ್ಟರೆ ನಮ್ಮ ರಕ್ತವನ್ನು ಬಿಟ್ಟಂತೆ ಎಂದು ಹೇಳುತ್ತಿದ್ದೀರಿ. ಈಗ ನಿಮ್ಮ ರಕ್ತ ಎಲ್ಲಿ ಹೋಯಿತು? ಆ ಕುರ್ಚಿಯಲ್ಲಿ ಹೋಗಿ ಕುಳಿತುಕೊಂಡಮೇಲೆ ನಿಮಗೆ ರಕ್ತ ಇಲ್ಲವೆ? ನಿಮಗೆ ಆ ರಕ್ತ ಬೇಕಿಲ್ಲವೇ?

ಶ್ರೀ ಜಿ. ಚಂದ್ರಕಾಂತ ಬೆಲ್ಲದ್:- ನಮ್ಮವರು ಪ್ರಧಾನಮಂತ್ರಿಯಾಗಿದ್ದಾರೆ, ಕರ್ನಾಟಕಕ್ಕೆ ನ್ಯಾಯ ಸಿಕ್ಕುತ್ತದೆಂದು ನಾವು ಇಲ್ಲಿ ತಿಳಿದುಕೊಂಡಿದ್ದೆವು; ಆದರೆ ನಮಗೆ ಅನ್ಯಾಯವಾಗುತ್ತಿದೆ ಎಂದು ಇತ್ತೀಚೆಗೆ ತಿಳಿದುಬಂತು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಸಭಾಧ್ಯಕ್ಷರೇ, ನಮಗೆ ಇಲ್ಲಿ 2 ವಿಚಾರಗಳಲ್ಲಿ ಅನುಮಾನ ಇದೆ.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಅಧ್ಯಕ್ಷರೇ, ಒಂದು ಮಾತನ್ನು ಸ್ಪಷ್ಟವಾಗಿ ಹೇಳಿಬಿಡೋಣ. ಕರ್ನಾಟಕ ರಾಜ್ಯದ ಜನತೆಗೆ ಅನ್ಯಾಯವನ್ನು ಮಾಡಿ, ರಾಜ್ಯದ ಜನತೆಯ ಹಿತವನ್ನು ಬಲಿಕೊಟ್ಟು. . .

(ಗೊಂದಲ)

ಶ್ರೀ ಎಂ. ಶ್ರೀನಿವಾಸ್:- ಇಂಥ ದ್ರೋಹವನ್ನು ನಮ್ಮ ಕರ್ನಾಟಕದ ಜನತೆಗೆ ಬೇರೆ ಯಾರೂ ಮಾಡಲಿಲ್ಲವೆಂದು ನಾನು ನೂರು ಸಾರಿ ಹೇಳುತ್ತೇನೆ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್:- ಅಲ್ಲಿ ಹತ್ತಿಕೊಂಡು ಉರಿಯುತ್ತಿದೆ. ಇನ್ನು 3-4 ತಿಂಗಳು ಹೋಗಲಿ ನಂತರ ನೋಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಒಂದು ಆನಂದದ ಸಂಗತಿ ಎಂದರೆ, ಇವತ್ತು ಇಂಥ ಒಂದು ಇಕ್ಕಟ್ಟಿನ ಸಂದರ್ಭದಲ್ಲಿ ಸಿಕ್ಕಿಕೊಂಡಿರುವುದರಿಂದಲಾದರೂ ತಮ್ಮ ಒಗ್ಗಟ್ಟನ್ನು ತೋರಿಸುವುದಕ್ಕಾಗಿ ನೀವೆಲ್ಲಾ ಇಲ್ಲಿ ಹಾಜರಿರತಕ್ಕದ್ದು ಮೊದಲನೆಯದಾಗಿ ಸ್ವಾಗತಾರ್ಹ ಸಂಗತಿ.

(ಗೊಂದಲ)

ಶ್ರೀ ಸಿ. ಬೈರೇಗೌಡ:- ನಿನ್ನೆಯ ದಿವಸ ನಿಮ್ಮ ಸಭೆಯಿಂದ ನಿಮ್ಮ ಪಕ್ಷದ ಮುಖಂಡರೊಬ್ಬರು ನಿಮ್ಮ ನಡುವಳಿಕೆಯನ್ನು ನೋಡಿ ಬೇಸತ್ತು, ಪ್ರತಿಭಟನೆ ಮಾಡಿ ಹೊರಗೆ ಹೋಗಿದ್ದಾರಲ್ಲಾ ಅದನ್ನು ಮೊದಲು ಭದ್ರಪಡಿಸಿಕೊಳ್ಳಿ.

(ಗೊಂದಲ)

ಶ್ರೀ ಎಂ.ಸಿ. ಶ್ರೀನಿವಾಸ್:- ಯಾರು ಹೋಗಿದ್ದಾರೆ ಪೂರ್ತಿ ಹೇಳಿ.

ಒಬ್ಬ ಮಾನ್ಯ ಸದಸ್ಯರು:- ನಮ್ಮ ನಡವಳಿಕೆಯ ಬಗ್ಗೆ ನೀವು ಹೇಳಬೇಕಾಗಿಲ್ಲ.

ಶ್ರೀ ಎಂ. ಶ್ರೀನಿವಾಸ್:- ಬೈರೇಗೌಡರೇ ಯಾರು ಎಂಬುದನ್ನು ಪೂರ್ತಿ ಹೇಳಿ.

ಶ್ರೀ ವೈ. ರಾಮಕೃಷ್ಣ:- ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ಇವರು ಬಂದಿದ್ದಾರೆ. ಇವರು ಹೇಳುತ್ತಿರುವ ರಾಷ್ಟ್ರಪ್ರೇಮ ಕಾವೇರಿ ಹೊಳೆಯಲ್ಲಿ ಹರಿದುಹೋಗುತ್ತಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಬೈರೇಗೌಡರು ನಮ್ಮವರು ಎಂದು ನಾವು ಹೇಳು-ತ್ತಿದ್ದೇವೆ. ಆದರೆ ನೀವು ನಮ್ಮ ಔದಾರ್ಯವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ. ಮಾನ್ಯ ನಾಣಯ್ಯನವರಿಗೆ ಸಿಟ್ಟು ಬರುವುದಕ್ಕೆ ಕಾರಣವಾದರೂ ಏನು?

ಅಧ್ಯಕ್ಷರು:- ಮಾನ್ಯ ಖರ್ಗೆಯವರು ಏನು ಹೇಳುತ್ತಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನಾದರೂ ಹೇಳುವುದು ಇಷ್ಟೆ. ಮೊದಲು ಅವರು ವಿಷಯವನ್ನು ಪ್ರಸ್ತಾಪ ಮಾಡಲಿ. ಮಾನ್ಯ ಮುಖ್ಯಮಂತ್ರಿಗಳು ದೀರ್ಘವಾಗಿ ಉತ್ತರವನ್ನು ಕೊಡಲಿ. ಏಕೆಂದರೆ ಅಲ್ಲಿಗೆ 5-6 ಜನ ಮಂತ್ರಿಗಳು, 5-6 ಜನ ಅಧಿಕಾರಿಗಳು ಹೋಗಿದ್ದರು. ಬಹಳಷ್ಟು ಕಷ್ಟ-ಪಟ್ಟು ಅಲ್ಲಿ ಅನ್ ರಿಟನ್ ಅಗ್ರಿಮೆಂಟ್‌ನ್ನು ಮಾಡಿಕೊಂಡು ಬಂದಿದ್ದಾರೆ. ಅದನ್ನು ಅವರು ಬಹಿರಂಗ-ಪಡಿಸುತ್ತಾರೆ. ಅನಂತರ ನೋಡೋಣ. ಅವರು ಹೇಳುವುದಕ್ಕೆ ಅವಕಾಶ ಇಲ್ಲ ಎಂದರೆ ನಮಗೆ ಕಷ್ಟ-ವಾಗುತ್ತದೆ. ಪದೇ ಪದೇ ಅವರೂ ಹೇಳುವುದು. ನಾವೂ ಹೇಳುವುದು ಮಾಡಿದರೆ ಕಷ್ಟವಾಗುತ್ತದೆ. ಸಮಾಧಾನವಾಗಿ ಕೂತು ಕೇಳಿ ಒಮ್ಮೆಗೇ ಅವರು ಉತ್ತರವನ್ನು ಕೊಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ರಾಜಕೀಯವನ್ನು ಬಳಸಬಾರದೆಂದು ಇದುವರೆಗೂ ಸುಮ್ಮನಿದ್ದೆ. ಮಾನ್ಯ ನಾಣಯ್ಯನವರು ಮತ್ತಿತರರು ಸಿಟ್ಟಿನಿಂದ ಎದ್ದಮೇಲೆ ಈಗ ನನಗನಿಸುತ್ತಿದೆ. . .

(ಗೊಂದಲ)

ಶ್ರೀ ಎಂ. ಶ್ರೀನಿವಾಸ್:- ಇವತ್ತು ನಮಗೆ ಬೆಂಬಲ ಸಿಕ್ಕಬೇಕು, ಎಲ್ಲಾ ಶಾಸಕರೂ ಒಟ್ಟಾರೆ ಬರಬೇಕೆಂದು ಕರೆದುಕೊಂಡು ಬಂದಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಇವತ್ತಿನ ಪತ್ರಿಕೆಗಳನ್ನು ನೋಡಿದಾಗ ಯಾರು ಕೇಂದ್ರಸರ್ಕಾರಕ್ಕೆ ತಮ್ಮ ಬೆಂಬಲವನ್ನು ಕೊಟ್ಟರೋ ಅವರೇ ಇವತ್ತಿನ ದಿವಸ ತಮ್ಮ ಬೆಂಬಲವನ್ನು ಮತ್ತೆ ಕೊಡುವುದಕ್ಕೆ ಹಿಂದುಮುಂದು ನೋಡುವಂಥ ಕಾಲದಲ್ಲಿ ಹೇಗಾದರೂ ಮಾಡಿ

ಆಂಧ್ರಕ್ಕೆ, ತಮಿಳ್ನಾಡಿಗೆ ನಮ್ಮ ರಾಜ್ಯದ ಹಿತವನ್ನು ಬಲಿಕೊಟ್ಟು ನೀರನ್ನು ಕೊಟ್ಟು, ಇನ್ನೊಂದನ್ನು ಕೊಟ್ಟು ಅವರು ಬೆಂಬಲವನ್ನು ಪಡೆದುಕೊಂಡು. . .

(ಗೊಂದಲ)

ಶ್ರೀ ಹೆಚ್. ಶಿವಪ್ಪ:- ಇದು ರಾಜಕೀಯ ಭಾಷಣ. ಏನು ಬೇಕಾದರೂ ಮಾತನಾಡಬಹುದೇ?

(ಗೊಂದಲ)

ಶ್ರೀ ಎಂ. ಶ್ರೀನಿವಾಸ್:- ಏನೇ ಆದರೂ ನಾವು ಕಾವೇರಿ ನೀರನ್ನು ಬಿಡುವುದಿಲ್ಲ, ಎಂದು ಅವರು ಹೇಳುತ್ತಿದ್ದರು. ಆದರೆ ಈಗ 2-2 ತಿಂಗಳಿಗೂ ಕಾವೇರಿ ನೀರನ್ನು ಬಿಡುತ್ತಿದ್ದಾರೆ. ಅದರಲ್ಲೂ ರಾತ್ರಿ ಹೊತ್ತು ನೀರನ್ನು ಬಿಡುತ್ತಿದ್ದಾರೆ. ಹಗಲು ಹೊತ್ತು ಬಿಡುತ್ತಿಲ್ಲ. ಚುನಾವಣೆಗೆ ಮೊದಲು ಮೈಸೂರಿನಲ್ಲಿ ಭಾಷಣದಲ್ಲಿ ಏನು ಹೇಳಿದಿರಿ? ನಾವು ರಕ್ತವನ್ನು ಕೊಟ್ಟರೂ ಪರವಾಗಿಲ್ಲ ಒಂದು ಹನಿ ಕಾವೇರಿ ನೀರನ್ನೂ ಬಿಡುವುದಿಲ್ಲ ಎಂದು ಹೇಳಿದಿರಿ. ಈಗ 6-6 ಟಿ.ಎಂ.ಸಿ. ನೀರನ್ನು ರಾತ್ರಿ ಹೊತ್ತು ಬಿಡುತ್ತಿದ್ದೀರಿ. ತಮಿಳ್ನಾಡಿನವರು ಬಂದು ನಿಮ್ಮನ್ನು ನೀರು ಬಿಡುವಂತೆ ಕೇಳಬೇಕಾಗಿತ್ತು. ಆದರೆ ನೀವೇ ಅಲ್ಲಿಗೆ ಹೋಗಿದ್ದೀರಿ. ನೀವೇ ಅಲ್ಲಿಗೆ ಹೋಗುವುದಕ್ಕೆ ನಾಚಿಕೆಯಾಗುವುದಿಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಇವತ್ತು ನಿಜವಾಗಿ ಇದನ್ನು ರಾಜಕಾರಣಕ್ಕೆ ತಿರುಗು-ಸುವಂಥ ಅಕ್ಷಮ್ಯ ಅಪರಾಧ ನೀವು ಮಾಡಿದ್ದೀರೆಂದು ನಾನು ಅಂದುಕೊಂಡಿರಲಿಲ್ಲ. ಏಕೆಂದರೆ ನೀವು ಮಾತನಾಡುವಂತದ್ದು ಎದ್ದುನಿಂತಿರುವಂತದ್ದು, ಕಾನೂನು ಮಂತ್ರಿಗಳು ಮಾತನಾಡುತ್ತಿರುವುದು ನೋಡಿದರೆ ಎಲ್ಲೋ ನಮ್ಮ ರಾಜ್ಯದ ಹಿತವನ್ನು ಸಂಪೂರ್ಣ ಬಲಿಕೊಟ್ಟು ಇವತ್ತು ಏನು ಅನ್ಯಾಯ ಮಾಡಿದ್ದೀರಿ ಇದನ್ನು ಮುಚ್ಚಿ ಹಾಕುವುದಕ್ಕೆ ಎದ್ದುನಿಂತು ಪತ್ರಿಕೆಯಲ್ಲಿ ಬರುವುದರಿಂದ ಅದು ಆಗು-ವುದಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಮುಖ್ಯ ಮಂತ್ರಿಗಳು ಮುಂದೆ ಸಚಿವ ಸಂಪುಟ-ವನ್ನು ಯಾವಾಗ ರೀಷಫಲ್ ಮಾಡುತ್ತಾರೆಂದು ಗೊತ್ತಾದರೆ ಒಳ್ಳೆಯದು. ಏಕೆಂದರೆ ಸ್ವಲ್ಪ ಕಾಂಪೀ-ಟೇಷನ್ ಜಾಸ್ತಿ ಇದೆ. ಅದಕ್ಕೆ ಮುಂಚೆ ಯಾವಾಗ ಎಂದು ತಾರೀಖು ಹೇಳಿದರೆ ಆ ತಾರೀಖಿಗೆ ಒಂದು ಸ್ವಲ್ಪ ಜಾಸ್ತಿ ಹಾಜರಾತಿ ಇರುತ್ತದೆ.

ಶ್ರೀ ಜೆ.ಹೆಚ್. ಪಟೇಲ್:- ನಾನು ಏನು ನಿರೀಕ್ಷೆ ಮಾಡಿದ್ದೆ ಎಂದರೆ, ತಮಿಳ್ನಾಡಿನ ಮುಖ್ಯ ಮಂತ್ರಿಗಳು ನಮ್ಮೊಡನೆ ಮಾತನಾಡಿ ಒಂದು ಭರವಸೆಯ ವಾತಾವರಣ ಹುಟ್ಟಿದ್ದರಿಂದ ಅವರು ನಾನು ಪ್ರೆಸ್‌ಗೆ ಹೇಳುವುದಿಲ್ಲ, ಅಸೆಂಬ್ಲಿಗೆ ಹೋಗಿ ಹೇಳುತ್ತೇನೆಂದು ಸ್ಟೇಟ್‌ಮೆಂಟ್ ಕೊಟ್ಟರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅದರ ಬಗ್ಗೆಯೇ ನಾವು ಪ್ರಸ್ತಾಪ ಮಾಡಿ ಕೇಳಿದೆ.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್:- ನಾನು ನಿರೀಕ್ಷೆ ಮಾಡಿದ್ದು ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ಬೇರೆ ಬೇರೆ ನಾಯಕರು ನಮಗೆ ಶಭಾಷ್‌ಗಿರಿ ಕೊಡುವುದು ಇರಲಿ, ಅವರು ಕೊಡುವುದಿಲ್ಲ, ಮತ್ತೆ ಪುನಃ ಪುನಃ ಇವರ ಬೆರಳು ದಿಲ್ಲಿ ಕಡೆ ಹೋಗುತ್ತದೆಯೇ ಹೊರತು ಕರ್ನಾಟಕವನ್ನು ಮರೆತರು, ಇಲ್ಲಿನ ಜನರನ್ನು ಮರೆತರು, ಕಾವೇರಿಯನ್ನು ಮರೆತರು. ಅದಕ್ಕಾಗಿ ನಾನು ಒಂದು ಮಾತು ಹೇಳುತ್ತೇನೆ, ಉತ್ತರ ಆಮೇಲೆ ಕೊಡುತ್ತೇವೆ. ಮಾನ್ಯ ದೇವೇಗೌಡರು ನಮ್ಮ ಪ್ರಧಾನಿಯಾಗಿ ಇಡೀ ಭಾರತದ ರಕ್ಷಣೆಗೆ ಎಷ್ಟು ಶ್ರಮಪಡುತ್ತಾರೋ ಅದಕ್ಕಿಂತ ಹೆಚ್ಚು ಕರ್ನಾಟಕ. .

(ಗೊಂದಲ)

ಶ್ರೀ ಎಂ. ಶ್ರೀನಿವಾಸ್:- 1994ರ ಚುನಾವಣೆಗೆ ಮೊದಲು ಇದೇ ಮಾತು ಹೇಳಬಹುದಾಗಿತ್ತಲ್ಲಾ.

ಶ್ರೀ ಜೆ.ಹೆಚ್. ಪಟೇಲ್:- ಈಗ ಮಾತ್ರ ಇಷ್ಟು ಹೇಳುತ್ತೇನೆ, ಆಮೇಲೆ ಉತ್ತರ ಕೊಡುತ್ತೇನೆ. ಶ್ರೀ ದೇವೇಗೌಡರು ನಮ್ಮ ಪ್ರಧಾನಿಯಾಗಿ ಇಡೀ ಭಾರತವನ್ನು ಎಷ್ಟು ತನ್ನದು ಎಂದು ಕಾಣುತ್ತಾರೆ ಅಷ್ಟೇ ಇವತ್ತು ತಮಿಳ್ನಾಡು, ಕರ್ನಾಟಕ ಕೇರಳವನ್ನು ಕಾಣಬೇಕಾಗುತ್ತದೆ. ನಾನು ಇವತ್ತು ಕರ್ನಾಟಕದ ಬಗ್ಗೆ ಹೆಚ್ಚು ಮಾತನಾಡಬಹುದು, ಆದರೆ ಪ್ರಧಾನ ಮಂತ್ರಿಗಳು ಬರೀ ಕರ್ನಾಟಕದ ಬಗ್ಗೆ ಮಾತನಾಡುವುದಕ್ಕಾಗುವುದಿಲ್ಲ. ಇವರು ಏನು ತಿಳಿದುಕೊಂಡಿದ್ದಾರೆ ಆ ರೀತಿ ಬರೀ ಕರ್ನಾಟಕದ ಬಗ್ಗೆ ಇಲ್ಲ. ಇವರಿಗೆ ಕೇವಲ ಹೊಟ್ಟೇಕಿಚ್ಚೇ ವಿನಹ ಬೇರೆ ಯಾವುದು ಏನೇನೂ ಇಲ್ಲ . . .

(ಗೊಂದಲ)

ಶ್ರೀ ಎಂ. ಶ್ರೀನಿವಾಸ್:- ಸುಮ್ಮನೆ ಕುಳಿತಿದ್ದರೆ ಹೊಟ್ಟೆಕಿಚ್ಚು ಇಲ್ಲ. ನೀರು ಬಿಟ್ಟು ಕುಳಿತಿದ್ದೀರಲ್ಲಾ ನಿಮಗೆ ನಾಚಿಕೆಯಾಗುವುದಿಲ್ಲವೇ . . .

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಒಂದೇ ಮಾತು ಹೇಳುತ್ತೇನೆ. ಯಾರೇ ಇರಲಿ ಇವತ್ತು, ನಮ್ಮ ಕರ್ನಾಟಕದವರೇ ಪ್ರಧಾನಿಯಾಗಿದ್ದಾರೆ, ಅತ್ಯಂತ ಸಂತೋಷದ ಸಂಗತಿ.

(ಗೊಂದಲ)

ಇವರದ್ದು ಏನು ರೋಗ ಸ್ವಾಮಿ? ಇವರಿಗೇನಾಗಿದೆ ದಾಡಿ? ಎಲ್ಲದಕ್ಕೂ ಬಡಿದುಕೊಳ್ಳುತ್ತಾರಲ್ಲಾ ಸ್ವಾಗತ ಮಾಡಿದರೂ ಬಡಿದುಕೊಂಡರೆ ಏನು? ಇವರಿಗೆ ಬರೆದುಕೊಡಬೇಕೇ? ನಾನು ಏನು ಹೇಳುವುದೇನೆಂದರೆ, ಇಲ್ಲಿ ಒಂದು ಸ್ಪಷ್ಟವಾಯಿತು. ನಾನು ಈ ಸದನದಲ್ಲಿ ಒಂದು ಮಾತು ಹೇಳಿದ್ದೆ. ಜನತಾ ದಳದಲ್ಲಿ ಎ.ಬಿ.ಸಿ. ಎಂದು 3 ಟೀಂ ಇದೆ ಎಂದು ಹೇಳಿದ್ದೆ. ಮೊದಲ ಸಾಲಿನಲ್ಲಿರುವವರು ದೇವೇಗೌಡರ ಹೆಸರು ಬಂದತಕ್ಷಣ ಎದ್ದು ನಿಂತುಕೊಂಡರು, ಅದು 'ಎ' ಟೀಂ. . .

(ಗೊಂದಲ)

ಜೆ.ಹೆಚ್. ಪಟೇಲ್‌ರವರ ಪರವಾಗಿರುವ 'ಬಿ' ಟೀಂ ಯಾರು ಯಾರು ಎದ್ದೇಳಿ . . .

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್:- ಬೇಕಾದರೆ ಅವರನ್ನೆಲ್ಲಾ ನಾನು ಎಬ್ಬಿಸಬಲ್ಲೆ.

ಶ್ರೀ ಎಸ್. ಕೃಷ್ಣಪ್ಪ:- ನಿಮ್ಮ ಟೀಂ ಯಾವುದು? ನಂಜೇಗೌಡರ ಟೀಂ ಯಾವುದು? ಶಿವಪ್ಪ-ನವರ ಟೀಂ ಯಾವುದು? ವೈ. ರಾಮಕೃಷ್ಣ ಅವರ ಟೀಂ ಯಾವುದು? ಅದನ್ನು ಹೇಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಅದಾದ ಮೇಲೆ ಅವರಲ್ಲಿ ಬಹಳ ಜನರನ್ನು ಶಾಸಕರನ್ನಾಗಿ ಮಾಡಿ, ಬೆಳಸಿ ಈ ಸ್ಥಿತಿಗೆ ತಂದಂಥ ಇನ್ನೊಬ್ಬ ಪ್ರಮುಖರು ಹೊರಗಡೆ ಇದ್ದಾರೆ. ಶ್ರೀ ರಾಮಕೃಷ್ಣ ಹೆಗಡೆ ಕಡೆಯವರು ಬಹಳ ಜನ ಇದ್ದೀರಿ, ಅವರು ಯಾರು ಸ್ವಲ್ಪ ಎದ್ದು ನಿಂತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಶ್ರೀ ರಾಮಕೃಷ್ಣಹೆಗಡೆ ಕಡೆ ಇರುವವರೆಲ್ಲಾ ಅಲ್ಲೇ ಇದ್ದಾರೆ.

ಅಧ್ಯಕ್ಷರು:- ಇವತ್ತು ಎಲ್ಲರಿಗೂ ಮುಕ್ತ ಅವಕಾಶ, ಶಕ್ತ್ಯಾನುಸಾರ ಹೇಳುತ್ತಾ ಹೋಗಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್:- ಮಾನ್ಯ ವಿರೋಧ ಪಕ್ಷದ ನಾಯಕರ ಪಕ್ಷ ಚಿತ್ರಾನ್ನವಾಗಿ ಎಲ್ಲಾ ಅಲ್ಲೇ ಕುಳಿತುಕೊಂಡಿದ್ದಾರೆ. ಅದನ್ನು ಮರೆತು ಬಿಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇವತ್ತು ಒಂದು ಮಾತು ತಾವು ಒಪ್ಪುತ್ತೀರೋ?

ಶ್ರೀ ಎಸ್. ಕೃಷ್ಣಪ್ಪ:- ಎಲ್ಲರೂ ಬಿಜೆಪಿಗೆ ಸೇರುತ್ತಿದ್ದಾರಲ್ಲಾ, ನಾವು ಎಲ್ಲಿ ಹೋಗುತ್ತೇವೆಂದು ಅವರಿಗೆ ಭಯ ಹುಟ್ಟಿ ಒದ್ದಾಡುತ್ತಿದ್ದಾರೆ ಅಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಕಳೆದ ಅನೇಕ ವರ್ಷಗಳಿಂದ ಜನಸಂಘದಲ್ಲಿದ್ದಾಗಿಂದಲೂ ಕೂಗಿ, ಕೂಗಿ, ಕೂಗಿ ಗಂಟಲು ನೋವು ಮಾಡಿಕೊಂಡೆವು. ಅದರ ಪರಿಣಾಮ ಏನು? ಬಿಜೆಪಿ ಇವತ್ತು ನಂ (1) ಪಾರ್ಟಿ. ಲೋಕಸಭೆಯಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿರುವಂಥ ಪಾರ್ಟಿ. 5 ರಾಜ್ಯಗಳಲ್ಲಿ ಅಧಿಕಾರ ನಡೆಸುತ್ತಿರುವ ಪಾರ್ಟಿ. ನೀವು ಎರಡು ರಾಜ್ಯಗಳಲ್ಲಿ ಇರುವವರು. 42 ಜನ ಇದ್ದು ಒಬ್ಬ ಪ್ರಧಾನಿ ಮಾಡಿಕೊಂಡು ಅಲ್ಲಿ ಕೂಗುತ್ತೀರಲ್ಲಾ, 3 ತಿಂಗಳ ನಡವಳಿಕೆ ನಿಮ್ಮದು, 4ನೇ ತಿಂಗಳಲ್ಲಿ ಏನಾಗುತ್ತದೋ ಗೊತ್ತಿಲ್ಲ. ನಿಮ್ಮ ಪರಿಸ್ಥಿತಿ ಏನು? ಇದನ್ನು ಅರ್ಥ ಮಾಡಿಕೊಳ್ಳದೆ ನೀವು ಮಾತ-ನಾಡಿದರೆ ನಾನು ಏನು ಹೇಳಬೇಕು ಅಧ್ಯಕ್ಷರೆ, ವಿಷಯಕ್ಕೆ ಬರೋಣ.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ:- ಯಡಿಯೂರಪ್ಪನವರೇ, ತಾವು ರಾಜಕೀಯ ಇತಿಹಾಸವನ್ನು ಮರೆಯಬೇಡಿ. ರಾಜಕೀಯ ಇತಿಹಾಸವನ್ನು ಸ್ವಲ್ಪ ಮಟ್ಟಿಗೆ ನೀವು ಲೆಕ್ಕ ಹಾಕಿಕೊಂಡು ಬಂದರೆ,

ಎರಡು ಇದ್ದವರನ್ನು 78 ಮಾಡಿದವರು ನಾವು ಎಂಬುದನ್ನು ತಾವು ಮರೆಯಬೇಡಿ. ಎರಡು ಇದ್ದುದನ್ನು 78 ಮಾಡಿದೆವಲ್ಲಾ ಅದು ನಾವು. 1974ರಲ್ಲಿ 2 ಇದ್ದಾಗ ನಿಮ್ಮನ್ನು 78 ಮಾಡಿದ್ದು ಏನಿದೆ, ಅದನ್ನು ಮಾಡಿರತಕ್ಕದ್ದು ಯಾರು ಎಂದು ಮರೆಯಬೇಡಿ. ನೀವು 2 ಇದ್ದವರು 78 ಆದಿರಿ. ಆದುದರಿಂದ ನಿಮ್ಮನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಟ್ಟ ಮೇಲೆ ನೀವು ಈಗ ಆಡುತ್ತಿರತಕ್ಕದ್ದು ಏನು? ಏನೇ ಇದ್ದರೂ ಕೂಡ ಇವತ್ತು ರಾಷ್ಟ್ರಮಟ್ಟದಲ್ಲಿ ಒಂದು ಪಕ್ಷ ಎಂದು ಹೇಳುತ್ತಿರತಕ್ಕದ್ದು ನಿಜ. ರಾಜಕೀಯ ಪಕ್ಷದಿಂದ ಎಲ್ಲರೂ ಬೆಳೆದುಕೊಂಡು ಹೋಗುತ್ತಾರೆ. ರಾಜಕೀಯ ಇತಿಹಾಸದಲ್ಲಿ ಒಂದು ಸಾರಿ ಕೆಳಕ್ಕೆ ಹೋಗುತ್ತಾರೆ, ಒಂದು ಸಾರಿ ಮೇಲೆ ಬರುತ್ತಾ ಇರುತ್ತಾರೆ. ಆದರೆ ನಿಮ್ಮನ್ನು ಬೆಳಸಿದವರು ಯಾರು ಎಂಬುದನ್ನು ತಾವು ದಯವಿಟ್ಟು ಮರೆಯಬೇಡಿ.

1.10 ಪಿ.ಎಂ.

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೆ, ಕೇವಲ 11 ದಿವಸದ ಪ್ರಧಾನಮಂತ್ರಿ ಪದವಿಯನ್ನು ಅನುಭವಿಸಿರತಕ್ಕಂಥ ದೊಡ್ಡ ಪ್ರಬಲ ಪಕ್ಷ ಅವರದು. ನಾವು ನಲವತ್ತಮೂರೇ ಇದ್ದರೂ ಕೂಡ ಇನ್ನೂ ಇವರಿಗಿಂತ ಪ್ರಬಲವಾಗಿ ಈ ರಾಜ್ಯವನ್ನು ಆಳುತ್ತಿದ್ದೇವೆ, ಹಾಗೂ ದೇಶವನ್ನು ಆಳುತ್ತಿದ್ದೇವೆ. ಈಗಲೂ ಕೂಡ ಇದ್ದೇವೆ. ಅವರದು ಕೇವಲ 11 ದಿವಸದ ರಾಜ್ಯಭಾರ!

ಶ್ರೀ ವಾಟಾಳ್ ನಾಗರಾಜ್:- ಅಲ್ಲ, ಅಲ್ಲ. ಇದು ದಾರಿ ತಪ್ಪುತ್ತಾ ಇದೆ.

ಶ್ರೀ ಎಂ.ಸಿ. ನಾಣಯ್ಯ:- ನಾನು ಹೇಳುತ್ತಿದ್ದೇನೆ, ಅದು ರಾಜಕೀಯ ಇತಿಹಾಸದಲ್ಲಿ ನಾವು ಮಾಡಿರತಕ್ಕ ದೊಡ್ಡ ಅಪರಾಧ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಸಂಸದೀಯ ವ್ಯವಹಾರಗಳ ಮಂತ್ರಿಗಳು ಹೇಳಿದ ಹಾಗೆ ಇವರನ್ನು ಬೆಳೆಸಿ ಆ ಬಾಬರಿ ಮಸೀದಿ ಒಡೆಯುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದು ಗೊತ್ತಿದೆ. ಇವರ ಸಹಕಾರದಿಂದ ಆ ಬಾಬರಿ ಮಸೀದಿ ಹೋಯಿತು ಎಂಬುದನ್ನು ಒಪ್ಪಿಕೊಳ್ಳುತ್ತೀರಾ ಇವತ್ತು?

(ಗೊಂದಲ)

ಶ್ರೀ ಜಿ.ವಿ. ರಾಮರೆಡ್ಡಿ:- ಬಾಬರಿ ಮಸೀದಿ ಒಡೆದಿದ್ದು ಯಾರು ಎಂಬುದು ಗೊತ್ತಿಲ್ಲವೇ ಇವರಿಗೆ? ಯಾರ ಸಹಕಾರದಿಂದ ಬಾಬರಿ ಮಸೀದಿಯನ್ನು ಒಡೆದಿದ್ದು ಎಂಬುದು ಜಗತ್ತಿಗೆಲ್ಲಾ ಗೊತ್ತಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಗಂಭೀರವಾಗಿ ಕಾವೇರಿ ಚರ್ಚೆ ನಡೆಯಬೇಕು ಎನ್ನತಕ್ಕಂಥಾದ್ದು ನಮ್ಮೆಲ್ಲರ ಅಭಿಪ್ರಾಯವಾಗಿದೆ. ಒಂದು ಸಂತೋಷ ಎಂದರೆ ಜೆ.ಹೆಚ್ ಪಟೇಲರಿಗೆ ಇಷ್ಟೊಂದು ಬೆಂಬಲ ಯಾರೂ ಯಾವತ್ತೂ ತೋರಿಸಿರಲಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಇಷ್ಟೊಂದು ಜನ, ನಾನು ಖಂಡಿತವಾಗಿ ನೋಡಿರಲಿಲ್ಲ. ಪಾಪ, ಒಂದು ದಿನ ಜೆ.ಹೆಚ್. ಪಟೇಲರು ಬಂದು ಕುಳಿತರೆ ಹಿಂದೆ 15 ಜನ ಇರಲಿಲ್ಲ. ಅಂದರೆ ಡೆಲ್ಲಿಯಿಂದ ಅವರಿಗೆಲ್ಲಾ ಹೇಳಿದ್ದಾರೆ, ಇವತ್ತು ನೀವೆಲ್ಲಾ ಭದ್ರವಾಗಿ ಕೂತಿರಬೇಕು ಎಂದು ಡೆಲ್ಲಿಯಿಂದ ಸುದ್ದಿ ಬಂದಿದೆ. ಅದಕ್ಕಾಗಿ ಇವರು ಭದ್ರವಾಗಿ ಕುಳಿತಿದ್ದಾರೆ. ಕಾವೇರಿ ಬಗ್ಗೆ ಸಮಗ್ರವಾಗಿ ಚರ್ಚೆಯಾಗುತ್ತದೆ, ಚರ್ಚೆಯಾದ ನಂತರ ತಾವು ಉತ್ತರ ಕೊಡಿ ಎಂದು ಹೇಳಿದರೆ, ಮಧ್ಯೆ ಮಧ್ಯೆ ನಿಂತು ನೀವು ಈ ರೀತಿ ಅಡಚಣೆ ಮಾಡತಕ್ಕಂಥ ಒಂದು ಉದ್ದೇಶವನ್ನು ನೀವು ಇಟ್ಟುಕೊಂಡಿರುವುದಾದರೆ ನಾವು ಬೇರೆ ದಿಕ್ಕಿಗೆ ತಿರುಗಬೇಕಾಗುತ್ತದೆ. ಇದು ಸರಿಯಾದ ಮಾರ್ಗ ಅಲ್ಲ.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ಅಧ್ಯಕ್ಷರೆ, ಇಲ್ಲಿ ವಿನಾಕಾರಣ ಚರ್ಚೆ ಬೇರೆಬೇರೆ ಕಡೆಗೆ ಹೋಗುತ್ತಿದೆ. ದೆಹಲಿಯಲ್ಲಿ ನಮ್ಮ ಪ್ರಧಾನಿ ಇನ್ನೂ ಗಟ್ಟಿಯಾಗಬೇಕು, ಇನ್ನೂ ಹೆಚ್ಚಿನ ಕೆಲಸ ಮಾಡ-ಬೇಕು, ಈ ದೇಶಕ್ಕೆ ಒಂದು ಭರವಸೆಯಾಗಿ ಬೆಳೆಯುತ್ತಿದ್ದಾರೆ, ಬೆಳೆಯಬೇಕು ಎಂದು ನಾವು ಆಸೆ ಪಡುವುದರಲ್ಲಿ ತಪ್ಪಿಲ್ಲ. ವಾಟಾಳ್‌ರವರೇ, ನಾವು ಹೇಳಿದ ಹಾಗೆ ಒಂದು ಪಕ್ಷ ಅವರು ಹೇಳಿಯೋ ಹೇಳದೆಯೋ ನಾವೆಲ್ಲಾ ಒಟ್ಟಾಗಿದ್ದರೆ ನಿಮಗೆ ಏತಕ್ಕೆ ಹೊಟ್ಟೆಕಿಚ್ಚು?

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಪಟೇಲರೇ, ಮಾನ್ಯ ಮುಖ್ಯಮಂತ್ರಿಗಳಾದ ಪಟೇಲರಿಗೆ ನಾನು ಹೇಳುತ್ತೇನೆ, ನನಗೆ ಈ ವಿಚಾರದಲ್ಲಿ ಹೊಟ್ಟೆಕಿಚ್ಚಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅಧ್ಯಕ್ಷರೆ, ನಾಣಯ್ಯನವರು ತುಂಬಾ ಒಳ್ಳೆಯ ಮಾತನ್ನು ಹೇಳಿದ್ದಾರೆ. ಯಾರನ್ನು ಯಾರು ಬೆಳೆಸಿದ್ದಾರೆ ಅಂದರೆ ಈ ದೇಶದ ಮಾಲೀಕ ನಮ್ಮ ಜನತೆ ಬೆಳೆಸಿ-ರುವುದು. ಅವನಿಲ್ಲದಿದ್ದರೆ ನಾವೆಲ್ಲಾ ರಸ್ತೆಯಲ್ಲಿ ತಿರುಗುತ್ತಿದ್ದೆವು. ಇವತ್ತು ಈ ಸದನದಲ್ಲಿ ನಿಂತು ಮಾತನಾಡುವ ಶಕ್ತಿ ಕೊಟ್ಟಿರುವವರು ಈ ನಾಡಿನ ಜನ, ಈ ದೇಶದ ಜನ. ಅದರಲ್ಲಿ ಎರಡು ಮಾತಿಲ್ಲ. ಬದಲಾವಣೆಗಳಾಗುತ್ತಿವೆ, ಆದರೆ ಒಂದು ಸತ್ಯಸಂಗತಿ ಮರೆಯಬಾರದು. ಬಹಿರಂಗವಾಗಿ ತಾವು ಇಲ್ಲಿ ಹೇಳದೇ ಇದ್ದರೂ ಮನೆಗೆ ಹೋಗಿ ದೇವರ ಮನೆಯಲ್ಲಿ ನಿಂತು ಪೂಜೆ ಮಾಡುವ ಕಾಲದಲ್ಲಿ ನೆನಪು ಮಾಡಿಕೊಳ್ಳಿ. 1983ರಲ್ಲಿ 18 ಜನ ಬೇಷರತ್ ಬೆಂಬಲ ಕೊಟ್ಟೆವು ಏತಕ್ಕೆ? ಈ ದೇಶದಲ್ಲಿ ವಿರೋಧಪಕ್ಷಗಳೂ ಸಹ ಆಡಳಿತ ನಡೆಸುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ಸಾಬೀತು ಮಾಡುವುದಕ್ಕೆ ಬೇಷರತ್ ಬೆಂಬಲ ಕೊಟ್ಟೆವು. ಆವತ್ತು ನಾವು 18 ಜನ ಬಿ.ಜೆ.ಪಿ. ಸದಸ್ಯರು ಬೇಷ-ರತ್ ಬೆಂಬಲ ಕೊಡದೇ ಇದ್ದರೆ ನೀವು ಸದನದ ಒಳಗಡೆ ಅಲ್ಲ ತಬ್ಬಲಿಗಳಂತೆ ಎಲ್ಲಾ ಅಲೆಯ-ಬೇಕಾಗಿತ್ತು. ಎಲ್ಲಿ ಮುಖ್ಯಮಂತ್ರಿಗಳಾಗುತ್ತಿದ್ದಿರಿ? ಎಲ್ಲಿ ಮಂತ್ರಿಗಳಾಗುತ್ತಿದ್ದಿರಿ? ಎಲ್ಲಿರುತ್ತಾ ಇದ್ದಿರಿ ನೀವು? ಈ ಸತ್ಯ ಒಪ್ಪುತ್ತೀರಿ ತಾನೇ? ಒಂದು ನಿಮಿಷ. ಎಲ್ಲದಕ್ಕೂ ಎದ್ದು ನಿಂತರೆ ಹೇಗೆ? ನೀವು ಉತ್ತರ ಕೊಡಿ, ಏಕೆಂದರೆ ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನೀವು ಹೇಳುವುದನ್ನು ನಾನು ಕೇಳುವುದಕ್ಕೆ ಸಿದ್ಧ ಇದ್ದೇನೆ. ನಾನು ಹೇಳುವುದನ್ನು ತಾವು ಹಾಗೆಯೇ ಕೇಳಬೇಕಲ್ಲಾ. ಈ ದೇಶಕ್ಕೆ ತುರ್ತು ಪರಿಸ್ಥಿತಿ

ಬಂದಂಥ ಕಾಲದಲ್ಲಿ ಒಳಗಡೆ ಸತ್ತು ಹೋರಾಟ ಮಾಡಿದವರು ನಾವು. ಅದರಲ್ಲಿ ಲಾಭ ಮಾಡಿ-ಕೊಂಡವರು ನೀವು. ಆದರೆ ಇಷ್ಟು ವರ್ಷಗಳ ಒಂದು ಪರಿಣಾಮ ಏನೋ ತಪ್ಪಾಗಿರಬಹುದು. ರಾಜ್ಯದಲ್ಲಿ ನಿಮಗೆ ಅಧಿಕಾರ ಕೊಟ್ಟು ಜನ ಇವತ್ತು ಜಿಗುಪ್ಸೆಗೊಂಡಿದ್ದಾರೆ. ಸೋತಿದ್ದಾರೆ. ಏನಪ್ಪ ಹೀಗಾಯಿತಲ್ಲಾ ಎಂದು ದುಃಖಪಡುತ್ತಿದ್ದಾರೆ. ಇಂಡಿಯಾ ಟುಡೇ ಸಮೀಕ್ಷೆ ಏನು ಹೇಳುತ್ತದೆ? ಯಾವ ಪ್ರಧಾನಿಯವರ ಬಗ್ಗೆ ಹಾಡಿ ಹೊಗಳುತ್ತಿದ್ದೀವೋ ನೀವು, ನಾವು ಅದನ್ನು ಪ್ರಸ್ತಾಪವೇ ಮಾಡಲಿಲ್ಲ. ಇಡೀ ದೇಶದ ಜನದ 5 ಪರ್ಸೆಂಟ್ ಬೆಂಬಲ ನಿಮಗೆ ಸಿಗಲಿಲ್ಲ. ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನಿಯಾಗಿ ಮುಂದುವರೆಯಬೇಕಾಗಿತ್ತು ಎಂದು ಜನರ ಅಪೇಕ್ಷೆ ಇತ್ತು. ಇನ್ನು ಮೂರು ತಿಂಗಳು ಅಥವಾ ನಾಲ್ಕು ತಿಂಗಳು ನಿಮ್ಮ ಹಣೆಬರಹ. ಇದು ಗೊತ್ತಿದ್ದೂ ಏತಕ್ಕೆ ಹೀಗೆ ಮಾತನಾಡುತ್ತೀರಿ ನೀವು? ಈ ದೇಶದ ಪ್ರಧಾನಿಯವರ ನಿಲುವೇನಿತ್ತು ಈ ವಿಷಯಗಳ ಬಗ್ಗೆ? ಅವರು ಮುಖ್ಯಮಂತ್ರಿಯಾಗುವುದಕ್ಕಿಂತ ಮುಂಚೆ ಲೋಕಸಭಾ ಸದಸ್ಯರಾಗಿದ್ದಾಗ, ನಾವೆಲ್ಲಾ ಒಂದಾಗಿ ಮಂಡ್ಯದಲ್ಲಿ ಹೋರಾಟ ಮಾಡಿದಂಥ ಕಾಲದಲ್ಲಿ ಸನ್ಮಾನ್ಯ ದೇವೇಗೌಡರೂ ಸಹ ಲೋಕ-ಸಭಾ ಸದಸ್ಯರಾಗಿ ರಾಜ್ಯದ ನೀರಾವರಿ ಹಿತದೃಷ್ಟಿಯಿಂದ ಕಾವೇರಿ ಬೇಸಿನ್ ರೈತರ ಹಿತದೃಷ್ಟಿಯಿಂದ ಹೋರಾಟ ಮಾಡಿದಂಥ ವ್ಯಕ್ತಿ. ಅವರ ನಿಲುವು ಏನಿತ್ತು? ಏನು ಸ್ಪಷ್ಟ ವಿಚಾರ ಇತ್ತು? ಯಾವುದೇ ಕಾರಣಕ್ಕೆ ಒಂದು ಹನಿ ನೀರನ್ನು ಬಿಡಕೂಡದು. ಕಾವೇರಿ ಟ್ರಿಬ್ಯುನಲ್ ರದ್ದಾಗಬೇಕು. ನ್ಯಾಷನಲ್ ವಾಟರ್ ಪಾಲಿಸಿ ಫ್ರೇಮ್ ಆಗಬೇಕು. ಅದರ ಆಧಾರದ ಮೇಲೆ ತೀರ್ಮಾನ ಆಗಬೇಕು ಎಂದು. ಆವತ್ತು ಲೋಕಸಭಾ ಸದಸ್ಯರಾಗಿದ್ದಾಗ ಅವರ ನಿಲುವು ಇದಾಗಿತ್ತು. ರಾಜ್ಯದ ಮುಖ್ಯಮಂತ್ರಿ-ಗಳಾಗಿದ್ದಾಗ, ಒಕ್ಕೊರಲಿನ ನಿರ್ಣಯ ತೆಗೆದುಕೊಂಡಾಗ ಆ ಮಾತಿತ್ತು. 6 ಟಿ.ಎಂ.ಸಿ. ನೀರು ಬಿಡ-ಬೇಕಾದರೆ ಇದಕ್ಕೆ ಬದ್ಧರಾಗಿದ್ದೆವು. ಇವತ್ತು ಇಷ್ಟು ತರಾತುರಿಯಲ್ಲಿ ತಮಿಳುನಾಡಿಗೆ ಹೋಗಿ ಗುಟ್ಟಾಗಿ ಮಾತುಕತೆ ನಡೆಸಿ, ಏನೊಂದು ಮಾತುಕತೆ ಪತ್ರಿಕೆಯಲ್ಲಿ ವರದಿಯಾಗುತ್ತಿದೆ. ಕೇಳಿ ಗುಟ್ಟೇನು ಎಂದು ಆಮೇಲೆ ಹೇಳುತ್ತೇನೆ. ಟರ್ಮ್ಸ್ ಆಫ್ ರೆಫರೆನ್ಸ್ ಏನು? ನೀವು ಯಾವ ಆಧಾರದ ಮೇಲೆ ಮಾತು-ಕತೆ ಆಡುತ್ತೀರಿ? ಲಿಖಿತವಾಗಿ ಏನೇನು ಮಾತುಕತೆ ಮಾಡುತ್ತಿದ್ದೀರಿ? ಮೌಖಿಕವಾಗಿ ಏನೇನು ಒಪ್ಪಿ-ಕೊಂಡು ಬಂದಿದ್ದೀರಿ ರಾಜ್ಯದ ಹಿತವನ್ನು ಬಲಿ ಕೊಟ್ಟು ಎಂಬುದನ್ನು ಹೇಳಬೇಕಾಗುತ್ತದೆ. ವಿಷಯ ಬಂದಾಗ ಮಾತನಾಡುವಿರಂತೆ. ಒಂದು ನಿಮಿಷ ಇರಿ. ಏತಕ್ಕೆ ಅವಸರ ಮಾಡುತ್ತೀರಿ? ನನ್ನ ಒಟ್ಟಾರೆ ಅಭಿಪ್ರಾಯ, ಇಲ್ಲಿ ಬಹಳ ಹೊತ್ತು ಚರ್ಚೆ ಮಾಡಬೇಕಾದ ಅಗತ್ಯ ಏನಿಲ್ಲ. ನೀವು ಹೋಗಿಬಂದಂಥ ವಿಚಾರವನ್ನು ಈ ಸದನಕ್ಕೆ ನಾವು ಪ್ರಸ್ತಾಪ ಮಾಡುವುದಕ್ಕಿಂತ ಮುಂಚೆ, ನಿಜವಾಗಿಯೂ ನೀವು ಆ ಸ್ಥಾನದಲ್ಲಿ ಕುಳಿತಾಗ ಕಡೇಪಕ್ಷ ಜೆ.ಹೆಚ್. ಪಟೇಲರಂಥವರು ಮುಖ್ಯಮಂತ್ರಿಯಾಗಿದ್ದಾಗ ನಿಲುವಳಿ ಸೂಚನೆ ಬೇರೆ ಯಾವುದೇ ಪ್ರಸ್ತಾಪದ ಅಗತ್ಯ ಇಲ್ಲ. ನಿಮ್ಮ ಬೌಂಡನ್ ಡ್ಯೂಟಿ ಸದನದ ಒಳಗಡೆ ಬರುತ್ತಿದ್ದ ಹಾಗೆಯೇ ಕಾವೇರಿ ವಿವಾದಕ್ಕೆ ಸಂಬಂಧಪಟ್ಟಂತೆ ಏನು ಮಾತುಕತೆ ಆಯಿತು ಎಂಬ ಬಗ್ಗೆ ಕ್ವೆಶ್ಚನ್ ಹವರ್‌ಗಿಂತ ಮುಂಚೆ ಒಂದು ಸ್ಟೇಟ್‌ಮೆಂಟ್ ಮಾಡಬೇಕಿತ್ತು, ಏಕೆ ಇಲ್ಲಿ ಚರ್ಚೆಗಳಾಗಿಲ್ಲ-ವೇ? ಸ್ಟೇಟ್‌ಮೆಂಟ್ ಮಾಡಿ ಚರ್ಚೆಗಳನ್ನು ಮಾಡಿ ನಂತರ ಕ್ವೆಶ್ಚನ್ ಹವರ್ ತೆಗೆದುಕೊಂಡಂಥ

ಉದಾಹರಣೆಗಳಿಲ್ಲವೆ? ಈ ಸದನದ ಬಗ್ಗೆ ನಿಮಗೆ ವಿಶ್ವಾಸ ಇದ್ದರೆ, ಮಾತುಕತೆ ಬಗ್ಗೆ ಗೌಪ್ಯ ಏನು ಇಲ್ಲ, ಎಲ್ಲಾ ಬಹಿರಂಗವಾಗಿಯೇ ಮಾತುಕತೆ ಆಗಿತ್ತು ಅಂದರೆ ಬರುತ್ತಿದ್ದ ಹಾಗೇ ನೀವು ಒಂದು ಸ್ಟೇಟ್‌ಮೆಂಟ್ ಮಾಡಬೇಕಾಗಿತ್ತು. ಆದಾಗಲಿಲ್ಲ. ನಾನು ಈಲ್ಡ್ ಆಗಿಲ್ಲ ಸ್ವಾಮಿ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು):- ದಯಮಾಡಿ ಕುಳಿತುಕೊಳ್ಳಿ. ಮಾನ್ಯ ವಿರೋಧಪಕ್ಷದ ನಾಯಕರು ನಿಲುವಳಿ ಸೂಚನೆಯನ್ನು ಕಳುಹಿಸದೇ ಹೋಗಿದ್ದರೆ ನಾವು ಅದೇ ಸ್ಟೇಟ್‌ಮೆಂಟನ್ನು ಮಾಡುತ್ತಿದ್ದೆವು. ಅಲ್ಲೇನಾಗಿತ್ತು ಎನ್ನುವುದರ ಬಗ್ಗೆ ಹೇಳಿಕೆಯನ್ನು ನಾವು ಕೊಡು-ತ್ತಿದ್ದೆವು. ನೀವು ಬೆಳಿಗ್ಗೆಯೇ ನಿಲುವಳಿ ಸೂಚನೆಯನ್ನು ಕೊಟ್ಟಿರುವುದರಿಂದ ನಾವು ಆ ಹೇಳಿಕೆಯನ್ನು ಮಾಡಲಿಕ್ಕೆ ಆಗಲಿಲ್ಲ. ನೀವು ನಿಲುವಳಿ ಸೂಚನೆ ಕೊಡದೇ ಹೋಗಿದ್ದರೆ ಅಲ್ಲಿ ಮಾತುಕತೆ ಏನಾಗಿತ್ತು ಎಂಬುದನ್ನು ಇಲ್ಲಿಗೆ ಬಂದತಕ್ಷಣವೇ ತಿಳಿಸತಕ್ಕ ಕೆಲಸವನ್ನು ನಾವು ಮಾಡುತ್ತಿದ್ದೆವು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾಜಿ ಮುಖ್ಯಮಂತ್ರಿಗಳು, ಹಿಂದಿನ ಲೋಕಸಭಾ ಸದ-ಸ್ಯರು ಹಾಲಿ ಪ್ರಧಾನಿಯವರು ಈ ಕಾವೇರಿ ಜಲವಿವಾದದ ಬಗ್ಗೆ ಹಿಂದೆ ಯಾವ ನಿಲುವನ್ನು ಅವರು ಇಟ್ಟುಕೊಂಡಿದ್ದರೋ ಅದಕ್ಕೆ ವ್ಯತಿರಿಕ್ತವಾಗಿ ಅವರ ಕುರ್ಚಿಯನ್ನು ಉಳಿಸುವುದಕ್ಕೋಸ್ಕರ ಇವತ್ತು ಮಾತುಕತೆ ಮಾಡುವುದಕ್ಕೆ ನೀವು ಹೊರಟಿದ್ದೀರಿ, ಇವತ್ತು ಆಂಧ್ರದ ಬಗ್ಗೆ ನಿಮ್ಮ ವ್ಯಾಮೋಹ. ಇವತ್ತು ಈ ಒಗ್ಗಟ್ಟು ಜೆ.ಹೆಚ್. ಪಟೇಲರ ಪರ ಅಲ್ಲ. ಕೇಂದ್ರದಲ್ಲಿ ನಿಮಗೆ ಬಿಕ್ಕಟ್ಟಿದೆ. ನೀವು ನಮ್ಮನ್ನು ದುರುಪಯೋಗ ಮಾಡಿಕೊಂಡು ಜನರಿಗೆ ಅನ್ಯಾಯ ಮಾಡಿ ಕುರ್ಚಿ ಉಳಿಸಿಕೊಳ್ಳುವುದಕ್ಕೋಸ್ಕರ ಷಡ್ಯಂತರ. ಅದು ನಮಗೆ ದುಃಖ ತರುತ್ತಾ ಇರುವಂಥದ್ದು. ನಿಮ್ಮ ಕುರ್ಚಿ ಉಳಿಸಿಕೊಳ್ಳುವುದ-ಕ್ಕೋಸ್ಕರ ಈ ಕೆಲಸ ಮಾಡುತ್ತಿದ್ದೀರಿ ಎಂದು ಜನ ಅಂದುಕೊಳ್ಳುವ ಸ್ಥಿತಿಗೆ ಜೆ.ಹೆಚ್. ಪಟೇಲ್-ರಂಥವರು ಹೋರಾಟ ಮಾಡಿದವರು ಬಂದು ಸಿಕ್ಕಿಕೊಂಡು ನರಳುತ್ತಿದ್ದೀರಲ್ಲಾ ಎಂದು ನಮಗೆ ದುಃಖವಾಗುತ್ತದೆ. ಇವತ್ತು ನಾವು ಹೇಳುತ್ತಾ ಇರುವಂಥದ್ದು ನೀವು ಹೇಳಬೇಕಾಗಿತ್ತು. ಟ್ರಿಬ್ಯುನಲ್ ಮಧ್ಯಂತರ ಆಜ್ಞೆ ಏನಿದೆ ಆ ಚೌಕಟ್ಟಿನಲ್ಲಿ ನಾವು ಮಾತನಾಡುವುದಿಲ್ಲ. ನ್ಯಾಷನಲ್ ವಾಟರ್ ಪಾಲಿಸಿ ಫ್ರೇಮ್ ಆಗುವುದಕ್ಕೆ ಮುಂಚೆ ಮಾತುಕತೆಗೆ ತಮಿಳುನಾಡಿಗೆ ಹೋಗುವುದಿಲ್ಲ. ಬೇಕಾದರೆ ಮುಖ್ಯ-ಮಂತ್ರಿಗಿರಿಯನ್ನು ಬಿಟ್ಟುಹೋಗುತ್ತೇನೆ ಎಂದು ನೀವು ಪ್ರಧಾನಮಂತ್ರಿಯವರಿಗೆ ಹೇಳಬೇಕಾಗಿತ್ತು. ಆಗ ನಿಮ್ಮನ್ನು ಅಪ್ರೀಷಿಯೇಟ್ ಮಾಡಬಹುದಾಗಿತ್ತು. ಇವತ್ತು ಕೇವಲ ನಿಮ್ಮ ಕುರ್ಚಿ ಹಿತ ಮತ್ತು ನಿಮ್ಮ ಪ್ರಧಾನಿಯವರ ಹಿತಕ್ಕೋಸ್ಕರ, ಕುರ್ಚಿ ಉಳಿಸುವುದಕ್ಕೋಸ್ಕರ ನಾಡಿನ ಜನರನ್ನು ಬಲಿ ಕೊಡುವಂಥ ಒಂದು ಷಡ್ಯಂತ್ರ ಮಾಡುತ್ತಿದ್ದೀರಿ. ಅದು ಕಾವೇರಿ ವಿವಾದದ ಬಗ್ಗೆ ಇರಬಹುದು, ಕೃಷ್ಣ ವಿವಾದದ ಬಗ್ಗೆ ಇರಬಹುದು. ತಮಿಳುನಾಡು ಮತ್ತು ಆಂಧ್ರಪ್ರದೇಶದವರ ಬೆಂಬಲ ನಿಮಗೆ ಬೇಕು. ಅದಕ್ಕಾಗಿ ನಮ್ಮ ಹಿತವನ್ನು ಸಂಪೂರ್ಣವಾಗಿ ಕಡೆಗಣಿಸುವಂಥ ಒಂದು ಪ್ರಯತ್ನ ಇವತ್ತು ನೀವು ಮಾಡುತ್ತಾ ಇದ್ದೀರಾ ಎನ್ನುವ ನೇರವಾದ ನನ್ನ ಆರೋಪ ಇದೆ. ಏನು ಮಾತುಕತೆ ಆಯಿತು ಎನ್ನು-ವುದನ್ನು ನೀವು ಬಹಿರಂಗವಾಗಿ ತಿಳಿಸಿದಮೇಲೆ ಮುಂದಿನ ವಿಷಯ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ ಅಧ್ಯಕ್ಷರೆ, ಧನ್ಯವಾದಗಳು.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್):- ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ನಿಯಮ 60ರ ಕೆಳಗೆ ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೇನೆ. ಕಳುಹಿಸುವಂತಹ ಉದ್ದೇಶ ಏನು ಎನ್ನತಕ್ಕದ್ದನ್ನು ಅದರಲ್ಲಿ ನಾನು ಸ್ಪಷ್ಟವಾಗಿ ತಿಳಿಸಿದ್ದೇನೆ. ಅದರಲ್ಲಿರತಕ್ಕ ವಿಷಯ ಈ ರೀತಿ ಇದೆ. ಸರ್ವೋಚ್ಚ ನ್ಯಾಯಾಲಯದ ಸೂಚನೆಯ ಮೇರೆಗೆ ಕಾವೇರಿ ನದಿ ನೀರಿನ ಹಂಚಿಕೆ ಕುರಿತು ಸೋಮವಾರ ಮದ್ರಾಸಿನಲ್ಲಿ ತಮಿಳುನಾಡಿನ ಮುಖ್ಯಮಂತ್ರಿಗಳಾದ ಶ್ರೀ ಎಂ. ಕರುಣಾನಿಧಿ ಅವರ ಜೊತೆ ನಡೆಸಿದ ಮಾತುಕತೆಯ ಪ್ರಯುಕ್ತ ನೀರು ಬಿಡಲು ನಾನು ಒಪ್ಪಿದ್ದೇನೆ ಎಂಬುದಾಗಿ ಪತ್ರಿಕಾಗೋಷ್ಠಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡುತ್ತಾ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಹಾಗೂ ಬಿಡುವ ನೀರಿನ ಪ್ರಮಾಣ ಮತ್ತು ದಿನವನ್ನು ನಿರ್ಧರಿಸಲಾಗುವುದು ಎಂದು ಹೇಳಿ ಮುಖ್ಯಮಂತ್ರಿಗಳು ತಿಳಿಸಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಕಾವೇರಿ ನೀರನ್ನು ಹಂಚಿಕೊಳ್ಳಲು ತಾತ್ಕಾಲಿಕ ಸೂತ್ರವೊಂದನ್ನು ಇಂದಿನ ಮಾತುಕತೆಯಲ್ಲಿ ರೂಪಿಸಲಾಗಿದೆ ಎಂಬ ಹೇಳಿಕೆಯೂ ಪತ್ರಿಕೆಗಳಲ್ಲಿ ವರದಿಯಾಗಿದೆ. ಮುಖ್ಯಮಂತ್ರಿಗಳು ಮುಂದುವರಿದು ಐತಿಹಾಸಿಕ ಸಮಸ್ಯೆಗೆ ಐತಿಹಾಸಿಕ ಪರಿಹಾರವನ್ನು ಕಂಡುಹಿಡಿಯಲು ಐತಿಹಾಸಿಕ ಪ್ರಯತ್ನ ಮಾಡಲಾಗಿದೆ ಎಂದು ಅವರು ಘೋಷಿಸಿದ್ದಾರೆ. ಐತಿಹಾಸಿಕ ಪರಿಹಾರಗಳು ಯಾವುವು? ಮತ್ತು ಅದರ ವಿವರಗಳೇನು ಎಂಬುದರ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕಾಗಿದೆಯೆಂದು ನಾನು ನಿಲುವಳಿ ಸೂಚನೆಯನ್ನು ಇವತ್ತು ತಮ್ಮ ಮುಂದಿಟ್ಟಿದ್ದೇನೆ. ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ 5ನೇ ತಾರೀಖು ಮದ್ರಾಸಿನಲ್ಲಿ ತಮಿಳುನಾಡಿನ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತುಕತೆ ನಡೆಸಿ ಒಂದು ಸ್ಪಷ್ಟವಾದ ತಮ್ಮ ನಿಲುವನ್ನು ಕೂಡ ಹೇಳಿದ್ದಾರೆ. ತಮಿಳುನಾಡಿನ ಜನ ಅದರಲ್ಲೂ ವಿಶೇಷವಾಗಿ ಮುಖ್ಯಮಂತ್ರಿಗಳು ನೀರು ತೆಗೆದುಕೊಳ್ಳಬೇಕೆಂದು ಆತುರಪಟ್ಟಿದ್ದಾರೆ, ಮುಖ್ಯವಾಗಿ ನೀರು ಕೊಡಬೇಕೆಂದು ನಿರ್ಧಾರ ಮಾಡಿದ್ದೇವೆ ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಅವರು ಹೇಳಿದ್ದಾರೆ. ಅಂದರೆ ನಾನು ನೀರು ಬಿಡುವುದಕ್ಕೆ ಸಿದ್ಧನಿದ್ದೇನೆ, ಅವರು ನೀರು ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದಾರೆ. ಈ ಮಾತನ್ನು ಹೇಳಿದ ಮೇಲೆ ಮುಂದುವರಿದು, ನಾನು ಈಗಾಗಲೇ ಓದಿ ಹೇಳಿದಹಾಗೆ ಇದೊಂದು ಐತಿಹಾಸಿಕ ಸಮಸ್ಯೆಗೆ ಐತಿಹಾಸಿಕ ಪರಿಹಾರ ಕಂಡುಹಿಡಿಯತಕ್ಕದ್ದು ಐತಿಹಾಸಿಕವಾಗಿ ನಾವು ಇದನ್ನು ಪ್ರಸ್ತಾಪ ಮಾಡುತ್ತಿದ್ದೇವೆ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಆದರೆ ಒಂದು ಮಾತು, ಅವರು ಮಾತುಕತೆಗೆ ಹೋಗುವುದಕ್ಕೆ ಮುಂಚೆ ಈ ಸದನದಲ್ಲಿ ನಾವು ಪ್ರಸ್ತಾಪ ಮಾಡಿದಾಗ ಎಲ್ಲಾ ವಿರೋಧಪಕ್ಷಗಳ ನಾಯಕರು ಮತ್ತು ಸದಸ್ಯರುಗಳು ಸೇರಿ ಪ್ರಸ್ತಾಪ ಮಾಡಿದಾಗ, ಒಂದು ಮಾತು ಹೇಳಿದರು. ನಾವು ಯಾವುದೇ ಮಾತುಕತೆ ಮಾಡಬೇಕಾದರೆ ಈ ಸದನದ ಸದಸ್ಯರನ್ನು ಎಲ್ಲಾ ವಿರೋಧ ಪಕ್ಷಗಳವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮತ್ತು ಅವರ ಅಭಿಪ್ರಾಯಗಳನ್ನು ಪಡೆದುಕೊಂಡು ಆಮೇಲೆ ನಾವು ಮಾತುಕತೆ ಮಾಡುತ್ತೇವೆ. ಇಲ್ಲದಿದ್ದರೆ ಮಾತುಕತೆ ಮಾಡುವುದಿಲ್ಲ ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಶ್ರೀಮಾನ್ ನಾಗೇಗೌಡರು ಸದನದಲ್ಲಿ ಅವರೇ ಸ್ಪಷ್ಟಪಡಿಸಿದ್ದರು. ಇದು ಆದಮೇಲೆ ಒಂದು ಸಲ ಅಲ್ಲ ಎರಡು ಸಲ ಪ್ರಸ್ತಾಪ ಮಾಡಿದ್ದಾರೆ. ಯಾವಾಗ ಸುಪ್ರೀಂ ಕೋರ್ಟ್ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು

ಸೇರಿ ಈವೊಂದು ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂದು ಇಂಟಿರಿಮ್ ಆರ್ಡರ್ ಮೇಲೆ ಅಥವಾ ಪಿಟಿಷನ್ ಮೇಲೆ ಏನೊಂದು ಆದೇಶ ಕೊಟ್ಟರು, ಆ ಆದೇಶ ಈ ಸದನದಲ್ಲಿ ಪ್ರಸ್ತಾಪವಾದಾಗ ಈ ಮಾತನ್ನು ಅವರು ಹೇಳಿದರು. ಆ ಮಾತನ್ನು ಅವರು ಹೇಳಿದ ಮೇಲೆ ಅವರು ಏಕೆ ಸರ್ವಪಕ್ಷಗಳ ಸಭೆಯನ್ನು ಕರೆಯಿಸಿ ಮಾತಕತೆ ಆಡಲಿಲ್ಲ ಮತ್ತು ಮಾತುಕತೆಗೆ ಹೋಗುವುದಕ್ಕೆ ಮುಂಚೆ ಯಾವ್ಯಾವ ಕಂಡೀಶನ್ಸ್ ಮೇಲೆ ಮಾತನಾಡುತ್ತೇವೆ ಎನ್ನುವುದನ್ನು ಯಾರಿಗೂ ತಿಳಿಸಲಿಲ್ಲ. ಹೀಗಿದ್ದಾಗ ತಾವು ಈ ಸದನದಲ್ಲಿ ನಾನು ಯಾವ ಶಬ್ಧ ಉಪಯೋಗಿಸಬೇಕೋ ಗೊತ್ತಿಲ್ಲ. ದ್ರೋಹ ಬಗೆದಿದ್ದಾರೆಂದು ಹೇಳಲೋ ಅಥವಾ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲವೆಂದು ಹೇಳಲೋ ಅಥವಾ ಈ ಜನರ ಹಿತವನ್ನು ಮರೆಮಾಚಿ ತಮ್ಮದೇ ಆದಂತಹ ಒಂದು ಧಾಟಿಯಲ್ಲಿ ನಾವು ಏನೂ ಮಾಡಿದರೂ ನಡೆದು-ಹೋಗುತ್ತದೆ ಸದನಕ್ಕೆ ಬೇಕಾದರೆ ಆಮೇಲೆ ಹೇಳೋಣ ಎಂದು ಹೇಳಿ ಸದನಕ್ಕೆ ನಿರ್ಲಕ್ಷ್ಯ ಮಾಡಿ ಅಗೌರವ ತೋರಿಸಿ ತಮ್ಮದೇ ಆದಂತಹ ಒಂದು ನಿಲುವನ್ನು ತೆಗೆದುಕೊಂಡು ಇವತ್ತು ಅಲ್ಲಿ ಮಾತುಕತೆ ನಡೆಸಿದ್ದೀರೋ? ಮಾತೆತ್ತಿದರೆ ರೈತರಿಗೆ ಅನಾನುಕೂಲವಾಗುತ್ತದೆನ್ನುವ ಮಾತನ್ನು ಹೇಳು-ತ್ತೀರಿ. ನಾವೆಲ್ಲರೂ ರೈತರ ಪರವಾಗಿದ್ದೇವೆ, ನಾವು ರೈತರ ಮಕ್ಕಳಿದ್ದೇವೆ ಎನ್ನತಕ್ಕ ಮಾತನ್ನು ತಾವು ಪದೇ ಪದೇ ಹೇಳಿಕೊಂಡು ಬರುತ್ತಿದ್ದೀರಿ. ಮಾನ್ಯ ಉಪಾಧ್ಯಾಕ್ಷರೇ, ತಮಗೆ ಗೊತ್ತಿದೆ, ಸುಪ್ರೀಂ ಕೋರ್ಟ್‌ನವರು ಏನು ಹೇಳಿದರು? ಯಾವ ಆಧಾರದ ಮೇಲೆ ಮಾತುಕತೆ ನಡೆಸಿಯೆಂದು ಹೇಳಿ-ದರು? ದಿನಾಂಕ 25-7-91ರಂದು ಇಂಟಿರಿಮ್ ಆರ್ಡರ್ ಏನಿತ್ತು ಆ ಇಂಟರಿಮ್ ಆರ್ಡರ್ ಆಧಾರದ ಮೇಲೆ ನೀವು ಮತ್ತು ಕರ್ನಾಟಕ ರಾಜ್ಯದವರು ಒಂದು ಕಡೆ ಸೇರಿ ಇದನ್ನು ಬಗೆಹರಿಸಿ-ಕೊಳ್ಳಬೇಕೆಂದು ಆದೇಶ ಕೊಟ್ಟರು. ನಾವು ಹಿಂದೆ ಕೂಡ ಈ ಸದನದಲ್ಲಿ ಇಂಟಿರಿಮ್ ಆರ್ಡರನ್ನು 1991ರ ಟ್ರಿಬ್ಯುನಲ್ ಆರ್ಡರ್ ಏನಿತ್ತು ಆ ಆರ್ಡರನ್ನು ನಾವು ಯಾರೂ ಕೂಡ ಒಪ್ಪಿಲ್ಲ. ಈ ಸದನದಲ್ಲಿ ಆವೊಂದು ಆರ್ಡರನ್ನು ಒಪ್ಪಬಾರದೆಂದು ಯುನಾನಿಮಸ್ ಆಗಿ ಒಂದು ರೆಸಲ್ಯೂಷನ್ ಮಾಡಿದ್ದೇವೆ. ಏನೆಂದು ಮಾಡಿದ್ದೇವೆಂದರೆ, ಎಲ್ಲಿಯವರೆಗೆ ನ್ಯಾಷನಲ್ ವಾಟರ್ ಪಾಲಿಸಿ ಆಗುವು-ದಿಲ್ಲ ಅಲ್ಲಿಯವರೆಗೆ ಅದರ ಗೈಡ್‌ಲೈನ್ಸ್ ಆಧಾರದ ಮೇಲೆ ಟ್ರಿಬ್ಯುನಲ್ ತನ್ನ ನಿರ್ಣಯ ಕೊಡುವು-ದಿಲ್ಲ ಅಲ್ಲಿಯವರೆಗೆ ಈ ಟ್ರಬ್ಯುನಲ್‌ನಲ್ಲಿ ಭಾಗವಹಿಸತಕ್ಕದ್ದು ಸರಿಯಲ್ಲ ಅದರ ಹೊರಗಡೆ ಇರ-ಬೇಕೆಂದು ಆ ವಾದವನ್ನು ಸದನದಲ್ಲಿ ನಾವೆಲ್ಲರೂ ಮಂಡಿಸಿದ್ದು ತಾವೂ ಕೂಡ ಒಮ್ಮತದಿಂದ ಒಪ್ಪಿದ್ದು, ಮತ್ತು ಸರ್ವಪಕ್ಷಗಳ ಸಭೆಯಲ್ಲಿ ತೀರ್ಮಾನವಾಗಿದ್ದು, ಇದು ಆದ ಮೇಲೆ ಇಷ್ಟೊಂದು ಗೊಂದಲಗಳ ಮಧ್ಯದಲ್ಲಿ ತಾವು ಸಿಕ್ಕಿಬಿದ್ದು ಯಾರನ್ನೂ ಕೇಳದೆ ಯಾರನ್ನೂ ವಿಶ್ವಾಸಕ್ಕೆ ತೆಗೆದು-ಕೊಳ್ಳದೆ ತರಾತುರಿಯಲ್ಲಿ ನೀವೇ ಮದ್ರಾಸಿಗೆ 5ನೇ ತಾರೀಖು ಹೋಗಿ ಅಲ್ಲಿ ವಿಚಾರಗಳನ್ನು ಮಂಡಿಸಿ ನಾನು ನೀರು ಬಿಡುವುದಕ್ಕೆ ಸಿದ್ಧನಿದ್ದೇನೆ, ಅವರು ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದಾರೆ ಎಂಬ ಮಾತನ್ನು ಹೇಳತಕ್ಕದ್ದು ಎಷ್ಟರಮಟ್ಟಿಗೆ ಸಮಂಜಸ! ಎಷ್ಟರಮಟ್ಟಿಗೆ ಈ ಒಂದು ಸದನಕ್ಕೆ ಗೌರವವನ್ನು ತರತಕ್ಕ ಮಾತು ಎನ್ನತಕ್ಕದ್ದನ್ನು ತಾವು ಹೇಳಬೇಕು. ನೀವು ಅಲ್ಲಿ ನಡೆಸಿದಂತಹ ಚರ್ಚೆ ಬಹಿರಂಗವಾಗಿ ಬಂದಿಲ್ಲ. ಅವರೇನು ಮಾತುಕತೆಯನ್ನು ಕರುಣಾನಿಧಿಯವರ ಜೊತೆ ಆಡಿದ್ದಾರೆ, ಕರುಣಾನಿಧಿಯವರು

ಮಾತ್ರ ತಮ್ಮ ಸದನಕ್ಕೆ ಹೋಗಿ ಸ್ಪಷ್ಟವಾಗಿ ಹೇಳಿದರು. ನಾನು ಈಗಾಗಲೇ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಜೊತೆ ಮಾತುಕತೆ ಆಡಿದ್ದೇನೆ. ಅವರು ನೀರು ಬಿಡುವುದಕ್ಕೆ ಒಪ್ಪಿದ್ದಾರೆ. ಬಹಳ ಆತ್ಮೀಯತೆಯಿಂದ ಈ ಒಂದು ಚರ್ಚೆಯನ್ನು ನಡೆಸಿದ್ದೇವೆ. ಅದರಿಂದ ಎರಡೂ ರಾಜ್ಯಗಳಲ್ಲಿ ಒಂದು ಸೌಹಾರ್ದ ಅಥವಾ ಬಂಧುಪ್ರೇಮ ಹುಟ್ಟತಕ್ಕ ಸಾಧ್ಯತೆ ಇದೆ. ಈ ಮಾತುಕತೆಯಿಂದ ನಮಗೆ ಒಂದು ಒಳ್ಳೆಯ ಪರಿಣಾಮಕಾರಿಯಾದ ಫಲ ಸಿಕ್ಕುವ ಸಾಧ್ಯತೆ ಇದೆಯೆನ್ನತಕ್ಕ ಮಾತನ್ನು ಅವರು ಪ್ರಸ್ತಾಪ ಮಾಡಿಕೊಂಡಿದ್ದಾರೆನ್ನುವುದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಈಗ ನಮ್ಮ ಮುಂದಿರತಕ್ಕ ಪ್ರಶ್ನೆ ಇಷ್ಟೆ. 1991ನೇ ಜೂನ್, ದಿನಾಂಕ 25-6-1991ರ ಇಂಟೆರಿಮ್ ಆರ್ಡರ್ ಯಾವುದು ಇದೆ ಆ ಆರ್ಡರ್ ಪ್ರಕಾರ ಮಾತುಕತೆ ನಡೆಸಿ ಆ ಇಂಟೆರಿಮ್ ಆರ್ಡರ್ ಪ್ರಕಾರ ಪ್ರತಿ ತಿಂಗಳು ಎಷ್ಟು ನೀರು ಬಿಡಬೇಕೆಂದು ಏನು ಡೈರೆಕ್ಷನ್‌ನ್ನು ಕೊಟ್ಟಿದ್ದಾರೆ ಆ ಡೈರೆಕ್ಷನ್ ಪ್ರಕಾರ ನೀರು ಬಿಡಲು ಒಪ್ಪಿಕೊಂಡಿದ್ದೀರಾ, ಹೇಗೆ ತಿಳಿಸಿ. ಅದು ಆದಮೇಲೆ ಏಪ್ರಿಲ್ ತಿಂಗಳು 1992ರಲ್ಲಿ ಏನು ಪುನಃ ಕ್ಲಾರಿಫಿಕೇಟರಿ ಆರ್ಡರ್ ಬಂತು, ನಮಗೆ ತೊಂದರೆ ಇದ್ದಾಗ, ನಮಗೇ ಕಷ್ಟ ಇದ್ದಾಗ ನಾವು ನೀರು ಬಿಡಬೇಕೇ ಬೇಡವೇ ನಮಗೇನು ತೊಂದರೆಗಳಿವೆ ಅದನ್ನು ನಿವಾರಿಸುವುದಕ್ಕೆ ಪುನಃ ಟ್ರಿಬ್ಯುನಲ್ ಮುಂದೆ ಹೇಳಿಕೊಳ್ಳತಕ್ಕ ಏನು ಆದೇಶ ಕೂಡ ಇತ್ತು ಅದನ್ನು ಇವತ್ತೂ ಕೂಡ, ನೀವು ಯಾವ ಆಧಾರದ ಮೇಲೆ ಅವರ ಜೊತೆಯಲ್ಲಿ ಮಾತುಕತೆ ಆಡುವುದು ಅವಶ್ಯಕತೆ ಇದೆಯೇ ಎನ್ನತಕ್ಕದ್ದು ಒಂದು. ಟ್ರಿಬ್ಯುನಲ್ ಹೊರಗಡೆ ಇದ್ದೇ ನಾವು ಮಾತುಕತೆಯಿಂದ ಬಗೆಹರಿಸಿಕೊಳ್ಳಬೇಕೆಂದು ಹೇಳಿ, ಈ ವಾದ ನಾವೆಲ್ಲರೂ ಮಂಡಿಸಿಕೊಂಡು ಬಂದಿದ್ದೇವೆ, ಹೇಳಿಕೊಂಡು ಬಂದಿದ್ದೇವೆ. ಆದರೆ ಇಲ್ಲಿ ಪ್ರಶ್ನೆ ಏನು ಬಂದಿದೆ ಎಂದರೆ, ಟ್ರಿಬ್ಯುನಲ್‌ನ ಇಂಟರಿಮ್ ಆರ್ಡ್‌ರ್ ಪ್ರಕಾರ ಮಾತುಕತೆ ಮಾಡ-ಬೇಕು ಅಂದಿದ್ದಕ್ಕಾಗಿ ಈ ಪ್ರಶ್ನೆ ಬಂದಿದೆ. ಆ ಒಂದು ಇಂಟರಿಮ್ ರಿಪೋರ್ಟ್ ಬಿಟ್ಟು ಮಾತುಕತೆ ನಡೆದಿದ್ದರೆ ಪರವಾಗಿಲ್ಲ. ಇಲ್ಲದಿದ್ದರೆ ಏನಾಗುತ್ತದೆ? ಇದೊಂದು ಇಂಟರಿಮ್ ಆರ್ಡ್‌ರ್ ಮಧ್ಯದಲ್ಲಿ ಇಟ್ಟುಕೊಂಡು ಈ ಆರ್ಡ್‌ರ್ ಆಧಾರದ ಮೇಲೆ ನೀವು ಮಾತುಕತೆ ಮಾಡಿದ್ದರೆ ಖಂಡಿತವಾಗಿಯೂ ಈ ರಾಜ್ಯದ ರೈತರ ಹಿತವನ್ನು ಕಾಪಾಡುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟಪಡಿಸ-ಬೇಕಾಗುತ್ತದೆ. ಒಂದು ಸಾರಿ ಸುಪ್ರಿಂಕೋರ್ಟ್‌ನವರು ಹೇಳಿದ್ದಾರೆ. ಅದಕ್ಕೆ ನಾವು ಹೋಗಿದ್ದೇವೆ, ಹೋಗದಿದ್ದರೆ ಕಂಟೆಂಪ್ಟ್ ಆಫ್ ಕೋರ್ಟ್ ಆಗುತ್ತದೆ ಎಂದು ಹೇಳಿ ನಾವು ಹೋಗಿದ್ದೇವೆ ಎಂದರೆ ಇನ್ನೊಂದು ಮಾತಿಗೆ ತಾವು ವಿವರಣೆ ಕೊಡಬೇಕಾಗಿದೆ. ಯಾವ ಕಾರಣಕ್ಕಾಗಿ ವಿರೋಧ ಪಕ್ಷದ ಮುಖಂಡರನ್ನು ನೀವು ಕರೆದು ಮಾತನಾಡಲಿಲ್ಲ? ಯಾವ ಕಾರಣಕ್ಕಾಗಿ ತಾವು ಎಲ್ಲಾ ಸದಸ್ಯರನ್ನು ಕರೆಸಿ ಈ ವಿಚಾರದ ಬಗ್ಗೆ ಹೋಗುವುದಕ್ಕೆ ಮುಂಚೆ ಮಾತನಾಡುತ್ತೇವೆ ಎನ್ನತಕ್ಕಂಥ ವಾಗ್ದಾನವನ್ನು ಏನು ಕೊಟ್ಟಿದ್ದೀರಿ, ಅದನ್ನು ಏಕೆ ಮರೆತಿರಿ ಎನ್ನತಕ್ಕಂಥ ಮಾತನ್ನು ಹೇಳಬೇಕಾಗುತ್ತದೆ. ಅದಕ್ಕಾಗಿ ದಯವಿಟ್ಟು ಈ ಎಲ್ಲಾ ವಿಷಯಗಳನ್ನು ನಾವು ಕೂಲಂಕಷವಾಗಿ ಪ್ರಸ್ತಾಪ ಮಾಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ತಾವು ಈ ನಿಲುವಳಿ ಸೂಚನೆಗೆ ಒಪ್ಪಿಗೆ ಕೊಡಬೇಕು ಮತ್ತು ಇದರಿಂದ ವಿವರ-ವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಆಗುತ್ತದೆ. ನಾವು ಹೋಗಿದ್ದೇವೆ; ನೀವು ಕೇಳಿಕೊಂಡು

ಹೋಗಿ ಎಂದರೆ ಹೇಗೆ? ರಾಜ್ಯದ ಇಂತಹ ಒಂದು ದೊಡ್ಡ ಸಮಸ್ಯೆಗೆ ಕೇವಲ ನಾವು ಹತ್ತು-ಹದಿನೈದು ನಿಮಿಷಗಳಲ್ಲಿ ಇದನ್ನು ಸ್ಟೇಟ್‌ಮೆಂಟ್ ಮಾಡಿ ಅಲ್ಲಿಗೇ ನಾವು ಮುಕ್ತಾಯಗೊಳಿಸುತ್ತೇವೆ ಎಂದರೆ ಅದು ಅಷ್ಟೊಂದು ಉಚಿತವಾಗುವುದಿಲ್ಲ. ಅದಕ್ಕಾಗಿ ಇದು ಬಹಳ ಗಂಭೀರವಾದ ಸಮಸ್ಯೆ ಇದೆ. ಹಿಂದೆ ನಮ್ಮ ಸರ್ಕಾರ ಇದ್ದಾಗ ಕೂಡ ಸಾಕಷ್ಟು ಒತ್ತಡ ಬಂದಿತ್ತು. ಮಾನ್ಯ ಬಂಗಾರಪ್ಪನವರ ಸರ್ಕಾರ ಇದ್ದಾಗಲೂ ಒತ್ತಡ ಬಂದಿತ್ತು. ಶ್ರೀಮಾನ್ ಮೊಯಿಲಿಯವರ ಸರ್ಕಾರದ ಕಾಲದಲ್ಲೂ ಕೂಡ ಒತ್ತಡ ಬಂದಿತ್ತು. ಶ್ರೀಮಾನ್ ಶುಕ್ಲಾರವರೇ ಇಲ್ಲಿಗೆ ಬಂದ ಕುಳಿತು ಒತ್ತಡವನ್ನು ತಂದು ಜಯಲಲಿತಾರವರು ಏನು ಹೇಳುತ್ತಾರೆ, ಅದಕ್ಕೆ ಒಪ್ಪಿಕೊಳ್ಳಬೇಕೆಂಬ ಪರಿಸ್ಥಿತಿ ಬಂದರೂ ಕೂಡ ನಮ್ಮ ಸರ್ಕಾರ, ಹಿಂದಿನ ಸರ್ಕಾರ ಆವಾಗಲೂ ಮಣಿಯಲಿಲ್ಲ. ಅಂದರೆ ರಾಜ್ಯದ ಹಿತ ರಕ್ಷಣೆ ಮಾಡುತ್ತೇವೆ ಎಂದು ಹೇಳಿ ಇವತ್ತು ಯಾವುದೇ ಪಕ್ಷ ಕೇಂದ್ರದಲ್ಲಿ ಇರಬಹುದು, ಯಾರೇ ಪ್ರಧಾನಮಂತ್ರಿಗಳು ಆಗಿರಬಹುದು. ಅವರ ಇತಿಮಿತಿ ಅವರಿಗೆ ಇದೆ, ನಮ್ಮ ಇತಿಮಿತಿ ನಮಗೆ ಇದೆ. ಮತ್ತು ನಮ್ಮ ಇತಿಮಿತಿಯಲ್ಲಿ ನಮ್ಮ ರಾಜ್ಯದ ರೈತರ ರಕ್ಷಣೆ ಮಾಡಬೇಕು, ಅದು ನಮಗೆ ಬಿಟ್ಟಿದ್ದುದು. ಅದಕ್ಕಾಗಿ ಅದರ ಹಿತರಕ್ಷಣೆಗಾಗಿ ಎಲ್ಲಾ ಪ್ರಯತ್ನವನ್ನು ಮಾಡತಕ್ಕಂಥಾದ್ದು ಮತ್ತು ಎಲ್ಲಾ ತ್ಯಾಗ ಮಾಡ-ತಕ್ಕಂಥಾದ್ದು ನಮ್ಮ ಕರ್ತವ್ಯವಾಗಿದೆ. ಅದಕ್ಕಾಗಿ ನಾವು ಇವತ್ತು ಕೇಂದ್ರದ ಕಡೆ ಬೊಟ್ಟು ಮಾಡಿ ತೋರಿಸಿ ಬರೀ ಪ್ರಧಾನಮಂತ್ರಿಗಳು ತಮ್ಮ ಖುರ್ಚಿಗಾಗಿ ಇದನ್ನು ಮಾಡಿದ್ದಾರೆ, ನಿಮಗೆ ಹೇಳಿದ್ದಾರೆ ಎಂಬ ಮಾತನ್ನು ನಾನು ಹೇಳುವುದಿಲ್ಲ. ಆದರೆ ನಾನು ಹೇಳತಕ್ಕದ್ದು, ನೀವು ಅಲ್ಲಿ ಹೋಗಿದ್ದು ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಅದು 1991ರ ಇಂಟರಿಮ್ ಆರ್ಡ್‌ರ್ ಆಧಾರದಮೇಲೆ ಹೋಗಿದ್ದೀರಿ. ಆ ಆರ್ಡ್‌ರ್‌ಗೆ ನಾವಂತೂ ಒಪ್ಪಿರಲಿಲ್ಲ. ಅದನ್ನು ಒಪ್ಪದೇ ಇದ್ದರೂ ಕೂಡ ನೀವು ಹೋಗಿದ್ದರ ಕಾರಣ ಏನು? ಅದಕ್ಕೆ ಯಾವ ಕಂಪಲ್‌ಷನ್ ಇತ್ತು, ಯಾವ ಒತ್ತಡ ಇತ್ತು ಎಂಬು-ದನ್ನು ತಿಳಿಸಬೇಕು. ನಮ್ಮನ್ನು ಯಾರನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಳ್ಳದೆ ತಾವು ಹೋಗಿದ್ದರ ಪ್ರಮೇಯ ಏನು ಎನ್ನುವುದನ್ನೂ ಕೂಡ ಈ ಸಂದರ್ಭದಲ್ಲಿ ಹೇಳಬೇಕು ಎಂಬ ಮಾತನ್ನು ನಾನು ಕೇಳುತ್ತೇನೆ. ಆದ್ದರಿಂದ ಈ ಒಂದು ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ಬರೇ ಉತ್ತರದ ಮೇಲೆ ನಾವು ಇದನ್ನು ಸಮಾಪ್ತಿ ಮಾಡಿದರೆ ಖಂಡಿತ-ವಾಗಿಯೂ ಇದರ ಮಹತ್ವ ಕಡಿಮೆಯಾಗುತ್ತದೆ. ಆದ್ದರಿಂದ ಇದರ ಮಹತ್ವವನ್ನು ಅರಿತು ಮತ್ತು ಈ ರಾಜ್ಯದ ಒಂದು ಹಿತದೃಷ್ಟಿಯಿಂದ ಚರ್ಚೆಯನ್ನು ನಾವು ಮಾಡಬೇಕಾಗುತ್ತದೆ. ಅದಕ್ಕಾಗಿ ದಯವಿಟ್ಟು ನಿಲುವಳಿ ಸೂಚನೆಗೆ ತಾವು ಅನುಮತಿ ಕೊಡಬೇಕೆಂದು ಹೇಳಿ, ತಮ್ಮ ಅಪ್ಪಣೆ ಪಡೆದು ನಾನು ಮುಂದಿನ ಸ್ಟೇಟ್‌ಮೆಂಟ್ ಆದಮೇಲೆ ಅಥವಾ ತಾವು ಅಪ್ಪಣೆ ಕೊಟ್ಟಮೇಲೆ ಉಳಿದಂಥ ವಿವರಗಳ ಬಗ್ಗೆ ಪ್ರಸ್ತಾಪ ಮಾಡುತ್ತೇನೆ.

+ **ಶ್ರೀ ಯು.ಆರ್. ಸಭಾಪತಿ (ಉಡುಪಿ):-** ಮಾನ್ಯ ಅಧ್ಯಕ್ಷರೇ, ಎರಡು ದಿವಸಗಳ ಹಿಂದೆ ಸರ್ಕಾರದ ನಡವಳಿಕೆ ಬಹಳ ಅತಿಶಯೋಕ್ತಿ ಹಾಗೂ ಸಂಶಯಾಸ್ಪದ ರೀತಿಯದಾಗಿತ್ತು ಎಂದು ಹೇಳುವುದಕ್ಕೆ ನಾನು ಬಯಸುತ್ತಿದ್ದೇನೆ. ಕಳೆದ ತಿಂಗಳು 5 ಟಿ.ಎಂ.ಸಿ. ನೀರನ್ನು ತಮಿಳುನಾಡಿಗೆ ಬಿಟ್ಟು

ರಾಜ್ಯದ ಜನತೆಗೆ ಒಂದು ಕಪಾಳಮೋಕ್ಷವನ್ನು ಸರ್ಕಾರ ಮಾಡಿತ್ತು. ಆವಾಗ ನಾವು ಪ್ರತಿಭಟನೆ ಮಾಡಿದ್ದೆವು, ಧರಣಿ ಮಾಡಿದ್ದೆವು. ಕೊನೆಗೆ ಈ ಬಗ್ಗೆ ಯಾವುದೇ ತೀರ್ಮಾನ ಕೈಕೊಳ್ಳುವುದಿದ್ದರೆ ಪ್ರತಿಪಕ್ಷವನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಸದನವನ್ನು ಒಟ್ಟಾಗಿ ವಿಶ್ವಾಸಕ್ಕೆ ತೆಗೆದುಕೊಂಡು ಒಂದು ತೀರ್ಮಾನಕ್ಕೆ ಬರುತ್ತೇವೆ ಎಂದು ಹೇಳಿದ್ದಿರಿ. ಆದರೆ ಕೊನೆಗಳಿಗೆಯಲ್ಲಿ ನೋಡಿದಾಗ ಎರಡು ದಿವಸ-ಗಳ ಹಿಂದೆ ಪತ್ರಿಕೆಯಲ್ಲಿ ನೋಡುವಾಗ, ಸನ್ಮಾನ್ಯ ಮುಖ್ಯಮಂತ್ರಿಗಳು, ಅವರ ಜೊತೆಗೆ ಹೋಗಿದ್ದಂಥ ಮಾನ್ಯ ಉಪಮುಖ್ಯಮಂತ್ರಿಗಳು ತಮಿಳುನಾಡಿಗೆ ಹೋಗುವಾಗ, ಈ ಒಲಂಪಿಕ್ಸ್‌ನಲ್ಲಿ ಪದಕ ಸಿಕ್ಕಿ-ದಂಥ, ಕ್ರೀಡಾಪಟುಗಳು ಮಾತೃ ಭೂಮಿಗೆ ಬರುವಾಗ ಯಾವರೀತಿ ವಿರೋಚಿತ ಸ್ವಾಗತ ಕೊಟ್ಟಿ-ದ್ದಾರೆ, ಅದೇ ರೀತಿ ವಿರೋಚಿತ ಸ್ವಾಗತವನ್ನು ತಮಿಳುನಾಡು ಸರ್ಕಾರ ಇವರಿಗೆ ಕೊಟ್ಟಿದೆ. ಏಕೆಂದರೆ 5 ಟಿ.ಎಂ.ಸಿ. ನೀರನ್ನು ಇವರು ಕೇಳದೇನೆ ನಾವು ಬಿಟ್ಟಿದ್ದಕ್ಕೋಸ್ಕರ ಇವತ್ತು ಮಾನ್ಯ ಮುಖ್ಯಮಂತ್ರಿ-ಗಳು ಅಲ್ಲಿಗೆ ಹೋಗಿ ಏನು ಹೇಳುತ್ತಾರೆ ಎಂದರೆ ನೀವು ಕೇಳದೇನೇ ನಿಮಗೆ ನಾವು 5 ಟಿ.ಎಂ.ಸಿ. ನೀರನ್ನು ಬಿಟ್ಟಿದ್ದೇವೆ ಎಂದು ಹೇಳುವಂಥ ಮಾತನ್ನು ಹೇಳುತ್ತಾರೆ. ಹಾಗಾದರೆ ಕರ್ನಾಟಕ ಜನತೆಯ ಒಂದು ಹಿತಾಸಕ್ತಿಯನ್ನು ಬದಿಗೊತ್ತಿ, ತಾವು ವೀರೋಚಿತ ಸ್ವಾಗತ ಪಡೆಯುವುದಕ್ಕೆ ಅಲ್ಲಿ ಹೋಗಿದ್ದಿ-ರೆಂಬ ಮಾತನ್ನು ನಾನು ಹೇಳಬೇಕಾಗುತ್ತದೆ. ಇವತ್ತು ಕೊಟ್ಟುಕೊಳ್ಳುವ ನೀತಿ ಎಂದು ಅವರು ಹೇಳು-ತ್ತಿದ್ದಾರೆ. ಇವರು ಕೊಟ್ಟಿದ್ದಾರೆ, ಇವತ್ತು ಕೊಟ್ಟಿದ್ದರಿಂದಾಗಿ ನಮ್ಮ ರಾಜ್ಯದ ಜನತೆಗೆ ಬಂದಂಥ ಒಂದು ಸವಲತ್ತು ಏನು ಸಿಕ್ಕಿದೆ ಎನ್ನುವುದನ್ನು ಅವರು ಸ್ಪಷ್ಟಪಡಿಸಬೇಕೆಂದು ನಾನು ಹೇಳುತ್ತೇನೆ. ನೀರು ಪಡೆಯಲು ಕರುಣಾನಿಧಿಯವರು ಕಾತರರಾಗಿದ್ದಾರೆ, ನಾವು ಕೊಡುವುದಕ್ಕೆ ತಯಾರಾಗಿದ್ದೇವೆ ಎನ್ನ-ತಕ್ಕಂಥ ಮಾತನ್ನು ಆಡಿದ್ದಾರೆ. ನಾನು ಕೇಳುತ್ತೇನೆ, ನಾಳೆ ವಿಧಾನಸೌಧವನ್ನು ಕೇಳುವುದಕ್ಕೆ ಕರುಣಾ-ನಿಧಿಯವರು ಕಾತುರರಾಗಿದ್ದರೆ ಇವರು ಕೊಡುವುದಕ್ಕೆ ತಯಾರಾಗಿದ್ದಾರೆಯೇ ಎಂದು ಕೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಸರ್ಕಾರ ಇವತ್ತು ಬೇಜವಾಬ್ದಾರಿಯುತವಾಗಿ ಕರ್ನಾಟಕ ಜನತೆಯ ಸಮಗ್ರ ಹಿತಾಸಕ್ತಿಯನ್ನು ಬಲಿಕೊಟ್ಟಿಕೊಂಡು ಈ ನಿರ್ಣಯವನ್ನು ತೆಗೆದುಕೊಂಡು ಒಂದು ರಹಸ್ಯ ಒಪ್ಪಂದ ಮಾಡಿಕೊಂಡು ಬಂದಿದ್ದಾರೆ. ಇದು ಐತಿಹಾಸಿಕವಲ್ಲವೆಂದು ನಾನು ಹೇಳು-ತ್ತಿದ್ದೇನೆ. ಅದು ಐತಿಹಾಸಿಕವಾಗಿದೆ ಎಂದರೆ ಇವತ್ತು ಸದನದ ಒಮ್ಮತದ ಒಂದು ಒಪ್ಪಿಗೆಯನ್ನು ಪಡೆದುಕೊಂಡು ಇವರು ಹೋಗಬೇಕಿತ್ತು. ಅದನ್ನು ಅವರು ಮಾಡಲಿಲ್ಲ. ಹೋಗುವ ಮುನ್ನ ಯಾವ-ರೀತಿ ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ವಿರೋಧಪಕ್ಷದವರನ್ನೆಲ್ಲ ಕರೆದು ಒಟ್ಟಿಗೆ ಮಾತುಕತೆ ನಡೆಸಿ ಅವರು ಹೋಗಬೇಕಿತ್ತು. ಆದರೆ ಅದನ್ನು ಮಾಡಲಿಲ್ಲ. ಏಕಾಏಕಿ ಅಲ್ಲಿಗೆ ಹೋದರು. ಇವರು ಇದ್ದಂಥ ಪಂಚತಾರಾ ಹೋಟೇಲಿಗೆ ಕರುಣಾನಿಧಿಯವರು ಬರಬೇಕು ಎಂದರೆ, ಅವರಿಗೆ ಎಷ್ಟು ಸಂತೋಷವಾಗಿದೆ, ಈ ಹೇಳಿಕೆಯಿಂದ. ತಮಿಳುನಾಡಿನ ಸದನ ಏಕೋನ್ಮುಖವಾಗಿ, ಎಲ್ಲರೂ ಒಟ್ಟಿಗೆ ಸೇರಿ ಅತ್ಯಂತ ಬಹಳ ಸೌಜನ್ಯಯುತವಾಗಿ ಇವರನ್ನು ಸ್ವಾಗತ ಮಾಡಿದ್ದಾರೆ. ಹಾಗಾ-ದರೆ ಇವರ ಅಭಿಪ್ರಾಯ ಏನಿತ್ತು ಎಂಬುದು ಸ್ಪಷ್ಟವಾಗಬೇಕು. ಎರಡನೆಯದು, ಇದೇ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು, ಪ್ರಧಾನಿಯವರ ಕುರ್ಚಿಯನ್ನು ಭದ್ರಪಡಿಸುವುದ-

ಕ್ಕೋಸ್ಕರ ಇವರು ಈ ರೀತಿ ನಡವಳಿಕೆ ಮಾಡಿದ್ದಾರೆ ಎಂದು ಏನು ತಮ್ಮ ಸಂಶಯವನ್ನು ವ್ಯಕ್ತ-ಪಡಿಸಿದ್ದಾರೆ, ಅದಕ್ಕೆ ನಾನು ಸಹಮತವನ್ನು ನೀಡುತ್ತಿದ್ದೇನೆ. ಏಕೆಂದು ಹೇಳಿದರೆ ಇವತ್ತು ನನ್ನ ದೃಷ್ಟಿ-ಯಲ್ಲಿ ಪ್ರಾಯಶಃ, ದೇವೇಗೌಡರು ಪ್ರಧಾನಮಂತ್ರಿಗಳಾಗಿ ತಮ್ಮ ಕುರ್ಚಿಗೆ ಗಂಡಾಂತರ ಬಂದಿದೆ ಎನ್ನುವ ರೀತಿಯಲ್ಲಿ ಸಂಶಯ ಇವತ್ತು ನನ್ನಲ್ಲಿ ಉದ್ಭವಿಸಿದೆ; ಅದೇನೆಂದರೆ ಕರ್ನಾಟಕದ ಹಿತಚಿಂತನೆ-ಯನ್ನು ಬಲಿಕೊಟ್ಟು ಇವರ ಕುರ್ಚಿ ಭದ್ರ ಮಾಡುತ್ತಿದ್ದಾರೆ ಎಂದು. ಆದರೆ ಏನು ಕರುಣಾನಿಧಿಯವರ ಒಟ್ಟಿಗೆ ಇವರು ಮಾತುಕತೆ ನಡೆಸಿದ್ದಾರೆ, ಇದನ್ನು ಸಂಪೂರ್ಣವಾಗಿ ನಾವು ವಿರೋಧಿಸುತ್ತೇವೆ, ಮಾತ್ರವಲ್ಲದೆ ಇವತ್ತು ಏನು ಮಾತುಕತೆ ನಡೆಸುತ್ತಿದ್ದಾರೆ, ಅದರ ಬಗ್ಗೆ ಸಂಪೂರ್ಣ ವಿವರಗಳನ್ನು ಸದನಕ್ಕೆ ಕೊಡಬೇಕು. ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಮಾಡುವ ಯಾವುದೇ ನಡವಳಿಕೆ-ಯನ್ನು ನಾನು ವಿರೋಧ ಮಾಡುತ್ತೇನೆ ಎನ್ನುವ ಮಾತನ್ನು ತಮ್ಮ ಮೂಲಕ ಹೇಳಿ ಸರ್ಕಾರಕ್ಕೆ ಎಚ್ಚರಿಕೆ ಹೇಳುವುದಕ್ಕೆ ಬಯಸುತ್ತೇನೆ.

+ **ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-** ಮಾನ್ಯ ಅಧ್ಯಕ್ಷರೇ, ನಿನ್ನೆ, ಮೊನ್ನೆ ಎರಡು ದಿವಸ ನಮ್ಮ ಶಾಸನಸಭೆ ಇರಲಿಲ್ಲ. ಏಕೆ ಇರಲಿಲ್ಲ ನನಗಂತೂ ಗೊತ್ತಿರಲಿಲ್ಲ. ಸಡನ್ ಆಗಿ ಉಪಾಧ್ಯಕ್ಷರು ಶಾಸನಸಭೆಯನ್ನು ಮುಂದಕ್ಕೆ ಹಾಕಿದ್ದೇನೆ ಎಂದು ಹೇಳಿದರು, ಏತಕ್ಕೆ ಎಂದು ಹೇಳ-ಲಿಲ್ಲ. ಆ ಪ್ರಶ್ನೆ ಬೇರೆ. ಏಕೆ ಆಯಿತೆಂದು ಗೊತ್ತಾಗಲಿಲ್ಲ. ಆಮೇಲೆ ಪತ್ರಿಕೆಯಲ್ಲಿ ಬಂತು, ಕಾವೇರಿ ವಿಚಾರದಲ್ಲಿ ಮಂತ್ರಿಗಳು ಡೆಲ್ಲಿಗೆ ಹೋಗುತ್ತಿದ್ದಾರೆ, ಅದಕ್ಕೋಸ್ಕರ ಸದನಕ್ಕೆ ಒಂದು ರಜೆ ಬಂದಹಾಗೆ ಇದೆ. ನಮಗೆ ಏನೋ ಒಂದು ಉಪಕಾರ, ಅನುಕೂಲ ಆಗುತ್ತಿದೆ, ಅದನ್ನೆಲ್ಲ ತೆಗೆದುಕೊಂಡು ಬರುವುದಕ್ಕೆ ನಾವೆಲ್ಲರೂ ಹೋಗುತ್ತಿದ್ದೇವೆ . . .

ಅಧ್ಯಕ್ಷರು:- ಸುಪ್ರೀಂ ಕೋರ್ಟಿನವರು 6ನೇ ತಾರೀಖಿನ ಒಳಗಾಗಿ ಅಥವಾ 7ನೇ ತಾರೀಖಿನ ಒಳಗಾಗಿ ಈ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಕಲೆತು ಮಾತನಾಡಬೇಕು ಎಂದು ಹೇಳಿ ಅವರು ಗಡುವು ಕೊಟ್ಟಿದ್ದರು. ನಮ್ಮ ಕಲಾಪದ ಪ್ರಕಾರ ಮುಖ್ಯಮಂತ್ರಿಗಳು ಅವರ ಬೇಡಿಕೆಗಳಿಗೆ ಉತ್ತರ ಕೊಡಬೇಕಾಗಿತ್ತು. ನಮ್ಮ ಅಜೆಂಡಾದಲ್ಲಿ ಅದು ಇದ್ದದ್ದು. ಬೇಡಿಕೆಗಳ ಮೇಲೆ ಚರ್ಚೆ ಮುಕ್ತಾ-ಯವಾಗಿದೆ. ಅವರಿಗೆ ಸುಪ್ರೀಂ ಕೋರ್ಟಿನ ಆದೇಶವನ್ನು ಪಾಲಿಸದೆ ಬೇರೆ ಗತ್ಯಂತರ ಇರಲಿಲ್ಲ. ಅವರು ಮದ್ರಾಸಿಗೆ ಹೋಗಿ ಅವರೊಡನೆ ಮಾತನಾಡಿ ಅನಂತರ ಡೆಲ್ಲಿಗೆ ಹೋಗಿಬರುವುದಿತ್ತು. ಆ ಕಾರಣಕ್ಕಾಗಿ ಅವರು ಸುಪ್ರೀಂ ಕೋರ್ಟ್ ಆದೇಶವನ್ನು ಪಾಲನೆ ಮಾಡಲೇಬೇಕಾಗಿತ್ತು. ಮತ್ತು ಅವರೇ ಇಲ್ಲಿಗೆ ಬಂದು ಬೇಡಿಕೆಗಳಿಗೆ ಉತ್ತರವನ್ನು ಕೊಡಬೇಕಾಗಿದ್ದುದರಿಂದ ಎರಡು ದಿವಸ ಸಭೆ-ಯನ್ನು ಮುಂದೆ ಹಾಕಿದ್ದು, ಅಷ್ಟೆ. ಈ ವಿಚಾರದಲ್ಲಿ ತಾವು ಬೇರೆ ತರಹ ಯಾವುದೇ ಅಭಿಪ್ರಾಯಕ್ಕೆ ಯಾರೂ ಬರಬೇಕಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನಾನು ಅದನ್ನು ಜಾಸ್ತಿ ಬೆಳೆಸುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು:- ನಾನು ವಾಸ್ತವಾಂಶವನ್ನು ತಿಳಿಸಿದೆ. ಏಕೆಂದರೆ ಲೋಕಕ್ಕೆ ಗೊತ್ತಾಗಬೇಕಲ್ಲ, ಏಕೆ ಮುಂದಕ್ಕೆ ಹಾಕಿದ್ದೇವೆ ಎಂದು.

ಶ್ರೀ ವಾಟಾಳ್ ನಾಗರಾಜ್:- ಕಾವೇರಿ ವಿಚಾರವಾಗಲೀ, ಕೃಷ್ಣಾಗೆ ಸಂಬಂಧಪಟ್ಟ ವಿಚಾರ-ವಾಗಲೀ, ಎಲ್ಲಾ ಮುಖ್ಯಮಂತ್ರಿಗಳೂ ಸ್ವಲ್ಪ ಹೆಚ್ಚು ಕಡಿಮೆ ಹತ್ತು-ಹತ್ತು ಸಭೆಗಳನ್ನು ಮಾಡಿದ್ದಾರೆ. ಈ ಸಭೆಗಳಲ್ಲಿ ವಿರೋಧ ಪಕ್ಷದ ಮುಖಂಡರುಗಳು, ಅದರಲ್ಲಿ ದೊಡ್ಡ ಪಕ್ಷ ಮತ್ತು ಸಣ್ಣ ಪಕ್ಷ ಎಂದು ಯಾವುದೇ ಭೇದಭಾವ ಇಲ್ಲದೆ ದೊಡ್ಡ ಪಕ್ಷದ ಮುಖಂಡರನ್ನು ಕರೆದಿದ್ದಾರೆ ಮತ್ತು ಸಣ್ಣ ಪಕ್ಷದ ಮುಖಂಡರುಗಳನ್ನು ಕರೆದಿದ್ದಾರೆ. ಶಾಸನಸಭೆಯಲ್ಲಿ ಶಾಸಕನಾಗಿ ಇಲ್ಲದೇ ಇರತಕ್ಕಂಥ, ಹೊರಗೆ ಇರತಕ್ಕಂಥ ಪಕ್ಷಗಳನ್ನೂ ಕರೆದಿದ್ದಾರೆ. ಸಿ.ಪಿ.ಐ.ನವರನ್ನು ಕರೆದಿದ್ದಾರೆ, ಸಿ.ಪಿ.ಎಂ.ನವರನ್ನು ಕರೆದಿ-ದ್ದಾರೆ. ಈಗ ಸದಸ್ಯರು ಇದ್ದಾರೆ. ಹಿಂದೆ ಕರೆದಿದ್ದರು. ಇದರ ಜೊತೆಗೆ ಒಂದು ತಾಂತ್ರಿಕ ಸಮಿತಿ ಎನ್ನ-ತಕ್ಕಂಥಾದ್ದು ಇದೆ. ಹಿಂದೆ ಮಾನ್ಯ ವೀರೇಂದ್ರ ಪಾಟೀಲರು ಮಾಡಿರತಕ್ಕಂಥ ಸಂದರ್ಭವನ್ನು ನೋಡಿದ್ದೇವೆ. ಅನೇಕ ಬಾರಿ ಕರೆದಿದ್ದಾರೆ. ಶ್ರೀಮಾನ್ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಅನೇಕ ಬಾರಿ ಇಂಥ ಸಂದರ್ಭ ಬಂದಾಗ ರಾತ್ರೋರಾತ್ರಿಯಾಗಲೀ ಎದ್ದುಬಿದ್ದು ಎಲ್ಲರ ಸಭೆಯನ್ನು ಕರೆಯುತ್ತಿದ್ದರು. ಆಗ ಶ್ರೀಮಾನ್ ನಂಜೇಗೌಡರು ಈ ಸದನದ ಸದಸ್ಯರಾಗಿರಲಿಲ್ಲ. ಅವರು ಸದನದ ಸದಸ್ಯರಾಗದಿದ್ದರೂ ಕೂಡ, ನಂಜೇಗೌಡರ ಅಮೂಲ್ಯವಾದ ಸಲಹೆಗಳನ್ನು ಪಡೆದುಕೊಳ್ಳಲೇಬೇಕೆಂದು ಹೇಳಿ ಅವರನ್ನು ಕರೆದು ಮಾತನಾಡಿರತಕ್ಕ ಸಂದರ್ಭ ಇದೆ. ಯಾವುದೇ ಸಂದರ್ಭದಲ್ಲಿ ನಮ್ಮ ರಾಜ್ಯಕ್ಕೆ ಕಾವೇರಿ ಬಗ್ಗೆಯಾಗಲೀ, ಕೃಷ್ಣಾ ಬಗ್ಗೆಯಾಗಲೀ ಅನ್ಯಾಯವಾದಾಗ ಅಥವಾ ಸಂದರ್ಭ ಬಂದಾಗ ಎಲ್ಲರನ್ನೂ ಕರೆದು ಮಾತನಾಡಿರತಕ್ಕಂತಾದ್ದು, ಇದು ನಡೆದು ಬಂದಿರತಕ್ಕಂತಾದ್ದು. ಶ್ರೀಮಾನ್ ವೀರೆಂದ್ರ ಪಾಟೀಲರು ಮಾಡಿದ್ದಾರೆ, ಬಂಗಾರಪ್ಪನವರು ಮಾಡಿದ್ದಾರೆ, ಶ್ರೀಮಾನ್ ವೀರಪ್ಪ ಮೊಯಲಿಯವರು ಮಾಡಿದ್ದಾರೆ, ಶ್ರೀಮಾನ್ ದೇವೇಗೌಡರು ಮಾಡಿದ್ದಾರೆ ಕೊನೆಯ 6 ಟಿ.ಎಂ.ಸಿ. ನೀರನ್ನು ಬಿಡಬೇಕಾದಾಗ ಎಲ್ಲಾ ಪಕ್ಷಗಳವರನ್ನೂ ಕರೆದು, ಎಲ್ಲಾ ಪಕ್ಷಗಳವರ ಜೊತೆ-ಯಲ್ಲಿ ಮಾತನಾಡಿ. ಅವರ ಸಹಿಗಳನ್ನು ತೆಗೆದುಕೊಂಡು, ಅವರ ಪಕ್ಕದಲ್ಲಿಯೇ ಎಲ್ಲರನ್ನೂ ಕೂಡಿಸಿ, ಪತ್ರಿಕಾಮಿತ್ರರ ಮುಂದೆ ನಾವೆಲ್ಲರೂ ಒಗ್ಗಟ್ಟಾಗಿದ್ದೇವೆಂದು ತೋರಿಸಿರತಕ್ಕ ನಿದರ್ಶನಗಳು ಇವೆ. ನನಗನಿಸಿತು, ಹಿಂದೆ ಈ ಸದನದಲ್ಲಿ ಸುಮಾರು, ಬಂಗಾರಪ್ಪನವರ ಕಾಲದಲ್ಲಿ ಒಂದು ನಿರ್ಣಯ ಆಗಿದೆ, ಮೊಯ್ಲಿಯವರ ಕಾಲದಲ್ಲಿ ನಿರ್ಣಯ ಆಗಿದೆ, ದೇವೇಗೌಡರ ಕಾಲದಲ್ಲಿ ಈ ಸಭೆಯಲ್ಲಿ ನಿರ್ಣಯ ಆಗಿದೆ. ಈ ನಿರ್ಣಯ ಸರ್ವಾನುಮತದ ನಿರ್ಣಯ. ಈ ಸರ್ವಾನುಮತದ ನಿರ್ಣಯ ಈಗ ಬದುಕಿದೆಯೋ ಸತ್ತಿದೆಯೋ ಎನ್ನುವುದು ಒಂದು ಪ್ರಶ್ನೆ. ಈ ಸದನದಲ್ಲಾದ ನಿರ್ಣಯ, ಅದು ಜೀವಂತವಾಗಿದೆಯೇ ಅಥವಾ ಆ ನಿರ್ಣಯ ಜೀವಂತ ಇಲ್ಲವೇ ಎನ್ನುವುದು ಒಂದು ಪ್ರಶ್ನೆ. ಸರ್ಕಾರ ನಿರ್ಧಾರ ಮಾಡಬೇಕು. ಮಾನ್ಯ ಸಂಸದೀಯ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಸನ್ಮಾನ್ಯ ವೀರಪ್ಪ ಮೊಯಿಲಿಯವರ ಕಾಲದ ನಿರ್ಣಯ, ಶ್ರೀಮಾನ್ ದೇವೇಗೌಡರ ಕಾಲದ ನಿರ್ಣಯ ಮತ್ತು ಶ್ರೀಮಾನ್ ಬಂಗಾರಪ್ಪನವರ ಕಾಲದ ನಿರ್ಣಯ.

ಈ ನಿರ್ಣಯಗಳ ಬಗ್ಗೆ, ಈ ಸದನಕ್ಕೆ ಸ್ಪಷ್ಟ ಮಾಹಿತಿಯನ್ನು ಸರ್ಕಾರ ಕೊಡಬೇಕು. ಮತ್ತು ಈ ನಿರ್ಣಯಗಳು ಇದ್ದಾಗ, ತಮಿಳುನಾಡಿಗೆ ಮಾತುಕತೆಗೆ ಹೋಗುವುದಕ್ಕೆ ಮುಂಚೆ, ಈ ಸದನ ನಡೆ-ಯುತ್ತಾ ಇತ್ತು. ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಡಬೇಕಾಗಿತ್ತು. ಕಾವೇರಿ ಬಗ್ಗೆ ನಾನು ಮಾತುಕತೆಗೆ ಹೋಗುತ್ತಿದ್ದೇನೆ. ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಮಾತುಕತೆಗೆ ಹೋಗುತ್ತಿದ್ದೇನೆ. ಈ ಮಾತುಕತೆಯ ಚೌಕಟ್ಟುಗಳೇನು, ಇದರ ಸೂತ್ರ ಏನು ಎನ್ನುವು-ದನ್ನು ಹೇಳಬೇಕಾಗಿತ್ತು. ಈ ಸದನ ನಡೆಯದೇ ಇದ್ದರೆ, ಅವರೇ ಮಾತನಾಡಿಕೊಂಡು ಬರೀ ವಿರೋಧಪಕ್ಷದವರನ್ನು ಕರೆದು ಮಾತನಾಡಿ ಎಂದು ಹೇಳಬಹುದಾಗಿತ್ತು. ಈ ಸದನ ನಡೆಯುವಾಗ, ಸದನಕ್ಕೆ ಯಾವುದೇ ಮಾಹಿತಿಯನ್ನು ಕೊಡಲಿಲ್ಲ. ನಮಗೆ ಗೊತ್ತಾದದ್ದು ಸದನ ಎರಡು ದಿವಸ ಮುಂದೆ ಹೋಗಿದ್ದಕ್ಕೆ ತಾವು ವಿವರಣೆ ಕೊಟ್ಟಿದ್ದೀರಿ. ನಾನು ಅದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ಇವತ್ತು ಪತ್ರಿಕೆಯಲ್ಲಿ ಬಂತು. ತಕ್ಷಣ ಮಾನ್ಯ ಖರ್ಗೆಯವರಿಗೆ ಫೋನ್ ಮಾಡಿ ಕೇಳಿದೆ. ದೊಡ್ಡ ದೊಡ್ಡ ಪಕ್ಷದ ಮುಖಂಡರುಗಳ ಜೊತೆಯಲ್ಲಿ ನಾನು ಮಾತನಾಡಿದ್ದೇನೆಂದು ಡೆಕ್ಕನ್ ಹೆರಾಲ್ಡ್ ಪತ್ರಿಕೆಯು ಮುಖಪುಟದಲ್ಲಿ ಬಂತು. ನಾನು ಯಡಿಯೂರಪ್ಪನವರ ಮನೆಗೆ ಫೋನ್ ಮಾಡಿದೆ. ತಮ್ಮ ಜೊತೆಯಲ್ಲಿ ಏನಾದರೂ ಮಾತನಾಡಿದ್ದಾರೆಯೇ ಎಂದು ಕೇಳಿದೆ. ಅವರು ಸಿಗಲಿಲ್ಲ, ಮತ್ತೆ ರಾಮಚಂದ್ರಗೌಡರಿಗೆ ಫೋನ್ ಮಾಡಿದೆ. ಅವರು ಹೇಳಿದರು, ನಮ್ಮನ್ನು ಯಾರನ್ನೂ ಕರೆದಿಲ್ಲ ಎಂದು. ನೀವು ನಂಜೇಗೌಡರಿಗಾದರೂ ಕೇಳಿ ಎಂದು ಹೇಳಿದೆ. ಅವರಿಗೂ ಫೋನ್ ಮಾಡಿದೆ, ಅವರನ್ನೂ ಕರೆದಿಲ್ಲ ಎಂದು ಗೊತ್ತಾಯಿತು. ಮಾನ್ಯ ಖರ್ಗೆಯವರ ಮನೆಗೆ ಫೋನ್ ಮಾಡಿದೆ. ಏಕೆಂದರೆ, ದೊಡ್ಡ ಪಕ್ಷಗಳು ಅವರನ್ನಾದರೂ ಕರೆದು, ನಮ್ಮವು ಸಣ್ಣ ಪಕ್ಷಗಳು ಕರೆಯಬಾರದು ಎಂಬ ಭಾವನೆ ಇದ್ದರೆ ಸಂತೋಷ. ಅದರ ಬಗ್ಗೆ ನಾವೇನು ಚಿಂತೆಪಡುವುದಕ್ಕೆ ಹೋಗುವುದಿಲ್ಲ. ಆದರೆ, ನಿಮ್ಮನ್ನು ಏನಾದರೂ ಕರೆದರೆ ಎಂದು ಕೇಳಬೇಕಲ್ಲಾ, ನನಗೊಂದು ಮಾಹಿತಿಬೇಕಲ್ಲಾ, ಮಾತುಕತೆಗೆ ಒಬ್ಬರನ್ನೂ ಕರೆದಿಲ್ಲವೆಂಬುದು ಗೊತ್ತಾಯಿತು.

ಅಧ್ಯಕ್ಷರು:- ಡೆಕ್ಕನ್ ಹೆರಾಲ್ಡ್ ಪತ್ರಿಕೆಯನ್ನು ತಾವೇ ಓದಿದ್ದೀರಾ ಎಂದೆ.

ಶ್ರೀ ವಾಟಾಳ್ ನಾಗರಾಜ್:- ಹೌದು, ನಾನೇ ಓದಿದೆ. ಸುದ್ದಿ ತಿಳಿದುಕೊಳ್ಳುವುದಕ್ಕೂ ನನ್ನ ನೀತಿಗೂ ಬಹಳ ವ್ಯತ್ಯಾಸ ಇದೆ. ನಾನು ಸ್ಪಷ್ಟ ಕನ್ನಡ, ಅದರಲ್ಲೇನೂ ಎರಡು ಅಭಿಪ್ರಾಯ ಇಲ್ಲ. ಲೋಕಸಭೆಗೆ ಹೋಗಿದ್ದರೂ ಕನ್ನಡದಲ್ಲಿ ಮಾತನಾಡುತ್ತಿದ್ದೆ ಎಂದು ಹೇಳಿದ್ದೆ. ಪ್ರಶ್ನೆ ಬೇರೆ ತಾವು ಏನು ಹೇಳುತ್ತಿದ್ದೀರಿ ಎಂಬುದು ನನಗೆ ಅರ್ಥವಾಯಿತು.

ಅಧ್ಯಕ್ಷರು:- ನನಗೆ ನೀವು ಎಂದರೆ ಅಪಾರ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅಧ್ಯಕ್ಷರೇ, ಯದ್ವಾತದ್ವಾ ಅಪಾರ.

ಶ್ರೀ ವಾಟಾಳ್ ನಾಗರಾಜ್:- ಇತ್ತೀಚೆಗೆ "ಅಪಾರ" ಕಡಿಮೆಯಾಗಿದೆ. ಈಗ ಅಪಾರ ಇಲ್ಲ. ಈ ವಿಚಾರ ನಮಗೂ ಅವರಿಗೇ ಇರಲಿ. ಇದೆಲ್ಲಾ ಸದನಕ್ಕೆ ಬರತಕ್ಕಂತಾದ್ದು ಬೇಡ.

ಅಧ್ಯಕ್ಷರು:- ಇವತ್ತು ಸಂಧಾನ ಮಾಡುವವರು ಬಂದಿದ್ದಾರೆ ರಾಜಿ ಮಾಡಿಸೋಣ ಬನ್ನಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, ಇವರು ಫೋನ್ ಮಾಡಿ ಕೇಳಿದ ಮೇಲೆ ಹೇಳಿದೆ ನೀವು ಮೊದಲ ಪ್ಯಾರಾ ಓದಿದ್ದೀರಿ, ಕೊನೆಯ ಪ್ಯಾರಾಗ್ರಾಫ್ ಓದಲಿಲ್ಲವೆಂದು ಕಾಣುತ್ತದೆ, ಇನ್ನೊಂದು ಸಾರಿ ಓದಿ ನೋಡಿ ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್:- ಅದನ್ನೂ ಹೇಳಿದೆ. ಮತ್ತೆ ಖರ್ಗೆಯವರು ಹೇಳಿದರು. ನಮ್ಮ ಯಾರನ್ನೂ ಕರೆದಿಲ್ಲವೆಂದು ಹೇಳಿ, ಡೆಕ್ಕನ್ ಹೆರಾಲ್ಡ್ ವರದಿಗಾರರು ಕೇಳಿದಾಗ, ನಮ್ಮನ್ನು ಯಾರ-ನ್ನೂ ಕರೆದಿಲ್ಲ, ಮಾತನಾಡಿಲ್ಲ ಎಂಬ ಮಾತನ್ನು ಹೇಳಿದ್ದೇನೆಂದು ಹೇಳಿದರು. ನನಗೆ ಒಂದು ಪ್ರಶ್ನೆ ಬರುತ್ತದೆ. ಇದರಲ್ಲಿ ಶಾಸನಸಭೆಗೆ ಮುಚ್ಚಿಡತಕ್ಕ ವಿಚಾರ ಏನಿತ್ತು ಮತ್ತು ವಿರೋಧಪಕ್ಷಗಳ ಮುಖಂ-ಡರುಗಳನ್ನು ತಾವು ಕರೆದು ಮಾತನಾಡದಿರತಕ್ಕ ಪ್ರಶ್ನೆ ಏನಿತ್ತು? ಇದು ಪ್ರಾಮುಖ್ಯವಾದಂಥ ವಿಚಾರ; ಇರಲಿ ಸ್ವಾಮಿ 4 ಜನ ನಮ್ಮ ರಾಜ್ಯದಿಂದ ಹೊರಟರು ತಾವು ಸಂಧಾನದ ವಿಚಾರ ಏನೋ ಹೇಳಿದಿರಿ ಯಾರೋ ಬಂದಿದ್ದಾರೆಂದು.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಅಧ್ಯಕ್ಷರೇ, ಈ ಸದನವನ್ನು ಹಾಗೂ ವಿರೋಧಪಕ್ಷಗಳ ನಾಯಕರುಗಳನ್ನು ಕನ್‌ಸಲ್ಟ್ ಮಾಡಲಿಲ್ಲ, ಗಮನಕ್ಕೆ ತೆಗೆದುಕೊಳ್ಳಲಿಲ್ಲವೆಂದು ಮಾನ್ಯ ವಾಟಾಳ್ ನಾಗರಾಜರು ಮತ್ತು ಖರ್ಗೆಯವರು ಹಾಗೂ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಸಭಾಧ್ಯಕ್ಷರೇ, ತಮಗೇ ಗೊತ್ತಿರುವ ರೀತಿಯಲ್ಲಿ ಗುರುವಾರ ಸಹ ಈ ವಿಚಾರ ಚರ್ಚೆಗೆ ಬಂದಾಗ ಈ ಸದನದಲ್ಲಿ ನಾನೇ ಹೇಳಿದೆ. ತಮ್ಮೆಲ್ಲರ ಜೊತೆಯಲ್ಲಿ ಮಾತನಾಡತಕ್ಕಂತಾದ್ದಕ್ಕೆ ನಾವು ತಯಾರಿದ್ದೇವೆ ಎಂಬುದನ್ನು ಈ ಸದನಕ್ಕೆ ಸ್ಪಷ್ಟಮಾಡಿದೆ. ಶುಕ್ರವಾರ ಬಂದು, ಹೌಸ್‌ನಲ್ಲಿ ತಮಿಳುನಾಡು ಮುಖ್ಯ-ಮಂತ್ರಿಗಳು ಟ್ರಿಬ್ಯುನಲ್ ವ್ಯಾಪ್ತಿಯೊಳಗೆ ಮಾತನಾಡುತ್ತೇವೆ ಎಂದು ಹೇಳುತ್ತಿದ್ದಾರೆ, ಇದಕ್ಕೆ ನಿಮ್ಮ ಸ್ಟ್ಯಾಂಡ್ ಏನು ಎಂದು ವಾಟಾಳ್ ನಾಗರಾಜರೇ ಪ್ರಾರಂಭ ಮಾಡಿದರು. ನಂತರ ಮಲ್ಲಿಕಾರ್ಜುನ ಖರ್ಗೆಯವರು ಪ್ರಾರಂಭ ಮಾಡಿದರು, ನಂತರ ಯಡಿಯೂರಪ್ಪನವರು ಪ್ರಾರಂಭ ಮಾಡಿದರು. ನಾವು ಹೇಳಿದೆವು, ನಾವು ಹೋಗುವುದಕ್ಕೆ ಮುಂಚೆ ನಿಮ್ಮ ಜೊತೆಯಲ್ಲಿ ಮಾತನಾಡುತ್ತೇವೆ, ಹೌಸ್-ನಲ್ಲಿ ನಮ್ಮ ಸ್ಟ್ಯಾಂಡ್ ಹೇಳತಕ್ಕಂತಾದ್ದಕ್ಕೆ ನಮ್ಮ ಸ್ಟ್ಯಾಂಡ್ ಓಪನ್ ಇದೆ, ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ, ಎಂದು ಹೇಳಿದರೆ, ಇವರೇ ಅದನ್ನು ವಿರೋಧ ಮಾಡಿ, ಪ್ರತಿಭಟನೆ ಮಾಡಿ, ಸಭಾತ್ಯಾಗ ಮಾಡಿ ನಮ್ಮನ್ನು ಕನ್‌ಸಲ್ಟ್ ಮಾಡಲಿಲ್ಲವೆಂದು ಮೂರು ಜನರೂ ವಾಕ್‌ಔಟ್ ಮಾಡಿ, ಇವತ್ತು ಬಂದು ನಮ್ಮನ್ನು ಕನ್‌ಸಲ್ಟ್ ಮಾಡಲಿಲ್ಲವೆಂದು ಕೇಳಿದರೆ, ಯಾರ್ಥದು ದ್ವಂದ್ವ ನೀತಿ ಎಂದು ನಾನು ವಾಟಾಳ್ ನಾಗರಾಜರನ್ನು ಕೇಳುತ್ತೇನೆ.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ:- ಅವರೇ ಇಷ್ಯೂ ರೈಸ್ ಮಾಡಿ, ಇಲ್ಲೆ ಪಾಲಿಟಿಕ್ಸ್ ಮಾಡಿ ಇಲ್ಲಿಯೇ ಬಂದು ಸಭಾತ್ಯಾಗ ಮಾಡಿ, ಇಲ್ಲೇ ಒಂದು ರಾಜಾಕಾರಣ ಮಾಡಿ, ಈಗ ಕನ್‌ಸಲ್ಟ್ ಮಾಡಲಿಲ್ಲ-ವೆಂದು ಹೇಳಿದರೆ, ಯಾವರೀತಿ ಕನ್‌ಸಲ್ಟ್ ಮಾಡುತ್ತಾರೆ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಹಾಗಾದರೆ, ನಾವು ಕೆಲವು ಪ್ರಮುಖವಾದ ವಿಷಯಗಳ ಮೇಲೆ ಸಭಾತ್ಯಾಗ ಮಾಡಿದ ಮೇಲೆ, ಪ್ರತಿಪಕ್ಷಗಳವರನ್ನು ಮಾತುಕತೆಗೆ ಕರೆಯುವುದನ್ನು ನಿಲ್ಲಿಸಿ-ದ್ದೀರೋ?

ಶ್ರೀ ಕೆ.ಎಸ್. ನಾಗೇಗೌಡ:- ನೀವು ಸಭಾತ್ಯಾಗ ಮಾಡಿದಿರಿ? ಸರ್ಕಾರದ ಜೊತೆಯಲ್ಲಿ ನೀವು ಸಹಕಾರ ಮಾಡುವುದಕ್ಕೆ ನಿಮಗೆ ಇಷ್ಟವಿಲ್ಲವೆಂದು ಸದನದಲ್ಲಿ ಸ್ಪಷ್ಟಮಾಡಿ ಹೊರಗಡೆ ಹೋದ ಮೇಲೆ, ಕನ್‌ಸಲ್ಟ್ ಮಾಡುವಂಥ ಪ್ರಶ್ನೆ ಬರುವುದೇ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅವತ್ತು ವಾಟಾಳ್ ನಾಗರಾಜ್, ಖರ್ಗೆಯವರು ಮತ್ತು ನಾವು ಸ್ಪೆಸಿಫಿಕ್ ಇಷ್ಯೂ ತೆಗೆದುಕೊಂಡೆವು. ಅದೇನೆಂದರೆ, ತಮಿಳುನಾಡಿನ ಮುಖ್ಯಮಂತ್ರಿ ಜವಾ-ಬ್ದಾರಿಯಿಂದ ಟ್ರಿಬ್ಯುನಲ್ ಇಂಟೆರಿಮ್ ಆರ್ಡರ್ ಏನಿದೆ, ಆ ಚೌಕಟ್ಟಿನಲ್ಲಿಯೇ ಮಾತನಾಡುತ್ತೇವೆ ಎನ್ನುವುದನ್ನು ಸದನದ ಒಳಗಡೆ, ಹೊರಗಡೆ ಸ್ಪಷ್ಟಮಾಡಿದ್ದಾರೆ. ನೀವು ಹೋಗುವುದಕ್ಕೆ ಮುಂಚೆ ಯಾವ ನಿಲುವನ್ನು ತೆಗೆದುಕೊಳ್ಳುತ್ತೀರಿ? ಈ ಟ್ರಿಬ್ಯುನಲ್ ಇಂಟೆರಿಂ ಆರ್ಡರಿನ ಅನ್ವಯ ನಾವು ಮಾತುಕತೆಗೆ ಹೋಗುವುದಿಲ್ಲ, ರಾಷ್ಟ್ರೀಯ ಜಲನೀತಿಯ ಗೈಡ್‌ಲೈನ್ಸ್‌ನ್ನು ಫ್ರೇಮ್ ಮಾಡಬೇಕು, ಆ ಒಂದು ಬೇಸಿಸ್ ಮೇಲೆ ಮಾತನಾಡುತ್ತೀರೋ? ಇದನ್ನು ಸ್ಪಷ್ಟಮಾಡಬೇಕು, ನಿಮ್ಮ ನಿಲುವನ್ನು ಸ್ಪಷ್ಟ ಮಾಡಬೇಕೆಂದು ಹೇಳಿದಾಗ ನ್ಯಾಯವಾಗಿ ನಿಮ್ಮ ಸರ್ಕಾರದ ಜವಾಬ್ದಾರಿ ಇತ್ತು. ನಾವು ವಾಕ್‌ಔಟ್ ಮಾಡುವುದಿಲ್ಲ. ಈ ರಾಜ್ಯದ ಜನರ ಹಿತದೃಷ್ಟಿಯಿಂದ ನೀವು ಮಾತುಕತೆಗೆ ಹೋಗುವುದಕ್ಕೆ ಮುಂಚೆ, ಏನು ಮಾತನಾಡುತ್ತೀರಿ ಎಂಬುದನ್ನು ಇಲ್ಲಿ ಹೇಳಿಯೇ ಹೋಗಬೇಕೆಂದು ಪಟ್ಟುಹಿಡಿದು, ಉತ್ತರ ತೆಗೆದುಕೊಂಡು ಆಮೇಲೆ ಹೋಗಬೇಕೆಂದು ಹೇಳಬೇಕಾಗಿತ್ತು. ನೀವು ಇವತ್ತು ಈ ರಾಜ್ಯದ ಜವಾ-ಬ್ದಾರಿ ಹೊತ್ತಾಕ್ಷಣಕ್ಕೆ, ಆಡಳಿತ ಪಕ್ಷದಲ್ಲಿದ್ದೇವೆಂದು ಹೇಳಿ ಈ ರಾಜ್ಯದ ಬಗ್ಗೆ ಏನು ಬೇಕಾದರೂ ಮಾತುಕತೆ ಆಡುವುದಕ್ಕೆ ಬರುವುದಿಲ್ಲ. ಪ್ರತಿಪಕ್ಷಗಳು ಒಪ್ಪುವುದಕ್ಕೆ ಸಾಧ್ಯವೂ ಇಲ್ಲ. ಅದಕ್ಕೆ, ನೀವು ಸ್ಪಷ್ಟವಾಗಿ ಹೇಳಿ ಎಂದು ಹೇಳಿದೆವು, ನಂತರ ವಾಕ್‌ಔಟ್ ಮಾಡಿದೆವು. ಕಾರ್ಯಕಲಾಪ ನಡೆಯಲಿ ಎಂದು. ಅದಾದ ಮೇಲೆ, ನಿಮ್ಮನ್ನು ಎಚ್ಚರಿಸಿದ ಮೇಲೆ, ನಮ್ಮನ್ನು ಇನ್ನೂ ಹೆಚ್ಚು ವಿಶ್ವಾಸಕ್ಕೆ ತೆಗೆದು-ಕೊಂಡು, ಹೌಸ್‌ನೊಳಗಡೆ ಹೇಳುವುದಕ್ಕೆ ಬರುವುದಿಲ್ಲ, ಈ ಚೌಕಟ್ಟಿನಲ್ಲಿ ಹೋಗುತ್ತಿದ್ದೇವೆಂದು ಹೇಳಬೇಕಾಗಿತ್ತು. ನ್ಯಾಯವಾಗಿ ಟ್ರಿಬ್ಯುನಲ್ ಮುಂದೆಯೇ ಸುಪ್ರೀಂ ಕೋರ್ಟ್ ಮುಂದೆಯೇ ನೀವು ಹೇಳಬೇಕಾಗಿತ್ತು. ಇವತ್ತು ಯಾವುದೇ ಕಾರಣಕ್ಕೆ ನಾವು ಮಾತನಾಡುವಂಥ ಪರಿಸ್ಥಿತಿಯಲ್ಲಿ ಇಲ್ಲ, ರಾಷ್ಟ್ರೀಯ ಜಲನೀತಿಯ ಬಗ್ಗೆ ಗೈಡ್‌ಲೈನ್ಸ್ ಫ್ರೇಮ್ ಮಾಡುತ್ತೇವೆಂದು ಹಿಂದಿನ ಪ್ರಧಾನಿಯವರು ಹೇಳಿದ್ದರು. ಅದಕ್ಕೆ ನಾವು ಒತ್ತಾಯ ಮಾಡುತ್ತೇವೆ. ಟ್ರಿಬ್ಯುನಲ್ ರದ್ದು ಮಾಡಬೇಕೆಂದು ನಮ್ಮ ಸದನದ ಸರ್ವಾನುಮತದ ನಿರ್ಣಯ ಇದೆ ಎಂಬುದನ್ನು ನೀವು ಸುಪ್ರೀಂ ಕೋರ್ಟ್ ಮುಂದೆ ಹೇಳಬೇಕಾಗಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಒಂದು ಮಾತನ್ನು ಮಾನ್ಯ ನಾಗೇಗೌಡರು ತಿಳಿದುಕೊಳ್ಳ-ಬೇಕಾಗುತ್ತದೆ. ಅವರಿಗೆ ಗೊತ್ತಿದೆ, ಆದರೂ ಹೀಗೇಕೆ ಹೇಳುತ್ತಾರೋ ಗೊತ್ತಿಲ್ಲ. ಈ ಸದನದಲ್ಲಿ ಆಗಿರತಕ್ಕ ತೀರ್ಮಾನಗಳೇ ಬೇರೆ, ಸದನದ ಹೊರಗಡೆ ಎಲ್ಲಾ ಪಕ್ಷಗಳನ್ನೂ ಕರೆದು, ಕನ್‌ಸಲ್ಟ್ ಮಾಡಿರತಕ್ಕಂತಾದ್ದೇ ಬೇರೆ ಅನೇಕ ಸಾರಿ ಸರ್ವಪಕ್ಷಗಳ ನಿರ್ಣಯವನ್ನು ಸದನದಲ್ಲಿ ಒಂದೊಂದು ಸಾರಿ ಪ್ರಸ್ತಾಪ ಮಾಡುವುದಿಲ್ಲ. ಸದನದಲ್ಲಿ ಸರ್ವಾನುಮತದಿಂತ ಪ್ರಸ್ತಾಪ ಮಾಡಿದಂಥಾದ್ದು, ಎಲ್ಲಾ ಪಕ್ಷಗಳ ನಿರ್ಣಯ ಎಂದು ನಾವು ಹೊರಗಡೆ ಹೇಳಿಕೊಳ್ಳುವುದಿಲ್ಲ. ಇದು ನಿರ್ಣಯವೇ ಬೇರೆ ಇರುತ್ತದೆ, ಸರ್ವಪಕ್ಷಗಳ ನಿರ್ಣಯ ಕೂಡ ಬೇರೆ ಇರುತ್ತದೆ. ಅದಕ್ಕಾಗಿ ದಯವಿಟ್ಟು ಇಲ್ಲಿ ವಾಕ್-ಔಟ್ ಮಾಡಿದರೆಂದು ಹೇಳಿ, ಅದಕ್ಕಾಗಿ ನಾವು ಸರ್ವಪಕ್ಷಗಳ ಸದಸ್ಯರ ಸಭೆ ಕರೆಯಲಿಲ್ಲ, ಕನ್-ಸಲ್ಟ್ ಮಾಡಲಿಲ್ಲವೆಂದು ಹೇಳತಕ್ಕಂತಾದ್ದು, ಇದು ಎಷ್ಟರಮಟ್ಟಿಗೆ ಸಮಂಜಸ ಎನ್ನತಕ್ಕಂತಾದ್ದನ್ನು ತಾವೇ ತೀರ್ಮಾನ ಮಾಡಿ.

ಶ್ರೀ ವಾಟಾಳ್ ನಾಗರಾಜ್:- ನಾನು ಮಾನ್ಯ ನಾಗೇಗೌಡರ ವಾದವನ್ನು ಒಪ್ಪುವುದಿಲ್ಲ. ಏಕೆಂದರೆ, ಸದನದಲ್ಲಿ ನಾವು ಸಭಾತ್ಯಾಗ ಮಾಡುವುದು, ಪ್ರತಿಭಟನೆ ಮಾಡುವುದು, ಧರಣಿ ಮಾಡು-ವುದು ಪ್ರಜಾಪ್ರಭುತ್ವದ ಅಂಗವಾಗಿ ಮಾಡುತ್ತೇವೆ. ನೀವು ಸಭಾತ್ಯಾಗ ಮಾಡಿದಿರಿ, ಆದರಿಂದ ನಿಮ್ಮನ್ನು ಕರೆಯುವುದೇ ಇಲ್ಲವೆಂದು ತೀರ್ಮಾನ ಮಾಡುವುದಾದರೆ, ಹಾಗಾದರೆ ಮುಂದೆ ಈ ವಿಚಾರದಲ್ಲಿ ನೀವು ಯಾವುದಕ್ಕೂ ಕರೆಯುವುದಿಲ್ಲ ತಾನೇ? ಆ ತೀರ್ಮಾನಕ್ಕೆ ಬಂದಿದ್ದೀರೋ.

ಶ್ರೀ ಕೆ.ಎನ್. ನಾಗೇಗೌಡ:- ಒಳಗೆ ಮಾತ್ರ ರಾಜಕೀಯ ಮಾಡುತ್ತೇವೆ, ಹೊರಗಡೆ ಮಾತ್ರ ರಾಜಕೀಯ ಮಾಡುವುದಿಲ್ಲವೆಂದು ಹೇಳುತ್ತೀರೋ?

ಶ್ರೀ ವಾಟಾಳ್ ನಾಗರಾಜ್:- ನಾವ್ಯಾರೂ ನಿಮ್ಮ ತರಹ ಗೋಪ್ಯವಾಗಿ, ಕದ್ದು ರಾಜಕಾರಣ ಮಾಡುವುದಕ್ಕೆ ಹೋಗಿಲ್ಲ. ಕದ್ದು, ಎದ್ದು ರಾಜಕಾರಣ ಮಾಡುವುದಕ್ಕೆ ಹೋಗಿಲ್ಲ ನಾಗೇಗೌಡರೇ, ತಾವು ಏಕೆ ಈ ರೀತಿ ಹೇಳುತ್ತಿದ್ದೀರೆಂದು ನನಗೆ ಅರ್ಥವಾಗಲಿಲ್ಲ ನೀವು ವಿರೋಧಪಕ್ಷದಲ್ಲಿದ್ದವರು ನೀವೂ ಹೋರಾಟ ಮಾಡಿದ್ದೀರಿ.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ:- ನಾವು ಇಲ್ಲಿ ಅವರನ್ನು ಆಹ್ವಾನ ಮಾಡಿದ್ದೇವೆ. ತಾಳ್ಮೆಯಿಂದ ಹೇಳುವುದನ್ನು ಬಿಟ್ಟು ವಾಕ್‌ಔಟ್ ಮಾಡಿ, ಇವತ್ತು ನಿಮ್ಮ ಸ್ಟ್ಯಾಂಡ್ ಏನು ಎಂದು ಕೇಳಿದರೆ, ಹೇಗೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಈ ಸಭೆಯಲ್ಲಿಯೇ ವಿರೋಧಪಕ್ಷಗಳ ನಮ್ಮ ನಿಲುವು ಏನು ಎಂದು ಹೇಳಿದ್ದೇವೆ, ಹೇಳಿಲ್ಲವಾದರೆ ಇದೇನು ಇದು, ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ವಾಟಾಳ್ ನಾಗರಾಜ್ ಅವರೇ, ತಮಗೂ ಕೂಡ ಗೊತ್ತಿದೆ, ತಾವು ಈಗ ಏನು ಪ್ರಸ್ತಾಪ ಮಾಡಿದಿರಿ, ಈ ಸದನದ ಸದಸ್ಯರು ಇಲ್ಲದೇ ಇರತಕ್ಕಂಥ ಪಾರ್ಟಿಗಳು ಏನು ಇವೆ ಸಿ.ಪಿ.ಎಂ. ಇರಬಹುದು ಇಲ್ಲಾ ಸಿ.ಪಿ.ಐ. ಇರಬಹುದು ಬೇರೆ ಪಾರ್ಟಿ-ಯವರು ಅವರು ಎಂ.ಎಲ್.ಎ. ಇರದೇ ಇದ್ದರೂ ಕೂಡ ಅನೇಕ ಸಾರಿ ಸರ್ವಪಕ್ಷಗಳ ಸಭೆ ಅಂದಾಗ ಅವರಿಗೂ ಕೂಡ ನೀವು ಕರೆದಿದ್ದುಂಟು. ಈಗ ಇವರು ಯಾವ ರೀತಿಯಾಗಿ ಆರ್‌ಗ್ಯೂ-ಮೆಂಟ್ ಮಾಡುತ್ತಾರೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಇಂತಹ ವಿಶೇಷವಾದ ಸಂದರ್ಭಗಳಲ್ಲಿ ಕರ್ನಾಟಕ ರಾಜ್ಯದಿಂದ ಆಯ್ಕೆಯಾಗಿ ಹೋಗಿರುವಂತಹ ಲೋಕಸಭಾ ಸದಸ್ಯರನ್ನು ತಮ್ಮ ವಿಶ್ವಾಸ-ಕ್ಕೆ ತೆಗೆದುಕೊಂಡು ಅವರ ಜೊತೆಯಲ್ಲಿ ಮಾತನಾಡಿ, ಇಂತಹ ಗಂಭೀರವಾದ ವಿಷಯ ಇದ್ದಾಗ ತಾವು ಏನು ಕಮಿಟ್‌ಮೆಂಟ್ ಮಾಡಿಕೊಂಡು ಬಂದರೂ ಸಹ ಅದಕ್ಕೆ ಇಡೀ ರಾಜ್ಯ ಸಿಕ್ಕಿಹಾಕಿ-ಕೊಂಡು ಒದ್ದಾಡಬೇಕಾಗುತ್ತದೆ. ಲೋಕಸಭಾ ಸದಸ್ಯರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಇದೇನು ಹುಡುಗಾಟಿಕೆಯೇ?

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಇದು ಒಂದಲ್ಲ ಹತ್ತು ಬಾರಿ ಈ ಸಂದರ್ಭ-ದಲ್ಲಿ ಸಭೆಯನ್ನು ಕರೆಯಬೇಕಾಗಿತ್ತು. ನನಗೊಂದು ಆಶ್ಚರ್ಯವಾಗಿಹೋಯಿತು. ಶ್ರೀ ಹೆಚ್.ಎಂ. ಚನ್ನಬಸಪ್ಪನವರ ಕಾಲ ನೋಡಿ ಆಯಿತು, ಶ್ರೀಮಾನ್ ನಂಜೇಗೌಡರ ಕಾಲ ನೋಡಿ ಆಯಿತು, ಆದರೆ ಯಾವ ಕಾಲದಲ್ಲಿಯೂ ಆಗದೇ ಇರತಕ್ಕಂಥಾದ್ದನ್ನು ಸುಮಾರು ಶತಮಾನಗಳ ಕಾಲದಿಂದ ದೊಡ್ಡ ಹೋರಾಟ ನಡೆದಿರತಕ್ಕಂಥಾದ್ದನ್ನು 30 ನಿಮಿಷಗಳಲ್ಲಿ ಬಗೆಹರಿಸಿದ್ದೇವೆ ಅಂದರೆ ಇದೇನು ಮಾಯಾಜಾಲವೇ? ಇವರೇನು ಗೋಗಿಯಾಪಾಷಾನೇ? ಬೆಂಗಳೂರಿಗೆ ಒಬ್ಬ ಮಾಯಾಜಾಲ ಬಂದಿದ್ದ, ಅವನ ಹೆಸರು ಗೋಗಿಯಾಪಾಷಾ ಎಂದು ಅವನು ಮಾತು ಎತ್ತಿದರೆ ಜೇಬಿನಿಂದ ಜಿಲೇಬಿ ತೆಗೆದುಕೊಡುತ್ತಿದ್ದ, ಜೇಬಿನಿಂದ ಲಾಡು ತೆಗೆದುಕೊಡುತ್ತಿದ್ದ, ಇದೇನು ಆ ರೀತಿ ಮಾಯಾ ಮಂತ್ರವೇ ಇದು? ನೀವು ಮಾಡಿರುವುದು ಏನು? ಯಾರೂ ಮಾಡದೇ ಇರತಕ್ಕಂಥಾದ್ದು, ಇತಿಹಾಸದಲ್ಲಿ ನಡೆ-ಯದೇ ಇರತಕ್ಕಂಥಾದ್ದು. ಮಾನ್ಯ ವೀರೇಂದ್ರ ಪಾಟೀಲರು ಮಾಡುವುದಕ್ಕೆ ಆಗಲಿಲ್ಲ, ಮಾನ್ಯ ಬಂಗಾರಪ್ಪನವರು ಮಾಡಲಿಲ್ಲ, ಮಾನ್ಯ ವೀರಪ್ಪ ಮೊಯಿಲಿಯವರು ಮಾಡಲಿಲ್ಲ, ಮಾನ್ಯ ದೇವೇ-ಗೌಡರು ಮಾಡಲಿಲ್ಲ. ನಿಮ್ಮ ಸರ್ಕಾರದ ನಾಲ್ಕು ಜನ, ತಾವು, ಉಪ ಮುಖ್ಯಮಂತ್ರಿಗಳು, ನೀರಾವರಿ ಸಚಿವರು ಮತ್ತು ತಮ್ಮ ಸಂಸದೀಯ ಸಚಿವರು, ತಾವು 4 ಜನ ಹೋಗಿ ಒಂದೇ ನಿಮಿಷದಲ್ಲಿ ಎಲ್ಲ-ವನ್ನೂ ತಾವು ಮುಗಿಸಿರುವುದು ನೋಡಿದರೆ ನನಗನಿಸುತ್ತದೆ ಇದುವರೆಗೂ ನಮ್ಮ ಕರ್ನಾಟಕ ರಾಜ್ಯ-ದಲ್ಲಿ ನಿಮ್ಮ ನಾಲ್ಕು ಜನರ ತರಹ ಮತ್ತು ನಿಮ್ಮ ತೀರ್ಮಾನ, ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಇದುವರೆಗೂ ಯಾರೂ ಮಾಡಲಿಲ್ಲ. ಇದನ್ನು ಬಹಳ ಮೆಚ್ಚತಕ್ಕಂಥಾದ್ದೇ. ಮಾನ್ಯ ಅಧ್ಯಕ್ಷರೇ, "ಶೀತಲ ಸಮರಕ್ಕೆ ಕೊನೆ"ಯಂತೆ ಎಲ್ಲಿ? ಇವರು ಮದ್ರಾಸ್‌ನಲ್ಲಿ ಹೋಗಿ ಮಾತನಾಡತಕ್ಕಂಥಾದ್ದು,

ಕೊಟ್ಟು ಮತ್ತು ತೆಗೆದುಕೊಳ್ಳುವುದು, ಏನು ತೆಗೆದುಕೊಳ್ಳುವುದು ನೀವು? ಕೊಡುವುದೇ. ತೆಗೆದು-ಕೊಳ್ಳುವುದು ಏನು ಹೇಳಿ? ಏನು ತೆಗೆದುಕೊಂಡಿದ್ದೀರಿ ನೀವು? ಕೊಟ್ಟು ತೆಗೆದುಕೊಳ್ಳುವುದು! ಕೊಡುವುದು ಅಷ್ಟೇ ಉಳಿದಿರುವುದು ಈಗ. ಆದರ ಜೊತೆಗೆ ತಾವು ಕಾವೇರಿ ಪೂಜೆಗೆ ಬೇರೆ ಕರೆದಿದ್ದೀರಿ. ಕರುಣಾನಿಧಿಯವರಿಗೆ ಬಾಗಿನ ಕೊಡಿ. ನಮ್ಮ ಗೌರಿ ಹಬ್ಬದಲ್ಲಿ ಬಾಗಿನ ಕೊಡುತ್ತಾರೆ, ಮುತ್ತೈದೆಯರು ಬಂದರೆ. ನಮ್ಮ ಕರ್ನಾಟಕ ರಾಜ್ಯದ ** ನೀವು ಅವರಿಗೆ ಬಾಗಿನ ಕೊಡಿ, ನಮ್ಮ ರೈತರನ್ನು ** ನೀವು ಅವರಿಗೆ ಬಾಗಿನ ಕೊಡಿ, ಕರೆಯುತ್ತಿದ್ದೀರಲ್ಲಾ ಬಾಗಿನ ಕೊಡುವುದಕ್ಕೆ, ಮೆಟ್ಟೂ-ರಿಗೆ ಬಾಗಿನ ತೆಗೆದುಕೊಳ್ಳುವುದಕ್ಕೆ ನೀವು ಅಲ್ಲಿಗೆ ಹೋಗುತ್ತೀರಿ ಚೆನ್ನಾಗಿದೆ ನಿಮ್ಮ ನೆಂಟಸ್ಥನಗಳು.

ಅಧ್ಯಕ್ಷರು:- ವಿಧವೆಯರು ಅಂದರೆ ಇವರು ಹೆಣ್ಣು ಮಕ್ಕಳು ಅಬ್ಜೆಕ್ಷನ್ ತೆಗೆದುಕೊಳ್ಳುತ್ತಾರೆ. ನಿಮಗೆಲ್ಲಾ ಒಪ್ಪಿಗೆಯೇ? ಆ ಪದ ಬಳಕೆಯ ಬಗ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಏಕೆ ತಾವು ಮಲಗಿದ್ದವರಿಗೆ ಪದೇ ಪದೇ ಎಬ್ಬಿಸುತ್ತೀರಿ? ಯಾರು ಮಲಗಿರುತ್ತಾರೋ ಅವರಿಗೆ ನೀವು ಪದೇ ಪದೇ ಎಬ್ಬಿಸುತ್ತೀರಿ? ಇದು ಎರಡನೇ ಸಲ ಆಯಿತು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಲೀಲಾದೇವಿ ಆರ್. ಪ್ರಸಾದ್ ಅವರು ಮೊದಲು ನೀವೆಲ್ಲಾ ಚಿತ್ರಾನ್ನ ಎಂದು ಹೇಳಿದರು. ಈಗ ನನಗೆ ಏನು ಹೇಳು-ತ್ತಾರೋ ದೇವರೇ ಕಾಪಾಡಬೇಕು ಅದಕ್ಕೋಸ್ಕರ, ದಯಮಾಡಿ ತಾವು ಅವರನ್ನು ಏಕೆ ಏಳುಸುತ್ತೀರಿ? ಚಿತ್ರಾನ್ನ ಅವರು ತಿಂದೇ ಇಲ್ಲ ಎಂದು ಕಾಣುತ್ತದೆ. ಚಿತ್ರಾನ್ನ ಬಹಳ ರುಚಿ. ಅವರಿಗೆ ಗೊತ್ತಿಲ್ಲ. ಚಿತ್ರಾನ್ನ ಮಾಡಿದರೆ ಬೇರೆ ಎಲ್ಲವನ್ನೂ ಬದಿಗೊತ್ತಬೇಕು . . .

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್:- ಮಾನ್ಯ ಅಧ್ಯಕ್ಷರೇ, ಪದೇ ಪದೇ ಮಹಿಳೆಯರ ವಿಷಯ ಬಂದಾಗ ಬಹಳ ಲಘುವಾಗಿ ಮಾತನಾಡುತ್ತಾರೆ. ** ಎಂದು ಹೇಳುತ್ತಾರಲ್ಲಾ ಇದು ಇವರ ಯಾವ ಸಂಸ್ಕೃತಿ? ಇವರು ಏಕೆ ಈ ರೀತಿ ಮಾತನಾಡುತ್ತಾರೆ. ಸನ್ಮಾನ್ಯ ಅಧ್ಯಕ್ಷರೇ, ಆ ಪದವನ್ನು ಕಡತದಿಂದ ತೆಗೆದು ಹಾಕಬೇಕು. ಪದೇ ಪದೇ ಅದನ್ನು ಹೇಳಬಾರದು.

ಅಧ್ಯಕ್ಷರು:- ಅವರು ಹಾಗೆ ಹೇಳಲಿಲ್ಲ. ಅವರು ಹೇಳಿದ್ದು ನಮ್ಮ ಕರ್ನಾಟಕ ರಾಜ್ಯದ ರೈತರನ್ನು ವಿಧವೆಯರನ್ನು ಮಾಡಿ, ಅವರಿಗೆ ಮುತ್ತೈದೆಯರಿಗೆ ಕೊಟ್ಟಂತೆ ಬಾಗಿನಾ ಕೊಡಿ ಎಂದು ಹೇಳಿದರು. ಅವರೇನೂ ಬೇರೆ ಹೇಳಲಿಲ್ಲ. ನಾನು ಹೇಳುವುದು ವಿಧವೆಯರಿಗೂ ಮುತ್ತೈದೆಯರಿಗೂ ಏನಾದರೂ ವ್ಯತ್ಯಾಸ ಇದೆಯೇ; ಆ ವಿಚಾರದಲ್ಲಿ ನಿಮ್ಮದು ಏನಾದರೂ ತಕರಾರು ಇದ್ದರೆ ಹೇಳಿ, ಎಂದು ನಾನು ಹೇಳಿದೆ ಅಷ್ಟೆ. ನಿಮ್ಮದು ಏನೂ ತಕರಾರು ಇಲ್ಲ ಅಂದರೆ ನಮ್ಮದೂ ಏನೂ ಇಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್:- ವಿಧವೆಯರು ಎನ್ನುವ ಪದಕ್ಕೆ ಏನು ಅರ್ಥ ಇದೆ ಎನ್ನುದನ್ನು ಅವರು ಇನ್ನೂ ಅರ್ಥ ಮಾಡಿಕೊಂಡಿಲ್ಲ;

(** ಸಭಾಧ್ಯಕ್ಷರ ಅನುಮತಿ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ವಿಧವೆಯರ ಬಗ್ಗೆ ಇನ್ನೊಂದು ದಿವಸ ಚರ್ಚೆ ಮಾಡೋಣ. ದಯವಿಟ್ಟು ಅದನ್ನು ಮುಂದಕ್ಕೆ ಹಾಕಿಕೊಳ್ಳೋಣ. ಅಮ್ಮಾ, ವಿಧವೆಯರ ಬಗ್ಗೆ ಆಮೇಲೆ ಮಾತನಾಡೋಣ. ತಾಯಿ ಲೀಲಾದೇವಿ ಆರ್. ಪ್ರಸಾದ್ ಅವರೇ, ವಿಧವೆಯರ ಬಗ್ಗೆ ಆಮೇಲೆ ಮಾತನಾಡೋಣ.

ಶ್ರೀ ಎ. ರುಕ್ಮಯ್ಯ ಪೂಜಾರಿ:- ಅವರು ಹೇಳಿದ್ದುದು ನಿಮಗೆ ಅರ್ಥವಾಗಲಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್:- ಆ ಪದವನ್ನು ಅವರು ವಾಪಸ್ ತೆಗೆದುಕೊಳ್ಳ-ಬೇಕು.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ, ತಾವು ಸುಮ್ಮನೇ ಇರದೇ ಎಬ್ಬಿಸಿ ನನ್ನ ಪ್ರಾಣ ತೆಗೆಯುತ್ತಿದ್ದೀರಿ. ಇತ್ತೀಚಿಗೆ ನಮ್ಮ ಮೇಲೆ ನಿಮಗೆ ಅಭಿಮಾನ ಹೋಗಿ ಈ ತರಹ ತೊಂದರೆಗೆ ಸಿಕ್ಕಿಸುತ್ತಿದ್ದೀರಿ.

ಶ್ರೀಮತಿ ಬಿ.ಟಿ. ಲಲಿತನಾಯಕ್:- ಮಾನ್ಯ ಅಧ್ಯಕ್ಷರೇ, ಈ ಮಾತನ್ನು ಬಹಳ ನೋವಿನಿಂದ ಏಕೆ ಹೇಳುತ್ತಿದ್ದೇವೆ ಅಂದರೆ ವಿಧವೆ ಎನ್ನುವುದು ಆಮೇಲೆ ಹೊಲೆಯಾ ಎನ್ನುವುದು ಮಾದಿಗ ಎನ್ನು-ವುದು ಇಂತದ್ದೆಲ್ಲಾ ತಮ್ಮ ಸ್ವಾರ್ಥಕ್ಕೆ ಮತ್ತು ತಮ್ಮ ಚಟಕ್ಕೆ ಬಳಸುತ್ತಾರಲ್ಲಾ ಅದನ್ನು ತಾವು ಬಿಡಿ ಎಂದು ನಾನು ಹೇಳುವುದು. ಇವೆಲ್ಲಾ ಕೂಡ ಒಂದು ಜಾತಿ ಸೂಚಕ ಮತ್ತು ಒಂದು ವರ್ಗ ಸೂಚಕ-ವಾಗಿ ಈ ಶಬ್ದಗಳು ಬರುತ್ತವೆಯಲ್ಲಾ. ಅದರ ಕಷ್ಟವೇ ಗೊತ್ತಿರುವುದಿಲ್ಲ. ಆದರೆ ನೀವು ವಿಧವೆ ಎಂದು ಏಕೆ ಬಳಸಿದಿರಿ.

ಶ್ರೀ ಎ. ರುಕ್ಮಯ ಪೂಜಾರಿ:- ರೈತರನ್ನು ಆ ರೀತಿ ಮಾಡುತ್ತಿದ್ದೀರಲ್ಲಾ.

ಅಧ್ಯಕ್ಷರು:- ಆಲ್‌ರೈಟ್. ನಾನು ಅದನ್ನು ತರಿಸಿ ನೋಡುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ:- ಮಾನ್ಯ ಅಧ್ಯಕ್ಷರೇ, ವಾಟಾಳ್‌ರವರು ಗೌರವವಾಗಿ ಸೋಲು ಒಪ್ಪಿಕೊಂಡು ತಮ್ಮ ಭಾಷಣವನ್ನು ಮುಂದುವರಿಸಲಿ.

ಶ್ರೀ ವಾಟಾಳ್ ನಾಗರಾಜ್:- ಏನಾಗಿದೆ ಅಂತ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್:- ಅವರು ಕ್ಷಮಾಪಣೆ ಕೇಳಬೇಕು.

ಶ್ರೀ ವಾಟಾಳ್ ನಾಗರಾಜ್:- ಏನಾಗಿದೆ ಅಂತ. ಇದು ನಮ್ಮ ಸಮಾಜದ ವ್ಯವಸ್ಥೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್:- ರೈತರನ್ನು ** ಮಾಡಲು ಹೊರಟಿದ್ದು ಇದು ಸಮಾಜದ ವ್ಯವಸ್ಥೆಯೇ? ಅದನ್ನು ನಾವು ಹೇಗೆ ಒಪ್ಪಿಕೊಳ್ಳಲು ಸಾಧ್ಯವಾಗುತ್ತದೆ? ದಯವಿಟ್ಟು ಅವರು ಆ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕು. ಇಲ್ಲಾ, ಇಲ್ಲಾ ಸ್ವಾಮಿ ಇದನ್ನು ನಾವು ಒಪ್ಪು-ವುದಕ್ಕೆ ಆಗುವುದಿಲ್ಲ.

(** ಸಭಾಧ್ಯಕ್ಷರ ಅನುಮತಿ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.)

ಶ್ರೀ ವಾಟಾಳ್ ನಾಗರಾಜ್:- ವಿಧವೆಯರು ಎನ್ನುವ ಪದ ವಾಪಸ್ಸು ತೆಗೆದುಕೊಳ್ಳಲು ರಾಜ್ಯ-ಸಭಾ ಸದಸ್ಯರು ಎಂದು ತಿಳಿದುಕೊಂಡುಬಿಟ್ಟರಾ ನೀವು? ಯಾವಾಗ ಅಂದರೆ ಆಗ ವಾಪಸ್ಸು ತೆಗೆದು-ಕೊಳ್ಳುವುದಕ್ಕೆ ಯಾವಾಗ ಅಂದರೆ ಮುಂದಕ್ಕೆ ತೆಗೆದುಕೊಳ್ಳುವುದಕ್ಕೆ ಅದು ಆಗುವುದಿಲ್ಲ. ಅದು ಸಾಧ್ಯವಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್:- ರೈತರನ್ನು ವಿಧವೆ ಎಂದಿದ್ದಕ್ಕೆ ತಾವು ಕ್ಷಮಾಪಣೆ ಕೇಳಬೇಕು. ಇಲ್ಲದಿದ್ದರೆ ಸ್ವಾಮಿ ಅವರು ಮುಂದಕ್ಕೆ ಮಾತನಾಡಲು ಅವಕಾಶ ಕೊಡಬಾರದು.

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಮಾನ್ಯ ನಂಜೇಗೌಡರು ಬಹಳ ಒಳ್ಳೆಯ ಮಾತ-ನ್ನು ಹೇಳಿದರು. ಹೆಣ್ಣು ಮಕ್ಕಳಿಗೆ ತಾವು ಸೋಲಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್:- ದಯವಿಟ್ಟು ಅವರು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ:- ಮಾನ್ಯ ಅಧ್ಯಕ್ಷರೇ, ಮೊದಲ ಬಾರಿಗೆ ವಿಧಾನಸಭೆಯ ಚರಿತ್ರೆಯಲ್ಲಿ ಮಹಿಳಾ ಸದಸ್ಯರು ಬಂದು ಧರಣಿ ಕೂರುವಂತಹ ಪರಿಸ್ಥಿತಿಯನ್ನು ಮಾನ್ಯ ವಾಟಾಳ್-ರವರು ತಂದು ಇಡುವುದು ಬೇಡ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ನನ್ನ ಪರವಾಗಿ ಈಗ ಮಾನ್ಯ ಪ್ರಮಿಳಾ-ರವರು ವಕಾಲತ್ತು ವಹಿಸುವುದಕ್ಕಾಗಿ ನಿಲ್ಲುತ್ತಿದ್ದಾರೆ.

ಶ್ರೀಮತಿ ಪ್ರಮಿಳಾ ನೇಸರ್ಗಿ:- ಮಾನ್ಯ ಅಧ್ಯಕ್ಷರೇ, ಮಹಿಳೆಯರ ಸುದ್ದಿ ಬಂದಾಗ ಇಡೀ ಸದನದಲ್ಲಿರತಕ್ಕಂಥ ಎಲ್ಲಾ ಮಹಿಳೆಯರೂ ಒಂದೇ. ಅದನ್ನು ನಾವು ಇವತ್ತು ಮಾಡಿ ತೋರಿಸಿದ್ದೇವೆ. ಅದರಲ್ಲಿ ಯಾವ ವ್ಯತ್ಯಾಸ ಬರುವುದಕ್ಕೆ ಸಾಧ್ಯವಿಲ್ಲ. ಆದರೆ ನಾನು ಒಂದು ಮಾತನ್ನು ಮಾತ್ರ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಹುಟ್ಟು, ಬರ್ತ್ ಈಸ್ ಎ ಫ್ಯಾಕ್ಟ್. ಡೆತ್ ಯಾವಾಗಲೂ ಸಾಯುವಂತಾದ್ದು ಸತ್ಯ. ಆದ್ದರಿಂದ ತಾವು ಏನು ಹೇಳಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ ಅಂದರೆ ಈ ರೈತರಿಗೆ ಅನ್ಯಾಯ ಮಾಡಿ ರೈತರನ್ನು ಸಾಯುವ ಹಾಗೆ ಮಾಡಿ ಅವರ ಮನೆಯಲ್ಲಿ-ರುವವರನ್ನು ತಾವು ವಿಧವೆಯರನ್ನಾಗಿ ಮಾಡುವ ಪರಿಸ್ಥಿತಿಗೆ ತರುತ್ತಿದ್ದೀರಿ ಎಂದು. ಅದನ್ನು ತಾವು ದಯವಿಟ್ಟು ಸರಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಸರಿ.

ಅಧ್ಯಕ್ಷರು:- ಈಗ ನಾವು ಇಷ್ಟು ಮಾಡೋಣ. ನಾವು ಊಟಕ್ಕೆ ಸಭೆಯನ್ನು ಮುಂದೂಡಿ ಮತ್ತೆ 3-00 ಗಂಟೆಗೆ ಸೇರೋಣ. ಆಗ ತಾವು ತಮ್ಮ ಭಾಷಣವನ್ನು ಮುಂದುವರಿಸಿ.

(ಸಭೆಯು 2-00 ಗಂಟೆಗೆ ಮುಂದೂಡಿ ಮತ್ತೆ 3-00 ಗಂಟೆಗೆ ಸಮಾವೇಶಗೊಳ್ಳುವಂತೆ ನಿರ್ಧರಿಸಲಾಯಿತು)

ಕಾವೇರಿ ನದಿ ನೀರಿನ ಮೇಲಿನ ಚರ್ಚೆ(ಮುಂದುವರಿದುದು)

(ಸದನವು ಮಧ್ಯಾಹ್ನ **3.50**ಕ್ಕೆ ಮತ್ತೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರು ಶ್ರೀ ಚಂದ್ರಶೇಖರ್ ಎಂ. ಮಾಮನಿರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಈಗ ಈ ಒಂದು ಮಾತುಕತೆಗೆ ಸಂಬಂಧಪಟ್ಟಂತೆ ತಮಿಳುನಾಡಿಗೆ ನಮ್ಮ ರಾಜ್ಯದಿಂದ ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಭಾರೀ ನೀರಾವರಿ ಸಚಿವರು ಮತ್ತು ಕಾನೂನು ಮಂತ್ರಿಗಳು ಹೋಗಿ ಮಾತನಾಡಿದ್ದಾರೆ. ಈ 4 ಜನ ಈ ವಿಚಾರದ ಬಗ್ಗೆ ರಾಜ್ಯದಲ್ಲಿ ಯಾರ ಜೊತೆಯಲ್ಲೂ ಚರ್ಚೆಯನ್ನು ನಡೆಸಲಿಲ್ಲ. ಈ ಸದನವನ್ನು ಕಡೆಗಣಿಸಿದರು, ವಿರೋಧಪಕ್ಷದ ನಾಯಕರನ್ನೂ ಕಡೆಗಣಿಸಿದರು ಮತ್ತು ಈ ಸದನದ ಹೊರಗಡೆ ಇರುವ ವಿರೋಧಪಕ್ಷದವರನ್ನೂ ಕಡೆಗಣಿಸಿದರು. ನೀವು ಎಲ್ಲರನ್ನೂ ಕರೆದು ಚರ್ಚೆ ಮಾಡಬೇಕಾಗಿತ್ತು. ಏಕೆಂದರೆ ನೀವೇ ಹೇಳಿಕೊಂಡಂತೆ ರಾಜ್ಯದ ಹಿತವನ್ನು ಕಾಪಾಡತಕ್ಕ ಜನರು ನೀವಾಗಿದ್ದೀರಿ. ಪತ್ರಿಕೆಯಲ್ಲಿ ತಾತ್ಕಾಲಿಕ ಒಪ್ಪಂದ ಎಂದು ಬಂದಿದೆ. ಏನು ನಿಮ್ಮ ತಾತ್ಕಾಲಿಕ ಒಪ್ಪಂದ ಈ ತಾತ್ಕಾಲಿಕ ಒಪ್ಪಂದದ ಸೂತ್ರಗಳೇನು? ನೀವು ತಾತ್ಕಾಲಿಕ ಒಪ್ಪಂದ ಮಾಡಿಕೊಳ್ಳುವ ಮುಂಚೆ ನಡೆದಂಥ ಕಥೆಗಳೇನು? ನೀವು ಏನೇನು ಒಪ್ಪಂದ ಮಾಡಿಕೊಳ್ಳುತ್ತೀರ ಎಂಬ ಬಗ್ಗೆ ಯಾರ ಜೊತೆಯಲ್ಲಿ ಹೇಳಿದಿರಿ? ನೀವು ತಮಿಳುನಾಡಿನ ಪಂಚತಾರಾ ಹೋಟೆಲಿನಲ್ಲಿ ಸಭೆಯನ್ನು ನಡೆಸಿದಿರಿ, ನಿಮ್ಮ ಸಭೆಗೆ ಕರುಣಾನಿಧಿಯವರೇ ಬಂದರು, ಅಲ್ಲಿ ನಡೆಯಿತಲ್ಲಾ ಆ ಗೌಪ್ಯತೆಯ ಸಭೆ ಅದೇ ನಿಜವಾದ ಸಭೆಯಾಗಿದೆ, ಆ ಸಭೆಯನ್ನು ಬಿಟ್ಟು ಸಚಿವಾಲಯದಲ್ಲಿ ಸಭೆ ನಡೆಯಿತಲ್ಲಾ ಅದು ಕೇವಲ ಪ್ರಚಾರಕ್ಕಾಗಿ ಮಾತ್ರ. ಇವರು ಇದರಲ್ಲಿ ಎಷ್ಟು ಸೌಜನ್ಯವಾಗಿ ಮಾತನಾಡುತ್ತಾರೆಂದರೆ, ನಾವಿಬ್ಬರೂ ಕೊಟ್ಟು ತೆಗೆದುಕೊಳ್ಳುವುದು. ಅಂದರೆ ಭಾವೈಕ್ಯತೆ, ಈ ಭಾವೈಕ್ಯತೆಯ ದೃಷ್ಟಿಯಿಂದ ತೋಳ ಒಂದು ಕುರಿಯ ಮರಿಗೆ ಹೇಳಿತಂತೆ, ನಾವಿಬ್ಬರೂ ಭಾವೈಕ್ಯತೆ ಮಾಡಿಕೊಳ್ಳೋಣ ಅದು ಹೇಗೆಂದರೆ ತೋಳ ಕುರಿ ಮರಿಯನ್ನು ತಿಂದು ತನ್ನ ಉದರದಲ್ಲಿ ಇಟ್ಟುಕೊಳ್ಳುವುದು. ಇದು ಭಾವೈಕ್ಯತೆ. ಈ ರೀತಿಯ ಭಾವೈಕ್ಯತೆಗೆ ತಾವು ನಾಲ್ಕೇ ಜನ. ಈ ರಾಜ್ಯ ನಿಮಗೆ ಬೇಕಾಗಿಲ್ಲ, ಶಾಸನಸಭೆ ಬೇಕಾಗಿಲ್ಲ, ವಿರೋಧಪಕ್ಷದ ಮುಖಂಡರುಗಳು ಬೇಕಾಗಿಲ್ಲ, ರೈತ ಮುಖಂಡರುಗಳು ಬೇಕಾಗಿಲ್ಲ, ಲೋಕಸಭಾ ಸದಸ್ಯರು ಬೇಕಾಗಿಲ್ಲ, ಯಾರೂ ಬೇಕಾಗಿಲ್ಲ, ಇಡೀ ರಾಜ್ಯವನ್ನು ನೀವು ಗುತ್ತಿಗೆ ತೆಗೆದುಕೊಂಡು ಬಿಟ್ಟಿದ್ದೀರೋ? ನಿಮ್ಮ ಇಚ್ಛೆ ಬಂದ ಹಾಗೆ ನೀವೇ ಮಾತನಾಡಬಹುದೇ? ಈ ರೀತಿಯಲ್ಲಿಯೇ ನೀವು ತೀರ್ಮಾನ ಮಾಡುವುದಾದರೆ ಇದು ರಾಜ್ಯಕ್ಕೆ ನೀವು ತೋರಿದಂಥ ಒಂದು ದೊಡ್ಡ ಅಪಚಾರ ಮತ್ತು ಈ ರಾಜ್ಯದ ರೈತರಿಗೆ ತೋರಿದಂಥ ಅಗೌರವ, ಈ ಶಾಸನಸಭೆಯ ಹಕ್ಕಿಗೆ ಪರಮ ಚ್ಯುತಿಯನ್ನು ತಾವು ತಂದಿದ್ದೀರಿ ಎನ್ನುವ ಮಾತಿನಲ್ಲಿ ಎರಡನೇ ಅಭಿಪ್ರಾಯವೇ ಇಲ್ಲ. ಇವರು ಕೆಲವು ಕಡೆ ನೀರಿನ ಹಂಚಿಕೆ ಬಗ್ಗೆ ಏನು ಹೇಳಿದ್ದಾರೆಂದರೆ ಇಂದಿನ ಸಭೆಯಲ್ಲಿ ಒಪ್ಪಿದ ತಾತ್ಕಾಲಿಕ ಸಮಸ್ಯೆಗೆ ಅನುಗುಣವಾಗಿ ಆಗಸ್ಟ್

15ರಂದು ಕರುಣಾನಿಧಿಯವರು ರಾಜ್ಯಕ್ಕೆ ಬರುತ್ತಾರೆ. ಕೊಡು, ಕೊಳ್ಳುವ ಸ್ಪೂರ್ತಿಯ ನೆಲಗಟ್ಟಿನಲ್ಲಿ ಉಭಯ ಮುಖ್ಯಮಂತ್ರಿಗಳೂ ನಡೆಸಿದ ಮುಕ್ತ ಹಾಗೂ ಪ್ರಾಮಾಣಿಕ ಚರ್ಚೆ. ಯಾವುದು ಮುಕ್ತ ಹಾಗೂ ಪ್ರಾಮಾಣಿಕ ಚರ್ಚೆ? ಮುಕ್ತ ಹಾಗೂ ಪ್ರಾಮಾಣಿಕ ಚರ್ಚೆ ಎಲ್ಲಿ ಆಗಿರುವುದು, ಪಂಚಾ-ತಾರಾ ಹೋಟೆಲಿನಲ್ಲಿ. ಮತ್ತೊಂದು ಕಡೆ ಇವರು ಏನು ಹೇಳುತ್ತಾರೆಂದರೆ ಹೋಟೆಲಿನಲ್ಲಿ ಉಭಯ ತಂಡಗಳ ಜೊತೆ ಪ್ರಮುಖ ಸಮಾಲೋಚನೆ, ಸಮಾಲೋಚನೆ ನಡೆಯಬೇಕಾದ ಕಡೆ ನಡೆದಿಲ್ಲ, ಇದು ಬಹಳ ಗೌಪ್ಯವಾಗಿ ನಡೆದಿರುವುದರಲ್ಲಿ ನನಗನ್ನಿಸುತ್ತದೆ, ನೀವು ಬಹಳ ಗೌಪ್ಯವಾಗಿ ನಡೆಸಿದಂಥ ಸಭೆ ಮತ್ತು ಈ ಸಭೆ ನಡೆದ ನಂತರ ಪತ್ರಿಕಾಕರ್ತರಿಗೆ ಇಬ್ಬರೂ ಮುಖ್ಯಮಂತ್ರಿಗಳು ಏನು ಹೇಳು-ತ್ತೀರೆಂದರೆ, ತಮಿಳುನಾಡಿನ ಮುಖ್ಯಮಂತ್ರಿಗಳು ಶಾಸನಸಭೆ ಇರುವುದರಿಂದ ನಾನು ಬಾಯಿ ಬಿಚ್ಚೋದಿಲ್ಲ, ನಾನು ಶಾಸನಸಭೆಗೆ ಹೋಗಿ ಹೇಳುತ್ತೇನೆ ಎಂದು ಅವರು ತಮಿಳಿನಲ್ಲಿ ಹೇಳುತ್ತಾರೆ. ನೀವು ಇಂಗ್ಲಿಷಿನಲ್ಲಿ ಎಲ್ಲವನ್ನೂ ಹೇಳುತ್ತೀರಿ. ಆ ಸಂದರ್ಭದಲ್ಲಿ ಕನ್ನಡದಲ್ಲೇ ಹೇಳಬಹುದಿತ್ತು.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಉಪಾಧ್ಯಕ್ಷರೇ, ಈ ಚರ್ಚೆ ನಡೆದ ನಂತರ ಸದನ ಅಲ್ಲೇ ನಡೆಯುತ್ತಿತ್ತು. ಇಬ್ಬರೂ ಮುಖ್ಯಮಂತ್ರಿಗಳೂ ಮಾತನಾಡಿದ ಮೇಲೆ ನ್ಯಾಚುರಲಿ ಸದನ ನಡೆಯು-ತ್ತಿದ್ದಾಗ ಹತ್ತು ನಿಮಿಷದಲ್ಲೇ ಅಲ್ಲಿಗೆ ಹೋಗಿದ್ದಾರೆ. ನಾವು ಹತ್ತು ನಿಮಿಷಕ್ಕೆ ಇಲ್ಲಿಗೆ ಬರುವುದಕ್ಕಾಗಲಿಲ್ಲ ಮತ್ತು ಆ ದಿನ ಸದನ ನಡೆಯುತ್ತಿರಲಿಲ್ಲ. ಇವೊತ್ತು ಸದನ ಪ್ರಾರಂಭವಾಗಿದೆ. ನಾವು ಈಗ ಬಂದಿ-ದ್ದೇವೆ. ಆಗಲೇ ಹೇಳುವುದಕ್ಕಾಗುತ್ತಿತ್ತೇ ಎಂಬ ಬಗ್ಗೆ ಪ್ರಾಕ್ಟಿಕಾಲಿಟಿ ಬಗ್ಗೆ ನೀವು ಯೋಚನೆ ಮಾಡ-ಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ನಾನು, ಅವರಿಗೆ ನಿಮ್ಮನ್ನು ತಕ್ಷಣ ಅಲ್ಲಿಂದ ಪುಷ್ಪಕ ವಿಮಾನ-ದಲ್ಲಿ ಇಲ್ಲಿಗೆ ಬಂದು ಹೇಳಬೇಕಾಗಿತ್ತು ಎಂದು ಹೇಳಲಿಲ್ಲ. ಅದನ್ನಲ್ಲ ನಾನು ಹೇಳಿದ್ದು, ಪತ್ರಿಕಾ ಪ್ರತಿ-ನಿಧಿಗಳು ಸಭೆಯಲ್ಲಿ ತಾವಿಬ್ಬರೂ ಮಾತನಾಡುವಾಗ ಅವರು ತಮಿಳಿನಲ್ಲಿ ಹೇಳಿದರು.

ಶ್ರೀ ಸಿದ್ಧರಾಮಯ್ಯ:- ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ತಮಿಳುನಾಡಿನ ಮುಖ್ಯಮಂತ್ರಿಗಳು ಮಾತ-ನಾಡಲಿಲ್ಲ. ನಮ್ಮ ಮುಖ್ಯಮಂತ್ರಿಗಳು ಆಡಿದ್ದಂಥ ಮಾತುಕತೆ ಏನು ಆಗಿತ್ತೋ ಆ ಬಗ್ಗೆ ಸ್ಟೇಟ್-ಮೆಂಟನ್ನು ಬಿಡುಗಡೆ ಮಾಡಿದರು.

ಶ್ರೀ ವಾಟಾಳ್ ನಾಗರಾಜ್:- ಅದೇ 'ತಾತ್ಕಾಲಿಕ ಒಪ್ಪಂದ' ಎಂದು ಪತ್ರಿಕೆಯವರಿಗೆ ಹೇಳಿ-ರುವುದು. ಇನ್ನೊಂದು ಪತ್ರಿಕೆಯಲ್ಲಿ ಎರಡೂ ರಾಜ್ಯದ ರೈತರ ಅಗತ್ಯಗಳನ್ನು ಗಮನದಲ್ಲಿಟ್ಟು-ಕೊಂಡು ಮತ್ತು ಅವರಿಗೆ ನೀರಿನ ಲಭ್ಯತೆಯ ಭರವಸೆಯನ್ನು ನೀಡಲು ಮಧ್ಯಂತರ ವ್ಯವಸ್ಥೆ-ಯೊಂದನ್ನು ರೂಪಿಸಲಾಗಿದೆ. ನೀವು ಎರಡೂ ರಾಜ್ಯದ ರೈತರುಗಳನ್ನು ಗಮನದಲ್ಲಿಟ್ಟುಕೊಂಡು ರೂಪಿಸಿರತಕ್ಕಂಥ ಮಧ್ಯಂತರ ವ್ಯವಸ್ಥೆ ಯಾವುದು? ಸೂತ್ರ ಯಾವುದು? ಶತಮಾನಗಳಿಂದ ಇದರ ಬಗ್ಗೆ ಯಾವುದೇ ಒಂದು ಒಮ್ಮತಕ್ಕೆ ಬರದೇ, ಪ್ರತಿ ವರ್ಷ ನಮಗೆ ನೀರು ಕೊಡಿ, ನೀರು ಕೊಡಿ

ಎಂದು ನಮ್ಮ ರಾಜ್ಯಕ್ಕೆ ಬಂದು ಅವರು ಕಾಡಿ ಬೇಡಿ ಮಾತನಾಡಿರುತ್ತಿದ್ದ ಸಂದರ್ಭದಲ್ಲಿ ಕೂಡ ನಮ್ಮಲ್ಲಿ ಬಾಯಿ ಬಿಟ್ಟಿರಲಿಲ್ಲ. ಆದರೆ ತಮಗೆ ಅವರು ಎಷ್ಟು ಬೇಗ ಆತಿಥ್ಯ ಕೊಡುತ್ತಿದ್ದಾರೆ. ನೀವು ಈ ಸದನದಲ್ಲಿ ಒಂದೇ ಒಂದು ಮಾತನ್ನು ಹೇಳಿಬಿಡಿ. ನಾವು ನೀರನ್ನು ಬಿಡುವುದಿಲ್ಲ ಎನ್ನುವ ಒಂದು ಮಾತನ್ನು ನೀವು ಈ ಸದನದಲ್ಲಿ ಹೇಳಿ ನೋಡೋಣ, ನೀವು ಆ ರೀತಿಯಲ್ಲಿ ನೀರನ್ನು ಕೊಡುವುದಿಲ್ಲ ಎಂದು ಹೇಳಿದ್ದೇ ಆದರೆ ನಾವು ಇದುವರೆಗೆ ಏನೇನು ಮಾತನಾಡಿದ್ದೇವೋ ಅವೆಲ್ಲವನ್ನೂ ವಾಪಸ್ಸು ಪಡೆದುಕೊಂಡು ಬಿಡುತ್ತೇವೆ. ಆದರೆ ಆ ರೀತಿ ನೀವು ಹೇಳುವುದಿಲ್ಲ. ನೀವು ನೀರನ್ನೂ ಕೊಟ್ಟೇ ಕೊಡುತ್ತೀರಿ, ಕೊಟ್ಟು ತೆಗೆದುಕೊಳ್ಳುವ ಎನ್ನುವುದರಲ್ಲಿ ಏನು ತೆಗೆದುಕೊಳ್ಳುವುದಿಲ್ಲ, ನೀವು ಕೊಡುವು-ದೊಂದೇ ಈಗ ಉಳಿದಿರತಕ್ಕಂಥದ್ದು. ಇದನ್ನು ನೋಡಿದರೆ ನನಗನ್ನಿಸುತ್ತದೆ, ಈ ಒಂದು ವಿಚಾರದಲ್ಲಿ ಎಲ್ಲವೂ ಆದ ನಂತರ ಶಾಸನಸಭೆಯಲ್ಲಿ ತಮಿಳುನಾಡಿನ ಮುಖ್ಯಮಂತ್ರಿಗಳಾದ ಕರುಣಾನಿಧಿಯವರು ಈ ಹಿಂದೆ ಸಭೆಯಲ್ಲಿ ನಡೆದ ಒಂದು ಮಾತುಕತೆಯ ಸಾರಾಂಶವನ್ನು ಆ ಶಾಸನಸಭೆಯಲ್ಲಿ ಹೇಳು-ತ್ತಾರೆ. ಆಗ ಇಡೀ ಸಭೆ ಅಲ್ಲಿರುವಂತಹ ಎಲ್ಲಾ ಪಕ್ಷದವರು ಒಂದು ಪಕ್ಷ ಎಂದರೆ ಎ.ಐ.ಎ.ಡಿ.ಎಂ.ಕೆ. ಅವರು ಮಾತ್ರ ಅದನ್ನು ವಿರೋಧ ಮಾಡುತ್ತಾರೆ. ಇದು ಪತ್ರಿಕೆಯಲ್ಲಿ ಬಂದಿರುವುದು. ಅದಕ್ಕೆ ಪುನಃ ಮತ್ತೆ ಅಂತಿಮವಾಗಿ ಆ ಪಕ್ಷದವರು ಒಪ್ಪಿಕೊಳ್ಳುತ್ತಾರೆ. ಅಲ್ಲಿರತಕ್ಕಂಥವರು ಇಡೀ ಹಗಲು ರಾತ್ರಿ ಕರುಣಾನಿಧಿಯವರು ಕಾವೇರಿ ಬಗ್ಗೆ ತೀವ್ರವಾದಂತಹ ವಿರೋಧ ಮಾಡುತ್ತಿದ್ದವರು, ಗದ್ದಲ ಮಾಡು-ತ್ತಿದ್ದವರು, ಚಳುವಳಿ ಮಾಡುತ್ತಿದ್ದವರು, ಹೋರಾಟವನ್ನು ಮಾಡುತ್ತಿದ್ದವರು ಒಂದೇ ಸಮನೆ ಕರುಣಾ-ನಿಧಿಯವರ ಮಾತಿಗೆ ಒಪ್ಪಿಕೊಂಡು ಅವರಿಗೆ ಅಭಿನಂದನೆ ಸಲ್ಲಿಸಿ, ಸದಸ್ಯರು ಶಾಸನಸಭೆಯಲ್ಲಿ ಮೇಜುಕುಟ್ಟಿ ಸ್ವಾಗತಿಸಿರಬೇಕಾದರೆ ಅವರಿಗೆ ಅನುಕೂಲವಾಗುವಂತಹ ಸೂತ್ರವನ್ನು ಕರ್ನಾಟಕ ಸರ್ಕಾರ ಮಾಡಿರುವುದನ್ನು ಬಿಟ್ಟರೆ ಈ ಜನ್ಮದಲ್ಲಿ ಅವರು ಆ ಮಾತನ್ನು ಹೇಳುತ್ತಿರಲಿಲ್ಲ. ಆದುದ-ರಿಂದ ತಾವು ನಾಲ್ಕು ಜನ ನಮ್ಮ ರಾಜ್ಯವನ್ನು ತೆಗೆದುಕೊಂಡು ಹೋಗಿ ದಾನ ಕೊಟ್ಟಿದ್ದೀರಿ. ಕರುಣಾ-ನಿಧಿಯವರೇ ತೆಗೆದುಕೊಳ್ಳಿ ಎಂದು ದಾನ ಕೊಟ್ಟು ಅವರಿಗೆ ತಾವು ಕನ್ನಂಬಾಡಿಗೆ ಪೂಜೆಗೆ ಬನ್ನಿ ಎಂದು ಹೇಳಿದ್ದೀರಿ. ಆದರೆ ಅಲ್ಲಿ ನೀರು ತುಂಬಿದೆಯೋ ಇಲ್ಲವೋ ಗೊತ್ತಿಲ್ಲ. ದಯವಿಟ್ಟು ನೀವು ಪೂಜೆ ಮಾಡಬೇಕು ಬನ್ನಿ ಪೂಜೆಗೆ ಎಂದು ಹೇಳಿ ಪೂಜೆಗೆ ಕರೆದುಬಿಟ್ಟಿರಿ, ನಮ್ಮ ಎಲ್ಲಾ ಜಲಾ-ಶಯಗಳಿಗೂ ಕರುಣಾನಿಧಿಯವರನ್ನು ಕರೆದುಕೊಂಡು ಹೋಗಿ. ಕಪಿಲಾಗೆ ಕರೆದುಕೊಂಡು ಹೋಗಿ, ಕಾವೇರಿಗೆ ಕರೆದುಕೊಂಡು ಹೋಗಿ, ಹೇಮಾವತಿಗೆ ಕರೆದುಕೊಂಡು ಹೋಗಿ, ಹಾರಂಗಿಗೆ ಕರೆದು-ಕೊಂಡು ಹೋಗಿ, ಎಲ್ಲಾ ಕಡೆ ಕರೆದುಕೊಂಡು ಹೋಗಿ ಸ್ವಾಮಿ. ಏಕೆಂದರೆ ನಿಮಗೂ ಅವರಿಗೂ ನೆಂಟಸ್ಥನ, ಬೀಗತನ ಬಂದಿದೆಯಲ್ಲಾ. ಆದುದರಿಂದ ಅವರನ್ನು ಎಲ್ಲಾ ಕಡೆ ಕರೆದುಕೊಂಡು ಹೋಗು-ವಂತಹ ವಿಶೇಷವಾದಂತಹ ವ್ಯವಸ್ಥೆಯನ್ನು ಮಾಡಿ. ಹಿಂದಿನ ಮುಖ್ಯಮಂತ್ರಿಗಳು ಹಾಗೂ ಈಗಿನ ಪ್ರಧಾನಮಂತ್ರಿಗಳಾದ ಶ್ರೀಮಾನ್ ದೇವೇಗೌಡರ ಭಾಷಣವನ್ನು ನೋಡಿದ್ದೇನೆ. ಹಿಂದೆ ಮೈಸೂರಿ-ನಲ್ಲಿ ಒಂದು ಲಕ್ಷ ಜನರ ಎದುರಿಗೆ ಶ್ರೀಮಾನ್ ನಿಜಲಿಂಗಪ್ಪನವರಂತಹ ಹಿರಿಯ ಮುಖಂಡರಿದ್ದಾಗ ಒಂದು ಮಾತು ಹೇಳಿದ್ದರು. ನ್ಯಾಯ ಮಂಡಳಿಯಿಂದ ಅನ್ಯಾಯ, ಅದನ್ನು ಬಹಿಷ್ಕರಿಸಬೇಕು

ನ್ಯಾಯ ಮಂಡಳಿ ಸದಸ್ಯರ ಬಗ್ಗೆ ಆಕ್ಷೇಪಣೆ. ನ್ಯಾಯ ಮಂಡಳಿ ಸದಸ್ಯರು ತಮಿಳುನಾಡಿಗೆ ಹೋದಾಗ ಅವರಿಗೆ ಏನೇನು ಕೊಟ್ಟರು ಎಂದು ಎಲ್ಲವನ್ನೂ ಹೇಳಿದಂತಹವರಿಂದ ಎಷ್ಟು ಬೇಗ ನಮ್ಮಲ್ಲಿ ಬದಲಾವಣೆಯಾಗಿದೆ. ಇದು ಏನು ನಾಟಕವೇ? ವ್ಯವಸ್ಥಿತವಾಗಿ ಬದಲಾವಣೆಯಾಗಿ ಹೋಯಿತು ಆ ಧ್ವನಿ, ಆ ಮಾತು, ಆ ಹೇಳಿಕೆ ಇವೆಲ್ಲವನ್ನೂ ನಾವು ಯಾವುದಾದರೂ ಒಂದು ವಿಶ್ವವಿದ್ಯಾನಿಲಯಕ್ಕೆ ಹಳೆಯ ಹೇಳಿಕೆಗಳನ್ನೆಲ್ಲಾ ತೆಗೆದುಕೊಟ್ಟರೆ ಒಂದು ಡಾಕ್ಟರೇಟ್ ತೆಗೆದುಕೊಳ್ಳಬಹುದು. ಯಾರ್‍ಯಾರು ಏನೇನು ಎಲ್ಲೆಲ್ಲಿ ಹೇಳಿದ್ದಾರೆ, ಯಾವ್ಯಾವ ವರ್ಷ ಏನೇನು ಹೇಳಿಕೊಂಡು ಬಂದಿದ್ದಾರೆ ಎಂಬುದನ್ನೆಲ್ಲ ಸಂಗ್ರಹ ಮಾಡಿದರೆ ಡಾಕ್ಟರೇಟ್ ತೆಗೆದುಕೊಳ್ಳಬಹುದು. ನನಗೆ ಅನ್ನಿಸುತ್ತದೆ, ಈ ರೀತಿ ಮಾಡುತ್ತಿರು-ವುದು, ಮನೆಗೆ ಮಾರಿ, ಪರರಿಗೆ ಉಪಕಾರಿ ಎನ್ನುವಂತಹ ವ್ಯವಸ್ಥೆಯನ್ನು ನಮ್ಮ ಸರ್ಕಾರದ ಈ ಒಂದು ಮಂತ್ರಿಮಂಡಲ, ಸಚಿವಸಂಪುಟ ಮಾಡಿದೆ ಎನ್ನುವ ಮಾತನ್ನು ನಾನು ಬಹಳ ನೋವಿನಿಂದ ಹೇಳಬೇಕಾಗಿದೆ. ಮತ್ತೊಂದು ಕಡೆ ತಮಿಳುನಾಡು ಕೇಳುವ ಮೊದಲೇ ನಾವು ಜುಲೈನಲ್ಲಿ ಐದು ಟಿ.ಎಂ.ಸಿ. ನೀರನ್ನು ಬಿಟ್ಟಿದ್ದೇವೆ. ಆದುದರಿಂದ ಮುಂದೆಯೂ ಕರ್ನಾಟಕದ ರೈತರ ಹಿತವನ್ನು ಕಾಪಾಡಿಕೊಂಡು ತಮಿಳುನಾಡಿನ ರೈತರ ಸಂಕಷ್ಟ ನಿವಾರಣೆಗೆ ಭರವಸೆ ನೀಡಿದರು. ಎಲ್ಲಾ ಮುಗಿದೇ ಹೋಗಿದೆ. ಈಗ ನ್ಯಾಯಾಲಯದಲ್ಲಿ ಇರತಕ್ಕಂಥಾದ್ದು ಎಲ್ಲವನ್ನು ತರಿಸಿ, ನಾರೀಮನ್ ಅವರನ್ನು ಕರೆಸಿ. ನಿಮ್ಮ ರೆಕಾರ್ಡ್‌ಗಳನ್ನು ಇಲ್ಲಿ ತರಿಸಿಬಿಡಿ. ಇನ್ನು ಏಕೆ ಡೆಲ್ಲಿಯಲ್ಲಿ ಆಫೀಸ್? ನಮ್ಮ ಕರ್ನಾಟಕ ಭವನದಲ್ಲಿ ಒಂದು 25 ಜನ ವಕೀಲರು, 40 ಜನ ಅಲ್ಲಿ ಇರುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ? ಅವರನ್ನೆಲ್ಲಾ ಕರೆಸಿ ಅದನ್ನು ಮುಚ್ಚಿ. ಮತ್ತೆ ಇಲ್ಲಿ ಏನೋ ಬ್ಯಾಟರಿ ಸೆಲ್ ಕಾವೇರಿ ಸೆಲ್, ಮಾಡಿದ್ದೀ-ರಲ್ಲಾ ಅದನ್ನೆಲ್ಲಾ ಮುಚ್ಚಿ. ಎಲ್ಲಾ ಮುಚ್ಚಿ, ಎಲ್ಲಾ ಆಗಿಹೋಯಿತು. ಇದು ಇತಿಹಾಸ ಪ್ರಸಿದ್ಧ-ವಾದಂತಹ ಒಂದು ಒಡಂಬಡಿಕೆ, ಇಂತಹ ಒಂದು ಒಮ್ಮತದಲ್ಲಿ, ಇಂತಹ ಒಗ್ಗಟ್ಟಿಗೆ ತೀರ್ಮಾನ ಬಂದಿದೆಯಲ್ಲಾ; ಮುಚ್ಚಿಸಿಬಿಡಿ ಏಕೆ ಬೇಕು? ಇದುವರೆಗೂ ನಿಮ್ಮ ಸರ್ಕಾರ ಹಿಂದಿನ ಸರ್ಕಾರ ಏನು ವಕೀಲರುಗಳಿಗೆ ಕೊಟ್ಟಿರತಕ್ಕಂಥ ಹೋರಾಟ, ವಾದ ವಿವಾದ ನ್ಯಾಯ ಮಂಡಳಿಯ ಮುಂದೆ ಹಗಲು ರಾತ್ರಿ ಮತ್ತು ನೂರಾರು ವಿರೋಧಪಕ್ಷಗಳ ಸಭೆ ಕರೆದು, ಹೇಗೆ ನಿಮಗೆ ಬಂತು? ನಮಗೆ ಯಾರಿಗೂ ಹೊಳೆಯಲಿಲ್ಲ, ಈ ತರಹದ ನಿಮ್ಮ ಹೊಂದಾಣಿಕೆ, ಈ ಒಪ್ಪಂದ ಇದೆಯಲ್ಲಾ, ಇದು ನಮ್ಮ ತಲೆಗೆ ಬರಲಿಲ್ಲ. ನಿಮ್ಮ ಕಾಂಗ್ರೆಸ್ ಸರ್ಕಾರದವರಿಗೂ ಬರಲಿಲ್ಲ ಈ ತರಹದ ಒಪ್ಪಂದ, ಇದು ಯಾರಿಗೂ ಬರುವುದಿಲ್ಲ. ಯಾವುದೋ ಒಂದು ವಿಶ್ವದ ಶಕ್ತಿ ನಿಮಗೆ ಬಂದಿರಬೇಕು ಎಂದು ಕಾಣುತ್ತದೆ. ಯಾವುದೋ ಒಂದು ಶಕ್ತಿ ನಿಮ್ಮ ಶರೀರಕ್ಕೆ ಪರಕಾಯ ಪ್ರವೇಶ ಮಾಡಿ ಈ ಒಂದು ತೀರ್ಮಾನಕ್ಕೆ ಬಂದಿದೆ ಎಂದು ಕಾಣುತ್ತದೆ. ಸಂತೋಷ, ಭೇಷ್! ಎಷ್ಟು ಬೇಗ ನೀವು ಮೂರು ನಿಮಿಷದಲ್ಲಿ ಎಲ್ಲಾ ನೀವು ಅಲ್ಲಿಗೆ ಹೋಗಿದ್ದು, ಇಳಿದಿದ್ದು, ಪಂಚತಾರ ಹೋಟೆಲ್‌ಗೆ ಬಂದದ್ದು. ನೀವು ಅಲ್ಲಿ ಕುಳಿತುಕೊಂಡಿರಿ. ಎಲ್ಲಾ ಒಂದು ತರಹ ಸಿನಿಮಾ ತೆಗೆದು ಹಾಗೆ ಆಗಿಹೋಗಿದೆಯಲ್ಲಾ. ತಾವು ಮಂಡ್ಯ ಜಿಲ್ಲೆಯ ನಾಗೇಗೌಡರು ಸ್ವಾಮಿ, ಡೆಲ್ಲಿಯಲ್ಲಿ ನೀವು ಏನು ಕಣ್ಣೀರಿಟ್ಟಿರಿ ಆ ರಾತ್ರಿ. ಈ ರಾಜ್ಯದ ನೀರು ಹೋದರೆ ನನ್ನ ಸದಸ್ಯತ್ವ ರಾಜೀನಾಮೆ ಕೊಡಬೇಕಾದೀತು ಎಂದು ಹೇಳಿದ್ದಿರಿ. ತಮ್ಮ

ಆ ಧ್ವನಿಯನ್ನು ಕೇಳಿ ಇನ್ನೂ ನನಗೆ ಕಿವಿ ಮುಚ್ಚಿಲ್ಲ. ಇನ್ನು ಕಿವಿ ಕಿವುಡಾಗಲಿಲ್ಲ. ಅದು ಇನ್ನೂ ನನ್ನ ಕಿವಿಯಲ್ಲೇ ಇದೆ. ಅದೇ ನಾಗೇಗೌಡರು ತಾನೇ ತಾವು? ಮಾನ್ಯ ಸಿದ್ಧರಾಮಯ್ಯನವರೇ, ತಾವು ಈ ರಾಜ್ಯದ ಉಪಮುಖ್ಯಮಂತ್ರಿಗಳಾಗಿದ್ದೀರಿ. ಕಪಿಲಾ ನೆಗೆದು ಬಿದ್ದಿದೆ. ಏತ ನೀರಾವರಿ ನೆಗೆದು ಬಿದ್ದಿದೆ. ನಾನು ಅವರನ್ನು ತೆಗಳುತ್ತೇನೆ ಎಂದು ಅಲ್ಲ. ಅವರ ಹೃದಯವಂತಿಕೆ ಎಲ್ಲಿ ಎಂದು ನಾನು ಇವತ್ತು ಪ್ರಾಮಾಣಿಕವಾಗಿ ಅವರಿಗೆ ಹೇಳಬೇಕಾಗಿದೆ.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಉಪಾಧ್ಯಕ್ಷರೇ, ವಾಟಾಳ್ ನಾಗರಾಜ್‌ರವರ ಕಾಮಾಲೆ ಕಣ್ಣು ಕಡಿಮೆಯಾಗಬೇಕು. ಈ ವಿಚಾರದಲ್ಲಿ ಏನಾಗಿದೆ ಎನ್ನುವುದನ್ನು ಅವರು ಪಾಸಿಟೀವ್ ಆಗಿ ನೋಡಬೇಕು. ಅವರು ನೆಗೆಟೀವ್ ಆಗಿ ನೋಡುತ್ತಿರುವುದರಿಂದ ಅವರ ಭಾಷಣ ಕೆಟ್ಟದಾರಿಯನ್ನು ಹಿಡಿದಿದೆ. ಏಕೆಂದರೆ ಏನಾಗಿದೆ ಎನ್ನುವ ವಿಚಾರವನ್ನು ಅವರು ತಲೆಗೆ ಹಚ್ಚಿಕೊಂಡಿಲ್ಲ. ಇವತ್ತು ಏನು ಮಾಡಿಕೊಂಡು ಬಂದಿದ್ದೇವೆ, ಅತ್ಯಂತ ಉತ್ತಮವಾದಂತಹ ಬುನಾದಿಯನ್ನು ಹಾಕಿ ಕರ್ನಾಟಕ ರಾಜ್ಯದಲ್ಲಿ ಒಂದು ಒಳ್ಳೆಯ ಕೆಲಸ ಮಾಡಿಕೊಂಡು ಬಂದಿದ್ದೇವೆ. ಒಳ್ಳೆಯ ದಾರಿ ತೋರಿಸಿದ್ದೇವೆ. ಕೃಷ್ಣಾ ಕಾವೇರಿ ಬಗ್ಗೆ ಹೋರಾಟ ಮಾಡಿದಂತಹ ವಾಟಾಳ್ ನಾಗರಾಜ್‌ರವರು, ನಾವು ಒಳ್ಳೆಯ ಕೆಲಸ ಮಾಡಿಕೊಂಡು ಬಂದಿದ್ದೇವೆಂದು ಹೇಳುತ್ತಾರೆ ಎಂದು ನಾವು ಮದ್ರಾಸ್‌ನಲ್ಲಿ ಆಲೋಚನೆ ಮಾಡುತ್ತಿದ್ದೆವು. ಆದರೆ ಈ ರೀತಿ ಕಾಮಾಲೆ ಕಣ್ಣಿನಿಂದ, ಇದನ್ನು ಕೆಟ್ಟ ದೃಷ್ಟಿಯಿಂದ ನೋಡಿ ಇದನ್ನು ಮಿಕ್ಸ್‌ಪ್ ಮಾಡುತ್ತಾರೆ ಎಂದು ನಾನು ನಿರೀಕ್ಷೆ ಮಾಡಿರಲಿಲ್ಲ. ಆದರೆ ದಿನ ತೀರ್ಮಾನ ಮಾಡುತ್ತದೆ. ನಾವು ಏನು ಮದ್ರಾಸ್‌ನಲ್ಲಿ ಮಾಡಿಕೊಂಡು ಬಂದಿದ್ದೇವೆ ಎನ್ನುವುದು ಮುಂದಿನ ದಿನಗಳಲ್ಲಿ ತೀರ್ಮಾನ ಮಾಡುತ್ತೇವೆ. ಅದನ್ನು ಇತಿಹಾಸ ಬರೆಯುತ್ತದೆ. ನಿಮ್ಮ ಭಾಷಣವನ್ನು ನಾನು ಇತಿಹಾಸ-ದಲ್ಲಿ ಇಟ್ಟುಕೊಂಡಿರುತ್ತೇನೆ. 3-6 ತಿಂಗಳು ಕಾದು ನೋಡಿ. ಇದೇ ಸಭೆಯಲ್ಲಿ ಇಬ್ಬರೂ ಇರುತ್ತೇವೆ. ನಾನು ಅವತ್ತು ಎಲ್ಲಾ ದೀರ್ಘವಾಗಿ ನಿಮಗೆ ಉತ್ತರ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಆಗ ನಿಮ್ಮ ಇಲಾಖೆ ಬದಲಾವಣೆಯಾಗಿ ಹೋಗಿರುತ್ತದೆ.

ಶ್ರೀ ಕೆ.ಎನ್. ನಾಗೇಗೌಡ:- ಇಲಾಖೆ ಹೋದರೂ ಸದಸ್ಯರಾಗಿ ಇರುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ತಾವು ಸುದೀರ್ಘವಾಗಿ ಮಂತ್ರಿಗಳಾಗಿರುವುದಕ್ಕೆ ನನ್ನ ಹಾರೈಕೆ ಇದೆ. ಆದರೆ ನಿಮ್ಮ ಸರ್ಕಾರ ಇರುತ್ತದೋ ಇಲ್ಲವೋ? ಪಟೇಲರು ಇರಬೇಕು ಎಂಬುದು ನನ್ನ ಹಾರೈಕೆ. ಅವರ ಬಗ್ಗೆ ಅತ್ಯಂತ ವ್ಯಾಮೋಹ ಇದೆ, ಆ ವ್ಯಾಮೋಹವನ್ನು ಹಿಂದೆ ತೆಗೆದುಕೊಳ್ಳಲು ತಯಾರಾಗಿಲ್ಲ. ಆದರೆ ಅವರು ತಪ್ಪುದಾರಿಗೆ ಹೋಗುತ್ತಿದ್ದೀರಲ್ಲಾ. ಅವರ ಬಗ್ಗೆ ನನಗೆ ಪ್ರೀತಿ, ಅಭಿ-ಮಾನ, ವಿಶ್ವಾಸ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೇ, ಅವರು ನಾಗೇಗೌಡರು ಇರಲಿ, ಪಟೇಲರು ಇರಲಿ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಏಕೆಂದರೆ ಪಟೇಲರು ಎಲ್ಲಿಯವರೆಗೆ ಇರುತ್ತಾರೆ ಅಲ್ಲಿಯವರೆಗೆ ನಾಗೇಗೌಡರು ಇರುತ್ತಾರೆ. ಅದಕ್ಕಾಗಿ ಅವರು ಹೋಗುವ ಪ್ರಶ್ನೆ ಬರುವುದಿಲ್ಲ. ಕೊನೆಗೆ

ಅವರೂ ಇರಲಿ, ಇವರೂ ಇರಲಿ ಎಂದು ಹೇಳುತ್ತಲೇ ಇದ್ದಾರೆ. ಮತ್ತೇ ಅವರು ಕೊನೆಗೆ ಏನು ಹೇಳಿದ್ದಾರೆ, ಒಂದು ಓಟು ಕಡಿಮೆ ಬಿದ್ದರೂ ನಾನು ನಿಮಗೆ ಕೊಡುತ್ತೇನೆ, ಅಲ್ಲಿಯವರೆಗೂ ನೀವು ಬೀಳುವವರೆಗೂ ನಾನು ನಿಮ್ಮ ಜೊತೆಯಲ್ಲಿ ಇರುತ್ತೇನೆ ಎಂದು ಹೇಳುತ್ತಾರೆ.

ಶ್ರೀ ಕೆ.ಎನ್. ನಾಗೇಗೌಡ:- ಅದಂತೂ ನಿಜ. ಅವರು ಓಟು ಕೊಡುತ್ತಾರೆ. ನಾವಿಬ್ಬರೂ ಇರಲಿ ಎಂದು ಆಶೀರ್ವಾದ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಖರ್ಗೆಯವರು ಹೇಳಿದ್ದು ಏನು ಮತವನ್ನು ಕೊಡು-ತ್ತೇನೆ ಎಂದು ಅದರಲ್ಲಿ ಅನುಮಾನ ಇಲ್ಲ. ಕೇಳಲಿ ಅವರು. ನನ್ನ ಒಂದು ಓಟಿನಲ್ಲಿ ನಮ್ಮ ಸರ್ಕಾರ ಬೀಳುತ್ತದೆ ಎಂದಾಗ ಮತ ಕೊಡುವುದಕ್ಕೆ ನಾನು ಹಿಂದುಮುಂದು ನೋಡುವುದಿಲ್ಲ. ಬಹಿರಂಗವಾಗಿ ಕೊಡುತ್ತೇನೆ. ನಾಗೇಗೌಡರನ್ನು ಮಂತ್ರಿಮಂಡಲದಿಂದ ಹೊರಗೆ ಕಳುಹಿಸಬೇಕು ಎನ್ನುವ ಭಾವನೆ ನನಗೆ ಖಂಡಿತ ಇಲ್ಲ. ಕಾಮಾಲೆ ರೋಗ ಎಂದು ಹೇಳಿದರು, ಇದು ಆಗಾಗ್ಗೆ ಬರುತ್ತಿರತಕ್ಕಂಥಾದ್ದು. ನಮಗೆ ಯಾವ ರೋಗಾನೂ ಬಂದಿಲ್ಲ. ಇವರಿಗೆ ಆಗಾಗ ರೋಗಗಳು ಬರುವುದು. ಈ ರೋಗಗಳು ಬರುವುದು ಯಾರಿಗೆ ಎಂದರೆ ಮಂತ್ರಿಮಂಡಲ ಬದಲಾವಣೆಯಾದಾಗ ಮತ್ತು ಕಾಮಾಲೆ ಕಣ್ಣು ಬರುವುದು ಯಾವಾಗ ಅಂದರೆ ಹಿಂದೆ ಕಾಂಗ್ರೆಸ್ಸ್‌ನಲ್ಲಿ ನಾಗೇಗೌಡರು ಇದ್ದರು. ಆಗ ಎಂತಹ ಕಣ್ಣು? ನಂತರ ಜನತಾ ದಳಕ್ಕೆ ಬಂದರು, ಆಗ ಎಂತಹ ಕಣ್ಣು? ಇವೆಲ್ಲಾ ಕಣ್ಣುಗಳು. ನನ್ನದು ಒಂದೇ ಕಣ್ಣು. ಬದಲಾವಣೆ ಆಗಲೇ ಇಲ್ಲ. ನನ್ನದು ಹಳದಿ ಬರುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಕೆ.ಎನ್. ನಾಗೇಗೌಡ:- ಅದು ಏಕೆ ಎಂದರೆ ನೀವು ಒಂಟಿ ಇರುವುದರಿಂದ ನಿಮಗೆ ಕಣ್ಣು-ಗಳು ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ನೀವು ಅಷ್ಟೊಂದು ಕಣ್ಣಿನಿಂದ ನೋಡುತ್ತೀರಿ, ನನ್ನದು ಎರಡು ಕಣ್ಣಿರುವುದರಿಂದ ಅದರಿಂದ ನೋಡಬೇಕಾಲ್ಲಾ, ನನ್ನ ಕಣ್ಣು ಶಕ್ತಿಯುತವಾಗಿದೆ. ಅದರಲ್ಲಿ ತಲೆ ಕೆಡಿಸಿ-ಕೊಳ್ಳಬೇಕಾಗಿಲ್ಲ. ಆದರೆ ನನ್ನ ಮೇಲೆ ನಾಗೇಗೌಡರಿಗೆ ಅಭಿಮಾನ ಇದೆ. ಅದನ್ನು ಪ್ರಾಮಾಣಿಕವಾಗಿ ಹೇಳುತ್ತೇನೆ, ಇದರಲ್ಲಿ ಎರಡನೇ ವಿಚಾರ ಇಲ್ಲ. ಒಂದು ಕಡೆ ಚುನಾವಣೆಗೆ ನಿಲ್ಲುವುದಕ್ಕೆ ಮುಂಚೆ ಹಲಗೂರಿನಲ್ಲಿ ಒಂದು ಸಮಾರಂಭಕ್ಕೆ ನಾನು ಅವರು ಒಟ್ಟಿಗೆ ಹೋಗಿದ್ದೆವು. ಆ ಸಮಾರಂಭದಲ್ಲಿ ಮುಕ್ತಕಂಠದಿಂದ ಭಾಷಣ ಮಾಡಿದರು. ನಮ್ಮ ಪಕ್ಷದ ಒಂದು ಸೀಟು ಹೋದರೂ ಚಿಂತೆ ಇಲ್ಲ, ವಾಟಾಳ್ ನಾಗರಾಜ್ ಗೆಲ್ಲಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಆ ವ್ಯಾಖ್ಯಾನ ಏಕೆ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈ ಗುಟ್ಟನ್ನು ಇಟ್ಟುಕೊಂಡು ನೀವು ಪಟೇಲರಿಗೂ ಬೆಂಬಲವನ್ನು ಕೊಡುತ್ತಿದ್ದಿರಿ, ಅವರಿಗೂ ಬೆಂಬಲವನ್ನು ಕೊಡುತ್ತಿದ್ದಿರಿ, ನಮಗೆ ಗೊತ್ತಾಯಿತು ಅವರ ಬೆಂಬಲ ಬೇಕು ಎಂದು ಹೇಳಿ. ನಾವೇನೋ ಬಹಳ ನಿಷ್ಪಕ್ಷಪಾತದಿಂದ, ಬಹಳ ಮುಕ್ತಕಂಠದಿಂದ ಸಪೋರ್ಟ್ ಮಾಡುತ್ತಿದ್ದಾರೆ ಎಂದು ತಿಳಿದುಕೊಂಡಿದ್ದೆವು, ಇದು ಕಂಡೀಷನಲ್ ಸಪೋರ್ಟ್ ಎಂದು ನನಗೆ ಗೊತ್ತಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಅಂದರೆ ನಾಗೇಗೌಡರು ದೃಷ್ಟಿಯಲ್ಲಿ ವಾಟಾಳ್ ನಾಗರಾಜ್ ಗೆದ್ದು ನನಗೆ ಬೆಂಬಲ ಕೊಡಬೇಕು ಎಂಬ ಉದ್ದೇಶ ಅಲ್ಲ. ವಾಟಾಳ್ ನಾಗರಾಜ್ ಒಬ್ಬ ಹೋರಾಟಗಾರ ಈ ಶಾಸನಸಭೆಯಲ್ಲಿ ಇರಬೇಕು ಎನ್ನತಕ್ಕಂಥದ್ದು ಅವರ ಒಟ್ಟಾರೆ ಅಭಿಪ್ರಾಯ. ಖರ್ಗೆಯವರಿಗೆ ಗೊತ್ತಿದೆ, ಖರ್ಗೆಯವರು ನಾನು ಸ್ನೇಹಿತರು ಕೇಳಿ ಅವರೇನೋ ಹಾಗೆಂದರೆ ನೀವು ನಮ್ಮನ್ನು ವಿರೋಧ ಮಾಡುತ್ತೇವೆ ಎಂದೇ ಅರ್ಥ. ಇದು ಏನಾಗುತ್ತದೆ ಎಂದರೆ, ಈ ಜಲ, ನೆಲದ ಪ್ರಶ್ನೆ ಬಂದಾಗ ತಮಗೆ ಹೇಳುತ್ತೇನೆ. ಸ್ನೇಹ, ಬಂಧು, ಬಳಗ ಯಾವುದೂ ಇಲ್ಲ, ಕೊನೆಗೆ ನನ್ನ ಆತ್ಮಾರ್ಪಣೆ ಮಾಡುವುದಕ್ಕೂ ಸಿದ್ಧ ಎಂಬ ಮಾತನ್ನು ಅಷ್ಟು ನೋವಿನಿಂದ ಹೇಳುತ್ತಿದ್ದೇನೆ. ನಾನೇನು ಇದನ್ನು ರಾಜಕೀಯ ಮಾಡುತ್ತಿಲ್ಲ, ರಾಜಕೀಯ ಬಯಸುತ್ತಿಲ್ಲ, ಯಾರ ಬಗ್ಗೆಯೂ ನಾನು ದೂಷಣೆ ಮಾಡತಕ್ಕಂಥದ್ದಲ್ಲ. ನಮ್ಮ ರಾಜ್ಯದ ರೈತರ ಪರಿಸ್ಥಿತಿ ಇವೊತ್ತು ಅತ್ಯಂತ ಶೋಚನೀಯವಾಗಿರುವುದರಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ. ನೀವು ಎಲ್ಲರನ್ನೂ ಕಡೆಗಾಣಿಸಿ ಇದನ್ನು ನಡೆಸಿರತಕ್ಕಂಥದ್ದು, ಮತ್ತೊಂದು ಕಡೆ ಹೇಳುತ್ತಾರೆ, ಮತ್ತೆ ನಮ್ಮಿಬ್ಬರ ಭೇಟಿಗೆ ಮೊದಲು ನೀರು ಬಿಡುವಿರಾ ಎಂದು ಹೇಳಿದ ತಕ್ಷಣ ಈ ತಾಂತ್ರಿಕ ಪ್ರಶ್ನೆ ಇವೆಲ್ಲಾ ಬದಿಗೊತ್ತಿ ಎಂದು ಹೇಳಿ ನಮ್ಮ ಕಾನೂನು ಸಚಿವರು ಮತ್ತು ಇವರೆಲ್ಲಾ ಯಾರು ಮಾಡದೇ ಇರತಕ್ಕಂಥ ಕೆಲಸವನ್ನು ಪ್ರಭಾವಯುತವಾಗಿ ಮಾಡಿ ಒಂದು ಒಮ್ಮತಕ್ಕೆ ನಾವು ಬಂದಿದ್ದೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಇದು ನಮಗೆಲ್ಲಾ ಪತ್ರಿಕೆಗಳ ಮುಖಾಂತರ ಗೊತ್ತಾಯಿತು. ಇವರ ಒಪ್ಪಂದಗಳು ಏನು ಎಂಬುದನ್ನು ಸ್ಪಷ್ಟಪಡಿಸಬೇಕು. ಈ ಒಪ್ಪಂದಗಳು ನ್ಯಾಯಮಂಡಳಿಯ ಚೌಕಟ್ಟಿನಲ್ಲಿರತಕ್ಕಂಥದ್ದೇ, ಎರಡನೆಯದು ಆ ಒಪ್ಪಂದದ ಪ್ರಕಾರ ಇವರು ನೀರು ಬಿಡುವುದಕ್ಕೆ ತಯಾರಾಗಿದ್ದಾರೆ, ನೀರು ಯಾವಾಗ ಬಿಡುತ್ತೀರಿ? ನಾಳೆ ಬೇಕಾದರು ಬಿಡಬಹುದು. ಅದನ್ನೂ ಹೇಳಿದ್ದಾರೆ ನಾಳೆಯೇ ಬೇಕಾದರೂ ಬಿಡಬಹುದು; ಬೇರೆ ಮಾತು ಇಲ್ಲವೇ ಇಲ್ಲ, ಈ ರಾತ್ರಿಯೇ ಬೇಕಾದರೂ ಬಿಡಬಹುದು; ಅಂದರೆ ಇವರ ದೃಷ್ಟಿಯಲ್ಲಿ ಇವರು ರೆಡಿ ಇದ್ದಾರೆ; ಅವರು ಸ್ವಲ್ಪ ನಿಧಾನ ಮಾಡಿ ಸ್ವಾಮಿ ಎಂದು ಅಂದರೂ ಸಹ ನಾವು ರೆಡಿ ಇದ್ದೇವೆ, ಈ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ಇವರು ಮಾತುಕತೆಗೆ ಹೋದದ್ದೇ ಮೊದಲನೆ ಅಪರಾಧ. ಹೌದು, ನಾವು ಏನು ಹೇಳುತ್ತೇವೆ ಮಾತುಕತೆ ಎಂದರೆ, ನ್ಯಾಯಮಂಡಳಿ ಬೇಡ, ಎಂದು ಇಡೀ ಸಮಗ್ರ ಕಾವೇರಿಯ ಬಗ್ಗೆ ಬರೀ ಮಾತುಕತೆಯ ಬಗ್ಗೆ ಮುಗಿಸಿಕೊಳ್ಳುತ್ತೇವೆ ನಾವು ಇನ್ನಾವುದರ ಬಗ್ಗೆ ಇಲ್ಲ, ನ್ಯಾಯಮಂಡಳಿ ಚೌಕಟ್ಟಿಲ್ಲ, ನ್ಯಾಯಮಂಡಳಿಬೇಕಾಗಿಲ್ಲ, ಯಾವುದೂ ಬೇಕಾಗಿಲ್ಲ. ನಾವು ಎರಡೂ ರಾಜ್ಯದ ಮುಖ್ಯಮಂತ್ರಿಗಳು ಕುಳಿತು ಮಾತುಕತೆ ಆಡುತ್ತೇವೆ ಎಂದು ಹೇಳಲಿ, ಇವೊತ್ತು ನೀವು ಹೇಳಿ ಸ್ವಾಮಿ, ನಾವು ಅದಕ್ಕೆ ಬೇರೆ ರೀತಿಯಲ್ಲಿ ಹೇಳುತ್ತೇವೆ. ಅದನ್ನು ಬಿಟ್ಟು ಸುಪ್ರೀಂಕೋರ್ಟ್‌ನವರು ಏನು ಹೇಳಿದ್ದಾರೆ ಇಡೀ ಸಮಗ್ರ ಕಾವೇರಿಯ ಬಗ್ಗೆ ಅವರು ಹೇಳಿಲ್ಲ, ನ್ಯಾಯಮಂಡಳಿಯ 17 ಟಿ.ಎಂ.ಸಿ. ನೀರಿನ ಬಗ್ಗೆ ಹೇಳುತ್ತಿದ್ದಾರೆಯೇ ಹೊರತು ಬೇರೆ ಮಾತು ಹೇಳುತ್ತಿಲ್ಲ. ಅದರ ಬಗ್ಗೆ ನೀವು ಮಾತುಕತೆಗೆ ಹೋಗಿರತಕ್ಕಂಥದ್ದು. ಈಗ ನೀವು ನೀರು ಬಿಡತಕ್ಕಂಥದ್ದು ಯಾವುದು. ನೀರನ್ನು ನೀವು ಬಿಡುತ್ತೀರಿ ಅದರಲ್ಲಿ ಏನೂ ಅನುಮಾನ

ಇಲ್ಲ, ಈ ಪರಿಸ್ಥಿತಿ ನಿರ್ಮಾಣ ಆಗಿದೆ. ಆದ್ದರಿಂದ, ಇದು ರಾಜ್ಯಕ್ಕೆ ಮಾಡಿದಂಥ ತೀವ್ರ ಅಪಚಾರ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಹೇಳುತ್ತೇನೆ. ನನಗನಿಸುತ್ತದೆ ಇದ-ರೊಳಗೆ ಏನೋ ಒಂದು ನಡೆದಿದೆ ಇದು ಗೋಪ್ಯ ಏಕೆ? ಇದರಲ್ಲಿ ಮುಚ್ಚಿಡತಕ್ಕಂಥ ಉದ್ದೇಶ ಏನು ಇದೆ. ಇದನ್ನು ನೀವು ನಮಗೆಲ್ಲಾ ಹೇಳದೆ ಮುಚ್ಚಿಡತಕ್ಕಂಥದ್ದು ಏನಿದೆ? ಈಗ ನೀವು ಹೋಗುವುದಕ್ಕೆ ಮುಂಚೆ ನಮ್ಮನ್ನೆಲ್ಲಾ ಕರೆದು ಕೇಳಿದ್ದರೆ ಬರುತ್ತಿದ್ದೆವಲ್ಲಾ, ನೀವು ಹೇಳಿದಿರೋ ಈ ತರಹ ಇದೆ ಅವರು ಕರೆದಿದ್ದಾರೆ, ನಾವೇನು ಮಾಡೋಣ, ನಮ್ಮ ಮುಂದಿನ ಹೆಜ್ಜೆ ಏನು ಇಡೋಣ ಎಂದು ಒಂದು ಮಾತು ನೀವು ಹೇಳಬಹುದಾಗಿತ್ತಲ್ಲಾ! ಏತಕ್ಕೆ ಹೇಳಲಿಲ್ಲ ನೀವು?

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಉಪಾಧ್ಯಕ್ಷರೇ, ಅವೊತ್ತು ನಾನು ಪ್ರಾರಂಭದಲ್ಲೇ ಹೇಳಿ-ದೆ, ಗುರುವಾರದ ದಿವಸ ಈ ವಿಚಾರ ಬಂಧ್ದ ತಕ್ಷಣವೇ ಸದನಕ್ಕೆ ತಿಳಿಸಿದಾಗ ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಖರ್ಗೆಯವರು ಇವರೆಲ್ಲಾ ಪ್ರಶ್ನೆ ಎತ್ತಿದಾಗ ಖಂಡಿತವಾಗಿಯೂ ವಿರೋಧಪಕ್ಷ-ದವರ ವಿಶ್ವಾಸವನ್ನು ತೆಗೆದುಕೊಳ್ಳಲೇಬೇಕಾಗುತ್ತದೆ, ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನು ಈ ಸದನ-ದಲ್ಲಿ ನಾವು ತಿಳಿಸಿದೆವು. ನಂತರ ಬೆಳಿಗ್ಗೆ ಬಂದು ವಾಟಾಳ್ ನಾಗರಾಜ್‌ರವರೆ ಪ್ರಾರಂಭ ಮಾಡಿದರು, ಸುಪ್ರೀಂಕೋರ್ಟ್ ಆದೇಶದ ಮೇಲೆ ಹೋಗುತ್ತಿದ್ದೇವೆ ಎಂದು ಹೇಳಿದರೂ ಕೂಡ ಕೇಳದೆ ನೀವು ಹೋಗಕೂಡದು ಅಂದರೆ ಅವರ ಸಲಹೆಯನ್ನು ನಾವು ಕೇಳುವುದಕ್ಕೆ ಆಗುತ್ತದೆಯೇ? ಹೇಳಲಿ ಅವರು, ಸುಪ್ರೀಂಕೋರ್ಟ್‌ನ ಆದೇಶ ಬಂದು ಹೋಗಬೇಕು ಎಂದರೆ ಹೋಗಕೂಡದು ಎಂದು ಇಲ್ಲಿ ನಿಮ್ಮ ಸ್ಟ್ಯಾಂಡ್ ಏನು ಹೇಳಿ; ಕರುಣಾನಿಧಿಯವರು ಟ್ರಿಬ್ಯುನಲ್ ವ್ಯಾಪ್ತಿಯೊಳಗಡೆ ಮಾತನಾಡು-ತ್ತೇವೆ ಎಂದು ಹೇಳಿದ್ದಾರೆ. ನಿಮ್ಮ ನಿಲುವು ಹೇಳಿ ಎಂದು ಹೇಳಿ ಸದನದಲ್ಲಿ ಕುಳಿತುಕೊಂಡು ಒಂದೇ ಸಮನೆ ಇವರು ಆ ವಾದವನ್ನು ಇಟ್ಟು ಹೊರಗಡೆ ಹೋದನಂತರ ಇವರ ಅಭಿಪ್ರಾಯವನ್ನು ಇಲ್ಲೇ ಹೇಳಿಬಿಟ್ಟಿದ್ದಾರೆ. ನ್ಯಾಷನಲ್ ವಾಟರ್ ಪಾಲಿಸಿಯಾಗುವವರೆಗೂ ಸಹ ನೀವು ತೀರ್ಮಾನಕ್ಕೆ ಬರ-ಕೂಡದು ಎಂದು ಅವರು ಹೇಳುತ್ತಾರೆ. ಸುಪ್ರೀಂಕೋರ್ಟ್ ಆದೇಶ ಇದ್ದರೂ ಸಹ ನೀವು ಹೋಗ-ಕೂಡದು ಎಂದು ವಾಟಾಳ್‌ರವರು ಹೇಳುತ್ತಾರೆ. ಈ ಮಧ್ಯೆ ಕುಳಿತುಕೊಂಡು ಸಲಹೆ ತೆಗೆದುಕೊಳ್ಳು-ವುದಕ್ಕೆ, ಒಳ್ಳೆಯ ವಾತಾವರಣವನ್ನು ವಿರೋಧಪಕ್ಷದ ನಾಯಕರುಗಳೆಲ್ಲಾ ಸೃಷ್ಟಿ ಮಾಡುವುದು ಬಿಟ್ಟು ಈ ಸದನದಿಂದ ಸಭಾತ್ಯಾಗ ಮಾಡಿ ನಮ್ಮ ಮೇಲೆ ಆರೋಪಣೆ ಮಾಡತಕ್ಕಂಥದ್ದರಲ್ಲಿ ಅರ್ಥ ಇಲ್ಲ. ನಾವು ರಾಜ್ಯದ ಹಿತವನ್ನು ಗಮನದಲ್ಲಿಟ್ಟುಕೊಂಡು ಉತ್ತಮವಾದ ವಾತಾವರಣವನ್ನು ಸೃಷ್ಟಿಮಾಡಿರು-ವುದರಿಂದ ಅವರು ಎರಡನೇ ಬಾರಿ ಚರ್ಚೆಗೆ ಬರುತ್ತಿದ್ದಾರೆ. ತಾವು ಪತ್ರಿಕೆಗಳಲ್ಲಿ ಓದಿದ್ದೀರಿ ಸಂಯುಕ್ತ ಕರ್ನಾಟಕದಲ್ಲಿ ಬಂದಿದೆ, ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದಿದೆ ಕನ್ನಡಪ್ರಭದಲ್ಲಿ ಬಂದಿದೆ ಇಡೀ ರಾಷ್ಟ್ರದಲ್ಲಿ ಇವೊತ್ತು ಪತ್ರಿಕೆಗಳು ಮುಕ್ತಕಂಠದಿಂದ ಹೊಗಳಿದ್ದಾವೆ. ನರ್ಮದಾ ನದಿಯ ವ್ಯವಹಾರ ಆದನಂತರ ಕಾವೇರಿ ವಿವಾದ ವಿಚಾರದ ಬಗ್ಗೆ ಇವೊತ್ತು ನಾವು ಇಟ್ಟಿರತಕ್ಕ ಹೆಜ್ಜೆಯನ್ನು, ಒಳ್ಳೆಯ ಶುಭದಿನವನ್ನ ಇವೊತ್ತಿನದಿವಸ ಪತ್ರಿಕೆಗಳು ಸಹ ಮುಕ್ತಕಂಠದಿಂದ ಹೊಗಳಿರುವಾಗ ಅವರು ಎರಡನೇ ಸುತ್ತಿನ ಮಾತುಕತೆಗೆ ಬರುತ್ತಿರುವಾಗ ಅದನ್ನು ನೀವು ಮರೆತು ಮಾತನಾಡುತ್ತಿರುವುದು ಸರಿಯಾದುದಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ತಪ್ಪು ತಿಳುವಳಿಕೆಯನ್ನು ಕೊಡಬೇಡಿ. ಸದನದಲ್ಲಿ ಚರ್ಚೆ ಆಗತಕ್ಕಂಥ ವಿಷಯವೇ ಬೇರೆ. ಸದನದಲ್ಲಿ ಇರತಕ್ಕಂಥ ತೀರ್ಮಾನಗಳು, ಈ ಸದನಕ್ಕೆ ಸಂಬಂಧಪಟ್ಟಂಥ, ಸದಸ್ಯರಿಗೆ ಸಂಬಂಧಪಟ್ಟಂಥದ್ದು, ಸರ್ಕಾರ ಮತ್ತು ಸದನದ ಸದಸ್ಯರು ಏನು ತೀರ್ಮಾನಕ್ಕೆ ಬರುತ್ತಾರೋ ಆ ತೀರ್ಮಾನ, ಅವರು ಸದಸ್ಯರು ಈ ಮನೆಯಲ್ಲಿ ಇರಬಹುದು ಇಲ್ಲ-ದೇ ಇರಬಹುದು, ಎಲ್ಲಾ ವಿರೋಧಿಪಕ್ಷಗಳ ಸದಸ್ಯರನ್ನು ಕರೆಯಿಸಿ ಅಥವಾ ಪಕ್ಷಗಳನ್ನು ಕರೆಯಿಸಿ ಈ ಒಂದು ಜಲವಿವಾದದ ಬಗ್ಗೆ ತೀರ್ಮಾನ ತೆಗೆದುಕೊಳ್ಳತಕ್ಕಂಥದ್ದು ಆದು ಬೇರೆ ವಿಚಾರ. ನೀವು ಅದಕ್ಕೂ ಇದಕ್ಕೂ ಸೇರಿಸಿ ಇಲ್ಲಿ ಸಭಾತ್ಯಾಗ ಮಾಡಿದಿರಿ ಅದಕ್ಕೆ ನಾವು ವಿರೋಧಪಕ್ಷಗಳನ್ನು ಕರೆ-ಯಿಸಿ ಮಾತನಾಡಿಲ್ಲ ಎಂದು ಹೇಳತಕ್ಕಂಥದ್ದು ಸರಿಯಲ್ಲ. ಮತ್ತು ತಾವು ಈ ಸದನದ ಮುಖಾಂತರ ಜನರಿಗೆ ಒಂದು ದಿಕ್ಕು ತಪ್ಪಿಸತಕ್ಕಂಥ ಒಂದು ಹೇಳಿಕೆಯನ್ನು ಕೊಡುತ್ತಾ ಇದ್ದೀರಿ. ಅಂದರೆ ಏನು ಸರ್ಕಾರದವರು ತಮ್ಮ ಒಂದು ನಿಲುವಿಗೆ ತಯಾರಿದ್ದರು ಈ ವಿರೋಧಪಕ್ಷದವರೇ ಏನೋ ಅಡ್ಡಿ ಬಂದು ಈ ಮಾತುಕತೆಗೆ ಅಡ್ಡಿ ಹಾಕತಕ್ಕಂಥ ಪ್ರಯತ್ನ ಮಾಡುತ್ತಿದ್ದಾರೆ ಎನ್ನತಕ್ಕಂಥ ಧಾಟಿಯಲ್ಲಿ ನೀವು ಹೇಳುತ್ತಿದ್ದೀರಿ. ದಯವಿಟ್ಟು ಅದನ್ನು ಹೇಳಬೇಡಿ. ಸದನದಲ್ಲಿ ಆದಂಥ ತೀರ್ಮಾನಕ್ಕೆ ಅಥವ ಸದನದಲ್ಲಿ ನಿಮ್ಮ ಹೇಳಿಕೆಗೆ ವಿರೋಧ ಮಾಡಿ ಸಭಾತ್ಯಾಗ ಮಾಡಿದ್ದೇವೆ. ಆಮೇಲೆ ತಾವೇ ಅನೇಕ-ಸಾರಿ ಮುಖ್ಯಮಂತ್ರಿಗಳು, ಸಂಬಂಧಪಟ್ಟ ಮಂತ್ರಿಗಳ ಸಭೆಯನ್ನು ಕರೆದು ಎಷ್ಟೋ ಸಲ ಚರ್ಚೆಯನ್ನು ಮಾಡಿದ್ದೇವೆ. ಹೋದಸಲ ಕಾವೇರಿ ಬಗ್ಗೆ ಇಲ್ಲೆ ಧರಣಿ ನಡೆದಾಗ ಸಭಾತ್ಯಾಗ ಮಾಡಿದಾಗ ಮಾನ್ಯ ದೇವೇಗೌಡರು ಸಮ್ಮೇಳನ ಸಭಾಂಗಣದಲ್ಲಿ ಎಲ್ಲಾ ಜನರನ್ನು ಕರೆಸಿದ್ದರು. ಅದರಲ್ಲಿ ರೈತ ಸಂಘ-ದವರಿಗೆ, ಸಿ.ಪಿ.ಐ.ನವರಿಗೆ ಮತ್ತು ಯಾವ ಯಾವ ಪಕ್ಷಗಳು ಬಿ.ಎಸ್.ಪಿ.ಯವರನ್ನೂ ಕೂಡ, ಯಾವ ಯಾವ ಪಕ್ಷಗಳು ಎಲ್ಲೆಲ್ಲಿ ಪ್ರತಿನಿಧಿಸುತ್ತಿಲ್ಲ ಅಂತಹವರನ್ನು ಸಹ ಕರೆದು ಮಾತನಾಡಿದ್ದಾರೆ. ಅದಕ್ಕಾಗಿ ಪುನಃ ಪುನಃ ಅದನ್ನು ಹೇಳುವುದಕ್ಕೆ ಹೋಗಬೇಡಿ ಮತ್ತು ದಾರಿ ತಪ್ಪಿಸಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಉಪಾಧ್ಯಕ್ಷರೆ, ತಾತ್ಕಾಲಿಕವಾಗಿ ಇವೊತ್ತು ಬಂದಿರುವ ಸಮಸ್ಯೆಯನ್ನು ಬಗೆಹರಿಸಿ ಒಂದು ತಿಳಿ ವಾತಾವರಣವನ್ನು ತಾವು ಮಾಡಿಕೊಂಡು ಬೇರೆ ಯಾವು-ದೋ ಹಿನ್ನೆಲೆಯಲ್ಲಿ ಹೋಗಿಬಂದಿದ್ದರೆ ಅದನ್ನು ಸ್ಪಷ್ಟ ಮಾಡಿ. ಯಾವುದೇ ಸರ್ಕಾರ ಇರಬಹುದು, ತಮಿಳುನಾಡು ಸರ್ಕಾರ ಇರಬಹುದು, ನಮ್ಮ ರಾಜ್ಯ ಸರ್ಕಾರ ಇರಬಹುದು ಇಂತಹ ಪ್ರಮುಖ-ವಾದಂಥ ತೀರ್ಮಾನ ಮಾಡುವಂಥ ಕಾಲದಲ್ಲಿ ಯಾವ ಆಧಾರದ ಮೇಲೆ ನೀರನ್ನು ಹಂಚಿಕೊಳ್ಳಲಿಕ್ಕೆ ತಮಿಳುನಾಡಿನವರು ಒಪ್ಪಿಕೊಳ್ಳುತ್ತಾರೆ ಅಥವ ನಾವು ಒಪ್ಪುವುದಕ್ಕೆ ಸಾಧ್ಯ ಇದೆ? ನೀವೇನಾದರೂ ಹೋದಾಗ ಇವೊತ್ತು ಮೊದಲನೇ ಹಂತದಲ್ಲಿ ನಾವೇನು ಅವೊತ್ತಿನಿಂದ ಹೇಳುತ್ತಿದ್ದೇವೆ ಯಡಿ-ಯೂರಪ್ಪನವರು ಹಾಗೆ ಹೇಳುತ್ತಾರೆ, ವಾಟಾಳ್ ಹೀಗೆ ಹೇಳುತ್ತಾರೆ ಅವರು ನ್ಯಾಯಮಂಡಳಿಯನ್ನು ಬಹಿಷ್ಕರಿಸಿ ಎಂದು ಹೇಳುತ್ತಾರೆ, ನ್ಯಾಯಮಂಡಳಿ ತೀರ್ಮಾನಕ್ಕೆ ಒಪ್ಪಿಕೊಳ್ಳಬೇಡಿ ಎಂದು ಹೇಳು-ತ್ತಾರೆ. ಯಡಿಯೂರಪ್ಪನವರು ನ್ಯಾಷನಲ್ ವಾಟರ್ ಪಾಲಿಸಿ ಗೈಡಲೈನ್ಸ್‌ನ್ನು ಫ್ರೇಮ್ ಮಾಡಲಿ ಎಂದು ಹೇಳುತ್ತಾರೆ. ಇದೇ ತಾನೇ ಅವೊತ್ತಿನಿಂದ ಇವೊತ್ತಿನವರೆಗೂ ಕಳೆದ 4-5 ವರ್ಷಗಳಿಂದ

ನಾವು ಚರ್ಚೆ ಮಾಡುತ್ತಿರುವಂಥದ್ದು. ಅದೇ ತಾನೇ ಆಧಾರವಾಗಿರಬೇಕಾದದ್ದು, ಅದನ್ನು ನೀವಿಬ್ಬರು ಮುಖ್ಯಮಂತ್ರಿಗಳು ಸೇರಿಕೊಂಡು ಒತ್ತಾಯ ಮಾಡಿ ಈ ಮೊದಲನೇ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ ಅದೇನೆಂದರೆ ಮೊದಲನೆಯದಾಗಿ ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಫ್ರೇಂ ಮಾಡಿ ಎಂದು ಒತ್ತಾಯ ತಂದಿದ್ದೇವೆ, ಒಕ್ಕೊರಲಿನ ಅಭಿಪ್ರಾಯಕ್ಕೆ ನಾವು ಬಂದಿದ್ದೇವೆ. ನಾವು ಮಾತುಕತೆ ಮೂಲಕ ತೀರ್ಮಾನ ಮಾಡೋಣ ಯಾವುದೇ ಕಾರಣಕ್ಕೆ ಈ ನ್ಯಾಯ-ಮಂಡಳಿಯ ಮಧ್ಯಸ್ಥಿಕೆ ನಮಗೆ ಬೇಡ ಇದರ ಮೇಲೆ ನಾವು ಮಾತುಕತೆಯನ್ನು ಪ್ರಾರಂಭ ಮಾಡಿ-ದ್ದೇವೆ ಎಂದರೆ, ನಾವು ಕೆಲವು ವಿಷಯಗಳನ್ನು ಹೇಳಬೇಕಾಗುತ್ತದೆ. ನಾವು ತಮಿಳುನಾಡಿನ ವಿರುದ್ಧ ಇದ್ದೇವೆ, ಅಥವಾ ನಾವು ನಮ್ಮ ನೀರನ್ನು ಬಿಡಬಾರದು ಎನ್ನುವಂಥ ವಾತಾವರಣ ಸೃಷ್ಟಿಸುತ್ತಿದ್ದೇವೆ ಎಂದು ಇಡೀ ದೇಶಕ್ಕೆ ಇವರು ಸಾರಿಕೊಂಡು ಬಂದರು ಈ ಸದನದಲ್ಲಿ ಅದೇ ಮಾತನ್ನು ನಾವು ಆಡುತ್ತಿದ್ದೇವೆ ಎನ್ನುವಂಥ ಭಾವನೆಯನ್ನು ದೇಶದ ಜನರಿಗೆ ತೋರಿಸುವಂಥ ಪ್ರಯತ್ನ ಮಾಡಬೇಡಿ. ನಮ್ಮದು ಆ ಉದ್ದೇಶ ಅಲ್ಲ. ಎರಡೂ ರಾಜ್ಯದ ಹಿತಕ್ಕೆ ಧಕ್ಕೆ ಬರದ ರೀತಿ ಯಾವುದಾದರೂ ಒಂದು ಆಧಾರದ ಮೇಲೆ ಈ ತೀರ್ಮಾನಗಳು ಆಗಬೇಕು ಎನ್ನುವುದು ಅವೊತ್ತಿನಿಂದ ಇವೊತ್ತಿನವರೆಗೂ ನಮ್ಮ ಒತ್ತಾಯ. ನೀವು ಯಾವುದೋ ಒಂದು ಸಂದಿಗ್ಧತೆಗೆ ಸಿಕ್ಕಿಕೊಂಡು ಏನೋ ಒಂದು ಒಳ್ಳೆಯ ವಾತಾವರಣವನ್ನು ಮೂಡಿಸಿ ಹೇಗೋ 4-6 ತಿಂಗಳು ಅಧಿಕಾರದಲ್ಲಿ ಮುಂದುವರಿಯಬೇಕು ಎಂದು ಇದನ್ನೆಲ್ಲಾ ಮಾಡಿಕೊಂಡು ನಮ್ಮ ಮೇಲೆ ಹೇರಲು ಹೋಗುತ್ತಿದ್ದೀರಲ್ಲಾ. ನಿಮ್ಮ ಆತ್ಮ ಹೇಗೆ ಒಪ್ಪಿ-ಕೊಳ್ಳುತ್ತದೆ ನಾಗೇಗೌಡರೇ? ಆಗ ಮಾನ್ಯ ದೇವೇಗೌಡರು ನೀರು ಬಿಟ್ಟಾಗ ಏನು ಹೇಳಿದಿರಿ ನಾನು ಹೇಗೆ ಮಂಡ್ಯಕ್ಕೆ ಹೋಗಲಿ, ಬಿಡುತ್ತಾರಾ ನಮ್ಮನ್ನು; ಕಡಿತಾರೆ ಎಂದು ಕೂಗಿದವರು ನೀವೇನೇ; ಇವೊತ್ತು ನೀವೇ ನೀರಾವರಿ ಸಚಿವರಾಗಿ ಹೀಗೆ ಹೇಳಿದರೆ ಹೇಗೆ?

ಶ್ರೀ ಕೆ.ಎಸ್. ನಾಗೇಗೌಡ:- ನೀವೇ ಬೆಳಿಗ್ಗೆ ಪ್ರಾರಂಭದ ಭಾಷಣದಲ್ಲಿ ಹೇಳಿದಿರಿ. ನಮ್ಮ ಪ್ರಧಾನಿ ಇರುವಂಥ ಕಾಲದಲ್ಲಿ ಈ ರಾಜ್ಯದಲ್ಲಿ ಇಂತಹ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದಕ್ಕೆ ಒಳ್ಳೆಯ ವಾತಾವರಣ ಇದೆ ಎಂದು ನೀವೇ ಒಂದು ಕಡೆ ಹೇಳುತ್ತೀರಿ. ಇನ್ನೊಂದು ಕಡೆ ಹೇಳುತ್ತೀರಿ ಅಧಿಕಾರ ಉಳಿಸಿಕೊಳ್ಳುವುದಕ್ಕೋಸ್ಕರ, ಕುರ್ಚಿ ಉಳಿಸಿಕೊಳ್ಳುವುದಕ್ಕೋಸ್ಕರವಾಗಿ ಒಪ್ಪಂದ ಮಾಡಿ-ಕೊಂಡು ಬಂದಿರಿ ಎಂದು ಹೇಳುತ್ತಿದ್ದೀರಿ ಎರಡೂ ಕಡೆಯ ಮಾತನ್ನು ನೀವೇ ನೋಡಿ. ಸ್ವಲ್ಪ ತಾಳ್ಮೆ-ಯಿಂದ ತಡೆದುಕೊಂಡರೆ ಎಲ್ಲಾ ಸಮಸ್ಯೆಯೂ ಬಗೆಹರಿಯುತ್ತದೆ.

4.20 ಪಿ.ಎಂ.

ಶ್ರೀ ವಾಟಾಳ್ ನಾಗರಾಜ್:- ಈ ಸಭೆಯನ್ನು ವಿರೋಧಪಕ್ಷದ ಮುಖಂಡರ ಸಭೆ ಎಂದು ತಾವು ತಿಳಿದುಕೊಳ್ಳಬಾರದು. ಈ ಸಭೆ ಈ ಸದನಕ್ಕೆ ಪಕ್ಷಾತೀತವಾದದ್ದು. ನೀವು ನಮ್ಮ ಮಾತು ಒಪ್ಪ-ಲಿಲ್ಲವೆಂದು ನಾವು ಸದನದಲ್ಲಿ ಸಭಾತ್ಯಾಗ ಮಾಡಿದೆವು. ಈ ಸದನದಲ್ಲಿ ನೀವು ಸೂತ್ರವನ್ನು ಇಟ್ಟು, ಇದನ್ನು ಚರ್ಚೆ ಮಾಡಿ ಎಂದು ಹೇಳಿದ್ದಿರಾ? ನೀವು ಏನೂ ಹೇಳಲಿಲ್ಲ. ನೀವು ಕರೆಯಬೇಕಾಗಿತ್ತು,

ನಾವು ಸಭಾತ್ಯಾಗವನ್ನು ಮಾಡಬಹುದು ಅಥವಾ ಏನೇ ಮಾಡಬಹುದು. ಇಲ್ಲಿ ಅನೇಕ ಭಿನ್ನಾಭಿ-ಪ್ರಾಯಗಳು ಬರಬಹುದು. ನೀವು ವಿರೋಧಪಕ್ಷಗಳನ್ನು ಇತಿಹಾಸದುದ್ದಕ್ಕೂ ಎಲ್ಲಾ ಮುಖ್ಯಮಂತ್ರಿ-ಗಳು, ಎಲ್ಲಾ ಸರ್ಕಾರಗಳು ಮಾಡಿಕೊಂಡು ಬಂದಂಥದ್ದನ್ನು ಗಾಳಿಗೆ ಹಾಕಿ, ಆ ಸಂಪ್ರದಾಯವನ್ನು ಬದಿಗೊತ್ತಿ, ರಾಜ್ಯದ ಹಿತವನ್ನು ಕಾಪಾಡುವಾಗ ಎಲ್ಲಾ ವಿರೋಧಪಕ್ಷಗಳು ಅತಿ ಮುಖ್ಯವೆಂದು ಕರೆ-ಯುವಂತಹ ಒಂದು ಸಂಪ್ರದಾಯವನ್ನು ಗಾಳಿಗೆ ಹಾಕಿ ನಾವೇ ನಾಲ್ಕು ಜನರು ಹೋಗುತ್ತೇವೆ. ಶಾಸನಸಭೆ ಏಕೆ ಬೇಕು? ರಾಜ್ಯ ಏಕೆ ಬೇಕು? ಎಂದು ಇವತ್ತು ನೀವು ಹೇಳುವಂಥಾದ್ದು ನೋಡಿದರೆ ನಾವೇನೋ ಅಡ್ಡಿ ಮಾಡಿದ್ದೇವೊ ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದೀರಿ. ನೀವು ನಮ್ಮನ್ನು ಕರೆಯ-ಬೇಕಾಗಿತ್ತು, ಕರೆದು ಮಾತನಾಡಬೇಕಾಗಿತ್ತು. ಆಗ ನಾವು ನಿಮ್ಮ ಸೂತ್ರಗಳನ್ನು ಒಪ್ಪಿದ್ದರೆ ಒಪ್ಪುತ್ತಿದ್ದೆವು, ಇಲ್ಲದಿದ್ದರೆ ಹೊರಗಡೆ ಬರುತ್ತಾ ಇದ್ದೆವು. ನಾನು ಇವತ್ತು ಅಂತಿಮವಾಗಿ ಹೇಳುತ್ತಿದ್ದೇನೆ. ಇವತ್ತು ಎಲ್ಲಾ ನಿಮ್ಮ ಮಾತಿನ ಪ್ರಕಾರ ಉಭಯ ರಾಜ್ಯಗಳ ರೈತರ ಹಿತಾಸಕ್ತಿಯ ರಕ್ಷಣೆಯ ದೃಷ್ಟಿಯಿಂದ ಇರುವ ನೀರನ್ನು ಪರಸ್ಪರ ಲಾಭವಾಗುವಂತೆ ಹಂಚಿಕೊಳ್ಳುವ ತಾತ್ಕಾಲಿಕವಾದ ವ್ಯವಸ್ಥೆಗೆ ಕರ್ನಾಟಕ ಮುಖ್ಯಮಂತ್ರಿಯವರಾದ ಶ್ರೀ ಜೆ.ಹೆಚ್. ಪಟೇಲ್ ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳಾದ ಶ್ರೀ ಎಂ. ಕರುಣಾನಿಧಿ ಇಲ್ಲಿ ಒಪ್ಪುವ ಮೂಲಕ ಶತಮಾನದಷ್ಟು ಹಳೆಯದಾದ ಈ ಶೀತಲ ಸಮರಕ್ಕೆ ತೆರೆ ಎಳೆದರು. ಇದು ಬಹಳ ಆಶ್ಚರ್ಯವಾಗುತ್ತದೆ ಇದರ ಬಗ್ಗೆ ಏನಾಗಬೇಕು ಎನ್ನುವಂತಹ ಒಂದು ಸಮರೋಪಾದಿಯಾಗಿ ಇಡೀ ಯುದ್ಧವೇ ನಡೆದುಹೋಗಿದೆ. ಆ ಕಡೆ ಸೈನ್ಯ ಈ ಕಡೆ ಸೈನ್ಯ ಏನು ಆಯಿತು? ಇದೆಲ್ಲಾ ಎಲ್ಲಿಗೆ ಹೋಯಿತು. ಆದುದರಿಂದ ನೀವು ಮೊದಲನೆಯದಾಗಿ ನ್ಯಾಯ-ಮಂಡಳಿಯನ್ನು ಹೊರಗೆ ಇಟ್ಟಿದ್ದೀರೋ? ನೀರು ಕೊಡುತ್ತೀರೊ ಎಂಬುದನ್ನು ಹೇಳಬೇಕು. ಇನ್ನು ಮುಂದೆ ನ್ಯಾಯಮಂಡಳಿಯನ್ನು ಬಿಟ್ಟು ಸಮಗ್ರವಾಗಿ ಇಡೀ ಕಾವೇರಿ ಸಮಸ್ಯೆಯನ್ನು ಮಾತುಕತೆಯ ಮೂಲಕ ಬಗೆಹರಿಸುತ್ತೇವೆನ್ನುವ ಸ್ಪಷ್ಟ ನಿಲುವು ನಿಮಗೆ ಸಿಗುತ್ತದೆಯೇ? ಈ ಮಾತಿಗೆ ತಮಿಳುನಾಡಿನ ಮುಖ್ಯಮಂತ್ರಿಯವರಾದ ಶ್ರೀ ಕರುಣಾನಿಧಿಯವರು ನ್ಯಾಯಮಂಡಳಿ ಬೇಡವೆಂದು ಹೇಳಿದ್ದಾರೆಯೆ? ಎಲ್ಲವನ್ನೂ ಸದನದ ಮುಂದೆ ಸ್ಪಷ್ಟಪಡಿಸಬೇಕು ಎಂದು ಹೇಳಿ ತಾವು ಮಾತುಕತೆಗೆ ಹೋಗಿ ಕರ್ನಾ-ಟಕ ರಾಜ್ಯದ ರೈತರನ್ನು ಕಡೆಗಣಿಸಿದ್ದಿರಿ; ಕರ್ನಾಟಕವನ್ನು ಬಲಿಪಶು ಮಾಡಿದ್ದೀರಿ. ಕರ್ನಾಟಕದ ಜನತೆಯನ್ನು ತೀವ್ರವಾಗಿ ಕಡೆಗಣಿಸಿದ್ದೀರಿ. ಇವತ್ತು ಅವರು ಚಳುವಳಿಯನ್ನು ಮಾಡದೆ ಇರಬಹುದು. ಆದರೆ ರಾಜ್ಯದ ಜನತೆಯ ಶಾಪಕ್ಕೆ ಗುರಿಯಾಗುತ್ತೀರಿ.

ಶ್ರೀ ಕೆ.ಎನ್. ನಾಗೇಗೌಡ:- ತಾವು ಸಲಹೆ ಕೊಡಿ, ಕೋರ್ಟಿಗೆ ಹೋಗಬೇಕೇ, ಟ್ರಿಬ್ಯೂನಲ್ ಮುಂದೆ ಹೋಗಬೇಕೇ, ಮಾತುಕತೆಗೆ ಹೋಗಬೇಕೇ ಎಂಬ ಬಗ್ಗೆ ಸಲಹೆ ಕೊಡಿ. ನೀವು ಮಾತುಕತೆಗೆ ಹೋಗಿ ಅನ್ಯಾಯ ಮಾಡಿದ್ದೀರೆಂದು ಹೇಳಿದ ಮೇಲೆ ನಾವು ಇನ್ನು ಎಲ್ಲಿಗೆ ಹೋಗಬೇಕಾಗಿತ್ತು?

ಶ್ರೀ ವಾಟಾಳ್ ನಾಗರಾಜ್:- ನಾನು ಮಾತುಕತೆಗೆ ಅನ್ವಯಿಸಿಕೊಂಡು ಹೇಳುತ್ತಾ ಇಲ್ಲ. ಯಾವ ರೀತಿಯ ಸೂತ್ರದ ಮಾತುಕತೆ ನಿಮ್ಮದು, ನ್ಯಾಯಮಂಡಳಿಯ ಹೊರಗೋ, ಒಳಗೋ, ನ್ಯಾಯಮಂಡಳಿಯನ್ನು ಬಿಟ್ಟಿದ್ದೀರೇನು? ನೀವು ಅದು ಹೇಳುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಹಾಗೆ ಅಂದಾಗ ಅವರು ದೆಹಲಿಯ ಕಡೆ ನೋಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಅಲ್ಲೇ ಇರಿ ನೀವು; ಪರಿಸ್ಥಿತಿ ಏನಾಗಿದೆ ಎಂದರೆ ಈ ರಾಜ್ಯದ ಶ್ರೀಮಾನ್ ದೇವೇಗೌಡರು ಪ್ರಧಾನಮಂತ್ರಿಗಳಾಗಿ ಇರಲಿ, ಅವರ ಬಗ್ಗೆ ನನ್ನ ತಕರಾರು ಇಲ್ಲ. ಮಾನ್ಯ ದೇವೇಗೌಡರು ಪ್ರಧಾನಮಂತ್ರಿಗಳು ಆದರು ಎಂದೂ ಕರ್ನಾಟಕ ರಾಜ್ಯದ ಗಡಿ ಸಮಸ್ಯೆ ಬಿಟ್ಟು ಬಿಡಿ, ನೀರು ಬಿಟ್ಟು ಬಿಡಿ, ಎಂದು ಹೇಳಿಬಿಟ್ಟರೆ ಇದು ಏನು ಧರ್ಮಛತ್ರವೇ? ಅವರು ಪ್ರಧಾನಮಂತ್ರಿಗಳಾಗಿ ನಾಲ್ಕೂವರೆ ಕೋಟಿ ಕನ್ನಡಿಗರ ಜೀವನ ಪ್ರಶ್ನೆಯನ್ನು ಏನು ಮಾಡಬೇಕೆಂದು ಮಾಡಿದ್ದಾರೆ? ಆಲಮಟ್ಟಿ ಜಲಾಶಯದಲ್ಲಿ ಹೊಂದಾಣಿಕೆ, ಕಾವೇರಿ ನದಿ ಬಗ್ಗೆ ಅವರ ಜೊತೆಯಲ್ಲಿ ಹೊಂದಾಣಿಕೆ ಈ ಪರಿಸ್ಥಿತಿಯಾದರೆ ಇದರಿಂದ ನಮಗೆ ಒಳ್ಳೆಯದಾಗುವುದಿಲ್ಲ. ನಮಗೆ ಕಾಲು ಹೋಗಲಿ, ಕತ್ತು ಹೋಗಲಿ, ಕಣ್ಣು ಹೋಗಲಿ, ತಲೆ ಹೋಗಲಿ ನಮ್ಮವರಲ್ಲೇ ಈ ಭಾವನೆ ಇದೆಯಲ್ಲಾ, ಇದು ಒಳ್ಳೆಯ ನೀತಿಯಲ್ಲ. ಈ ನೀತಿ ವಿರುದ್ಧ ಜನರು ತಕ್ಷಣ ದಂಗೆ ಏಳದೆ ಇರಬಹುದು. ಆದರೆ ಜನರ ಹೃದಯ ಮನಸ್ಸಿನಲ್ಲಿ ಇವತ್ತು ನೀವು ಮಾಡಿರುವಂತಹ ಅಪರಾಧ ಕುಣಿಯುತ್ತಿದೆ ಮತ್ತು ಕುದಿಯುತ್ತಿದೆ. ಜನರು ರಸ್ತೆಯಲ್ಲಿ ಏನು ಮಾಡುತ್ತಾರೆಂದು ನೀವು ತಿಳಿದುಕೊಂಡಿರಬಹುದು ಜನರನ್ನು ದೂಷಣೆ ಮಾಡುವಂತಹ ಪ್ರಶ್ನೆ ಬಂದಿಲ್ಲ. ಜನರು ತಿರುಗಿ ಬೀಳುತ್ತಾರೆ. ಅವರು ತಿರುಗಿ ಬೀಳುವುದಿಲ್ಲವೆಂದು ನೀವು ತಿಳಿದುಕೊಳ್ಳಬೇಡಿ, ನೀವು ಮಾಡುವುದನ್ನೆಲ್ಲಾ ಜನರು ಒಪ್ಪಿಕೊಳ್ಳುತ್ತಾರೆಂದು ನೀವು ತಿಳಿದುಕೊಳ್ಳಬೇಕಾಗಿಲ್ಲ. ಆದುದರಿಂದ ಜನರು ಮುಗ್ಧರಾದರೂ ಅವರು ಶಾಪ ನಿಮಗೆ ತಟ್ಟುತ್ತದೆನ್ನುವ ಮಾತನ್ನು ಹೇಳಿ ನೀವು ಮಾಡಿರುವಂಥಾದ್ದು ಕರ್ನಾಟಕಕ್ಕೆ ಮಹಾ ದ್ರೋಹ ಮಾಡಿದ್ದೀರಿ ಎನ್ನುವಂತಹ ಮಾತನ್ನು ಹೇಳಿ, ಸಮಗ್ರವಾಗಿ ನಿಲುವಳಿ ಸೂಚನೆ ಚರ್ಚೆಗೆ ಅವಕಾಶ ಕೊಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ **ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):-** ಮಾನ್ಯ ಉಪಾಧ್ಯಕ್ಷರೇ, ಈ ಸದನ ಪ್ರಾರಂಭವಾದಾಗಿನಿಂದಲೇ ಕಾವೇರಿ ನದಿ ನೀರಿನ ವಿವಾದದ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಈ ಕಾವೇರಿ ವಿವಾದ ಸುಮಾರು 50 ವರ್ಷಗಳಿಂದ ನೆನಗುದಿಗೆ ಬಿದ್ದಿರುವಂತಹ ವಿಷಯವಾಗಿದೆ. ಈ ವಿವಾದವನ್ನು ಯಾವುದೇ ನ್ಯಾಯಾಲಯದಲ್ಲಿ, ಯಾವುದೇ ಟ್ರಿಬ್ಯುನಲ್ ಮುಂದೆ, ಕಾನೂನು ಮುಖಾಂತರ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವಂತಹ ಅಭಿಪ್ರಾಯ ಈ ದೇಶದ ಸರ್ವೋಚ್ಛ ನ್ಯಾಯಾಲಯಕ್ಕೂ ಬಂದಿದೆ, ಟ್ರಿಬ್ಯೂನಲ್‌ಗೂ ಬಂದಿದೆ. ಈ ಹಿನ್ನಲೆಯಲ್ಲಿ ಈ ಎರಡು ರಾಜ್ಯದಲ್ಲಿರುವಂತಹ ನೀರಿನ ವಿವಾದವನ್ನು ಮಾತುಕತೆಯ ಮುಖಾಂತರ ಪರಿಹಾರ ಮಾಡಬೇಕೆಂದು ಹೇಳುವಂಥ ಒಂದು ಪ್ರಯತ್ನ ಸತತವಾಗಿ ನಡೆಯುತ್ತಾ ಇದೆ. ಕಳೆದ 27ನೇ ತಾರೀಖು ಡಿಸೆಂಬರ್‌ನಲ್ಲಿ ಇದೇ ಸದನದಲ್ಲಿ ನಾವು ಎಲ್ಲರೂ ಸೇರಿ ಒಂದು ಸರ್ವಾನುಮತದಂತಹ ನಿರ್ಣಯವನ್ನು ಇಲ್ಲಿ ಅಂಗೀಕಾರ ಮಾಡುವಂತಹ ಸಂದರ್ಭದಲ್ಲಿ ಕೂಡ ಈ ಸದನದಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ ಮಾತುಕತೆಯ ಮುಖಾಂತರ ಎರಡೂ ರಾಜ್ಯಗಳ ಮಧ್ಯೆ ಇರುವಂತಹ ಸಮಸ್ಯೆಯನ್ನು

ಪರಿಹಾರ ಮಾಡಬೇಕೆನ್ನುವ ನಿರ್ಣಯವನ್ನು ಇದೇ ಸದನ ಒಪ್ಪಿಕೊಂಡಿದೆ. ಈ ಹಿನ್ನಲೆಯಲ್ಲಿ ಸುಪ್ರೀಂಕೋರ್ಟಿನ ಆದೇಶದ ಮೇಲೆ 5ನೇ ತಾರೀಖು ಎರಡೂ ರಾಜ್ಯಗಳ ಮಧ್ಯೆ ತಮಿಳುನಾಡಿನ ರಾಜಧಾನಿಯಾದ ಮದ್ರಾಸ್‌ನಲ್ಲಿ ಮಾತುಕತೆ ನಡೆದಿದೆ. ಇಲ್ಲಿ ಬಂದಿರುವಂತಹ ಪ್ರಶ್ನೆ ಏನೆಂದರೆ ಯಾವ ಆಧಾರದ ಮೇಲೆ ಚರ್ಚೆ ನಡೆದಿದೆ? ಯಾವ ಸೂತ್ರದ ಆಧಾರದ ಮೇಲೆ ನೀವು ಒಪ್ಪಂದಕ್ಕೆ ಬಂದಿದ್ದೀರಿ? ಎನ್ನುವಂತಹ ಪ್ರಶ್ನೆ ಇಲ್ಲಿ ಚರ್ಚೆಯಾಗುತ್ತಾ ಇದೆ. 50 ವರ್ಷಗಳಿಂದ ನನ್ನ ಪ್ರಾಮಾಣಿಕವಾದಂತಹ ಅನಿಸಿಕೆ ಏನೆಂದರೆ ಈ ಸಮಸ್ಯೆಯನ್ನು ಕಳೆದ 50 ವರ್ಷಗಳ ಅಗ್ರಿಮೆಂಟ್ 1974ಕ್ಕೆ ಮುಗಿದುಹೋಯಿತು. 1996ನೇ ಇಸವಿ ಎಂದರೆ ಸರಿ ಸುಮಾರು 22 ವರ್ಷಗಳಿಂದ ಈ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳುವುದಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನ ನಡೆಯಲಿಲ್ಲವೆಂದು ನನ್ನ ಸ್ಪಷ್ಟವಾದಂತಹ ಅಭಿಪ್ರಾಯವಾಗಿದೆ. ಎರಡನೆಯದಾಗಿ ಈ ಕಾವೇರಿ ನದಿ ನೀರಿನ ಜಲ ವಿವಾದದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು, ರಾಜಕೀಯ ಮಾಡುತ್ತಾ ಬಂದಿದೆಯೇ ಹೊರತು, ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡುವುದಕ್ಕೆ ಆಗಿಲ್ಲ. ಜಲ ವಿವಾದ, ನೆಲ ವಿವಾದ, ಭಾಷೆ ವಿವಾದ, ಬೀದಿಯಲ್ಲಿ ಪರಿಹಾರ ಮಾಡುವಂತಹ ವಿಷಯವಲ್ಲ. ಇದು ಕೋರ್ಟ್, ಕಾನೂನುಗಳಿಂದ ಪರಿಹಾರ ಮಾಡುವಂತಹ ವಿಷಯವಲ್ಲ. ರಾಷ್ಟ್ರದ ಸಮಗ್ರತೆಯ ಹಿನ್ನಲೆಯಲ್ಲಿ, ಐಕ್ಯತೆಯ ಹಿನ್ನಲೆಯಲ್ಲಿ, ಪರಸ್ಪರ ಸಂಬಂಧಪಟ್ಟಂತಹ ರಾಜ್ಯಗಳ ಮಾತಕತೆಯ ಮುಖಾಂತರವೇ ಈ ಸಮಸ್ಯೆಗಳನ್ನು ಪರಿಹಾರ ಮಾಡಬೇಕೆ ಹೊರತು ಯಾವುದೇ ಕೋರ್ಟ್, ಯಾವುದೇ ಕಾನೂನು, ಅಥವಾ ಬೀದಿ ಹೋರಾಟದಿಂದ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಕರ್ನಾಟಕದ ಅನುಭವ ನಮ್ಮ ಮುಂದೆ ಇದೆ. ಈ ದೇಶದಲ್ಲಿ ಮುಗ್ಧ ಜನರನ್ನು ಬಲಿ ಕೊಟ್ಟಿದ್ದೀರಿ. ನೂರಾರು, ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳ ಆಸ್ತಿಪಾಸ್ತಿಗಳನ್ನು ನಾವು ನಾಶ ಮಾಡಿಕೊಂಡಿದ್ದೇವೆ. ಆ ಕಷ್ಟವನ್ನು ಅನುಭವಿಸಿದ್ದೇವೆ. ನಾವು ಇವತ್ತು ವೀರಾವೇಶದಿಂದ ಭಾಷಣವನ್ನು ಮಾಡಿ ನಾವು ರಕ್ತವನ್ನಾದರೂ ಸುರಿಸುತ್ತೇವೆ, ನೀರನ್ನು ಬಿಡುವುದಿಲ್ಲವೆಂದು ಭಾಷಣವನ್ನು ಮಾಡಿದಂಥವರು ಕೆಲವರು, ಪ್ರಾಣವನ್ನಾದರೂ ತ್ಯಾಗ ಮಾಡುತ್ತೇವೆ, ನೀರನ್ನು ಬಿಡುವುದಿಲ್ಲವೆಂದು ಭಾಷಣ ಮಾಡಿದಂಥವರು ಈ ಅಭಿಪ್ರಾಯಗಳು ಕೂಡ ವಾತಾವರಣವನ್ನು ಕೆಡಿಸುತ್ತಾರೆ. ಆದರೆ ನನಗೆ ಅನಿಸುವುದೇನೆಂದರೆ ಇಲ್ಲಿರುವಂತಹ ಯಾವುದೇ ಸದಸ್ಯರಿಗಾಗಲಿ ಅಥವಾ ಯಾವುದೇ ರಾಜಕೀಯ ಪಕ್ಷ ಆಗಲಿ ಕರ್ನಾಟಕದ ಬಗ್ಗೆ ಕಡಿಮೆ ಅಭಿಮಾನವಿದೆ ಎಂದು ನನಗಂತೂ ಅನಿಸುವುದಿಲ್ಲ. ಕರ್ನಾಟಕದ ಪ್ರಶ್ನೆ ಬಂದಾಗ ಎಲ್ಲರಿಗೂ ಅಭಿಮಾನವಿದೆ. ಯಾರಿಗೂ ಈ ಕರ್ನಾಟಕ ರಾಜ್ಯಕ್ಕೆ ಅನ್ಯಾಯ ಮಾಡಬೇಕು. ಕರ್ನಾಟಕ ರಾಜ್ಯದ ಜನತೆಗೆ ಅನ್ಯಾಯವಾಗಬೇಕೆನ್ನುವ ಅಭಿಪ್ರಾಯ ಬಹುಶಃ ಇಲ್ಲಿರುವಂತಹ ಯಾವುದೇ ರಾಜಕೀಯ ಪಕ್ಷಕ್ಕಾಗಲಿ, ಯಾವುದೇ ಸದಸ್ಯರಿಗೆ ಇರಲಿಕ್ಕೆ ಸಾಧ್ಯವಿಲ್ಲವೆಂದು ಹೇಳುವಂಥಾದ್ದು ನನ್ನ ಸ್ಪಷ್ಟವಾದ ಅಭಿಪ್ರಾಯವಾಗಿದೆ. ಆದರೆ ಈ ಅಭಿಮಾನದ ಬಗ್ಗೆ ಪೈಪೋಟಿ ಏಕೆ? ಯಾರು ಹೆಚ್ಚು ಯಾರು ಕಡಿಮೆ ಎನ್ನುವಂತಹ ಪ್ರಶ್ನೆ ಇಲ್ಲ. ನಾವೆಲ್ಲಾ ಕರ್ನಾಟಕದವರು, ಕರ್ನಾಟಕದ ಪ್ರಶ್ನೆ ಮೊದಲು, ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಈ ಗಡಿ

ವಿವಾದ, ಜಲ ವಿವಾದ, ನೆಲ ವಿವಾದ, ಬೀದಿಯಲ್ಲಿ ಪರಿಹಾರ ಮಾಡುವುದಕ್ಕೆ ಸಾಧ್ಯವಿಲ್ಲ. ಮದ್ರಾಸ್‌ನಲ್ಲಿ ನಡೆದಂತಹ ಮಾತಕತೆಯಲ್ಲಿ ಎಲ್ಲರೂ ಕೂಡ ಮಾತುಕತೆಯ ಮುಖಾಂತರವೇ ಪರಿಹಾರ ಮಾಡಬೇಕೆಂದು ಇತ್ತು. ಆದರೆ ನನಗೆ ಅನಿಸಿರುವಂತಹ ಅಭಿಪ್ರಾಯ ಮೊನ್ನೆ ಚರ್ಚೆ ನಡೆ-ದಂತಹ ಸಂದರ್ಭದಲ್ಲಿ ಯಾವುದೇ ಪತ್ರಿಕಾ ವರದಿಯಲ್ಲೂ ಕೂಡ ಕಾವೇರಿ ಜಲವಿವಾದವನ್ನು ಪರಿಹಾರ ಮಾಡುವುದಕ್ಕೆ ರಚನೆಯಾದಂತಹ ಟ್ರಿಬ್ಯೂನಲ್ ಚೌಕಟ್ಟಿಲ್ಲಿ ಪರಿಹಾರವಾಗಬೇಕು ಎನ್ನು-ವಂತಹ ಶಬ್ಧವೇ ಅಲ್ಲಿ ಬಂದಿಲ್ಲವೆಂದು ನನಗನ್ನಿಸುತ್ತದೆ. ಇದರ ವ್ಯಾಪ್ತಿಯಲ್ಲಿ ಪರಿಹಾರ ಮಾಡಬೇಕೆ-ನ್ನುವಂತಹ ಚರ್ಚೆ ಅಲ್ಲಿ ಆಗಿಲ್ಲವೆಂದು ನನಗೆ ಮನದಟ್ಟಾಗಿರುವಂಥಾದ್ದು ಇದೆ. ಇದರ ಅರ್ಥ ಯಾವುದೇ ಶರತ್ತುಗಳು, ಪೂರ್ವ ಶರತ್ತುಗಳು ಇಲ್ಲದೆ . . .

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೆ, ಸುಪ್ರೀಂಕೋರ್ಟ್ ಡೈರೆಕ್ಷನ್ ಕೊಟ್ಟ ಮೇಲೆ ಈ ಸುಪ್ರೀಂಕೋರ್ಟಿನ ಮುಂದೆ ಏನು ಅವರ ಪಿಟಿಶನ್ ಇತ್ತು ಆ ಪಿಟಿಷನ್‌ನಲ್ಲಿ ಇರುವುದೇನೆಂದರೆ 25-6-1991 ಇಂಟಿರಿಮ್ ಆರ್ಡರ್ ಏನಿತ್ತು, ಆ ಇಂಟಿರಿಮ್ ಆರ್ಡರ್ ಪ್ರಕಾರ ನಮಗೆ ನೀರು ಬಿಡಬೇಕಾಗಿತ್ತು ಆದರೆ ಹಾಗೆ, ಬಿಡುತ್ತಾ ಇಲ್ಲ. ಆದುದರಿಂದ ತಾವು ದಯ-ಮಾಡಿ ಇಂಟ್‌ರ್‌ಫಿಯರ್ ಆಗಿ ನೀರು ಬಿಡಿಸಿ ಕೊಡಿ ಎಂದು ಅವರ ಮನವಿ ಇತ್ತು. ಅದರ ಆಧಾ-ರದ ಮೇಲೆ ನಾವು ಡೈರೆಕ್ಷನ್ ಕೊಡುವುದಕ್ಕಿಂತ ನೀವೇ ಎರಡು ರಾಜ್ಯಗಳ ಮುಖ್ಯಮಂತ್ರಿಗಳು ಇದರ ಬಗ್ಗೆ ಮಾತನಾಡಿಕೊಂಡು ಬಗೆಹರಿಸಿಕೊಳ್ಳಿ ಎಂದು ಹೇಳಿ ಕಳುಹಿಸಿದ್ದರೇ ಹೊರತು, ಬೇರೆ ಏನೂ ಇಲ್ಲ. ಆ ಇಂಟಿರಿಮ್ ಪಿಟಿಷನ್ ಅಲ್ಲಿ ಇರಲಿಲ್ಲವೆಂದಿದ್ದರೆ ಯಾವುದೇ ಡೈರೆಕ್ಷನ್‌ನಿಂದ ಇಲ್ಲ-ವೆನ್ನುವುದು ಪ್ರಶ್ನೆ ಬರುವುದೇ ಇಲ್ಲ.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಗಮನಕ್ಕೆ ನಾನು ತರು-ತ್ತೇನೆ, ಅದೊಂದು ವಿಚಾರವಾದರೆ, ಮತ್ತೊಂದು ವಿಚಾರ ಸುಪ್ರೀಂಕೋರ್ಟ್‌ನಲ್ಲಿದ್ದಂಥ ಬೆಂಚ್‌ನಲ್ಲಿ ನಮ್ಮ ಎರಡೂ ಕೌನ್ಸಿಲ್‌ಗೆ, ಇದಕ್ಕೆ ಶಾಶ್ವತ ಪರಿಹಾರವನ್ನು ಕಂಡುಹಿಡಿದುಕೊಂಡರೆ ನಮಗೆ ಇನ್ನೂ ತುಂಬಾ ಸಂತೋಷವಾಗುತ್ತದೆ ಎನ್ನುವ ಮಾತನ್ನು ಅವರು ಹೇಳಿರತಕ್ಕಂಥದ್ದನ್ನು ಅವತ್ತು ತಮ್ಮ ಗಮನಕ್ಕೆ ತಂದಿದ್ದೇವೆ. ಅದೊಂದು, ಇದೊಂದು, ಎರಡನ್ನೂ ಕೂಡ ಸುಪ್ರೀಂಕೋರ್ಟ್ ನಮ್ಮ ಎರಡು ಕೌನ್ಸಿಲ್‌ಗಳಿಗೆ ತಿಳಿಸಿದೆ ಎನ್ನತಕ್ಕಂಥದ್ದನ್ನು ಅವತ್ತು ತಮ್ಮ ಗಮನಕ್ಕೆ ತಂದಿದ್ದೇನೆ. ಅಷ್ಟಕ್ಕೆ ಈ ಮಾತನ್ನು ಹೇಳಲಿಲ್ಲ, ಸಪೋಸ್ ಇದಕ್ಕೆ ನೀವು ಎರಡು ರಾಜ್ಯಗಳವರು ಶಾಶ್ವತ ಪರಿಹಾರವನ್ನು ಹುಡುಕಿಕೊಂಡರೆ ನಮಗೆ ತುಂಬಾ ಸಂತೋಷ ಎನ್ನತಕ್ಕಂಥ ಮಾತನ್ನೂ ಕೂಡ ನ್ಯಾಯಾಧೀಶರುಗಳು ಹೇಳಿದ್ದಾರೆ ಎನ್ನುವುದನ್ನೂ ಕೂಡ ಅವತ್ತು ತಮ್ಮ ಗಮನಕ್ಕೆ ತಂದಿದ್ದೇವೆ.

SRI. M. MALLIKARJUNA KHARGE:- I welcome the second part. ಆದರೆ ಫಸ್ಟ್ ಪಾರ್ಟ್ ಏನಿದೆ . . .

SRI. K.N. NAGEGOWDA:- Why do you want to take only one part? You take both the parts.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಫಸ್ಟ್ ಪಾಯಿಂಟ್ ಇದ್ದಿದ್ದೇ ಮ್ಯಾಂಡೇಟರಿ ಪ್ರಾವಿಷನ್ ಎಂದು ನಾನು ಹೇಳುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಸನ್ಮಾನ್ಯ ಅಧ್ಯಕ್ಷರೆ, ಇದು ಎರಡೂ ಕೂಡ ಬೇರೆ ಬೇರೆ ಪ್ರಶ್ನೆಗಳು. ಸುಪ್ರೀಂಕೋರ್ಟ್ ತನ್ನ ಆದೇಶದಲ್ಲಿ, ತನ್ನ ಸೂಚನೆಯಲ್ಲಿ ಹೇಳಿರತಕ್ಕಂಥದ್ದು ಸತ್ಯ. ಕಾವೇರಿ ಟ್ರಿಬ್ಯುನಲ್‌ನ ವ್ಯಾಪ್ತಿಯಲ್ಲಿ ಕಾವೇರಿ ಟ್ರಿಬ್ಯುನಲ್ ತೀರ್ಪನ್ನು ಜಾರಿ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ಮಾತುಕತೆಗಳನ್ನು ನೀವು ಏತಕ್ಕೆ ನಡೆಸಬಾರದು, ಮಾತುಕತೆಗಳನ್ನು ನಡೆಸಿ ಎಂದು ಹೇಳಿರತಕ್ಕಂಥದ್ದು ನಿಜ. ಆದರೆ ನಾನು ಹೇಳುತ್ತಿರತಕ್ಕಂಥ ವಿಷಯ, ಎರಡೂ ರಾಜ್ಯದ ಮುಖ್ಯ-ಮಂತ್ರಿಗಳು ಸಭೆ ಸೇರಿದಂಥ ಸಂದರ್ಭದಲ್ಲಿ ತಮಿಳುನಾಡಿನ ಪರವಾಗಿ ಭಾಗವಹಿಸಿದಂಥ ಜನ ಈ ಷರತ್ತನ್ನು ಹಾಕಿಲ್ಲ, ಅದನ್ನು ನಾನು ಹೇಳುತ್ತಿರತಕ್ಕಂಥದ್ದು. ಆದುದರಿಂದ ಅದರ ಅರ್ಥವೇನೆಂದರೆ, ತಮಿಳುನಾಡಿನ ಸರ್ಕಾರವೂ ಕೂಡ, ಕರುಣಾನಿಧಿಯವರು ಹಿಂದೆ ಏನು ಹೇಳಿದ್ದರು? ಆ ವ್ಯಾಪ್ತಿ-ಯೊಳಗಾದರೆ ಚರ್ಚೆ ಮಾಡುತ್ತೇವೆ ಇಲ್ಲವೆಂದರೆ ಇಲ್ಲ ಎಂದು ಏನು ಹೇಳಿದ್ದಾರೆ, ಅದನ್ನು ಬಿಟ್ಟು-ಕೊಟ್ಟಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿರುವ ವಿಷಯ. ಏಕೆಂದರೆ, ಯಾವಾಗ ಅವರು ಸಭೆ-ಯಲ್ಲಿ ಆ ವಿಷಯವನ್ನು ಪ್ರಸ್ತಾಪ ಮಾಡಲಿಲ್ಲ ಅಥವಾ ಆ ಷರತ್ತನ್ನು ಹಾಕಲಿಲ್ಲವೋ ಅದರ ಅರ್ಥ ಈ ಯಾವುದೇ ಷರತ್ತಿಲ್ಲದೆ ಅಥವಾ ಯಾವುದೇ ಪೂರ್ವಾಗ್ರಹವಾದಂಥ ಆಲೋಚನೆ ಇಲ್ಲದೆ ಮುಕ್ತ ಮನಸ್ಸಿನಿಂದ ವಿಷಯನ್ನು ನಾವು ಚರ್ಚೆ ಮಾಡಬಹುದೆಂದು . . .

ಶ್ರೀ ವಾಟಾಳ್ ನಾಗರಾಜ್:- ಅವರ ಶಾಸನಸಭೆಯಲ್ಲಿ ಕರುಣಾನಿಧಿಯವರು ಏನು ಹೇಳಿ-ದ್ದಾರೆಂದರೆ, ನಮ್ಮ ಚರ್ಚೆ ನ್ಯಾಯಮಂಡಳಿಯ ನಾಲ್ಕು ಚೌಕಟ್ಟಿನಲ್ಲಿರತಕ್ಕಂಥದ್ದೆಂದು ಬೀದಿಯಲ್ಲಿ ಡಂಗೂರ ಸಾರಿದಂತೆ ಶಾಸನಸಭೆಯಲ್ಲಿ ಹೇಳಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಶಾಸನಸಭೆಯಲ್ಲಿ ಹೇಳಿದ್ದಾರೆ, ಆಚೆ ಕಡೆಯೂ ಹೇಳಿದ್ದಾರೆ, ಇಲ್ಲವೆಂದು ನಾನೂ ಕೂಡ ಹೇಳುತ್ತಿಲ್ಲ, ಹೇಳಿರುವುದು ನಿಜ. ಆದರೆ ಈ ಸಭೆ ಸೇರಿದಂಥ ಸಂದರ್ಭ-ದಲ್ಲಿ ಆ ಷರತ್ತನ್ನು ಅವರು ಹಾಕಿಲ್ಲ, ಯಾವುದೇ ಪತ್ರಿಕೆಯಲ್ಲಿ ಆ ರೀತಿ ಬಂದಿಲ್ಲ, ಅಷ್ಟನ್ನೇ ನಾನು ಹೇಳುತ್ತಿರುವುದು.

ಶ್ರೀ ವಾಟಾಳ್ ನಾಗರಾಜ್:- ಬರಲಿ, ಅವರು ಹೇಳಲಿ, ಪಂಚತಾರ ಹೋಟಲ್‌ನಲ್ಲಿ ನಡೆದಿ-ರುವುದು ಏನಿದೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನಾನು ನನ್ನ ಅಭಿಪ್ರಾಯವನ್ನು ಹೇಳಿದ್ದೇನೆ. ಅವರು ಉತ್ತರವನ್ನು ಹೇಳಲಿ ಆ ಪ್ರಶ್ನೆ ಬೇರೆ.

ಉಪಾಧ್ಯಕ್ಷರು:- ವಾಟಾಳ್ ನಾಗರಾಜ್‌ರವರೇ ಅದು ಶ್ರೀ ರಾಮರೆಡ್ಡಿಯವರ ವೈಯಕ್ತಿಕ ಅಭಿಪ್ರಾಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸ್ವಲ್ಪ ಕ್ಷಮಿಸಿ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಏಕೆಂದರೆ, ನಾನು ಒಂದು ನಿಲುವಳಿ ಸೂಚನೆಯನ್ನು ತಮ್ಮ ಮುಂದೆ ಕೊಟ್ಟಿದ್ದೇನೆ. ಅವರ ನಿಲುವಳಿ ಸೂಚನೆ ಇದೇ ರೀತಿಯದಾಗಿದ್ದರೆ ಇದಕ್ಕೆ ಹೊಂದಿಕೊಂಡು ಮಾತಾಡಲಿ, ಇಲ್ಲ, ಅವರದೇ ಬೇರೆ ನಿಲುವಳಿ ಸೂಚನೆ ಇದ್ದರೆ, ಅದನ್ನು ನಮ್ಮ ಮುಂದೆ ಓದಿ ಹೇಳಲಿ What' type of Adjournment Motion, he has brought before the House let us know. ಏಕೆಂದರೆ, ಇದು ಗೊತ್ತಾಗಬೇಕಲ್ಲಾ? ನಾನು ಯಾವ ನಿಲುವಳಿ ಸೂಚನೆಯನ್ನು ತಂದಿದ್ದೇನೆ ಎನ್ನುವುದನ್ನು ಓದಿ ಹೇಳಿದ್ದೇನೆ, ಈಗ ಅವರದು ಯಾವ ನಿಲುವಳಿ ಸೂಚನೆ ಇದೆ ಅದನ್ನು ಸದನದ ಮುಂದೆ ಓದಿ ಹೇಳಲಿ, ಅವರು ಯಾವ ನಿಲುವಳಿ ಸೂಚನೆಗೆ ಬೆಂಬಲಿಸುತ್ತಿದ್ದಾರೆ ಅಥವಾ ಹೊಸದಾಗಿ ತಮ್ಮದೇ ಆದದ್ದನ್ನು ಕೊಟ್ಟಿದ್ದಾರೆಯೇ ಎನ್ನುವುದು ನಮಗೆ ಗೊತ್ತಾಗುತ್ತದೆ. ಇಲ್ಲವೆಂದರೆ ಕ್ಲೋಸ್ ಮಾಡಿ, ರಿಪ್ಲೈ ಕೊಡಿ; ಬೇಕಾದರೆ ಚರ್ಚೆ ಪ್ರಾರಂಭ ಮಾಡಿದಾಗ ನಿಮ್ಮ ಅಭಿಪ್ರಾಯವನ್ನು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಅಧ್ಯಕ್ಷರೆ, ನಾನು ನನ್ನ ಅಭಿಪ್ರಾಯವನ್ನು ಹೇಳುತ್ತಿದ್ದೇನೆ. ನಾನು ಇನ್ನೊಬ್ಬರ ಅಭಿಪ್ರಾಯವನ್ನು ಹೇಳುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನಿಲುವಳಿ ಸೂಚನೆ ಇರುವುದೇ ಅದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗ ತಾವು ಈ ನಿಲುವಳಿ ಸೂಚನೆಯ ಮೇಲೆ ಮಾತನಾಡಿ ಅಥವಾ ನಿಲುವಳಿ ಸೂಚನೆಯನ್ನು ನೀವೂ ಮಂಡಿಸಿದ್ದರೆ ಅದನ್ನು ಹೇಳಿಬಿಡಿ.

ಶ್ರೀ ವಾಟಾಳ್ ನಾಗರಾಜ್:- ನೀವು ನಿಲುವಳಿ ಸೂಚನೆಯ ಪರವಾಗಿ ಮಾತನಾಡುತ್ತೀರಾ. ನಿಲುವಳಿ ಸೂಚನೆಯ ವಿರುದ್ಧವಾಗಿ ಮಾತನಾಡುವುದಕ್ಕಾಗುವುದಿಲ್ಲ, ಇಲ್ಲವೆಂದರೆ ನಿಮ್ಮದೊಂದು ನಿಲುವಳಿ ಸೂಚನೆಯನ್ನು ಕಳುಹಿಸಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:- ಮಾನ್ಯ ಉಪಾಧ್ಯಕ್ಷರೇ . . .

ಉಪಾಧ್ಯಕ್ಷರು:- ರಮಾನಾಥ ರೈರವರೇ, ಅವರು ಮಾತನಾಡುವಾಗ ನೀವು ಏತಕ್ಕೆ ಮಾತನಾಡುತ್ತೀರಿ; ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:- ಶ್ರೀ ರಾಮರೆಡ್ಡಿಯವರು ನಿಲುವಳಿ ಸೂಚನೆಯನ್ನು ಕಳುಹಿಸುವುದಕ್ಕೆ ಸ್ವಾತಂತ್ರ್ಯವಿದೆ, ಅವರಿಗೆ ಅಡ್ಡಿ ಪಡಿಸತಕ್ಕಂಥ ಪ್ರಾಮಾಣಿಕ ಚಿಂತನೆ ಇಲ್ಲ.

(ಗೊಂದಲ)

ಮಾನ್ಯ ಸದಸ್ಯರು:- ಮಾನ್ಯ ಉಪಾಧ್ಯಕ್ಷರೇ, ರಮಾನಾಥ ರೈರವರು ಸಹಿ ಹಾಕಿದ್ದಾರೆಯೇ?

ಉಪಾಧ್ಯಕ್ಷರು:- ರಮಾನಾಥ ರೈರವರೇ, ನೀವೇಕೆ ಮಾತನಾಡುತ್ತಿದ್ದೀರಿ; ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ:- ನಿಲುವಳಿ ಸೂಚನೆಯನ್ನು ತಂದು ಪರವಾಗಿ ಮಾತನಾಡಬೇಕೆಂದೇನೂ ಇಲ್ಲ. ನಿಯಮಗಳನ್ನು ಓದಿ.

ಉಪಾಧ್ಯಕ್ಷರು:- ಈಗ ನಾಗೇಗೌಡರು ಏನು ಹೇಳುತ್ತಾರೆಂಬುದನ್ನು ಕೇಳೋಣ.

ಶ್ರೀ ವಾಟಾಳ್ ನಾಗರಾಜ್:- ಈಗ ನಾವೇನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ, ಅದನ್ನು ಸಮರ್ಥನೆ ಮಾಡಿ ಈ ನಿಲುವಳಿ ಸೂಚನೆಯ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದೇವೆ. ಶ್ರೀ ರಾಮರೆಡ್ಡಿಯವರು ತಮ್ಮ ನಿಲುವಳಿ ಸೂಚನೆಯ ಬಗ್ಗೆ ಮಾತನಾಡಲಿ. ನಮ್ಮದೇನೂ ತಕರಾರಿಲ್ಲ.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಉಪಾಧ್ಯಕ್ಷರೆ, ಸದಸ್ಯರು ಯಾವುದೇ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದಾಗ ತಾವು ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಕೊಟ್ಟಾಗ, ಅವರದ್ದು ಅಡ್ಮಿಟ್ ಆಗುವುದಕ್ಕೆ ರೆಲವೆಂಟ್ ಪಾಯಿಂಟ್ಸ್‌ಗಳನ್ನು ಹೇಳುವುದು ಅಡ್ಮಿಷನ್‌ಗೆ ರಿಕ್ವೆಸ್ಟ್ ಮಾಡತಕ್ಕಂಥದ್ದು ಒಂದು ಪೋರ್ಷನ್ ಆದರೆ ಮತ್ತೊಂದು ಪೋರ್ಷನ್ ಇದನ್ನು ಅಡ್ಮಿಮಿಟ್ ಮಾಡುವುದಕ್ಕೆ ಯೋಗ್ಯವಾದದ್ದಲ್ಲ, ಈ ಕಾರಣಕ್ಕೋಸ್ಕರ ಇದು ಅಡ್ಮಿಟ್ ಮಾಡುವುದಕ್ಕೆ ಯೋಗ್ಯವಾದದ್ದಲ್ಲವೆಂದು ಮತ್ತೊಬ್ಬ ಸದಸ್ಯರು ಮಾಡುವುದಕ್ಕೆ ನಮ್ಮ ನಿಯಮಗಳು ಇರುವುದರಿಂದ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಾಗೇಗೌಡರು ಹೇಳಲಿ, ನಿಯಮವನ್ನು ಹೇಳಿ, ಅದೇನು ಎನ್ನುವುದನ್ನು ದಯವಿಟ್ಟು ಓದಿ ಹೇಳಿ.

SRI. K.N. NAGEGOWDA:- The Chair will have to give a Ruling ತಾವು ರೂಲಿಂಗ್ ಕೊಡಿ.

ಶ್ರೀ ಯು.ಆರ್. ಸಭಾಪತಿ:- ರೂಲಿಂಗ್ ಕೊಡುವುದಿಲ್ಲ; ನೀವು ನಿಯಮಾವಳಿಯ ಪ್ರಕಾರ ಹೇಳಿ.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಉಪಾಧ್ಯಕ್ಷರೇ, ಯಾವುದೇ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದರೆ, ಅದರ ಪರವಾಗಿ ವಿರೋಧವಾಗಿ ಅಡ್ಮಟ್ ಮಾಡಿಕೊಳ್ಳುವುದಕ್ಕಾಗುತ್ತದೆ. ಅಡ್ಮಿಟ್ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನುವ ಎರಡು ಅಭಿಪ್ರಾಯಗಳನ್ನು ಕೊಡುವುದಕ್ಕೆ ನಮ್ಮ ನಿಯಮಾವಳಿಗಳಿವೆ ಎಂದು ಹೇಳುತ್ತೇನೆ, ಅವಕಾಶ ಖಂಡಿತವಾಗಿಯೂ ಇದೆ. ಆದ್ದರಿಂದ ತಾವು ದಯವಿಟ್ಟು ಅವರಿಗೆ ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಹೆಚ್. ಶಿವಪ್ಪ:- ಉಪಾಧ್ಯಕ್ಷರೆ, ಅಡ್ಮಿಷನ್‌ಗೆ ಬಂದಾಗ ಅಲ್ಲಿ ಕೇವಿಯೆಟ್ ಹಾಕಿರುತ್ತೇವೆ, ವಕೀಲರಿಗೆ ಗೊತ್ತು. ಕೇವಿಯೆಟ್ ಹಾಕಿದಾಗ we can also argue against the

admission. Nobody can be barred or prevented from arguing. . . ಅಡ್ಮಿ-ಷನ್‌ಗೆ ವಿರುದ್ಧವಾಗಿ ಮಾಡಬಹುದು, ಕೇವಿಯೆಟ್ ಹಾಕಿರುತ್ತೇವೆ. ನಿಮಗೆ ಗೊತ್ತಿಲ್ಲಾ ವಕೀಲರೇ, ಕೇವಿಯೆಟ್ ಹಾಕಿರುತ್ತೇವಲ್ಲಾ. . . .

(ಗೊಂದಲ)

ಉಪಾಧ್ಯಕ್ಷರು:- ಈಗ ಅವರನ್ನು ಕರೆದಿದ್ದೇವೆ ಅವರು ಮಾತನಾಡಲಿ, ನಿಮ್ಮನ್ನು ಕರೆದಾಗ ನೀವು ಮಾತನಾಡಿ. ನೀವು ಕುಳಿತುಕೊಳ್ಳಿ ನೀವು ಏತಕ್ಕೆ ಮಾತನಾಡುತ್ತೀರಿ? ಈಗ ನಾವು ಶ್ರೀರಾಮ ರೆಡ್ಡಿಯವರನ್ನು ಕರೆದಿದ್ದೇವೆ. ಅವರು ಮಾತನಾಡುತ್ತಾರೆ, ನಿಮ್ಮನ್ನು ಕರೆದಾಗ ನೀವು ಮಾತನಾಡಿ. ಈಗೇಕೆ?

ಶ್ರೀ ಬಿ. ರಮಾನಾಥ್ ರೈ:- ಉಪಾಧ್ಯಕ್ಷರೆ ನಿಯಮದಡಿಯಲ್ಲಿ ಮಾತ್ರ ಮಾತನಾಡಿಕೊಳ್ಳಲಿ.

(ಗೊಂದಲ)

ಉಪಾಧ್ಯಕ್ಷರು:- ಈಗ ಅವರನ್ನು ಕರೆದಾಗ ನೀವು ಏತಕ್ಕೆ ಮಾತನಾಡಬೇಕು, ನಿಮ್ಮನ್ನು ಕರೆ-ದಾಗ ನೀವು ಮಾತನಾಡಿ.

ಶ್ರೀ. ರಮಾನಾಥ ರೈ:- ನಾವು ಮಾತನಾಡುವಾಗ ನಿಯಮ ಬರುವುದಿಲ್ಲ, ಬೇರೆಯವರು ಮಾತನಾಡಿದಾಗ ನಿಯಮಾವಳಿ ಬರುತ್ತದೆ, ಅದರ ಪ್ರಕಾರವೇ ಮಾತನಾಡಬೇಕು.

ಉಪಾಧ್ಯಕ್ಷರು:- ರಮಾನಾಥ ರೈರವರೆ ತಾವು ಕುಳಿತುಕೊಳ್ಳಿ, ಶ್ರೀರಾಮರೆಡ್ಡಿಯವರು ಮಾತ-ನಾಡುತ್ತಾರೆ.

ಶ್ರೀ. ಜಿ.ವಿ. ಶ್ರೀರಾಮರೆಡ್ಡಿ:- ನಾನು ಸುಮ್ಮಸುಮ್ಮನೆ ಮಾತನಾಡುತ್ತಿಲ್ಲ, ಅಧ್ಯಕ್ಷರ ಅನು-ಮತಿಯನ್ನು ಪಡೆದು ಮಾತನಾಡುತ್ತಿದ್ದೇನೆ, ಅವರು ನಾನು ಮಾತನಾಡುವುದು ಬೇಡವೆಂದು ಹೇಳಿ-ಬಿಡಲಿ ನಾನು ಮಾತನಾಡುವುದಿಲ್ಲ. ಅಧ್ಯಕ್ಷರ ಅನುಮತಿಯನ್ನು ಪಡೆದು ನಾನು ಮಾತನಾಡುತ್ತಿ-ದ್ದೇನೆ, ಅಧ್ಯಕ್ಷರು ಮಾತನಾಡುವುದು ಬೇಡವೆಂದು ಹೇಳಿದರೆ ನಾನು ಈಗಲೇ ಕುಳಿತುಕೊಳ್ಳುವುದಕ್ಕೆ ತಯಾರಿದ್ದೇನೆ. ಆದರೆ ನೀವು ಹೇಳಿದಂತೆ ಮಾತನಾಡಬೇಕೆಂದೇನೂ ನಿಯಮವಿಲ್ಲ, ಅಧ್ಯಕ್ಷರ ಅನು-ಮತಿಯನ್ನು ಪಡೆದು ನಾನು ಮಾತನಾಡುತ್ತಿರತಕ್ಕಂಥದ್ದು, ನೀವು ಹೇಳಿದಂತೆ ನಾನು ಮಾತನಾಡ-ಬೇಕೆಂದರೆ ನಾನೇನೂ ನಿಮ್ಮ ಪುಂಗಿಯಲ್ಲ, ಚೆನ್ನಾಗಿ ತಿಳಿದುಕೊಳ್ಳಿ. . .

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು:- ಅಲ್ಲ, ನಿಯಮಾವಳಿ ಎಂದರೆ ಬಾಯಿಗೆ ಬಂದಂತೆಲ್ಲಾ ಮಾತ-ನಾಡಬಹುದೇ? ಅಧ್ಯಕ್ಷರು ಅನುಮತಿಯನ್ನು ಕೊಟ್ಟುಬಿಟ್ಟರೆ ಬಾಕಿದ್ದೆಲ್ಲಾ ಮಾತನಾಡಬಹುದೇ? ಅದಕ್ಕೇನು ನಿಯಮಾವಳಿ ಇಲ್ಲವೇ? ಯಾವ ನಿಯಮಾವಳಿಯಡಿಯಲ್ಲಿ ಮಾತನಾಡುತ್ತಿದ್ದೀರಿ ಎಂಬುದನ್ನು ತಿಳಿದುಕೊಂಡು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನನ್ನ ಪಾಯಿಂಟ್ ಆಫ್ ಆರ್ಡರ್ ಏನಿದೆ ಎಂದರೆ, ಉಪಾಧ್ಯಕ್ಷರೆ ನಾನು ರೂಲ್ 60 ಕೆಳಗೆ ನೋಟಿಸ್ ಕೊಟ್ಟಿದ್ದೇನೆ.

ಉಪಾಧ್ಯಕ್ಷರು:- ಈಗ ತಾವು ಅಡ್ಜರ್ನ್‌ಮೆಂಟ್ ಮೋಷನ್‌ಗೆ ಪರ್ಮಿಷನ್ ಕೊಡುವುದಕ್ಕೆ ಇರ-ತಕ್ಕ ಅಗತ್ಯತೆ ಬಗ್ಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದೀರಿ. ನಾನು ಪರ್ಮಿಷನ್ ಕೊಟ್ಟರೆ ಅವರು, ಮಾತನಾಡಬಹುದು, ನೀವು ಮಾತನಾಡಬಹುದು. ಆದರೆ ನಾವು ಪರ್ಮಿಷನ್ ಕೊಟ್ಟಮೇಲೆ ಉಳಿದ-ವರೆಲ್ಲಾ ಮಾತನಾಡಬಹುದು ಈಗೇನು ಅದರ ಅವಶ್ಯಕತೆ ಇದೆ? ತಾವು ಈಗಾಗಲೇ ತಮ್ಮ ಅಭಿ-ಪ್ರಾಯವನ್ನು ಪ್ರತಿಪಾದನೆಯನ್ನು ಮಾಡಿದ್ದೀರಿ. . .

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಉಪಾಧ್ಯಕ್ಷರೆ, ದಯವಿಟ್ಟು ಸ್ವಲ್ಪ ಕೇಳಿ, ನಾನು ರೂಲ್ 60ರ ಕೆಳಗೆ ನಿಲುವಳಿ ಸೂಚನೆಯನ್ನು ಕೊಟ್ಟಮೇಲೆ, ಇದರ ಪರವಾಗಿಯೂ ಮಾತನಾಡಬಹುದು, ವಿರುದ್ಧವಾಗಿಯೂ ಮಾತನಾಡಬಹುದು. ನಾವು ಇದಕ್ಕೆ ಅವಕಾಶ ಮಾಡಿ ಕೊಡಿ ಎಂದು ಮನವಿ ಮಾಡಿಕೊಳ್ಳಬಹುದು, ಅದರಲ್ಲಿ ಏನು ಅರ್ಥವಿಲ್ಲವೆಂದು ಅವರೂ ಹೇಳಬಹುದು. ಆದರೆ ಇವರು ಜನರಲ್ ಡಿಸ್‌ಕಷನ್ ಯಾವಾಗ ರೈಸ್ ಮಾಡಬಹುದು ಎಂದರೆ, ಒಂದು ವೇಳೆ ಸ್ಟೇಟ್‌ಮೆಂಟ್ ಬಂದ ಮೇಲೆ ಅದಕ್ಕೆ ಬೇಕಾದರೆ ಕ್ಲಾರಿಫಿಕೇಷನ್ ಕೊಟ್ಟು ಅವರದೇ ಆದಂಥ ವ್ಯೂಸ್ ಬೇಕಾದರೆ ಹೇಳಲಿ ಅಥವಾ ಇಲ್ಲಿ ನಾವು ನಿಲುವಳಿ ಸೂಚನೆಯನ್ನು ಮೂವ್ ಮಾಡಿದಾಗ ಇದರ ಪರವಾಗಿ-ದ್ದವರು ಮಾತನಾಡಲಿ, ಆಮೇಲೆ ಬೇಕಾದರೆ ಅದರ ವಿರುದ್ಧವಿರುವವರೆಲ್ಲಾ ಕೂಡ ಹೇಳಲಿ. ರಿಪ್ಲೈ ಬರದೇ ಇದ್ದರೆ, ರಿಪ್ಲೈ ಬರುವುದಕ್ಕಿಂತ ಮುಂಚೆಯೇ ನೀವು ಚರ್ಚೆಗೆ ಅವಕಾಶ ಕೊಟ್ಟರೆ ಏನಾಗು-ತ್ತದೆ? ಉಪಾಧ್ಯಕ್ಷರೆ, ಯಾರು ನಿಲುವಳಿ ಸೂಚನೆಯನ್ನು ಮೂವ್ ಮಾಡಿದ್ದಾರೋ ಅವರಿಗೆ ಮೊದಲು ಅವಕಾಶ ಕೊಟ್ಟು, ಅದಕ್ಕೆ ಉತ್ತರ ಬಂದ ಮೇಲೆ ಅವಕಾಶ ಮಾಡಿಕೊಡುತ್ತೀರೋ, ಅಥವಾ ಉತ್ತರ ಬರುವುದಕ್ಕಿಂತ ಮುಂಚೆಯೇ ಅವಕಾಶ ಮಾಡಿಕೊಡುತ್ತೀರೋ ಎನ್ನುವುದನ್ನು ಹೇಳಿ.

ಉಪಾಧ್ಯಕ್ಷರು:- ಈಗ ತಾವು ಶ್ರೀರಾಮರೆಡ್ಡಿಯವರು ಮಾತನಾಡುವುದಕ್ಕಿಂತ ಮೊದಲೇ ಆ ಮಾತನ್ನು ಹೇಳಬೇಕಾಗಿತ್ತು. ನಾವು ಅವರನ್ನು ಮಾತನಾಡಲು ಕರೆದಿದ್ದೇವೆ, ಅವರು ಈಗ ಪ್ರಸ್ತಾಪ ಮಾಡಿಬಿಟ್ಟಿದ್ದಾರೆ, ಅವರು ಮಾತನಾಡಲಿ. ನೀವು ಮೊದಲೇ ಅವರಿಗೆ ಮಾತನಾಡಬಾರದೆಂದು ಹೇಳ-ಬೇಕಾಗಿತ್ತು.

(ಗೊಂದಲ)

ಶ್ರೀ. ಹೆಚ್. ಶಿವಪ್ಪ:- ಉಪಾಧ್ಯಕ್ಷರೆ, ಈಗ ತಾವು ಸದಸ್ಯರಿಗೆ ಅನುಮತಿಯನ್ನು ಕೊಟ್ಟಿದ್ದೀರಿ, Nobody can be prevented from expressing his own views.

ಶ್ರೀ. ಎಂ.ಸಿ. ನಾಣಯ್ಯ:- ಸನ್ಮಾನ್ಯ ಉಪಾಧ್ಯಕ್ಷರೆ, ನಿಲುವಳಿ ಸೂಚನೆಯನ್ನು ಕೊಡತಕ್ಕಂಥ ಅಧಿಕಾರದಲ್ಲಿ ವಿರೋಧಪಕ್ಷದವರು ಕೊಡುತ್ತಾರೆ. ಆದರೆ ತಾವು ಪೂರ್ವಭಾವಿಯಾಗಿ ಇದನ್ನು

ಚರ್ಚೆಗೆ ತೆಗೆದುಕೊಳ್ಳುತ್ತಿರತಕ್ಕಂಥ ಸಂದರ್ಭದಲ್ಲಿ ನಮ್ಮ ನಿಯಮದಡಿಯಲ್ಲೇ ಆಗಲಿ ಅಥವಾ ಕೌಲ್ ಅಂಡ್ ಶಕ್ದರ್‌ರವರ ನಿಯಮದ ಅಡಿಯಲ್ಲಾಗಲಿ ಪೂರ್ವಭಾವಿಯೆಂದು ಹೇಳುತ್ತಿರುವ ಚೌಕಟ್ಟಿಗೆ ನಿಜವಾಗಿ ಅವಕಾಶವಿಲ್ಲ. ಆದರೆ ಸಂಪ್ರದಾಯವಾಗಿ ಇದರ ಪ್ರಿಲಿಮಿನರಿ ಸಬ್‌ಮಿಷನ್‌ಗೆ ನಮ್ಮ ಸಭಾಧ್ಯಕ್ಷರು ಒಪ್ಪಿಗೆ ಕೊಡಬೇಕೇ ಬೇಡವೇ ಎನ್ನುವುದು ತಮ್ಮ ವ್ಯಾಪ್ತಿಗೆ ಒಳಪಟ್ಟಿದ್ದುದು. ಯಾವ ಒಂದು ನಿಲುವಳಿ ಸೂಚನೆಯನ್ನು ಕೊಡುತ್ತಾರೆ, ಅವರು ಕೊಟ್ಟಿರತಕ್ಕಂಥ ನಿಲುವಳಿ ಸೂಚನೆಗೆ ನೀವು ಸಮ್ಮತಿ ಕೊಡಬೇಕೆ ಬೇಡವೇ ಎನ್ನುವುದಕ್ಕೆ ಚರ್ಚೆ ಮಾಡಿ ಕೊಡಬೇಕು ಎನ್ನುವಂಥಾದ್ದು ಯಾವ ನಿಯಮದ ಅಡಿಯಲ್ಲೂ ಇಲ್ಲ. ಕೌಲ್ ಅಂಡ್ ಶಕ್ದರ್‌ನಲ್ಲೂ ಇಲ್ಲ. ನಮ್ಮ ನಿಯಮದ ಅಡಿಯಲ್ಲೂ ಇಲ್ಲ. ಆದರೆ ನಮ್ಮ ಈ ಸದನವನ್ನು ನಡೆಸಿಕೊಂಡು ಬಂದಿರತಕ್ಕ ಸಂಪ್ರದಾಯದ ಹಿನ್ನೆಲೆಯಲ್ಲಿ ಹಾಗೆ ಸಮ್ಮತಿಯನ್ನು ಕೊಡುವುದಕ್ಕೆ ಮುಂಚೆ ತಾವು ಪೂರ್ವಭಾವಿಯಾಗಿ ಕೆಲವು ವಿಚಾರಗಳನ್ನು ಹೇಳಲು ಇರತಕ್ಕಂಥ ಅವಕಾಶವನ್ನು ಕೊಡುವಾಗ, ಸಮಗ್ರವಾಗಿರತಕ್ಕಂಥ, ಒಂದು ಪ್ರಾಮುಖ್ಯವಾಗಿರತಕ್ಕಂಥ ವಿಚಾರವನ್ನು ಎತ್ತಿದಾಗ ಕೇವಲ ನಿಲುವಳಿ ಸೂಚನೆಯನ್ನು ಎತ್ತಿದವರಿಗೆ ಮಾತ್ರ ಇದರಲ್ಲಿ ಅವಕಾಶ ಕೊಡುವುದು ಅಲ್ಲ. ಆ ಸಂದರ್ಭದಲ್ಲಿ ತಾವು, ಹೌದು, ಇದೊಂದು ಪ್ರಾಮುಖ್ಯವಾಗಿರತಕ್ಕಂಥ ವಿಚಾರವಾಗಿದೆ, ನಾನು ಸಮ್ಮತಿಯನ್ನು ಕೊಡಬೇಕೇ, ಅಥವ ಬೇಡವೇ ಎಂದು ಹೇಳುತ್ತಿರು-ವಂಥಾದ್ದು ವಿರೋಧಪಕ್ಷಗಳಲ್ಲಿರತಕ್ಕಂಥವರು ಮತ್ತು ಆಡಳಿತಪಕ್ಷದಿಂದಲೂ ನಾವು ಕೇಳಲಿರ-ತಕ್ಕಂಥ ಅಧಿಕಾರ ನಿಮ್ಮ ಅನುಮತಿಗೆ ಒಳಪಟ್ಟು ನಾವು ಹೇಳುತ್ತೇವೆ. ಆ ಸಂದರ್ಭದಲ್ಲಿ ಸಮ್ಮತಿ ಕೊಡಬೇಕೇ, ಅಥವ ಬೇಡವೇ ಎನ್ನುವಂಥ ಪೂರ್ವಭಾವಿಯಾದ ವಿಚಾರವನ್ನು ಎತ್ತಲು ಇರ-ತಕ್ಕಂಥಾದ್ದು ನಿಮ್ಮ ಅನುಮತಿಗೆ ಒಳಪಟ್ಟು ಮಾತ್ರ. ನಿಮ್ಮ ಅನುಮತಿ ಇಲ್ಲದೇ ಹೋದರೆ ಪೂರ್ವ-ಭಾವಿಯಾಗಿ ಚರ್ಚೆ ಮಾಡಲು ನಿಯಮಗಳ ಅಡಿಯಲ್ಲಿ ಅಧಿಕಾರವಿಲ್ಲ. ಈ ಹಿನ್ನೆಲೆಯಲ್ಲಿ ತಾವು ಯಾರನ್ನು ಬೇಕಾದರೂ ಕರೆದು, ಇದರ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಮಂಡಿಸಿ ಎಂದು ನೀವು ಯಾರನ್ನು ಕರೆಯುತ್ತೀರಿ ಅವರಿಗೆ ಮಾತ್ರ ಆ ಅಧಿಕಾರ ಇರುತ್ತದೆ. ಬಾಕಿ ಯಾರಿಗೂ ಇಲ್ಲ ಎನ್ನುವಂಥಾದ್ದನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಆದುದರಿಂದ ಶ್ರೀಮಾನ್ ರೆಡ್ಡಿ-ಯವರು ಎತ್ತಿರತಕ್ಕಂಥ ವಿಚಾರದಲ್ಲಿ, ಅವರು ಒಂದು ಪಕ್ಷಕ್ಕೆ ಸೇರಿರತಕ್ಕಂಥ ಒಬ್ಬ ಮುಖಂಡರು. ತಾವು ಅವರನ್ನು ಕರೆದಿದ್ದೀರಿ. ಅವರು ತಮ್ಮ ವಿಚಾರವನ್ನು ಹೇಳುತ್ತಿದ್ದರು. ಸಮ್ಮತಿಗೆ ಅರ್ಹವೇ ಅಥವಾ ಸಮ್ಮತಿಗೆ ಅರ್ಹವಲ್ಲವೇ ಎನ್ನುವ ವಿಚಾರದ ಬಗ್ಗೆ ಅವರ ವಿಚಾರವನ್ನು ಹೇಳುತ್ತಾರೆ. ಬಹುಶಃ ಅವರು ಸರ್ಕಾರ ತೆಗೆದುಕೊಂಡಿರತಕ್ಕ ನಿಲುವಿನ ಬಗ್ಗೆ ಹೇಳುತ್ತಿರುವಂಥಾದ್ದು ಮತ್ತು ಇದನ್ನು ನಿಲುವಳಿ ಸೂಚನೆ ಮುಖಾಂತರ ಚರ್ಚೆ ಮಾಡಲು ಒಂದು ಅವಕಾಶ ಇಲ್ಲದೇ ಇರತಕ್ಕಂಥ ವಿಚಾರವನ್ನು ಎತ್ತಿದಾಗ ನೀವು ಅದಕ್ಕೆ ಸಮ್ಮತಿಯನ್ನು ಕೊಡಬೇಕು. ಇದರ ಪರವಾಗಿ ಮಾತನಾಡ-ಬೇಕು ಎಂದು ಹೇಳುವಂಥಾದ್ದನ್ನು ಏನು ಹೇಳುತ್ತಾರೆ, ಅದಕ್ಕೆ ನಾನು ಹೇಳುತ್ತೇನೆ, ಅದನ್ನು ಯಾವ ನಿಯಮದ ಅಡಿಯಲ್ಲಿ ಕೇಳುತ್ತಾರೆ. ಮಾನ್ಯ ಉಪಾಧ್ಯಕ್ಷರೇ, ತಮ್ಮ ಅನುಮತಿಗೆ ಒಳಪಟ್ಟು ಯಾರಿಗೆ ತಾವು ಮಾತನಾಡಲು ಅವಕಾಶ ಅಧಿಕಾರ ಕೊಡುತ್ತೀರಿ ಎಂದು ಕೇಳುತ್ತಿರತಕ್ಕಂಥಾದ್ದನ್ನು ನಿಮ್ಮ

ಸಮ್ಮತಿಗೆ ಅದು ಅರ್ಹವೇ ಅಲ್ಲವೇ ಎಂದು ಹೇಳುವಂಥಾದ್ದಕ್ಕೆ ಸೀಮಿತವಾಗಿ ಮಾತನಾಡಬೇಕಾಗುತ್ತದೆ. ಅದಕ್ಕೆ ಸೀಮಿತವಾಗಿ ಮಾತನಾಡಲು ಇರುವಂಥ ಅಧಿಕಾರ ಎಲ್ಲರಿಗೂ ಉಂಟು.

ಉಪಾಧ್ಯಕ್ಷರು:- ಈಗ ಶ್ರೀರಾಮರೆಡ್ಡಿಯವರು ಮಾತನಾಡಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಉಪಾಧ್ಯಕ್ಷರೇ, ಮಾತುಕತೆ ಮುಖಾಂತರ ಈ ಸಮಸ್ಯೆಯನ್ನು ಪರಿಹಾರ ಮಾಡತಕ್ಕಂಥ ನಿಟ್ಟಿನಲ್ಲಿ ಒಂದು ಪ್ರಾಮಾಣಿಕವಾದಂಥ ಪ್ರಯತ್ನ ನಡೆದಿರತಕ್ಕಂಥಾದ್ದನ್ನು ನಿಜವಾಗಿ ಎಲ್ಲರೂ ಸ್ವಾಗತ ಮಾಡಬೇಕು. ಆದರೆ ಇಲ್ಲಿ ಬಂದಿರುವ ಒಂದು ಪ್ರಶ್ನೆ ಎಂದರೆ ತಮಿಳುನಾಡಿಗೆ ಹೋಗಿ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ, ಚರ್ಚೆ ಮಾಡುವುದಕ್ಕೆ ಮೊದಲು ಇಲ್ಲಿನ ವಿರೋಧಪಕ್ಷಗಳನ್ನು ಮತ್ತು ಸದನವನ್ನು ನೀವು ಗಮನಕ್ಕೆ ತೆಗೆದುಕೊಳ್ಳದೇ, ಗಮನಕ್ಕೆ ತಾರದೇ ಚರ್ಚೆ ಮಾಡಿದ್ದಾರೆ ಎನ್ನುವ ಒಂದು ಅಭಿಪ್ರಾಯ ಇದೆ. ಅದನ್ನು ನಾನೂ ಕೂಡ ಒಪ್ಪುತ್ತೇನೆ. ವಿರೋಧಪಕ್ಷಗಳ ಜೊತೆ ಮಾತುಕತೆ ಮಾಡಿ ಅಥವಾ ಸದನ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ಸದನದ ಗಮನಕ್ಕೆ ತರಬೇಕು. ಸದನದ ಗಮನಕ್ಕೆ ತರದೇ ಇರತಕ್ಕಂಥ ವಿಷಯಗಳಿದ್ದರೆ, ವಿರೋಧಪಕ್ಷಗಳನ್ನು ಪ್ರತ್ಯೇಕವಾಗಿ ಸಭೆ ಕರೆದು, ಆ ಸಭೆಯಲ್ಲಿ ಚರ್ಚೆ ಮಾಡಿ, ಅವರ ಅಭಿಪ್ರಾಯಗಳನ್ನು ತೆಗೆದುಕೊಂಡು ಚರ್ಚೆಗೆ ಹೋಗಬೇಕಾಗಿತ್ತು ಎನ್ನುವುದನ್ನು ನಾನೂ ಕೂಡ ಒಪ್ಪುತ್ತೇನೆ. ಆ ವಿಷಯದಲ್ಲಿ ಸರ್ಕಾರ ಎಡವಿದೆ ಎನ್ನುವಂಥಾದ್ದನ್ನು ಕೂಡ ನಾನು ಸಂಪೂರ್ಣವಾಗಿ ಒಪ್ಪುತ್ತಿದ್ದೇನೆ. ಆದರೆ ಇವತ್ತು ಏನು ವಾತಾವರಣ ನಿರ್ಮಾಣವಾಗಿದೆ, ಮಾತುಕತೆಗಳ ಮುಖಾಂತರ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರತಕ್ಕಂಥ ಈ ಜಟಿಲವಾದ ಸಮಸ್ಯೆ, ಈ ಸೂಕ್ಷ್ಮವಾದ ಸಮಸ್ಯೆಯನ್ನು ಪರಿಹಾರ ಮಾಡಲು ಮಾತುಕತೆ ಏನು ಪ್ರಾರಂಭವಾಗಿದೆ, ನನ್ನ ದೃಷ್ಟಿಯಲ್ಲಿ ಇದು ಇನ್ನೂ ಪ್ರಾರಂಭವಾಗಿದೆ, ಯಾವುದೇ ಒಪ್ಪಂದ ಆಗಿರಲು ಸಾಧ್ಯವಿಲ್ಲ ಅಥವಾ ನಾಳೆ ನಾಡಿದ್ದರಲ್ಲಿ ಒಂದು ಒಪ್ಪಂದ ಆಗಿ ಬಿಡುತ್ತದೆ ಎನ್ನುವ ಪ್ರಶ್ನೆಯೂ ಇದರಲ್ಲಿ ಇಲ್ಲ. ದೀರ್ಘವಾದಂಥ ಚರ್ಚೆಯಾಗಬೇಕಾಗಿದೆ, ವ್ಯಾಪಕವಾದಂಥ ಚರ್ಚೆಯಾಗಬೇಕಾಗಿದೆ. ಈ ಚರ್ಚೆಯ ಆಧಾರದ ಮೇಲೆ, ಎರಡೂ ರಾಜ್ಯಗಳ ಹಿತವನ್ನು ರಕ್ಷಣೆ ಮಾಡತಕ್ಕಂಥ ದೃಷ್ಟಿಯಲ್ಲಿ, ನಮ್ಮ ರಾಜ್ಯದ ಹಿತರಕ್ಷಣೆಯನ್ನು ಮಾಡತಕ್ಕಂಥ ದೃಷ್ಟಿಯಲ್ಲಿ, ಮಾತುಕತೆಗಳ ಮುಖಾಂತರ ಇದನ್ನು ಪರಿಹಾರ ಮಾಡಿಕೊಳ್ಳಬೇಕು. ಆ ನಿಟ್ಟಿನಲ್ಲಿ ಇದೊಂದು ಪ್ರಾಮಾಣಿಕವಾದಂಥ ಪ್ರಯತ್ನವಾಗಿದೆ. ಈ ಪ್ರಯತ್ನ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ಈಗ ಇರತಕ್ಕಂಥ ವಾತಾವರಣವನ್ನು ನಾವು ಯಾರೂ ಕೂಡ ಉಳಿಸತಕ್ಕಂಥ ಪ್ರಯತ್ನ ಮಾಡಬಾರದು. ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಿ ಈ ಸಮಸ್ಯೆಗೆ ಶಾಶ್ವತವಾದಂಥ ಒಂದು ಪರಿಹಾರವನ್ನು ಹುಡುಕಬೇಕು. ಆ ನಿಟ್ಟಿನಲ್ಲಿ ಎಲ್ಲಾ ರಾಜಕೀಯ ಪಕ್ಷಗಳು, ಇಡೀ ಸದನದಲ್ಲಿರತಕ್ಕಂಥ ನಾವು ಎಲ್ಲ ಸದಸ್ಯರೂ ಕೂಡ ಈ ಪ್ರಾಮಾಣಿಕ ಪ್ರಯತ್ನವನ್ನು ಮಾಡಲು ನಮ್ಮ ಕಾಣಿಕೆ ಕೊಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಈಗ ಪುಟ್ಟಣ್ಣಯ್ಯನವರು.

+ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ):- ಸನ್ಮಾನ್ಯ ಉಪಾಧ್ಯಕ್ಷರೇ, ಕಾವೇರಿ ವಿಷಯದ ಬಗ್ಗೆ ಎಲ್ಲಾ ವಿರೋಧಪಕ್ಷಗಳೂ ಬೆಳಕನ್ನು ಚೆಲ್ಲಿದವು. ಆದರೆ ಅತ್ಯಂತ ಮುಖ್ಯವಾದ ಪ್ರಶ್ನೆ ಎಂದರೆ ಸರ್ಕಾರ ಮಾತುಕತೆಗೆ ಹೋಗುವುದಕ್ಕಿಂತ ಮುಂಚೆ ಅದು ತನ್ನ ಜವಾಬ್ದಾರಿಯನ್ನು ಯಾವ ರೀತಿ ನಿರ್ವಹಣೆ ಮಾಡಿದೆ ಎನ್ನುವುದು ಮುಖ್ಯವಾದ ಪ್ರಶ್ನೆಯಾಗಿದೆ. ಏಕೆಂದರೆ, ಕಾವೇರಿ ಜಲ-ವಿವಾದ ಯಾರೋ ಕೆಲವರ ಸೊತ್ತು ಅಲ್ಲ. ಇದು ಇಡೀ ರಾಜ್ಯದ ಜನತೆಯ, ಎಲ್ಲಾ ಪಕ್ಷಗಳ ಹೊಣೆಗಾರಿಕೆ. ಸನ್ಮಾನ್ಯ ಖರ್ಗೆಯವರು ಮತ್ತು ನಾಗೇಗೌಡರು ಎರಡು ಪ್ರಮುಖ ವಿಷಯಗಳನ್ನು ಚರ್ಚೆ ಮಾಡಿದರು. ಎರಡು ಪ್ರಮುಖ ವಿಷಯಗಳನ್ನು ಚರ್ಚೆ ಮಾಡುವುದರ ಮೂಲಕ ಇಂಟ-ರಿಮ್ ಆರ್ಡರ್ ಏನಿತ್ತು, ಆ ಇಂಟರಿಮ್ ಆರ್ಡರ್ ಪ್ರಕಾರ ನೀರನ್ನು ಬಿಡದೇ ಇರುವುದರಿಂದ, ಇಬ್ಬರೂ ಮಾತುಕತೆ ಮೂಲಕ ಬಿಡಿಸತಕ್ಕಂಥ ವಿಷಯದ ಬಗ್ಗೆ ಒಂದು. ಇನ್ನೊಂದು ಎಂದರೆ, ನಾಗೇಗೌಡರು ಹೇಳಿದರು, ಇದನ್ನು ಮಾತುಕತೆ ಮೂಲಕ ಬಗೆಹರಿಸತಕ್ಕಂಥ ಆಲೋಚನೆ ಮಾಡು-ತ್ತೇವೆ ಎಂದು. ಆದರೆ ಕೋರ್ಟ್ ಇನ್ನೊಂದು ಯೋಚನೆ ಮಾಡಿತ್ತು. ಈಗ 104 ಟಿ.ಎಂ.ಸಿ. ನೀರನ್ನು ನಾವು ಇಂಟರಿಮ್ ಆರ್ಡರ್ ಪ್ರಕಾರ ಬಿಡಬೇಕಾಗಿತ್ತು. 104 ಟಿ.ಎಂ.ಸಿ. ನೀರನ್ನು, ಇವತ್ತು ಪ್ರಕೃತಿ ಬಗ್ಗೆ, ಆ ಪ್ರಕೃತಿಯ ವಿಚಾರ ಆಡಳಿತಾತ್ಮಕ ಸಮಸ್ಯೆಯಾಗಿರುವುದರಿಂದ ಯಾವುದೇ ಕಾರಣಕ್ಕೂ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ ಎಂದು ನ್ಯಾಯಾಲಯ ಒಂದು ತೀರ್ಮಾನಕ್ಕೆ ಬಂದು, ಮಾತುಕತೆಗೆ ಸ್ವಲ್ಪ ಅವಕಾಶ ಮಾಡಿಕೊಟ್ಟಿತು. ಮಾತುಕತೆಗೆ ಹೋಗುವುದಕ್ಕಿಂತ ಮುಂಚೆ ಆಡಳಿತ ಪಕ್ಷಕ್ಕೆ ಒಂದು ಮಾರ್ಗಸೂಚಿ ಇರಲೇ ಬೇಕು. ಮಾರ್ಗಸೂಚಿ ಇಲ್ಲದೇ ಮಾತುಕತೆಯಾಡುವುದು ಅವೈಜ್ಞಾನಿಕ ವಿಚಾರ. ಆದ್ದರಿಂದ ಈಗ ಇಡೀ ರಾಜ್ಯದ ಜನತೆಯ ಆಕ್ರೋಶವನ್ನು ಎದುರಿಸತಕ್ಕಂಥ ಒಂದು ಪರಿಸ್ಥಿತಿ ಸೃಷ್ಟಿಯಾಗಿದೆ. ಏಕೆಂದರೆ ಮೊದಲೇ ಒಂದು ಸಾರಿ ತಪ್ಪು ಮಾಡಿದ್ದಾರೆ. ಏನು ತಪ್ಪು ಮಾಡಿದ್ದಾರೆ ಎಂದರೆ, ನಮ್ಮ ಜೊತೆಯಲ್ಲಿ ಮಾತುಕತೆ ಆಡಿದರು, ನಮಗೆ ಗೊತ್ತಿಲ್ಲದ ಹಾಗೆ ನೀರು ಬಿಟ್ಟರು. ಎರಡನೇ ಸಾರಿ ನಾವು ಸದನದಲ್ಲಿ ಧರಣಿ, ಸತ್ಯಾಗ್ರಹ ಮಾಡುವುದು, ಅದಕ್ಕೋಸ್ಕರ ನಾವು ಕರೆಯಲಿಲ್ಲ ಎಂದು ಹೇಳುವುದು ತಪ್ಪು. ಸದನದ ಒಳಗೆ ಇರತಕ್ಕಂಥ ವಿಷಯವನ್ನು ಹೊರಗಡೆ ಕುಳಿತು ಒಂದು ರಾಜ್ಯದ ಹಿತವನ್ನು ಕಾಪಾಡತಕ್ಕಂಥ ಒಂದು ವೈಜ್ಞಾನಿಕ ಆಲೋಚನೆ ಮಾಡುತ್ತಿದೆ ಎಂಬ ಬಗ್ಗೆ ಆಡಳಿತ ಪಕ್ಷ ತನ್ನ ವಿಚಾರವನ್ನು ಮಂಡಿಸಿದರೆ, ಅದಕ್ಕೆ ಎಲ್ಲಾ ವಿರೋಧಪಕ್ಷಗಳು ಯಾವ ರೀತಿ ಮಾರ್ಗಸೂಚಿ ಕೊಡುತ್ತಿದ್ದವೋ, ಏನೋ? ಆದರೆ ಇವೆಲ್ಲವನ್ನೂ ತಿರಸ್ಕಾರ ಮಾಡಿ-ದರು. ನಾನು ವೈಯಕ್ತಿಕವಾಗಿ ಹೇಳುತ್ತೇನೆ, ಅದು ಕಾವೇರಿ ಜಲವಿವಾದವೇ ಅಲ್ಲ, ಪ್ರಕೃತಿಗೆ ಸಂಬಂಧ-ಪಟ್ಟಂಥ ಎಲ್ಲಾ ವಿಚಾರಗಳನ್ನೂ ಮಾತುಕತೆಯಿಂದ ಮಾತ್ರ ಬಗೆಹರಿಸಲು ಸಾಧ್ಯ. ಅದು ಇವತ್ತೇ ಬಗೆಹರಿಸುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ ಆದರೆ ಮಾತುಕತೆಗೆ ಹೋಗಬೇಕಾದರೆ ಯಾವು-ದೇ ಕಂಡೀಷನ್ ಇರಬಾರದು. ಹಿಂದೆ ನಡೆದಿರತಕ್ಕಂಥ ಎಲ್ಲಾ ವಿಚಾರಗಳೂ ತಿರಸ್ಕಾರವಾಗಬೇಕು. ಟ್ರಿಬ್ಯುನಲ್ ವ್ಯಾಪ್ತಿಯಲ್ಲಿ ನಾವು ಮಾತನಾಡುವ ಹಾಗಿಲ್ಲ, ಇಂಟರಿಮ್ ಆರ್ಡರ್ ವ್ಯಾಪ್ತಿಯಲ್ಲಿ ನಾವು ಮಾತನಾಡುವ ಹಾಗಿಲ್ಲ. ಏನಿದ್ದರೂ ಹೊಸದಾಗಿ ಮದುವೆಯಾದ ಒಂದು ಗಂಡು ಹೆಣ್ಣು ಮಾತುಕತೆ

ಆಡುವ ಹಾಗೆ ಇರಬೇಕು. ಆ ರೀತಿಯ ಪರಿಸ್ಥಿತಿ ಸೃಷ್ಟಿ ಮಾಡಬೇಕು. ಆದರೆ ಕರುಣಾನಿಧಿಯವ-ರಾಗಲೀ, ನಮ್ಮ ಮುಖ್ಯಮಂತ್ರಿಗಳಾಗಲೀ, ಟ್ರಿಬ್ಯುನಲ್ ಬಗ್ಗೆ ಅದು ಇನ್ನೂ ಜೀವಸಹಿತ ಇದೆ, ಅದರ ವ್ಯಾಪ್ತಿಯಲ್ಲಿ ಮಾತನಾಡುತ್ತೇವೆ ಎನ್ನುವ ಮಾತುಕತೆಗಳನ್ನು ಪತ್ರಿಕೆಗಳಲ್ಲಿ ಓದಿದ್ದೇವೆ. ಆದುದರಿಂದ ಬಹಳ ಗಂಭೀರವಾಗಿ ಮೊದಲು ಈ ಸರ್ಕಾರದ ನಿಲುವು ಪ್ರಕಟವಾಗಬೇಕು. ವಿರೋಧಪಕ್ಷಗಳ ಬಗ್ಗೆ ಸರ್ಕಾರ ನಿಲುವು ಏನು? ಈ ರೀತಿಯ ಬೇಜವಾಬ್ದಾರಿ ನಡವಳಿಕೆಯನ್ನು, ಬಹಳ ಬೇಜ-ವಾಬ್ದಾರಿತನವನ್ನು ನಾವು ವಿರೋಧ ಮಾಡುತ್ತೇವೆ. ವಿರೋಧಪಕ್ಷಗಳು ಎಂದರೆ ಇವರು ಏನೆಂದು ತಿಳಿದುಕೊಂಡಿದ್ದಾರೆ ಎನ್ನುವುದನ್ನು ಹೇಳಬೇಕು. ಎರಡನೆಯದಾಗಿ, ಟ್ರಿಬ್ಯುನಲ್‌ಅನ್ನು ತಿರಸ್ಕಾರ ಮಾಡುವುದರ ಮೂಲಕ ಮಾತುಕತೆ ಆಡುತ್ತೇವೆ ಎನ್ನುವ ವಿಷಯವನ್ನು ಸಭಾಧ್ಯಕ್ಷರೇ, ತಮ್ಮ ಮೂಲಕ ತಿಳಿಸಬೇಕು. ಸರ್ಕಾರದ ನಿಲುವು ಏನು ಎನ್ನುವುದನ್ನು ತಿಳಿಸಬೇಕು. ವಿರೋಧಪಕ್ಷಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಈ ರೀತಿ ಮಾತುಕತೆ ಆಡಿರುವುದನ್ನು ರೈತ–ಸಂಘ ವಿರೋಧ ಮಾಡುತ್ತದೆ. ಅವರು ಏನು ವಿಷಯವನ್ನು ಹೇಳುತ್ತಾರೆ, ಏನು ನಡೆಯಿತು ಎನ್ನುವ ವಿಚಾರವನ್ನು ಹೇಳುತ್ತಾರೆ, ಅದರ ನಂತರ ನಾವು ಹೇಳುತ್ತೇವೆ. ಈಗ ನಿಲುವಳಿ ಸೂಚನೆ ಬಗ್ಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸ-ಲಾರೆ. ನಂತರ ನಮ್ಮ ತೀರ್ಮಾನವನ್ನು ಹೇಳುತ್ತೇವೆ. ಮಾತನಾಡಲು ಅವಕಾಶ ಕೊಟ್ಟಂಥ ಉಪಾ-ಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಈಗ ಮಾನ್ಯ ಮುನಿಯಪ್ಪನವರು.

+ ಶ್ರೀ ಬಿ. ಮುನಿಯಪ್ಪ (ಗಾಂಧಿನಗರ):- ಸನ್ಮಾನ್ಯ ಉಪಾಧ್ಯಕ್ಷರೇ, ಮಧ್ಯಾಹ್ನದಿಂದ ಏನು ಕಾವೇರಿ ನದಿ ನೀರಿನ ಸಮಸ್ಯೆ ಬಗ್ಗೆ ಸುಪ್ರೀಂಕೋರ್ಟ್ ಒಂದು ಆದೇಶವನ್ನು ನೀಡಿ ಪಕ್ಕದ ರಾಜ್ಯ-ವಾದ ತಮಿಳುನಾಡು ಮತ್ತು ಕರ್ನಾಟಕ ರಾಜ್ಯದ ನಾಯಕರುಗಳು ಮಾತನಾಡಿ ಒಂದು ತೀರ್ಮಾ-ನಕ್ಕೆ ಬರಬೇಕು ಎನ್ನುವ ಹಿನ್ನೆಲೆಯಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿ-ಗಳು, ಸಂಸದೀಯ ಸಚಿವರು ಮತ್ತು ನೀರಾವರಿ ಸಚಿವರು ತಮಿಳುನಾಡಿಗೆ ಹೋಗಿ ಒಂದು ತಾತ್ಕಾ-ಲಿಕವಾದ ಒಪ್ಪಂದ ಮಾಡಿಕೊಂಡರು ಎನ್ನುವ ಹಿನ್ನೆಲೆಯಲ್ಲಿ ಇವತ್ತು ಈ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿ ತಿಳಿದುಕೊಳ್ಳುವಂಥ ಸಂದರ್ಭ ಬಂದಿದೆ. ಇವತ್ತು ಸರ್ಕಾರದ ನಿಲುವನ್ನು ವ್ಯಕ್ತಪಡಿಸಬೇಕು, ಚರ್ಚೆಯಾಗಬೇಕು ಎನ್ನುವ ಬೇಡಿಕೆ ಏನು ನಮ್ಮ ಮುಂದೆ ಇದೆ, ಇವತ್ತು ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಅವರು ಮಾತನಾಡಿದ್ದರಲ್ಲಿ ತಪ್ಪಿಲ್ಲ ಎನ್ನುವ ನನ್ನ ಭಾವನೆಯನ್ನು ವ್ಯಕ್ತಪಡಿಸುತ್ತೇನೆ. ಆದರೆ ಸರ್ಕಾರ ಕಳೆದ 15 ದಿವಸಗಳಿಂದ ಶಾಸನಸಭೆ ನಡೆಯುತ್ತಿರುವಂಥ ಸಂದರ್ಭದಲ್ಲಿ, ಕಳೆದ ಬಾರಿ ಕಾವೇರಿ ನದಿ ನೀರಿನ ಸಮಸ್ಯೆ ಬಂದಂಥ ಸಂದರ್ಭದಲ್ಲಿ ಹಲವಾರು ಬಾರಿ ನಾವು ಸಭೆಯನ್ನು ಸೇರಿ ಅಂದಿನ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಚರ್ಚೆಯನ್ನು ಮಾಡಿ ಪತ್ರಕರ್ತರ ಮುಂದೆ ರಾಜ್ಯದ ಎಲ್ಲಾ ಪಕ್ಷಗಳ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ಒಂದು ನಿಯೋಗ ದೆಹಲಿಗೂ ಕೂಡ ಹೋಗಿ ನಾವು ನಮ್ಮ ಒಮ್ಮತವನ್ನು ಪ್ರದರ್ಶನ ಮಾಡಿದ್ದೇವೆ. ಯಾವ ಕಾರಣವೋ ಅರ್ಥವಾಗುತ್ತಿಲ್ಲ, ಸರ್ಕಾರ ಶಾಸನಸಭೆ ನಡೆಯುವಂಥ ಸಂದರ್ಭದಲ್ಲಿ ಒಂದು ಸಭೆ-

ಯನ್ನು ಕರೆದು ಇಲ್ಲಿರತಕ್ಕಂಥ ಎಲ್ಲಾ ರಾಜಕೀಯ ಪಕ್ಷಗಳ ನಾಯಕರುಗಳನ್ನು ಕರೆದು ನಾವು ಈ ರೀತಿ ಸುಪ್ರೀಂಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ತಮಿಳುನಾಡಿಗೆ ಮಾತುಕತೆ ನಡೆಸಲು ಹೋಗು-ತ್ತಿದ್ದೇವೆ.

4.50 ಪಿಎಂ

ನಮ್ಮ ಅಭಿಪ್ರಾಯಗಳು ಈ ರೀತಿ ಇದೆ, ನಿಮ್ಮ ಯೋಚನೆಗಳು ಈ ಕಾವೇರಿ ನೀರಿನ ಬಗ್ಗೆ ಇದ್ದರೆ ಕೊಡಿ ಎನ್ನುವಂಥ ಅಭಿಪ್ರಾಯವನ್ನು ಸನ್ಮಾನ್ಯ ಸರ್ಕಾರ ಇಲ್ಲಿರತಕ್ಕಂಥ ಎಲ್ಲಾ ರಾಜಕೀಯ ಪಕ್ಷದ ನಾಯಕರನ್ನು ಕರೆದು ಮಾತನಾಡಿದ್ದರೆ ನಿಮ್ಮ ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳ ಮಾತು-ಕತೆಗೆ ಇನ್ನೂ ಹೆಚ್ಚಿಗೆ ಸಹಕಾರಿಯಾಗಿ ಇರುತ್ತಿತ್ತು ಎನ್ನುವಂಥ ಅಭಿಪ್ರಾಯ ನನ್ನದಾಗಿದೆ. ಒಂದು ಮಾತು ಅಂತೂ ನಿಜ. 1924ರಲ್ಲಿ ಅಂದಿನ ಸರ್ಕಾರಗಳು ಅಥವಾ ದಿವಾನರುಗಳ ಮಧ್ಯೆ ಏನು ಒಪ್ಪಂದವೇರ್ಪಟ್ಟಿತ್ತೋ ಆ ಒಪ್ಪಂದ ಸರಿಯೋ ಅಥವಾ ತಪ್ಪೋ ಎನ್ನುವ ವಾದಕ್ಕೆ ನಾನು ಹೋಗುವುದಿಲ್ಲ. ಈ ಒಪ್ಪಂದ 1974ರಲ್ಲಿ ಮುಗಿದು, 1974ರಿಂದ ಈ 22 ವರ್ಷಗಳ ಕಾಲದಲ್ಲಿ ಈ ರಾಜಕೀಯ ಬದಲಾವಣೆಗಳಲ್ಲಿ ತಮಿಳುನಾಡಿನ ಮತ್ತು ಕರ್ನಾಟಕ ರಾಜ್ಯದ ಹಲವಾರು ಮುಖ್ಯ-ಮಂತ್ರಿಗಳು ಬದಲಾವಣೆಯಾಗಿ, ಹಲವಾರು ಸುತ್ತು ಮಾತುಕತೆ ನಡೆಸಿದ್ದರೂ ಕೂಡ ಒಮ್ಮತಕ್ಕೆ ಬಾರದೆ ಅದರಿಂದ ಇವತ್ತು ಕಷ್ಟಕರವಾದ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಇವತ್ತು ಮಾತು-ಕತೆ ನಡೆಸುವಂಥ ಸಂದರ್ಭದಲ್ಲಿ ಸುಪ್ರೀಂಕೋರ್ಟಿನ ಆದೇಶವನ್ನು ಒಪ್ಪಿ ತಮಿಳುನಾಡಿನಲ್ಲಿ ಮಾತ-ನಾಡುವುದರಲ್ಲಿ ತಪ್ಪು ಇಲ್ಲವೆನ್ನುವಂಥ ಭಾವನೆಯನ್ನು ನಾನು ವ್ಯಕ್ತಪಡಿಸಿ, ಮಾತನಾಡುವಂಥ ಸಂದರ್ಭದಲ್ಲಿ ನಾನು ಈ ಕರ್ನಾಟಕ ರಾಜ್ಯದ ನಮ್ಮ ನಾಯಕರು ಏನು ಅಲ್ಲಿಗೆ ಹೋಗಿದ್ದಾರೆ ಅದೇ ರೀತಿಯಾಗಿ ಮಂತ್ರಿಗಳು ಹೋಗಿದ್ದಾರೆ. ಅಲ್ಲಿ ಕೇಂದ್ರ ಮಂತ್ರಿ ಕೂಡ ಆ ಸಭೆಯಲ್ಲಿ ಭಾಗವಹಿಸಿದ್ದಾರೆ. ಒಬ್ಬ ಕೇಂದ್ರ ಮಂತ್ರಿ ಎಂದು ಹೇಳುವವರು, ಇವತ್ತು ನಮ್ಮ ರಾಜ್ಯದವರೇ ಆದಂಥ ಸನ್ಮಾನ್ಯ ದೇವೇಗೌಡರು ಈ ದೇಶದ ಪ್ರಧಾನಮಂತ್ರಿಗಳಾಗಿದ್ದಾರೆ. ಅವರು ಕರ್ನಾಟಕದ ಪ್ರತಿನಿಧಿಗಳಾಗಿ-ದ್ದರೂ ಕೂಡ ಅವರು ಈ ದೇಶಕ್ಕೆ ಪ್ರಧಾನಮಂತ್ರಿಗಳು. ಅದೇ ರೀತಿಯಾಗಿ ತಮಿಳುನಾಡಿನ ಮಂತ್ರಿಗಳು ಏನು ಭಾಗವಹಿಸಿದ್ದಾರೆ, ಅವರು ತಮಿಳುನಾಡಿನ ರಾಜ್ಯದವರು ಇರಬಹುದು, ಆದರೆ ಈ ಒಂದು ಸಮಸ್ಯೆಯ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ ಒಬ್ಬ ಕೇಂದ್ರ ಮಂತ್ರಿಗಳು ಆ ಸಭೆ-ಯಲ್ಲಿ ಬಂದು ಭಾಗವಹಿಸಿ ತಮಿಳುನಾಡಿನ ಪರವಾಗಿ ಕುಳಿತು ಮಾತನಾಡುವುದು ಅದು ರಾಜ-ಕೀಯ, ಅದು ಒಳ್ಳೆಯ ವಾತಾವರಣ ಅಲ್ಲ ಎನ್ನುವಂಥದ್ದು ನನ್ನ ಖಚಿತವಾದ ಅಭಿಪ್ರಾಯ. ಕಾರಣ ದೇವೇಗೌಡರು ಈ ದೇಶದ ಪ್ರಧಾನಮಂತ್ರಿಯಾಗಿದ್ದು ಕರ್ನಾಟಕದ ಪರವಾಗಿ ಅಲ್ಲಿ ಚರ್ಚೆಯಲ್ಲಿ ಭಾಗವಹಿಸಲಿಲ್ಲ. ಏಕೆಂದರೆ ಅವರು ದೇಶದ ಪ್ರಧಾನಮಂತ್ರಿಯಾಗಿ ಎಲ್ಲರಿಗೂ ಸಮಾನವಾಗಿ ಕಾಣುವ ದೃಷ್ಟಿಯಿಂದ ನಮ್ಮವರು ನೋಡುತ್ತಾರೆ. ಆ ದೃಷ್ಟಿಯಲ್ಲಿ ತಮಿಳುನಾಡಿನ ಕೇಂದ್ರ ಮಂತ್ರಿಗಳು ಆ ಸಭೆಯಲ್ಲಿ ಭಾಗವಹಿಸಿದ್ದನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ಕರ್ನಾಟಕವಾಗಿರಬಹುದು, ತಮಿಳು-ನಾಡು ಆಗಿರಬಹುದು, ಆಂಧ್ರಪ್ರದೇಶ ಆಗಿರಬಹುದು, ಯಾವುದೇ ನದಿ ನೀರಿನ ಸಮಸ್ಯೆ ಬಂದರೂ

ಕೂಡ ನಾವು ಯಾರೂ ಬೇರೆ ದೇಶದವರು ಅಲ್ಲ. ಭಾರತ ಸಂವಿಧಾನದ ಚೌಕಟ್ಟಿನಲ್ಲಿ ಇರ-ತಕ್ಕಂಥವರು. ಆ ಸಮಸ್ಯೆಗಳನ್ನು ಕುಳಿತು ಮಾತನಾಡಿ ಬಗೆಹರಿಸುವುದರಲ್ಲಿ ತಪ್ಪಿಲ್ಲ ಎನ್ನುವ ಅಭಿ-ಪ್ರಾಯವನ್ನು ವ್ಯಕ್ತಪಡಿಸಿ, ಸರ್ಕಾರ ಶಾಸನಸಭೆಯಲ್ಲಿ ಎಲ್ಲಾ ರಾಜಕೀಯ ಪಕ್ಷದ ನಾಯಕರನ್ನು ಕರೆದು ಮಾತನಾಡಿದ್ದರೆ ಇನ್ನೂ ಒಳ್ಳೆಯದು ಇರುತ್ತಿತ್ತು ಎನ್ನುವ ಭಾವನೆ ವ್ಯಕ್ತಪಡಿಸಿ ಈ ಒಂದು ಸೂಚನೆ ಏನು ಇದೆ, ಈ ಸೂಚನೆಗೆ ಸಭೆಯಲ್ಲಿ ಸರ್ಕಾರದ ಹೇಳಿಕೆಯನ್ನು ಕೊಡಬೇಕು. ಮತ್ತು ಧೀರ್ಘವಾದ ಚರ್ಚೆಯನ್ನು ಮಾಡಿ ಅದು ಆಂಧ್ರ, ತಮಿಳುನಾಡಿನ ಸಮಸ್ಯೆ ಆಗಿರಬಹುದು, ಕರ್ನಾಟಕ ರಾಜ್ಯದ ಹಿತವನ್ನು ಕಾಪಾಡಿ ಸೋದರ ರಾಜ್ಯಗಳು ಸ್ನೇಹವನ್ನು ಇಟ್ಟುಕೊಳ್ಳುವ ರೀತಿ-ಯಲ್ಲಿ ಈ ನದಿ ನೀರಿನ ಸಮಸ್ಯೆ ಇರಬಹುದು, ರಾಜ್ಯ ರಾಜ್ಯಗಳ ಸಂಬಂಧವನ್ನು ಸ್ನೇಹಮಯವಾಗಿ ಇಟ್ಟುಕೊಳ್ಳಬೇಕು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿ ಸಭೆಯಲ್ಲಿ ಚರ್ಚೆ ಮಾಡಲು ಕೂಡ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

+ **ಶ್ರೀ ಜೆ.ಹೆಚ್ ಪಟೇಲ್ (ಮುಖ್ಯಮಂತ್ರಿಗಳು):-** ಮಾನ್ಯ ಉಪಾಧ್ಯಕ್ಷರೆ, ತಾಂತ್ರಿಕವಾಗಿ ಈ ಚರ್ಚೆ ಬಹಳ ದೋಷಪೂರಿತವಾಗಿದೆ. ಆದರೂ ತಾವೂ ಕೂಡ ತಮ್ಮ ಅನುಮತಿಯನ್ನು ಕೊಟ್ಟಿ-ರುವುದರಿಂದ ಚರ್ಚೆ ಮಾಡಬಹುದು. ಏಕೆಂದರೆ ಈ ಸದನದಲ್ಲಿ ಅಧಿವೇಶನ ನಡೆಯುತ್ತಿರುವಾಗ ಯಾವುದಾದರೂ ಒಂದು ವಿಷಯದಲ್ಲಿ ನಿಲುವಳಿ ಸೂಚನೆ ಕಳುಹಿಸಿ ಅದೇ ವಿಷಯದ ಬಗ್ಗೆ ಅದೇ ಅಧಿವೇಶನದಲ್ಲಿ ಎರಡನೇ ನಿಲುವಳಿ ಸೂಚನೆಗೆ ಅಡ್ಮಿಸಿಬಲ್ ಇಲ್ಲ. ಈ ರೂಲ್ಸ್ ಗೊತ್ತಿರುವವರಿ-ಗೆಲ್ಲರಿಗೂ ಈ ನಿಯಮ ಗೊತ್ತಿರಬಹುದು. ಆದರೆ ಇದು 3-4 ಸಾರಿ ಈ ಸದನದಲ್ಲಿ ಚರ್ಚೆಯಾಗಿದೆ. ಈ ವಿಷಯ 4 ಸಲ ಅಲ್ಲದಿದ್ದರೆ 40 ಸಲ ಚರ್ಚೆ ಆಗಲಿ, ಅದಕ್ಕೆ ನಾನು ಬೇಡವೆಂದು ಹೇಳುವುದಿಲ್ಲ. ಜುಲೈ 9ನೇ ತಾರೀಖು ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಎಲ್ಲಾ ನಾಯಕರು ಸೇರಿ ನಿಲುವಳಿ ಸೂಚನೆಯನ್ನು ಮೂವ್ ಮಾಡಿದರು. ಆದರೆ, ಇನ್ನೊಂದು ಏನೆಂದರೆ ಇತ್ತೀಚೆಗೆ ಅದಕ್ಕೆ ಸಂಬಂಧಪಟ್ಟ ಘಟನೆ ಅಂದರೆ ನಾನು ಮತ್ತು ನನ್ನ ಸ್ನೇಹಿತರು ತಮಿಳುನಾಡಿನ ಮುಖ್ಯಮಂತ್ರಿ-ಗಳೊಡನೆ ಕಂಡು ಮಾತನಾಡಿದೆವು. ಅವರನ್ನು ಕಂಡು ಮಾತನಾಡಿದ ವಿಷಯದ ಬಗ್ಗೆ ಸದನಕ್ಕೆ ತಿಳಿಸಬೇಕಾದುದು ನಮ್ಮ ಕರ್ತವ್ಯ, ಕೇಳಬೇಕಾದದ್ದು ಅವರ ಕರ್ತವ್ಯ. ಆದರೆ Adjournment Motion is technically wrong and defective in law. So, that is my first submission. ಎರಡನೇ ಸಬ್‌ಮಿಷನ್ ಅಂದರೆ ಇದು ಬಹಳ ದೂರದ ಕಥೆ. ಅಷ್ಟೇ ದುರಂತದ ಕಥೆಯೂ ಹೌದು. ತತ್‌ಕ್ಷಣ ನೀವು ಏನು ಮಾತನಾಡಿದಿರಿ ತಮಿಳುನಾಡಿನಲ್ಲಿ ಎಂದು ಕೇಳಿದರೆ. ಅಲ್ಲಿ ಹೀಗೆ ಹೇಳಿದೆವು ಎಂದು ಹೇಳುವುದಕ್ಕಾಗುವುದಿಲ್ಲ. ಈ ಸದನದ ಗೌರವ, ಘನತೆ ಬಗ್ಗೆ ಎಲ್ಲಾ ನನ್ನ ಸ್ನೇಹಿತರು ಮಾತನಾಡಿ ಈ ಸದನಕ್ಕೆ ಅತ್ಯಂತ ಕಡಿಮೆ ಗೌರವ ಕೊಟ್ಟರು. ಒಂದು ವಿಷಯವನ್ನು 10-10 ಬಾರಿ ಹೇಳುತ್ತಾ ಈ ಸದನಕ್ಕೆ ಯಾರಾದರೂ ಬಹಳ ಅಗೌರವ ಕೊಟ್ಟಿದ್ದರೆ ಈ ಸದನದ ಸಮಯವನ್ನು ಹಾಳು ಮಾಡಿದಂತವರು ಯಾರೇ ಇರಲಿ, ಅದಕ್ಕೋಸ್ಕರ ನಾಮ ಇಲ್ಲಿ ಎಲ್ಲವನ್ನು ಹೇಳುವುದಕ್ಕೆ ಹೋಗುವುದಿಲ್ಲ, ಬುದ್ಧಿ ಶಕ್ತಿ ತಿಳುವಳಿಕೆ ಇತಿಹಾಸದ ಜ್ಞಾನ ಇರುವವರಿಗೆ ಎರಡು

ಮಾತು ಹೇಳುತ್ತೇನೆ. ಈ ವಿಷಯಗಳು ಜನರನ್ನು ಉದ್ರೇಕಗೊಳಿಸುವುದಕ್ಕೆ ಜನರಿಂದ ಕೇಕೆ ಹೊಡಿ-ಸುವುದಕ್ಕೆ ನನಗೂ ಬರುತ್ತದೆ. ಈ ಮಾನವ ಇತಿಹಾಸದಲ್ಲಿ Harmone Death Doctrine ಒಂದು ಇದೆ. Helsinki formula ಇನ್ನೊಂದು ಇದೆ. Territorial sovereignty, ಒಂದು ಇದೆ. ನಾನು ಥಿಯರೀಸ್ ಹೇಳುತ್ತಿರುವುದು. Territorial integrity, ಕೊನೆಯದು natural flow ಇದೆ. ಯಾವುದೇ ನದಿ ಇರಲಿ, ಅದು ದೇಶದ ಒಳಗೆ, ಅಂತರರಾಜ್ಯದ ಸಂಬಂಧ ಇರ-ಬಹುದು, ಕೆಲವು ಅಂತರರಾಷ್ಟ್ರೀಯ ಸಂಬಂಧವೂ ಇರಬಹುದು. ಮೆಕ್ಸಿಕೋ ಅಮೇರಿಕ ಮಧ್ಯೆ ನದಿ ನೀರಿನ ಸಂಬಂಧ ಇದೆ. ಟಾಂಜೇನಿಯ ಮತ್ತು ಅದರ ಕೆಳಗಿನ ರಾಜ್ಯ ಆಫ್ರಿಕದಲ್ಲಿ ಇದೆ. ರಾಷ್ಟ್ರ ರಾಷ್ಟ್ರಗಳ ಮಧ್ಯೆ ಬಂದಾಗ, ರಾಜ್ಯ ರಾಜ್ಯಗಳ ಮಧ್ಯೆ ಬಂದಾಗ ಈ ನೀರಿನ ಸಮಸ್ಯೆ ಬಂದಾಗ, ಯಾವ ದೃಷ್ಟಿಕೋನವನ್ನು ಇಟ್ಟುಕೊಂಡು ನಾವು ಅದನ್ನು ನೋಡಬೇಕು ಎನ್ನುವುದನ್ನು ಒಂದು ಫಾರ್ಮುಲವನ್ನು ಹಾಕಿದ್ದೇವೆ. ನಮಗೆ ಸುಪ್ರೀಂಕೋರ್ಟಿನಿಂದ ಮೆಸೇಜ್ ಬಂತು. ಮುಖ್ಯ ನ್ಯಾಯಾ-ಧೀಶರ ಚೇಂಬರ್‌ನಲ್ಲಿ ನಮ್ಮ ಸೀನಿಯರ್ ಅಡ್ವೋಕೇಟ್ ನಾರಿಮನ್‌ರವರು ಅಟೆಂಡ್ ಆಗಿ, ತಮಿಳುನಾಡು ಪರವಾಗಿ ಪರಾಷರನ್ ಅವರು ಅಪಿಯರ್ ಆಗಿದ್ದಾಗ ಮುಖ್ಯ ನ್ಯಾಯಾಧೀಶರು ಏನು ಹೇಳಿದರು ಎಂದರೆ:-

> "The State of Karnataka conveyed to the Judges the willingness of Hon. Chief Minister to meet his counter-part of Tamil Nadu. Similarly Sri Parasharan, Senior Counsel for the State of Tamil Nadu conveyed the willingness of Tamil Nadu Chief Minister. As a result of which . . ."

ಅದಕ್ಕೆ 7ನೇ ತಾರೀಖು ಸುಪ್ರೀಂಕೋರ್ಟು ಟೈಮ್ ಕೊಟ್ಟಿದ್ದರಿಂದ, ವಾಸ್ತವಿಕವಾಗಿ ನನ್ನ ಸ್ನೇಹಿತ-ರೊಡನೆ ಮಾತನಾಡಿದಾಗ ಈ ಅಧಿವೇಶನ ಮುಗಿಸಿಕೊಂಡು ಹೋಗೋಣ, ಎರಡು ದಿವಸ ಕುಳಿತು ಮಾತನಾಡುವ ಎನ್ನುವಂಥ ಇಚ್ಛೆ ನಮಗೆ ಇತ್ತು. ಆದರೆ ತಮಿಳುನಾಡು ಮುಖ್ಯಮಂತ್ರಿಗಳೊಡನೆ ಮಾತನಾಡಿದಾಗ ಅವರು ಏನು ಹೇಳಿದರು ಎಂದರೆ, ಇಲ್ಲಿ ಸುಪ್ರೀಂಕೋರ್ಟ್ ಮುಂದೆ ನಾವು 7ನೇ ತಾರೀಖಿಗೆ ಮುಂಚೆ ನಮ್ಮ ಅಭಿಪ್ರಾಯವನ್ನು ತಿಳಿಸದೇ ಹೋದರೆ ಮತ್ತೆ ನಾವು ಅಲ್ಲಿ ಸುಪ್ರೀಂ-ಕೋರ್ಟಿನಲ್ಲಿ ವಾದ ವಿವಾದಕ್ಕೆ ಅನಿವಾರ್ಯವಾಗುತ್ತದೆ. ನಿಮ್ಮ ಕೇಸ್ ನೀವು ನಮ್ಮ ಕೆಲಸವನ್ನು ನಾವು ಫೈಟ್ ಮಾಡಬೇಕಾಗುತ್ತದೆ. ಆದ್ದರಿಂದ ನೀವು ಬಂದರೆ ಸಾಧ್ಯವಾದರೆ ಮಾತನಾಡಬಹು-ದೆಂದು ಹೇಳಿದರು. ಇದಕ್ಕೋಸ್ಕರ ಈ ವಿಷಯವನ್ನು ಮಾನ್ಯ ಅಧ್ಯಕ್ಷರಿಗೆ ತಿಳಿಸಿದ್ದೆವು. ವಿರೋಧ ಪಕ್ಷದ ಸದಸ್ಯರಿಗೆ ತಿಳಿಸಲಿಲ್ಲವೆಂದಲ್ಲ. ಸಿನ್ಸಿಯರಾಗಿ ನೀವುಗಳು ಹೇಳಬೇಕು. ನನ್ನ ಆರೋಗ್ಯ ಸರಿ ಇರಲಿಲ್ಲ. ಸದನಕ್ಕೆ ನಾನು ಬಂದಿರಲಿಲ್ಲ. ಆದರೂ ಸ್ಪೀಕರ್ ಚೇಂಬರ್‌ಗೆ ಬಂದಿದ್ದೆ ಆ ಸಮಯದಲ್ಲಿ ಇವರೆಲ್ಲರೂ ಇದ್ದರು. ಇವರೆಲ್ಲರೂ ಇದ್ದಾಗ, ನಾನು ನಾಳೆ ಮದರಾಸಿಗೆ ಹೋಗಬೇಕಾಗಿದೆ, ಇದು ಅನಿವಾರ್ಯ ಎಂದು ಹೇಳಿದೆ. ಅಜೆಂಡಾ ಏನೂ ಇರಲಿಲ್ಲ. ಅವರೂ ಸಹ ಏನೂ ತಿಳಿಸಲಿಲ್ಲ. ನಾನು

ಅಜೆಂಡಾ ಫಾರಂ ಮಾಡಿಕೊಂಡಿಲ್ಲ. ಅವರ ಹತ್ತಿರ ಮಾತನಾಡಿಕೊಂಡು ಬಂದು ಮತ್ತೆ ನಿಮಗೆ ಕನ್ಸಲ್ಟ್ ಮಾಡುವ ಅವಶ್ಯಕತೆ ಇದ್ದರೆ ಕರೆಯುತ್ತೇನೆ ಎಂದು ಹೇಳಿದೆ. ರೆಡ್ಡಿಯವರು ಆ ಸಂದರ್ಭದಲ್ಲಿ ಇದ್ದರು. ವಿರೋಧಪಕ್ಷದ ನಾಯಕರು ಇದ್ದರು. ಮಲ್ಲಿಕಾರ್ಜುನ ಖರ್ಗೆಯವರು ಇದ್ದರು. ಈ ರೀತಿಯಾಗಿ ನಾನು ಹೋಗುವಾಗ ತಿಳಿಸಿದೆ. ತಮಿಳುನಾಡಿಗೆ ಹೋಗುವಾಗ ನಾನು ತಿಳಿಸದೆಯೇ ಹೋಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು, ತಮ್ಮ ಆರೋಗ್ಯ ಸರಿ ಇರಲಿಲ್ಲವೆಂದು, ಬೇರೆ ಯಾವುದೋ ಸಂದರ್ಭದಲ್ಲಿ ಸೇರಿದಾಗ ತಮಿಳುನಾಡಿಗೆ ಹೋಗುವುದರ ಬಗ್ಗೆ ತಾವು ಪ್ರಸ್ತಾಪ ಮಾಡಿದಿರಿ. ಅದನ್ನು ನಾವು ಇಲ್ಲವೆಂದು ಹೇಳುತ್ತಿಲ್ಲ. ಆದರೆ ನಾವು ಬಹಳ ಸ್ಪಷ್ಟವಾಗಿ ಅಲ್ಲಿಗೆ ಹೋಗುವುದಕ್ಕೆ ಮುಂದೆ ಯಾವ ಆಧಾರದ ಮೇಲೆ ಮಾತನಾಡುತ್ತೀರಿ? ತಮಿಳುನಾಡು ಮುಖ್ಯಮಂತ್ರಿಗಳು ಹೀಗೆ ಹೇಳಿದ್ದಾರೆ ಎನ್ನುವುದನ್ನು ಅಲ್ಲೂ ಪ್ರಸ್ತಾಪ ಮಾಡಿದೆವು, ತಮ್ಮ ಆರೋಗ್ಯ ಸರಿಯಿಲ್ಲವೆಂದಾಗ, ತಮಗೆ ಬಹಳ ಮಾತನಾಡುವುದು ಬೇಡವೆಂದು ಸ್ಪೀಕರ್‌ರವರು ಹೇಳಿದರು. ಇಲ್ಲೂ ಸಹ ಹೇಳಿದ್ದೇವೆ. ತಾವು ತಮಿಳುನಾಡಿಗೆ ಹೋಗುತ್ತೇವೆಂದು ಹೇಳಿದಾಗ ನಾವು ಅನುಮತಿ ಕೊಟ್ಟೆವು ಎಂದು ಹೇಳಿದಿರಿ. ಹೋಗುವವರಿಗೆ ನಾವು ಯಾರು ತಡೆಯುವುದಕ್ಕೆ?

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ಉಪಾಧ್ಯಕ್ಷರೆ, ಅನುಮತಿ ಕೇಳಿದೆ ಎಂದು ಹೇಳಿದ್ದುದು ಅಲ್ಲ. ವಿಷಯ ತಿಳಿಸಿದೆ ಎಂದು ಹೇಳಿದ್ದುದು. I passed on the information. That is all what I said. ನನ್ನಷ್ಟೇ ಕರ್ನಾಟಕದ ಇತಿಹಾಸದ ಬಗ್ಗೆ ತಿಳುವಳಿಕೆ ಇರತಕ್ಕಂಥವರು ನಮ್ಮ ಸ್ನೇಹಿತರುಗಳು ಇದ್ದಾರೆ. ಈ 100 ವರ್ಷಗಳಿಂದಲೂ ಈ ಸಮಸ್ಯೆ ಬಗೆಹರಿಯಲಿಲ್ಲ ಇದರ ರಹಸ್ಯ ಏನು ಇರಬಹುದು? ಇಷ್ಟೊಂದು ಜನ, ಬ್ರಿಟೀಷರ ಕಾಲದಲ್ಲಿ ಬಂದಂತಹ ಗೌರ್‍ನರ್ಸ್, ಗೌರ್‍ನರ್ ಜನರಲ್ಸ್, ನಮ್ಮ ರಾಜ್ಯದಲ್ಲಿದ್ದಂತಹ ಮಹಾನ್ ವಕೀಲರುಗಳು, ಆ ರಾಜ್ಯದಲ್ಲಿದ್ದಂಥವರುಗಳು, ಇವರಿಗೆ ಏಕೆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗಲಿಲ್ಲ? ಅವರುಗಳು ಏಕೆ ಬಗೆಹರಿಸಲಿಲ್ಲ? ಇದು ಏನಾಗಿರಬೇಕು? ಇದಕ್ಕೆ ಏನಾದರೂ ಕಾರಣ ಇರಬೇಕಲ್ಲಾ, ಇಂತಹ ವಿಷಯಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲವೆಂದೇ ಮೊನ್ನೆ ಸುಪ್ರೀಂಕೋರ್ಟಿನವರು ಹೇಳಿರುವುದು. ಅದು ಪ್ರಪಂಚದ ಇತಿಹಾಸವನ್ನು ನೋಡಿ, ಎಲ್ಲಿಯೂ ಕೂಡ, ಅದು ಗೋದಾವರಿಯ ಸಮಸ್ಯೆ ಇರಬಹುದು, ಉತ್ತರಭಾರತದಲ್ಲಿ ಪಂಜಾಬಿಗೂ, ಹರಿಯಾಣಕ್ಕೂ ಇದ್ದ ವಿವಾದ ಇರಬಹುದು, ಕೊನೆಗೆ ಯಾವುದೇ ಸರ್ಕಾರ ಅಧಿಕಾರದಲ್ಲಿ ಇರಲಿ, ಜನರ ಪ್ರತಿನಿಧಿಗಳು ಕುಳಿತುಕೊಂಡು ಕೊಡು, ತೆಗೆದುಕೋ ಎಂದರೆ ಆದೇ. ಏನು ಕೊಟ್ಟೆವು, ನೀನು ಏನು ತೆಗೆದುಕೊಂಡು ಬಂದೆ, ಅದು ಅಲ್ಲ. ಕೊಡು, ತೆಗೆದುಕೋ ಎನ್ನುವುದರಲ್ಲಿ, ಅದರಲ್ಲಿ ಕೊಡುವುದು ಇರುತ್ತದೆ, ಕೊನೆಗೆ ಏನು ಕೊಡುವುದಕ್ಕೆ ಆಗದೇ ಇದ್ದರೂ ಸದ್ಭಾವನೆಯನ್ನು ಕೊಡಬಹುದು. ನಮಗೆ ಏನೂ ಕೊಡುವುದಕ್ಕೆ ಆಗದಿದ್ದರೂ, ಮನುಷ್ಯ ತನ್ನ ಶ್ರೀಮಂತಿಕೆಯಲ್ಲಿ ಸದ್ಭಾವನೆಯನ್ನು ಕೊಡಬಹುದು, ಸದ್ಭಾವನೆಯನ್ನು ಅವರು ನಮಗೆ ಕೊಟ್ಟರೂ

ಒಳ್ಳೆಯದೇ, ಸದ್ಭಾವನೆಯನ್ನು ನಾವು ಅವರಿಗೆ ಕೊಟ್ಟರೂ ಒಳ್ಳೆಯದೇ. ಈ ಸದ್ಭಾವನೆಯಲ್ಲಿ ನೀರು ಇಲ್ಲದೇ ಹೋದರೂ, ನೀರಿನ ಸಮಸ್ಯೆಯನ್ನು ಬಗೆಹರಿಸಲು ಸದ್ಭಾವನೆ ಅತ್ಯವಶ್ಯಕ ಅನಿವಾರ್ಯ. ಇವತ್ತು ನಮ್ಮ ಪ್ರಧಾನಮಂತ್ರಿಗಳು ಕೇಂದ್ರ ಸರ್ಕಾರದಲ್ಲಿ ಇರುವುದರಿಂದ ಇದೊಂದು ಅತ್ಯಂತ ಅಮೂಲ್ಯವಾದಂತಹ ಸಂದರ್ಭ. ಆದ್ದರಿಂದ ಈ ಸಂದರ್ಭವನ್ನು ಉಪಯೋಗಿಸಿಕೊಳ್ಳುತ್ತಿದ್ದೇನೆ. ಶ್ರೀ ಹೆಚ್.ಡಿ. ದೇವೇಗೌಡರ ಕುರ್ಚಿ, ಕುರ್ಚಿ, ಎಂದು ಏನು ಮಾತನಾಡುತ್ತೀರಿ, ಅದನ್ನು ಬಿಟ್ಟರೆ ಬೇರೆ ಕಾಣುವುದಿಲ್ಲ. ಪ್ರಾಮಾಣಿಕವಾಗಿ ತಾವು ಆಲೋಚನೆಯನ್ನು ಮಾಡಿ. ಶ್ರೀ ಹೆಚ್.ಡಿ. ದೇವೇಗೌಡರು ಪ್ರಧಾನಮಂತ್ರಿಯಾಗಿ ಅಲ್ಲಿರುವಾಗ ಕರ್ನಾಟಕದ ಒಂದು ಸಮಸ್ಯೆಯನ್ನು ಬಗೆಹರಿಸಿಕೊಂಡರೆ ನಮ್ಮಂತಹ ಪುಣ್ಯವಂತರು ಯಾರು ಇದ್ದಾರೆ? ಇದನ್ನು ಏಕೆ ಮಾಡಿಕೊಳ್ಳಬಾರದು? ಅದೇ ರೀತಿಯಲ್ಲಿ ತಮಿಳುನಾಡಿನವರು ನಮಗೆ ಬೇಕಾದಂತಹ ಪ್ರಧಾನಮಂತ್ರಿಗಳು ಕೇಂದ್ರದಲ್ಲಿ ಇರುವಾಗ ಹೀಗೆ ಬಗೆಹರಿಸಿಕೊಳ್ಳಬೇಕೆಂದು ವಿಚಾರವನ್ನು ಮಾಡಿದರೆ ತಪ್ಪೇನು? ಅದರಲ್ಲಿ ತಾವು ಹುಡುಕುವುದು, ಅದು ಹೀಗಾಯಿತು, ಹಾಗಾಯಿತು ಕೇಂದ್ರ ಮಂತ್ರಿಗಳು ಅಲ್ಲಿಗೆ ಏಕೆ ಬಂದಿದ್ದರು? ಅಲ್ಲಿ ನಮ್ಮ ರಾಜ್ಯದ ಸಂಸತ್ತಿನ ಮಂತ್ರಿಗಳಾದ ಶ್ರೀಮಾನ್ ಆರ್.ಎಲ್. ಜಾಲಪ್ಪನವರು ನಮ್ಮ ಇನ್‌ಫಾರ್ಮಲ್ ಟಾಕ್‌ನಲ್ಲಿ ಇದ್ದರು. ಅವರವರ ಕೆಲಸಕ್ಕೆ ಅಲ್ಲಿಗೆ ಬಂದು ಹಾಜರಾಗಿದ್ದರು. ಆ ಮಾತು ಬೇರೆ, ಅದಕ್ಕೆ ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಪುನಃ ಪುನಃ ನಾನು ಅವರ ಬೋನಾಫಾಯ್ಡಿ ಅನ್ನು, ಅವರ ಉದ್ದೇಶವನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಈಗ ಏನಾಗಿದೆ? ನಾನು ಹೋಗಿ ನೀರನ್ನು ಕೊಟ್ಟು ಬಂದುಬಿಟ್ಟೆನೋ? ನಾನೇನು ಜೋಬಿನಲ್ಲಿಟ್ಟುಕೊಂಡು ನೀರನ್ನು ಕೊಟ್ಟುಬಿಟ್ಟು ಬಂದನಾ? ಏನು ಹೇಳುತ್ತೀರಿ, ಹಾಗೆ ಕೊಡುವುದಕ್ಕೆ ಆಗುತ್ತದೆಯೇ? ಯಾರಾದರೂ ಜವಾಬ್ದಾರಿ ಇರತಕ್ಕಂತಹ ಒಂದು ರಾಜ್ಯದ ಮುಖ್ಯಮಂತ್ರಿ ಮಾತುಕತೆಯಿಂದ ಬಗೆಹರಿಸಿಕೊಳ್ಳಬೇಕೆಂದರೆ ಏನು? ಅವರ ದೃಷ್ಟಿಯಲ್ಲಿ ಮಾತುಕತೆ ಎಂದರೆ ಏನು? ನಮ್ಮ ದೃಷ್ಟಿಯಲ್ಲಿ ಮಾತುಕತೆ ಎಂದರೆ ಏನು? ಇಲ್ಲಿ ಇಷ್ಟು ಜನ ಟ್ರಿಬ್ಯೂನಲ್ ಬಗ್ಗೆ ಪರದಾಡಿದರಲ್ಲಾ, ಅವರು ಒಂದು ನಿಮಿಷ ಕೇಳಲಿಲ್ಲ. That was the achievement of Karnataka. ಮಾನ್ಯ ಉಪಾಧ್ಯಕ್ಷರೆ, ಅವರನ್ನು I cannot betray him. I have given him some words. We have all promised something, some secrecy. ಅವರ ಅಸೆಂಬ್ಲಿಯಲ್ಲಿ ಅವರು ಸ್ಟೇಟ್‌ಮೆಂಟ್‌ನ್ನು ಓದಿದಾಗ, ಅವರು ಎಷ್ಟು ಗಂಭೀರವಾಗಿ, ಎಷ್ಟೇ ರಾಜಕೀಯ ವಿರೋಧಗಳಿದ್ದರೂ, ಅವರು ಏನು ಹೇಳಿದರು, ನೀವು ನೀರನ್ನು ತೆಗೆದುಕೊಂಡು ಬಂದಿರಾ ಎಂದು ಹೇಳಲಿಲ್ಲ. ನಾವು ಅಲ್ಲಿ ಕೇಳುತ್ತಾ ಕುಳಿತ್ತಿದ್ದೆವು. ಇಂತಹ ಒಂದು ಒಳ್ಳೆಯ ವಾತಾವರಣ, ವಿಶ್ವಾಸದ ವಾತಾವರಣ ನಿರ್ಮಾಣ ಮಾಡಿದ್ದೇ ಸಾಕು. This is an occasion for good will. "end of cold war" ಎಂದು ಅವರು ಹೇಳಿದರು. ಪ್ರತಿ ಸಾರಿ ಚುನಾವಣೆಯಲ್ಲಿ ನೆಲ, ನೀರು, ಭಾಷೆ ಇವು ನಮಗೆ ಬೇಕಾದಾಗ ರೆಡಿಮೇಡ್ ಇನ್‌ಸ್ಟ್ರುಮೆಂಟ್ ತೆಗೆದುಕೊಂಡು ಬರುವ ಹಾಗೆ ಇಟ್ಟುಕೊಂಡು ಬಿಟ್ಟರೆ, ನಾವು ವೀರಾಧಿವೀರರು. "ನಾನಿರುವುದೇ ನಿನಗಾಗಿ" ಎಂದು ಹೇಳುವವರನ್ನು ನಾನು ಎಷ್ಟು ಜನರನ್ನು ನೋಡಿಲ್ಲ? ಇಂಥದ್ದನ್ನು ಬಹಳ ಜನರು

ಹೇಳಿದ್ದರೂ ಸಹ ಏಕೆ ಬಗೆಹರಿಯಲಿಲ್ಲ? ಹಿಂದೆ ಇದ್ದಂಥವರ ಕಾಲದಲ್ಲಿ ಇದು ಏಕೆ ಬಗೆಹರಿಯಲಿಲ್ಲ? ಅದಕ್ಕೆ ಇಲ್ಲಿ ಬಹಳ ಅಂತರಿಕ ವಿಶ್ವಾಸದ ಮಾತುಗಳಿವೆ. ತಮಿಳುನಾಡಿನ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮಾತಿಗೆ ತಕ್ಕಂತೆ ನಡೆದುಕೊಂಡಿದ್ದಾರೆ, ನಡೆದುಕೊಳ್ಳುತ್ತಿದ್ದಾರೆ. ಅವತ್ತು ನೀರಿನ ಕ್ವಾಂಟಮ್ ಆಗಲಿ ದಿನವಾಗಲಿ ಇದರ ಬಗ್ಗೆ ಚರ್ಚೆಯನ್ನು ಸಹ ಮಾಡಲಿಲ್ಲ. ಅವರು ನಾನು ಮತ್ತೆ ಬೆಂಗಳೂರಿಗೆ ಬಂದು ತಮ್ಮನ್ನು ಕಂಡು ಇದನ್ನು ಇತ್ಯರ್ಥ ಮಾಡಿಕೊಳ್ಳುತ್ತೇನೆ, ನಮ್ಮ ಮಾತಿನಂತೆ ಕೇಳುತ್ತೇನೆ ಎಂದು ಅವರು ಹೇಳಿರುವುದರಿಂದ ನಾನು ಅತ್ಯಂತ ಸಂತೋಷದಿಂದ ಒಪ್ಪಿಕೊಂಡೆ. ಇಲ್ಲಿ ಯಾರೋ ಹೇಳಿದರು ಅಟ್ಲಾಂಟದಿಂದ ಬಂಗಾರದ ಪದಕವನ್ನು ತಂದಿದ್ದಾರೆಂದು. ಅಟ್ಲಾಂಟದಿಂದ ಬಂಗಾರದ ಪದಕವನ್ನು ತರುವುದಕ್ಕೆ 95 ಕೋಟಿ ಜನಸಂಖ್ಯೆ ಇರುವ ಈ ದೇಶದಲ್ಲಿ ಯಾರೂ ಹುಟ್ಟಲಿಲ್ಲ. ಏಕೆ ಎಂದರೆ, ಇಂಥದರಲ್ಲಿಯೇ ನಮ್ಮ ಕಾಲವನ್ನು ಕಳೆಯುತ್ತಿದ್ದೇವೆ. ಜನರನ್ನು ನಾವು ಬೆಳೆಸಲಿಲ್ಲ. ಶಕ್ತಿವಂತರನ್ನು ಮಾಡಿಲ್ಲ, ಮಾಡಿದ್ದೆಲ್ಲಾ ನಾವುಗಳು ಇದೇ ಕೆಲಸವನ್ನು. ಅದಕ್ಕೆ ಅಟ್ಲಾಂಟದಿಂದ ಬಂಗಾರವನ್ನು ತರುವುದಕ್ಕೆ ಆಗಲಿಲ್ಲ. ಅಟ್ಲಾಂಟದಿಂದ ಬಂಗಾರವನ್ನು ತರುವುದಕ್ಕೆ ಈ ದೇಶಕ್ಕೆ ಎಷ್ಟು ಶಕ್ತಿ ಇರಬೇಕು. ನಾವು ಕೊನೆಯವರು ನಮ್ಮ ಕೆಳಗಡೆಯಲ್ಲಿ: ನಾಲ್ಕು ಆಫ್ರಿಕಾ ದೇಶಗಳಿವೆ. ಅದನ್ನಾದರೂ ನೋಡಿಕೊಂಡು ನಾಚಿಕೊಳ್ಳಬಾರದೇ? ವಿರೋಧಪಕ್ಷದವರನ್ನು ಯಾವುದೇ ಕಾರಣದಿಂದ ಅವರನ್ನು ಕಡೆಗಣಿಸಿದ್ದೇನೆಂಬುದು ತಪ್ಪು. ನಾನು ಅವರನ್ನು ಕಡೆಗಣಿಸಿಲ್ಲ. ಯಾವ ಸಂದರ್ಭದಲ್ಲಿ ವಿಷಯವನ್ನು ತಿಳಿಸಬೇಕಾಗಿರುತ್ತದೆ, ಅಂತಹ ಸಂದರ್ಭದಲ್ಲಿ ವಿಷಯಗಳನ್ನು ತಿಳಿಸಿದ್ದೇನೆ. ಅಥವಾ ಸಲಹೆಗಳು ಬೇಕಾದರೆ, ರಾಜ್ಯಕ್ಕೆ ಒಳ್ಳೆಯದು ಆಗುವುದು ಇದ್ದರೆ ಶ್ರೀ ಬಿ.ಎಸ್. ಯಡಿಯೂರಪ್ಪನವರಿಂದಲಾದರೂ ಆಗಲಿ. ಶ್ರೀ ಮಲ್ಲಿಕಾರ್ಜುನ ಖರ್ಗೆಯವರಿಂದ ಬೇಕಾದರೆ ಆಗಲಿ, ನಮ್ಮ ಸಭಾಪತಿಯವರಿಂದಾಗಲಿ ನಾನು ಬೇಡ ಎಂದು ಹೇಳುತ್ತೇನೆಯೇ? ಒಳ್ಳೆಯದು ಮಾಡುವುದಕ್ಕೆ ಎಲ್ಲಾ ಕಡೆಯಿಂದಲೂ ರಾಜ್ಯಕ್ಕೆ ಒಳ್ಳೆಯದು ಬರಲಿ. ಎಲ್ಲಾ ಕಡೆಯಿಂದ ಒಳ್ಳೆಯ ಗಾಳಿ ಬರಲಿ, ಒಳ್ಳೆಯ ಬೆಳಕು ಬರಲಿ, ಒಳ್ಳೆಯ ನೀರು ಬರಲಿ ನಾವು ಬೇಡ ಎಂದು ಹೇಳುತ್ತೇವೆಯೇ, ಇದೇನು ನಮ್ಮ ಆಸ್ತಿಯೇ? ನಾವುಗಳು ಏನು ಮನೋಪಲೈಜ್ ಮಾಡಿಕೊಂಡಿದ್ದೇವೆಯೇ? ನಾನು ಒಂದೊಂದು ಸಾರಿ ಶ್ರೀ ವಾಟಾಳ್ ನಾಗರಾಜ್‌ರವರು ಹೇಳುವುದನ್ನು ಒಪ್ಪುತ್ತೇನೆ. ಒಂದೊಂದು ಸಾರಿ ತೀರಾ ಸಂಪನ್ನರಾಗಿ ಮಾತನಾಡಿ ಬಿಡುತ್ತೇವೆ. ಬಹಳ ಉಚ್ಚಮಟ್ಟದ ಸಂಸ್ಕೃತಿ, ಸಜ್ಜನಿಕೆಯಿಂದ ಮಾತನಾಡುತ್ತೇವೆ. ಹಾಗೆ ಮಾತನಾಡುವುದರಿಂದ ನಮಗೆ ಹಾನಿಯಾಗುವುದಿಲ್ಲ. ಆದರೆ ದೆಹಲಿನಲ್ಲಿ ಕೆಲವರು ಏನು ಹೇಳುತ್ತಾರೆಂದರೆ ನಿಮ್ಮ ಜೊತೆಯಲ್ಲಿ ಆಂಧ್ರಪ್ರದೇಶದವರು ಜಗಳವನ್ನು ಆಡುತ್ತಾರೆ. ತಮಿಳುನಾಡಿನವರು ಜಗಳವಾಡುತ್ತಾರೆ. ಮಹಾರಾಷ್ಟ್ರದವರು ನಿಮ್ಮ ಜೊತೆಯಲ್ಲಿ ಜಗಳವನ್ನು ಆಡುತ್ತಾರೆ, ಪಾಂಡಿಚೇರಿಯವರೂ ಸಹ ನಿಮ್ಮ ಜೊತೆಯಲ್ಲಿ ಜಗಳವನ್ನು ಆಡುತ್ತಾರೆ. ಏಕೆ ನೀವು ಜಗಳವನ್ನು ಆಡುವಂತಹ ಜನರಾಗಿದ್ದೀರಿ ಎಂದು ಹೇಳುತ್ತಾರೆ. ಅದು ಹಾಗಲ್ಲ. ನಾವು ಜಗಳವನ್ನು ಆಡುವಂತವರು ಅಲ್ಲ. ನಾವು ಯಾವಾಗಲೂ ನಮ್ಮ ಮೇಲೆ ಆಘಾತವಾದಾಗ ಆಗ ಇದ್ದಂತಹ ರಾಜಕೀಯ ಪರಿಸ್ಥಿತಿಗೆ ಹೊಂದುಕೊಳ್ಳುವಂತೆ, ನಾನು ಅದಕ್ಕೆ ಕೇಳಬಲ್ಲೆ ಈ

ಮಂತ್ರಿಮಂಡಲದಲ್ಲಿ ಇಷ್ಟು ಜನ ಎಂ.ಪಿ. ಇದ್ದು ಇಂತಹ ಪ್ರಧಾನಮಂತ್ರಿಗಳು ಇದ್ದಾಗ ಏನು ಮಾಡಿ-ದರು. ಪ್ರತಿಯೊಂದು ಮಂತ್ರಿಮಂಡಲದ ಹೆಸರುಗಳನ್ನೆಲ್ಲಾ ಕೊಡಬಲ್ಲೆ. ಇವರುಗಳೆಲ್ಲಾ ಏನು ಮಾಡಿ-ದರು? ಏನೂ ಮಾಡಲಿಲ್ಲ. ಅವರವರ ಅನುಕೂಲಕ್ಕೆ ತಕ್ಕಂತೆ ಕುಣಿದರು. ಇನ್ನು ಕೆಲವರು ಬಹಳ ಮುಂದೆ ಹೋಗಿ ಈ ರಾಜ್ಯದ ಅನೇಕ ವೀರರು ಪಾಪ ಅಮಾಯಕ ತಮಿಳರನ್ನು ಕೊಂದರು. ಆಗ ನೀರು ಬಂತೇ? ಕಾವೇರಿ ನೀರು ಬಂತೇ? ಯಾವುದಾದರೂ ನದಿಗೆ ನೀರು ಬರುವುದಾದರೆ, ರಕ್ತವನ್ನು ಹರಿಸೋಣ. ಇಲ್ಲಿ ಯಾರು ಎಂದು ಹಿಂಜರಿಕೆ ಮಾಡಿಕೊಂಡು ಇರುವಂಥವರು ಯಾರೂ ಇಲ್ಲ. ನಾವು ಎಲ್ಲಾ ಈ ಶೌರ್ಯವನ್ನು ಮಾಡುವಂತವರು. ಆದರೆ ಯಾವುದೇ ಶೌರ್ಯಕ್ಕೆ ಒಂದು ಗುರಿ ಇರ-ಬೇಕು. ನಮ್ಮೆಲ್ಲರಿಗೂ ಯುನೈಟೇಡ್ ಪರ್ಪಸ್ ಇದ್ದರೆ ಅದರಿಂದ ಏನಾದರೂ ಅಚೀವ್‌ಮೆಂಟ್ ಆಗುತ್ತದೆ. ಇಲ್ಲಿ ಒಂದು ಒಳ್ಳೆಯ ಮಾತನ್ನು ಈ ಪುಸ್ತಕದಲ್ಲಿ ಬರೆದಿದ್ದಾರೆ, ಬಹುಶಃ ಶ್ರೀ ಮಲ್ಲಿ-ಕಾರ್ಜುನ ಖರ್ಗೆಯವರು ಓದಿದ್ದಾರೆಯೋ ಏನೋ ಗೊತ್ತಿಲ್ಲ. ಕೋಲಿಯಸ್ ಅಂಡ್ ಬುದ್ಧ ಒಂದು ಮಾತನ್ನು ಹೇಳಿದ್ದಾನೆ. ಸರ್ ಎಂ. ವಿಶ್ವೇಶ್ವರಯ್ಯನವರು ಏನು ಹೇಳಿದ್ದಾರೆಂದರೆ, ನಮ್ಮ ಐತಿಹಾಸಿಕ ಹೊಣೆಗೇಡಿತನ ಅಂದರೆ ಆಗ ಮೈಸೂರು ರಾಜ್ಯ ಇತ್ತು ಅದಕ್ಕೆ ನಾವು ಏನೂ ಹೇಳುವುದಕ್ಕೆ ಬರುವು-ದಿಲ್ಲ. ಮದ್ರಾಸಿನ ಪ್ರಾವಿನ್ಸ್‌ನವರು ಎಷ್ಟು ವೇಗವಾಗಿ ಕೆಲಸಗಳನ್ನು ಮಾಡಿಕೊಂಡು ಅವರ ರೈಟ್ಸ್‌ನ್ನು ಎಸ್ಟ್ಯಾಬ್ಲಿಷ್ ಮಾಡಿದರು ಎಂದರೆ ಆಶ್ಚರ್ಯವಾಗುತ್ತದೆ. 1892ನೇ ಇಸವಿಯಲ್ಲಿ ನಮ್ಮದು ಒಂದೂ-ವರೆ ಲಕ್ಷ ಎಕರೆ ನೀರಾವರಿಯಾಗಿತ್ತು. ಅವರದು 36ಸಾವಿರ ಎಕರೆ ನೀರಾವರಿ. ಈ ರೀತಿಯಾಗಿ ಹಿಸ್ಟಾರಿಕಲ್ ದೋಷಗಳಾಗಿವೆ. ಈಗ ಅದನ್ನು ಸರಿಪಡಿಸುವುದಕ್ಕೆ ಹೋಗೋಣ, ಬಗೆಹರಿಸುವುದಕ್ಕೆ ಹೋಗೋಣ ಎಂದು ಆ ರೀತಿಯ ಒಂದು ವಾತಾವರಣ ನಿರ್ಮಾಣ ಮಾಡೋಣ ಎಂದು ಹೇಳಿ-ದರೆ, ನನ್ನನ್ನು ಏಕೆ ಕೇಳಿ ಹೋಗಲಿಲ್ಲ, ಎನ್ನುತ್ತೀರಿ. ಅಪ್ಪ, ನಿನ್ನನ್ನು ಕೇಳೋಣ, ಇನ್ನೊಬ್ಬನ್ನನ್ನು ಕೇಳೋಣ. ಏನು ಮಾಡೋಣಪ್ಪ ಎಂದು ಕೇಳಿದರೆ, ಇನ್ನು ಬೇರೆ ಏನು ಇದೆ? ಈ ಸದನದ ರೆಸ-ಲ್ಯೂಷನ್ ಇದೆ. ನಾವೇ ಹತ್ತಾರು ಭಾರಿ ಈ ವಿಷಯದ ಬಗ್ಗೆ ಚರ್ಚೆಯನ್ನು ಮಾಡಿದ್ದೇವೆ. ಸಾಕಷ್ಟು ಗೈಡ್‌ಲೈನ್ಸ್‌ಗಳನ್ನು ಕೊಟ್ಟಿದ್ದೀರಿ. ಅದಕ್ಕೆ ಏನಾದರೂ ಹೊಸದಾಗಿ ಆಯಿತ್ತಪ್ಪ ನಿಮಗೆ ಅನುಮತಿ-ಯನ್ನು ಕೊಡುತ್ತೇವೆಂದು ಆಶೀರ್ವಾದವನ್ನು ಮಾಡಿ ಕಳುಹಿಸುತ್ತಿದ್ದೀರಾ; ಏನೂ ಇಲ್ಲ ಹೋಗು, ತೋಳು ಮಡಿಚು, ಬೇಕಾದ್ದು ಮಾಡು ರಕ್ತ ಹರಿದರೂ ಚಿಂತೆ ಇಲ್ಲ. ಒಂದು ತೊಟ್ಟು ನೀರು ಕೊಡು-ವುದಿಲ್ಲವೆಂದು ಎಂದು ಹೇಳಿದವರ ಮಾತಿನಿಂದಲೇ ರಕ್ತ ಹರಿದುದ್ದು. ನೀರು ಇಲ್ಲ, ರಕ್ತವೂ ಸಹ ಇಲ್ಲ. ಆ ರೀತಿಯಾಗಿ ಮಾತನಾಡುವುದಕ್ಕೆ ಎಲ್ಲರಿಗೂ ಬರುತ್ತದೆ. ನಾವು ರಕ್ತವನ್ನು ಹರಿಸುವುದು ಬೇಡ. ಸರಿಯಾಗಿ ನೀರು ಹರಿಸಿದರೆ ಸಾಕು, ನಮ್ಮ ರಕ್ತ ಸರಿಯಾಗಿ ದೇಹದಲ್ಲಿ ಹರಿದುಕೊಳ್ಳುತ್ತದೆ. ನಾನು ಮೆರಿಟ್‌ಮೇಲೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಅಲ್ಲಿ ಅವರ ಕಡೆಯ ಅಧಿಕಾರಿಗಳು ಕುಳಿತಾಗ ಟ್ರಿಬ್ಯುನಲ್ ಇಂಟರಿಂ ಆರ್ಡರ್ ಪ್ರಕಾರ ಜುಲೈ ತಿಂಗಳದು ಇಷ್ಟು ಬಾಕಿ ಬರಬೇಕು ಆಗಸ್ಟ್ ತಿಂಗಳದ್ದು ಇಷ್ಟು ಬಾಕಿ ಬರಬೇಕು, ಸೆಪ್ಟೆಂಬರ್ ತಿಂಗಳದ್ದು ಇಷ್ಟು ಬಾಕಿ ಬರಬೇಕು, ಎಂದು ಹೇಳಿದಾಗ I immediately stopped that officer ನಿಮ್ಮಂಥವರ ಅಂಕಿ ಅಂಶಗಳನ್ನು

ಕೇಳಿಕೊಂಡೇ ಈ ರೀತಿ ಆಗಿರತಕ್ಕದ್ದು. ನನಗೆ ಯಾವುದೇ ಅಂಕಿಅಂಶಗಳೂ ಬೇಕಾಗಿಲ್ಲ. ಈ ತಿಂಗಳ ಬಾಕಿ ಎಷ್ಟು? ಮುಂದಿನ ತಿಂಗಳು ಎಷ್ಟು ಕೊಡಬೇಕು, ಇದನ್ನೂ ಕೂಡ ನಾನು ಕೇಳುವವನಲ್ಲ. ನಾನು ಆ ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ. ನಿಮಗೆ ಕಷ್ಟವಾದಾಗ ನಾವು ನಿಮಗೆ ಸಹಾಯ ಮಾಡಲು ಸಿದ್ಧವಾಗಿದ್ದಾಗ, ಶಕ್ತಿ ಇದ್ದಾಗ it may also depend upon the inflow. ನಿಮಗೆ ಕಷ್ಟ ಇದ್ದಾಗ, ನಮಗೆ ಶಕ್ತಿ ಇದ್ದಾಗ ನಾವು ಸಹಾಯ ಮಾಡುತ್ತೇವೆ. ನೀವೂ ಜಗಳ ಮಾಡುವುದು ಬೇಡ. ಅಥವಾ ನಮಗೆ ಕಷ್ಟ ಇದ್ದಾಗ ನೀವೂ ಕೇಳಬಾರದು. ಆ ಸಿನ್ಸಿಯಾರಿಟಿಯನ್ನು ನೀವೂ ಉಳಿಸಿಕೊಳ್ಳಿ, ಈ ಸಿನ್ಸಿಯಾರಿಟಿಯನ್ನು ನಾವೂ ಉಳಿಸಿಕೊಳ್ಳುತ್ತೇವೆಂದು ಹೇಳಿದೆ. ಈ ಮಾತಿಗೆ ಅವರ ಅಧಿಕಾರಿ-ಗಳೂ ಒಪ್ಪಿದರು, ಅವರೂ ಒಪ್ಪಿದರು. ಇದರಿಂದ ನಮ್ಮ ಅಧಿಕಾರಿಗಳಿಗೂ ಒಳ್ಳೆಯದಾಯಿತು. ಇವತ್ತು ಒಂದು ಮಾತನ್ನು ಹೇಳುವುದಾದರೆ, ನಾವು ಕೇವಲ ಲಾಯರ್‌ಗಳಿಗೆ ಖರ್ಚುಮಾಡಿರು-ವಷ್ಟನ್ನು ಬೇರೆ ಕಡೆ ಖರ್ಚು ಮಾಡಿದ್ದಿದ್ದರೆ ಹೊಸದಾಗಿ ಸಣ್ಣ 2 ಡ್ಯಾಂಗಳನ್ನು ಕಟ್ಟಿಸಬಹುದಾಗಿತ್ತು. how are we going to lose our case by over-doing. Many a good cases have been lost by bad advocacy but a bad advocate has not made a good case. Our case has been always done by bad advocates. Ours was a very good case. Good case spoiled by bad advocates. But this government will not commit the same mistake. We will not go into that kind of emotional exchanges. ಬಹುಶಃ ಕೇಂದ್ರದಲ್ಲಿ ನಮ್ಮ ಪ್ರಧಾನಮಂತ್ರಿಗಳು ಇವತ್ತು ಇರುವುದರಿಂದಲೇ ನನಗೆ ಅಷ್ಟೊಂದು ಧೈರ್ಯ ಬಂದಿರುವುದು. ಬಹುಶಃ ಅವರು ಇಲ್ಲದೇ ಇದ್ದಿದ್ದರೆ ನನಗೆ ಇಷ್ಟೊಂದು ಧೈರ್ಯ ಬರುತ್ತಿತ್ತೋ ಇಲ್ಲವೋ ಎಂಬುದನ್ನು ನಾನು ಪ್ರಮಾಣವಾಗಿ ಹೇಳುತ್ತಿದ್ದೇನೆ. ಅವರು ಅಲ್ಲಿ ಪ್ರಧಾನಮಂತ್ರಿಗಳಾಗಿರದಿದ್ದರೆ ಇವತ್ತು ನಾನು ತಮಿಳ್ನಾಡಿಗೆ ಮುಖ್ಯ-ಮಂತ್ರಿಗಳಿಗೆ ಇಷ್ಟು ಹೃದಯವನ್ನು ಬಿಚ್ಚಿ ಮಾತನಾಡುವುದಕ್ಕೆ ಧೈರ್ಯ ಇರುತ್ತಿರಲಿಲ್ಲ. ಆಗ ನಾನೂ ಕೂಡ ಮಾನ್ಯ ಯಡಿಯೂರಪ್ಪನವರು ಏನು ಹೇಳುತ್ತಾರೋ, ಮಾನ್ಯ ಖರ್ಗೆಯವರು ಏನು ಹೇಳು-ತ್ತಾರೋ ಕೇಳಿಕೊಂಡು ಬನ್ನಿ ಎಂದು ಹೇಳುತ್ತಿದ್ದೆ. ಆದರೆ ಇವತ್ತು ನನಗೆ ಈ ಯಮ ಧೈರ್ಯ ಬಂದಿರತಕ್ಕದ್ದು ಅಲ್ಲಿ ನಮ್ಮ ರಾಜ್ಯದವರೇ ಪ್ರಧಾನಮಂತ್ರಿಯಾಗಿರುವುದರಿಂದ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಆದ್ದರಿಂದಲೇ ಇಲ್ಲಿ ನಿಮಗೆ ಯಾರ ಅವಶ್ಯಕತೆಯೂ ಬೇಕಾಗಿಲ್ಲ. ಅಲ್ಲಿ ಪ್ರಧಾನಮಂತ್ರಿಯವರು ಇರುವ ಕಾರಣ ಇಲ್ಲಿ ನಿಮಗೆ ನಮ್ಮ ಅವಶ್ಯಕತೆ ಇಲ್ಲ-ವೆಂದು ಹೇಳುತ್ತೀರೋ?

ಶ್ರೀ ಜೆ.ಹೆಚ್. ಪಟೇಲ್:- ನನಗೆ ಅಲ್ಲ. ಇದು ರಾಜ್ಯದ ಹಿತದೃಷ್ಟಿಯಿಂದ. ರಾಜ್ಯದ ಹಿತವನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಇಡೀ ಶತಮಾನದಲ್ಲಿ ಒಮ್ಮೆ ಮಾತ್ರ ಇಂಥ ಅವಕಾಶ ಸಿಕ್ಕತಕ್ಕದ್ದು. ಮುಂದೆ ಸಿಕ್ಕುತ್ತದೋ ಅಥವ ಇಲ್ಲವೋ? ನಾವು ಇದನ್ನು ಹಾಳುಮಾಡಿಕೊಳ್ಳಬಾರದು. ತಮಿಳು-ನಾಡಿನವರೂ ಕೂಡ ಇದೇ ಮಾತನ್ನು ಹೇಳುತ್ತಿದ್ದಾರೆ. ಅಂದರೆ ಆಗ ನನಗೆ ಎಷ್ಟು ಆನಂದವಾಗಿರ-ಬಹುದು? ಈ ಭಾರತದ ಚರಿತ್ರೆಯಲ್ಲಿ ಇನ್ನು ಮುಂದೆ ಎಂದೂ ಕೂಡ ಇಂಥ ಒಂದು ಅವಕಾಶ

ಸಿಕ್ಕುವುದಿಲ್ಲ ಎಂಬುದು ಅವರಿಗೆ ಮನವರಿಕೆಯಾಯಿತು; ನಮಗೂ ಮನವರಿಕೆ ಆಯಿತು. ಆದರೆ ಇದರ ಬಗ್ಗೆ ಒಂದು ಒಳ್ಳೆಯ ಮಾತನಾಡುವುದಕ್ಕೆ ನಿಮಗೆ ಮನಸ್ಸು ಬರಲಿಲ್ಲ. ನಾವು ಏನು ಮಾಡಿ ಬಂದರೂ ನೀವು ಬೈಯುವುದೇ ಆಗಿದೆ. ಅಲ್ಲಿ ಹೋದರು, ಇಲ್ಲಿ ಹೋದರು, ನಮ್ಮನ್ನು ಕೇಳಿ ಹೋಗ-ಲಿಲ್ಲ, ಕುರ್ಚಿ ಉಳಿಸಿಕೊಳ್ಳುವುದಕ್ಕೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಕುರ್ಚಿ ಎಂದು ನಾನು ಹೇಳಲಿಲ್ಲ. ನೀವು ಸರಿಯಾಗಿ ಕೇಳಿಸಿಕೊಳ್ಳಲಿಲ್ಲವೆಂದು ಕಾಣಿಸುತ್ತದೆ. ಆದ್ದರಿಂದಲೇ ನಿಮ್ಮಲ್ಲಿ ಇಂಥ ಒಂದು ದುರಂತ ಬಂದಿರು-ವುದು. ತಾವು ಒಂದು ನಿಮಿಷ ಅವಕಾಶ ಕೊಟ್ಟರೆ ಹೇಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್:- ಬುದ್ಧನು ಹೇಳಿರುವುದನ್ನು ನಾನು ಏನು ಕೋಟ್ ಮಾಡಿದೆ ಎಂದರೆ: Translated from Goutam Budha's Prakriyam in Tamil.

> "When Sakhias and Koliyas waged a terrible war about sharing river Rohini, blood gushing like a spring flooded the water. Budha after coming to know of it did what was needed to end the long drawn war and to bring both sides together."

That is what is to be done now. First when I told that I will have to appear before the Tribunal, ಯಾರನ್ನು ಕೇಳಿ ಹೇಳಿದಿರಿ? ಟ್ರಿಬ್ಯುನಲ್‌ನ ಮುಂದೆ ನಾನು ಹಾಜರಾಗದೇ ಹೋದರೆ ನನ್ನ ಕೇಸೇ ಹೋಗುತ್ತದೆಂದು ಹೇಳುವಾಗ ಏನು ಆಗುತ್ತದೆ ಎಂದು ಯೋಚಿಸಬೇಕು. ನಾನೂ ಕೂಡ ಸ್ವಲ್ಪ ಮಟ್ಟಿಗೆ ಕಾನೂನನ್ನು ಓದಿದ್ದೇನೆ. ನಾಲ್ಕಾರು ದಿವಸ ಕೋರ್ಟ್‌ನಲ್ಲಿ ಅಡ್ಡಾಡಿದ್ದೇನೆ. ಹಾಜರಾಗದೆ ಡಿಫಾಲ್ಟರ್ ಕೇಸ್ ಆಗಿ ನಾಳೆ ಡಿಕ್ರಿ ಬಂದಾಗ ನಾನು ಕೋರ್ಟ್ ಮುಂದೆ ಹಾಜರಾಗಲಿಲ್ಲ ಆದ್ದರಿಂದ ಹೀಗಾಯಿತು ಎಂದರೆ, ಹಾಗಾದರೆ ಮನೆಗೆ ಹೋಗು ಎಂದು ಹೇಳುತ್ತಾರೆ. ಇದು ಎಲ್ಲಾ ಲಾಯರ್‌ಗಳಿಗೂ ಗೊತ್ತಿದೆ. ಆದ್ದರಿಂದಲೇ ನಾನು ಟ್ರಿಬ್ಯುನಲ್ ಮುಂದೆ ಹಾಜರಾಗುತ್ತೇನೆ ಎಂದು ಹೇಳಿದೆ. ಅಸೆಂಬ್ಲಿಯಲ್ಲಿ ನಾವು ರೆಸಲ್ಯೂಷನ್ ಮಾಡಿದ್ದೆವು ಅಂದರೆ ನಾವು ಬಾಯ್‌ಕಾಟ್ ಮಾಡಬೇಕೆಂದು ಅಸೆಂಬ್ಲಿಯಲ್ಲಿ ರೆಸಲ್ಯೂಷನ್ ಆಗಿಲ್ಲ. ನಾನು ಅದನ್ನು ಓದಿದ್ದೇನೆ. ಅಸೆಂಬ್ಲಿಯಲ್ಲಿ ಏನು ಹೇಳಿದ್ದಾರೆಂದರೆ, ಅದು ನಮ್ಮ ರಾಜ್ಯದ ಹಿತಕ್ಕೆ ವಿರುದ್ಧ-ವಾಗಿ ಹೋದರೆ ಟ್ರಿಬ್ಯುನಲ್‌ನ ತೀರ್ಮಾನಕ್ಕೆ ನಾವು ಒಪ್ಪಬಾರದು ಎಂದು. ಮಾನ್ಯ ದೇವೇಗೌಡರು ಇಲ್ಲಿ ಮುಖ್ಯಮಂತ್ರಿಯಾಗಿದ್ದಾಗ, ಮಾನ್ಯ ದೇವೇಗೌಡರು ಲೋಕಸಭಾ ಸದಸ್ಯರಾಗಿದ್ದಾಗ ಈಗಲೂ ಅವರ ನಿಲುವಿನಲ್ಲಿ ಕನ್ಸಿಸ್ಟೆನ್ಸಿ ಕರ್ನಾಟಕದ ಬಗ್ಗೆ ಯಾವುದಿದೆ ಅದರಿಂದಲೇ ಇದು ಸಾಧ್ಯವಾಗುತ್ತಿರು-ವುದು. ಅದನ್ನು ಬಿಟ್ಟು ಕೇವಲ ಕುರ್ಚಿ, ಕುರ್ಚಿ ಎಂದು ಜಪ ಮಾಡುತ್ತಾ ಹೋಗಿದ್ದಿದ್ದರೆ ಬೇರೆ ಆಗುತ್ತಿತ್ತು. ಅವರು ಏನು ಹೇಳಿದ್ದಾರೆ ಗೊತ್ತೇ? ನಮ್ಮ ರಾಜ್ಯಕ್ಕೆ ಎಳ್ಳಷ್ಟು ಹಾನಿಯಾದರೂ ನಾನು ಒಂದು ನಿಮಿಷ ಕೂಡ ಇಲ್ಲಿರುವುದಕ್ಕೆ ತಯಾರಿಲ್ಲ ಎಂದು ಹೇಳಿದ್ದಾರೆ. ಅದೇ ಜಾಗದಲ್ಲಿ ನೀವು

ಯಾರಾದರೂ ಇದ್ದಿದ್ದರೆ ಈ ಮಾತನ್ನು ಹೇಳುತ್ತಿದ್ದಿರಾ? ಬೇಕಾದಷ್ಟು ಹೊಡೆದಾಟವಾಗಲಿ, ನನ್ನನ್ನು ಒಳಗೆ ಹಾಕಿದರೂ ಚಿಂತೆ ಇಲ್ಲ, ಎಷ್ಟೇ ಅವಮಾನ ಆಗಲಿ ನಾನು ಇಲ್ಲೇ ಇರುತ್ತೇನೆಂದು ಹೇಳಿದಂಥವರನ್ನು ನಾವು ನೋಡಲಿಲ್ಲವೆ? ಎಷ್ಟೇ ಅಪಮಾನ ಆದರೂ ಪ್ರಧಾನಮಂತ್ರಿಗಿರಿಯನ್ನು ಹಿಡಿದುಕೊಂಡು ಕುಳಿತಿದ್ದವರನ್ನು ನಾವು ನೋಡಲಿಲ್ಲವೆ? ಅದನ್ನೆಲ್ಲಾ ಹೇಳಿಕೊಂಡು ಹೋದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅದರಿಂದ ಯಾರಿಗೂ ಯಾವುದೇ ರೀತಿಯಲ್ಲೂ ಒಳ್ಳೆಯದಾಗುವುದಿಲ್ಲ. ನಿಮ್ಮ ಸಹಕಾರದಿಂದಲೂ ನಾವು ಸರ್ಕಾರವನ್ನು ನಡೆಸಿದ್ದೇವೆ. ನೀವೂ, ನಾವೂ ಜೊತೆಯಲ್ಲೇ ಬೆಳೆದಿದ್ದೇವೆ. ನೀವೂ ನಾವೂ ಜೈಲಿನಲ್ಲಿದ್ದಾಗ ಇದ್ದಂಥ ಭಾರತದ ನಕ್ಷೆಯೇ ಬೇರೆ. ಕಾಲಾನಂತರ ಬೆಳೆದು ಬಂದಾಗ ನಿಮ್ಮಿಂದ ನಾವು ಬೆಳೆದೆವೋ, ನಮ್ಮಿಂದ ನೀವು ಬೆಳೆದಿರೋ ಅಥವಾ ನೀವೇ ನಮಗೆ ಮುಳ್ಳಾದಿರೋ ಅಥವಾ ನಾವೇ ನಿಮಗೆ ಮುಳ್ಳಾದೆವೋ ಅದು ಬೇರೆ. ಅಂತೂ ಆಗಿದ್ದೇವೆ. ನಾನು ವೈಯಕ್ತಿಕವಾಗಿ ಹೇಳುತ್ತಿಲ್ಲ. ಅವರ ಪಾರ್ಟಿಗೆ ಹೇಳುತ್ತಿದ್ದೇನೆ. ಮಾನ್ಯ ಯಡಿಯೂರಪ್ಪನವರನ್ನು ಕುರಿತು ನಾನು ಹೇಳುತ್ತಿಲ್ಲ. ತತ್ವದಲ್ಲಿ ನಮಗೆ ಇವರು ಬಹಳ ಹತ್ತಿರವಂತೆ. ಏನು ಹತ್ತಿರವೋ ಏನೋ? I can understand his anger against our Government but I cannot understand the basis of your anger. You should not. ಮಾನ್ಯ ಖರ್ಗೆಯವರು ಏತಕ್ಕೆ ಹೀಗಾಗಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಇಡೀ ಉತ್ತಮ ಶಾಸಕರ ಪೈಕಿ ಇವರೂ ಒಬ್ಬರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಒಂದು ನಿಮಿಷ ಅವಕಾಶ ಕೊಟ್ಟರೆ ಹೇಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್:- ಯಾವ ಯಾವ ರಥದಲ್ಲಿ ಯಾವ ಯಾವ ಗಾಲಿಗಳಿವೆ, ಯಾವ ಯಾವ ರಥವನ್ನು ಯಾವ ಯಾವ ಕುದುರೆಗಳು ಎಳೆಯುತ್ತಿವೆ, ಎಂಬುದನ್ನು ನೋಡಿ. ಇದು ಹಿಂದಿನ ರಾಮಾಯಣ, ಮಹಾಭಾರತದ ಕಥೆ ಅಲ್ಲ. ಈಗಿರತಕ್ಕ ರಥಗಳಿಗೆ ಗಾಲಿಗಳೇ ಬೇರೆ. ಕುದುರೆಗಳ ಬಣ್ಣವೇ ಬೇರೆ ಇದೆ. ಒಂದೊಂದು ರಥವೂ ಒಂದೊಂದು ದಾರಿಯಲ್ಲಿ ಹೋಗುತ್ತಿವೆ. ಯಾವ ರಥದಲ್ಲಿ ಯಾರು ಬಹಳ ಹೊತ್ತು ಇದ್ದರು, ಯಾರು ಕಡಿಮೆ ಹೊತ್ತು ಇದ್ದರು, ಯಾರ ರಥದ ಗಾಲಿ ಎಲ್ಲಿ ಬಿತ್ತು ಎಂಬುದನ್ನು ಇತಿಹಾಸ ಹೇಳುತ್ತದೆ. ಅದನ್ನು ನಾವೂ, ನೀವೂ ಹೇಳುವುದಲ್ಲ. ವೈಯಕ್ತಿಕವಾಗಿ ಹೇಳುವುದಾದರೆ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರಂಥ ರಾಷ್ಟ್ರೀಯ ನಾಯಕರು ಕೇವಲ 11 ದಿವಸ ಮಾತ್ರ ಪ್ರಧಾನಿಯಾಗಿದ್ದರು. ಅದು ಇತಿಹಾಸ. There are certain situations in history which man has never been able to foresee, otherwise he would be God. ಆದ್ದರಿಂದಲೇ ಭವಿಷ್ಯದ ಗರ್ಭದಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳದೆ, ಎಲ್ಲೋ, ಏನೋ ಒಂದು ಸ್ವಲ್ಪ ಹೆಚ್ಚು ಕಡಿಮೆ ಆಯಿತೆಂದ ಕೂಡಲೇ ಕೇಕೆ ಹೊಡೆಯುವುದು, ಸ್ವಲ್ಪ ಬಿದ್ದ ಕೂಡಲೇ ಅಳುವುದು, ಅದು ಸರಿಯಲ್ಲ. ನಾವು ಬಿದ್ದರೂ ಅಳುವುದಿಲ್ಲ, ಗೆದ್ದರೂ ಹಾರಾಡಿಕೊಂಡು ಹೋಗುವುದಿಲ್ಲ. ನಾವೂ ಕೂಡ ಎಷ್ಟೋ ಸಾರಿ ಎದ್ದು ಬಿದ್ದಿದ್ದೇವೆ. ಈಗ ಸಧ್ಯಕ್ಕೆ ನಮ್ಮ ಕರ್ನಾಟಕದ ರೈತರಿಗೆ ಒಂದೇ ಒಂದು ಫಸಲು ಹಾಳಾದರೂ ನಾವೆ-

ಲ್ಲರೂ ನಮ್ಮ ರಾಜೀನಾಮೆಯನ್ನು ಕೊಟ್ಟು ಅವರ ಹತ್ತಿರ ಹೋಗುತ್ತೇವೆ. ಯಾರಿಗೆ ಅನ್ಯಾಯ ಆಗಿದೆ ಅವರ ಹತ್ತಿರ ಹೋಗುತ್ತೇವೆ. ಒಂದು ಮಾತನ್ನು ಹೇಳುವುದಾದರೆ, ಮೊನ್ನೆ ತಮಗೆ ತಿಳಿದಂತೆ ತಮಿಳ್ನಾಡಿನ ಜನರಿಗೂ ನೀರನ್ನು ಬಿಟ್ಟೆವು, ನಿಮ್ಮ ಕೆಲವು ಚಳುವಳಿಗಳಿಗೂ ಎಳ್ಳು ನೀರನ್ನು ಬಿಟ್ಟೆವು. ಬಹಳ ಜನ ಬಹಳ ಚಳುವಳಿಗಳನ್ನು ಮಾಡುವುದಕ್ಕೆ ಹೋದರು, ಮಾಡಿದರು. ಆದರೆ ಇಲ್ಲಿ not winning a point in a debate. but How are you going to serve the people if we provoke them? ಪುಟ್ಟಣ್ಣಯ್ಯನವರೇ, ಇದನ್ನೂ ತಾವು ನೋಟ್ ಮಾಡಿ-ಕೊಂಡಿರಬೇಕು. ಯಾರೋ ಒಬ್ಬ ಮುಖಂಡರು, ಇಂಥ ಕಡೆ ಡೈನಮೇಟ್ ಹಾಕಬೇಕು, ಹೈ ಟೆನ್-ಷನ್ ವೈರ್‌ಗೆ ಸೈಕಲ್ ಚೈನನ್ನು ಎಸೆಯಬೇಕು, ಇಡೀ ರಾಜ್ಯದಲ್ಲಿ ಈ ರೀತಿ ಸ್ಯಾಬೊಟೇಜ್ ಮಾಡ-ಬೇಕೆಂದು ಹೇಳಿದರಂತೆ ನನಗೆ ಪೋಲೀಸರು ಬಂದು ಹೇಳಿದರು. ನನಗೆ ಪೋಲೀಸ್ ಇಂಟೆಲಿಜೆನ್ಸ್ ರಿಪೋರ್ಟ್ ಬಂದಿದೆ. ಮಾಡುವಂತೆ ಅವನಿಗೆ ಹೇಳುಹೋಗು ಎಂದು ಹೇಳಿಕಳುಹಿಸಿದೆ. ನಾನು ಸದನದಲ್ಲಿ ಈ ಮಾತನ್ನು ಹೇಳಬಾರದು. ಅನಂತರ ನಿಮಗೆ ಹೇಳುತ್ತೇನೆ.

ಶ್ರೀ ಬಿ. ಮುನಿಯಪ್ಪ:- ಇಲ್ಲಿ ಸಭೆಯಲ್ಲಿ ಹೇಳುತ್ತೇನೆಂದು ಹೇಳಿ ಅನಂತರ ಅವರಿಗೆ ಹೇಳುತ್ತೇ-ನೆಂದರೆ ಹೇಗೆ? ಅಂಥವರನ್ನು ಮಟ್ಟ ಹಾಕಬೇಕು. ಅಂಥ ಶಕ್ತಿಗಳು ಕನ್ನಡನಾಡಿನಲ್ಲಿ ತಲೆ ಎತ್ತ-ಬಾರದು. ಪ್ರಾರಂಭದಲ್ಲೇ ಅವರನ್ನು ದಮನ ಮಾಡಬೇಕು. ಅಂಥ ಶಕ್ತಿಗಳು ಯಾರೇ ಆಗಿರಲಿ.

ಶ್ರೀ ಜೆ.ಹೆಚ್. ಪಟೇಲ್:- ಈಗ ಅದನ್ನೇ ಮಾಡುತ್ತಿರುವುದು.

5.20 ಪಿಎಂ

ಈಗ ರಾಷ್ಟ್ರದ ಪರಿಸ್ಥಿತಿ ಹೀಗಿದೆ ಎಂದು ನಾವು ಇಲ್ಲಿ ರಾಜ್ಯದ ಹಿತರಕ್ಷಣೆಗೋಸ್ಕರ ನಾವು ಏನು ಪಾಲಿಟಿಕ್ಸ್ ಮಾಡುತ್ತೇವೆ, ಮಾಡಬೇಕಾದ ಪ್ರಸಂಗ ಬರಬಹುದೆಂದು ಹೇಳುವುದಿತ್ತಲ್ಲ, ಕೆಲವು ಅನುಭವದ ಮಾತುಗಳು ಇರಬಹುದು. ಈಗ ನಾನು ಹೇಳುವುದು ನಮ್ಮ ಸರ್ಕಾರ, ನಮ್ಮ ರೈತರಿಗೆ ನೀರಿಲ್ಲದಾಗ ನೀರು ಕೊಡುತ್ತೇವೆಂದರೆ ನಮ್ಮ ರೈತರು ಏನು ಮಾಡಬೇಕು? ಈ ಮಾತನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ತಮಿಳ್ನಾಡಿನ ಮುಖ್ಯಮಂತ್ರಿಗಳು ಅದೇ ಮಾತನ್ನು ಅವರ ಅಸೆಂಬ್ಲಿಯಲ್ಲಿ ಹೇಳಿದ್ದಾರೆ. ಏನು ಹೇಳಿದ್ದೇವೆ ನಾವು, ಅವರು ಏನು ಹೇಳಿದರು, ಈ ಹೇಳಿಕೆ ನಿಮ್ಮ ಅಸೆಂಬ್ಲಿಯಲ್ಲಿ ನೀವು ಮಾಡಿ, ನಮ್ಮ ಅಸೆಂಬ್ಲಿಯಲ್ಲಿ ನಾವು ಮಾಡುತ್ತೇವೆ ಎಂದು. ಬೇರೆ ಯಾರೇ ಏನೇ ಕೇಳಿದರೂ ನಾವೂ ಪರಸ್ಪರ ನಾವಿಬ್ಬರೂ ಮಾತನಾಡಿಕೊಳ್ಳೋಣವೆಂದು ಹೇಳಿದರು. ಅದನ್ನು ಅವರು ನಡೆಸಿ-ದ್ದಾರೆ. ಅದನ್ನು ಓದಿಬಿಡುತ್ತೇನೆ: The chief Ministers of Karnataka and Tamil Nadu met at Fort st. George, Madras today at 11 AM in reference to the direction of the Supreme Court. Free and can did discussions took place in a spirit of give and take. It has been agreed to as an interim arrangement that without prejudice to the interest of the farmers of Karnataka and Tamil Nadu, the available water will be shared by mutual benefit and by mutual consent. ಇದರಲ್ಲಿ ಏನಿದೆ? ನಾನು

ಏನು ಅಲ್ಲಿ ಕೊಡುವುದು ತೆಗೆದುಕೊಳ್ಳುವುದೇನಿದೆ? ಈಗ ಯಾವುದು ಕೊಡುವುದು ತೆಗೆದುಕೊಳ್ಳು-ವುದು; ನನ್ನ ಹತ್ತಿರ ಇದ್ದರೆ ಕೊಡುತ್ತೇನೆ, ಇಲ್ಲದಿದ್ದರೆ ಏನು ಕೊಡುತ್ತೇನೆ? ಕನಕದಾಸರ ಮನೆಗೆ ಇರುವುದು ಅದೇ, ಪುರಂದರದಾಸರ ಮನೆಗೆ ಇರುವುದು ಅದೇ. ಏನು ಹಾಡು ಹೇಳಿದರೂ ಏನೂ ಸಿಗುವುದಿಲ್ಲ. ದಾಸ ನೀನು ಹ್ಹೋಗು, ದಾಸಾನುದಾಸ ನಾನು ಹೋಗುತ್ತೇನೆ, ಇಬ್ಬರೂ ಕೂಡಿ ಭಿಕ್ಷೆ ಬೇಡೋಣ. ಅದಕ್ಕೆ ಕೊಡುತ್ತೇನೆಂದರೆ ಏನು ಕೊಟ್ಟುಬಂದಿರಿ? ಇದ್ದರೆ ನಮ್ಮ ರೈತರಿಗೆ ಅನಾ-ನುಕೂಲವಾಗದಿದ್ದರೆ ನಿಮಗೆ ನೀರು ಕೊಡುತ್ತೇನೆ. ಹಾಗೆ ಕೊಟ್ಟಿಲ್ಲವೇನು ಹಿಂದೆ? ನೀರು ಕೊಡು-ವುದಿಲ್ಲವೆಂದು ಹೇಳಿ ಭಾರಿ ಭಾರಿ ಪ್ರತಿಜ್ಞೆ ಮಾಡಿ ನೀರು ಕೊಟ್ಟವರು ಎಷ್ಟು ಜನ? ನಾವು ಅವರ ಕಷ್ಟ ತಿಳಿದುಕೊಂಡು ಅವರು ಕೇಳದಿದ್ದರೂ ನೀರು ಕೊಟ್ಟಿರುವುದರಿಂದ ಸುಪ್ರೀಂಕೋರ್ಟ್ ಇವತ್ತು ನಮ್ಮ ಬಗ್ಗೆ ಹೇಳುತ್ತದೆ, ಈಗ ಏನು ಅವಸರ ಇಲ್ಲವೆಂದು ಹೇಳುತ್ತದೆ. ಏತಕ್ಕೆ ಹಾಗೆ ಅವರು ಹೇಳುತ್ತಾರೆ? ಅವರು ನಮ್ಮ ಚಿಕ್ಕಪ್ಪನ ಮಕ್ಕಳೇ? ಕರ್ನಾಟಕದ ಬಗ್ಗೆ ಈ ಗುಡ್‌ವಿಲ್ ಏತಕ್ಕೆ ಬಂತು? ಎಲ್ಲವನ್ನೂ ಒಂದೇ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಡಿ. ಕಾವೇರಿ ಮಟ್ಟಕ್ಕೆ ಹೋದಾಗ ಕಾವೇರಿಯಷ್ಟೇ ಗಂಭೀರವಾಗಿರಬೇಕು. ಪ್ರತಿಗಳಿಗೆ ಗಳಿಗೆಗೆ ಉಪಯೋಗಿಸುವ ನೀರು ಅಲ್ಲ ಕಾವೇರಿ. ಅದು ನಮ್ಮ ನಾಣಯ್ಯನವರಿಗೆ ಗೊತ್ತು. ಅದು ಅವರ ದೇವತೆ, ಅದು ಅವರ ಮನೆ ದೇವರು. ಆ ಕಾವೇರಿಯನ್ನು ಎಷ್ಟು ಸಾರಿ ಎಷ್ಟು ಹಗುರವಾಗಿ ಹೇಗೆ ಉಪಯೋಗಿಸುತ್ತೀರಿ? ನಾವು ಅದೇನಾದರೂ ಆ ರೀತಿ ರಾಜ್ಯಕ್ಕೆ ದ್ರೋಹ ಬಗೆದರೆ ನಾವು ಹೋಗಿ ಅವರ ಕಾಲಿಗೆ ಬೀಳುತ್ತೇವೆ. ನಮ್ಮ ರಾಜೀನಾಮೆ ಅವರಿಗೆ ಕೊಡುತ್ತೇವೆ. ನಿಮಗೆ ಎಷ್ಟು ವರ್ಷಗಟ್ಟಲೆ ಉತ್ತರ ಹೇಳಿದರೂ ಮತ್ತೆ ಅದೇ ಪ್ರಶ್ನೆ. ರಾತ್ರಿ ಎಲ್ಲಾ ರಾಮಾಯಣ ಕೇಳಿ ಬೆಳಿಗ್ಗೆ ಎದ್ದರೆ ರಾಮನಿಗೂ ಸೀತೆಗೂ ಏನು ಸಂಬಂಧ ಅಂದಹಾಗೆ ಆಯಿತು. ಮಹಾರಾಯ, ನಾನು ನಿಮಗೆ ರಾಮಾಯಣ ಹೇಳುವುದು ಬೇಡ, ನಾನು ತಿರುಗುಮರುಗ ಏನಾ-ದರೂ ಗೋಗರೆಯುವುದೂ ಬೇಡ. ರಾಜ್ಯದ ಹಿತದೃಷ್ಟಿಯಿಂದ ನಿಮ್ಮಲ್ಲಿ ವಿಷಯ ಮಾತನಾಡ-ಬಾರದು. ಅವರು ಹೇಗೆ ಅವರ ಅಸೆಂಬ್ಲಿಯಲ್ಲಿ ಇದ್ದಾರೆ, ಅವರು ಜಗಳವಾಡುತ್ತಾರೆಯೇ? ಅವರು ಬಹಳ ಸೌಜನ್ಯದಿಂದ ಇದ್ದಾರೆ. Actually we were hearing the whole Proceed-ings. ಅವರು ಹೇಗೆ ಅವರ ಸರ್ಕಾರಕ್ಕೆ ಶಹಭಾಸ್ ಎಂದು ಬೆನ್ನು ತಟ್ಟಿದ್ದರು. ನೀವು ನಮಗೆ ಕಪಾಳಕ್ಕೆ ಹೊಡೆಯದಿದ್ದರೆ ಸಾಕು, ಬೆನ್ನು ತಟ್ಟುವುದು ಬೇಡ. ನಾವು ಮಾಡುವ ಕೆಲಸ ಮಾಡುತ್ತೇವೆ. ನೀವು ನಮ್ಮನ್ನು ವಿರೋಧ ಮಾಡಿ, ಆದರೆ ರಾಜ್ಯದ ಹಿತಕ್ಕೆ ಧಕ್ಕೆ ತರಬೇಡಿ. ನಮ್ಮನ್ನು ತೆಗೆದು ನೀವು ಅಧಿಕಾರಕ್ಕೆ ಬನ್ನಿ, ನಮ್ಮದೇನೂ ಅಭ್ಯಂತರವಿಲ್ಲ. ಬರಲಿ ಶಕ್ತಿ ಇದೆ. ನಾಳೆ ಲೋಕಸಭಾ ಚುನಾವಣೆ ಬರುತ್ತದೆಂದು ಅವರೇ ಹೇಳಿದರು. ಬರಲಿ, ನೀವು ತಯಾರಿದ್ದೀರಿ, ನಾವು ತಯಾರಿದ್ದೇವೆ. ಜನರ ಉತ್ತರ ಕೇಳಿದರೆ ಅದಕ್ಕೆ ಒಪ್ಪಲೇಬೇಕು. ನಾನು ಹಾಗೆ ತಿಳಿದು ಕೊಂಡಿದ್ದೆ ಎಂದು ನಾವೂ ಅನ್ನುವ ಹಾಗೆ ಇಲ್ಲ, ನೀವೂ ಅನ್ನುವ ಹಾಗೆ ಇಲ್ಲ. ಅವರದ್ದು ಪೊಲಿಟಿಕಲಿ ಸ್ಥಿತಿಗತಿ ಯಾವುದೂ ಸರಿಯಿಲ್ಲ. ಅದಕ್ಕೋಸ್ಕರ ಅವರು ನಮ್ಮ ವಿರೋಧಿ ಅಲ್ಲ. ತೀರಾ ನಮ್ಮ ಸ್ನೇಹಿತರು ಅಲ್ಲ, ನಮ್ಮ ನೆಂಟರೂ ಹೌದು, ಅತ್ತಕಡೆ ಊರ ಹೊರಗೆ ಬಂದರೆ ವಿರೋಧಿಗಳು ಹೌದು. ಅವರ ಬಗ್ಗೆ ನಾನು ಹೆಚ್ಚು

ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರು ಹೆಚ್ಚು ಮಾತನಾಡದೆ ಇರುವುದು ಅವರ ಆರೋಗ್ಯ-ಕ್ಕೂ ಒಳ್ಳೆಯದು ನನ್ನ ಆರೋಗ್ಯಕ್ಕೂ ಒಳ್ಳೆಯದು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇಷ್ಟು ಹೊತ್ತು ಮಾತನಾಡಿದಾಗ ನನಗೆ ನೋವಾಗಿರುವ ಸಂಗತಿ ಎಂದರೆ, ತಾವು ಹಿಂದಿನ ಜೆ.ಹೆಚ್. ಪಟೇಲರಾಗಿ ತುಂಬಾ ಒಳ್ಳೆಯ ರೀತಿಯಲ್ಲಿ ಎಲ್ಲರನ್ನೂ ನಕ್ಕು ನಗಿಸಿ ಹಳೆಯ ಭಾಷೆಯಲ್ಲಿ ಮಾತನಾಡುವುದು ವಿಶೇಷ ಇದೆ. ನಿಮ್ಮ ಆರೋಗ್ಯ ಸುಧಾರಿಸಿದೆ, ನಿಮ್ಮ ಮಾತಿನಲ್ಲಿ ಬದಲಾವಣೆಯಾಗಿದೆ, ತುಂಬಾ ಸಂತೋಷ. ಆದರೆ ತಾವು ಎಷ್ಟು ಹಗುರವಾಗಿ ನಮ್ಮ ಬಗ್ಗೆ ಮಾತನಾಡಿದಿರಿ. ಇವತ್ತು ಸದನಕ್ಕೆ ನಾನು ಏನು ಹೇಳುವ ಅಗತ್ಯ ಇಲ್ಲ.

(ಗೊಂದಲ)

ಉಪಾಧ್ಯಕ್ಷರು:- ವಿರೋಧಪಕ್ಷದ ನಾಯಕರು ಮಾತನಾಡುವಾಗ ಸೌಜನ್ಯದಿಂದ ತಾವು ವರ್ತಿಸಬೇಕೆಂದು ಹೇಳಿದ್ದೇನೆ. ಅವರು ಮಾತು ಮುಗಿಯುವವರೆಗೆ ಬೇರೆ ಯಾರೂ ಮಾತನ್ನಾಡ-ಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ರಾಜ್ಯದ ಮುಖ್ಯಮಂತ್ರಿಯಾಗಿ, ನಾಲ್ಕು ಮುಕ್ಕಾಲು ಕೋಟಿ ಜನರ ಪರವಾಗಿ ತಮಿಳ್ನಾಡಿಗೆ ಹೋಗಿದ್ದಿರಿ. ಅಲ್ಲಿ ಮಾತನಾಡುವ ಕಾಲದಲ್ಲಿ, ನಿಮ್ಮ ಆಂತ-ರಿಕವಾಗಿ ವಿಶ್ವಾಸದ ಯಾವುದೇ ಮಾತು ನಿಮ್ಮ ಅವರ ಒಳ್ಳೆಯ ಸಂಬಂಧದಲ್ಲಿ ಮಾತನಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ರಾಜ್ಯದ ಹಿತದೃಷ್ಟಿಯಿಂದ ನೀರನ್ನು ಬಿಡುಗಡೆ ಮಾಡುವ ಸಂದರ್ಭ-ದಲ್ಲಿ ಯಾವ ಆಧಾರದ ಮೇಲೆ ಏನು ಮಾತನಾಡಿದಿರಿ ಎಂದು ಬೆಳಗ್ಗಿನಿಂದ 4-5 ಗಂಟೆಗಳ ಕಾಲ ನಾವು ಚರ್ಚೆ ಮಾಡಿದೆವು. ನನಗೆ ಒಂದೇ ಒಂದು ಆಶ್ವಾಸನೆ ನಿಮ್ಮಿಂದ ಬೇಕು. ಯಡಿಯೂರಪ್ಪ-ನವರೇ, ಇನ್ನು ಮುಂದೆ ಈ ನದಿ ನೀರಿನ ಸಮಸ್ಯೆ ಬಂದಾಗ, ನೀರನ್ನು ಬಿಡುವ ಕಾಲ ಬಂದಾಗ ಮತ್ತೊಮ್ಮೆ ಸುಪ್ರೀಂಕೋರ್ಟ್ ಮುಂದೆ ನಾನಾಗಲಿ, ತಮಿಳ್ನಾಡಿನವರಾಗಲೀ ಹೋಗುವ ಪ್ರಶ್ನೆ ಬರು-ವುದಿಲ್ಲ, ನಾನಾಗಲಿ ತಮಿಳ್ನಾಡಿನವರಾಗಲಿ ಟ್ರಿಬ್ಯುನಲ್ ಮುಂದೆ ಹೋಗುವ ಪ್ರಶ್ನೆ ಇಲ್ಲ. ನಮ್ಮ ಆಯಕಟ್ಟಿನಲ್ಲಿ, ಜಲಾಶಯದಲ್ಲಿ ಏನು ನೀರಿದೆ ಅದರ ಆಧಾರದ ಮೇಲೆ ನಮ್ಮ ರಾಜ್ಯದ ಹಿತಕ್ಕೆ ಧಕ್ಕೆ ಬಾರದ ರೀತಿ ನಾವು ನೀರು ಬಿಡುತ್ತೇವೆ. ಇನ್ನು ಮುಂದೆ ಟ್ರಿಬ್ಯುನಲ್ ಮುಂದೆ ಆಗಲಿ, ಸುಪ್ರೀಂ-ಕೋರ್ಟ್ ಮುಂದೆ ಆಗಲಿ ಹೋಗುವ ಪ್ರಶ್ನೆ ಇಲ್ಲ. ಆ ಹಿನ್ನೆಲೆಯಲ್ಲಿ ಮಾತುಕತೆ ಆಗಿದೆ ಎಂದು ತಾವು ಹೇಳುವುದಾದರೆ ಇದು ಶಾಶ್ವತವಾದ ಪರಿಹಾರ ಹುಡುಕುವ ದಿಕ್ಕಿನಲ್ಲಿ ನಾವು ಮುಂದೆ ಹೋಗಿದ್ದೇವೆಂದು ಭಾವಿಸಬಹುದು. ಉತ್ತರಪ್ರದೇಶ ಚುನಾವಣೆ ಅಥವಾ ಇನ್ನು ಯಾವುದು ಉಳಿಸು-ವುದು ಮಾಡುವುದು ಎಂದು ಹೇಳಿದರಲ್ಲಾ, ನಾವು ಹೇಳಿದ ಮೇಲೆ ವ್ಯಂಗ್ಯವಾಗಿ ಹೇಳಿದಿರಲ್ಲಾ ಅದಕ್ಕೆ ಇದು ಸಂಬಂಧಪಟ್ಟದ್ದಲ್ಲ. ಸಮಗ್ರ ಕನ್ನಡ ನಾಡಿನ ಜನರ ಹಿತದೃಷ್ಟಿಯಿಂದ ಈ ಮಾತುಕತೆ ಪ್ರಾರಂಭವಾಗಿದೆ. ಅದೇ ರೀತಿ ಮುಂದುವರಿಯುತ್ತದೆ. ಮುಂದೆ ಟ್ರಿಬ್ಯುನಲ್ ಮುಂದೆ ನಾವು ಹೋಗುವ ಪ್ರಶ್ನೆ ಬರುವುದಿಲ್ಲ, ಸುಪ್ರೀಂಕೋರ್ಟ್ ಮುಂದೆ ಹೋಗುವ ಪ್ರಶ್ನೆ ಬರುವುದಿಲ್ಲ, ಎಂದು

ನಿಮ್ಮ ಒಂದು ಮಾತಿನಲ್ಲಿ ಹೇಳುವುದಾದರೆ ನಾವು ನಿಮ್ಮನ್ನು ಒಂದೂ ಪ್ರಶ್ನೆ ಕೇಳುವುದಿಲ್ಲ. ಇಲ್ಲದಿದ್ದರೆ ಪ್ರತಿಭಟಿಸಲಿಕ್ಕೆ ನಮಗೆ ಹಕ್ಕಿದೆ. ನೀವು ಹೋದಮೇಲೆ ಈ ಸದನಕ್ಕೆ ಯಾವ ಚೌಕಟ್ಟಿನಲ್ಲಿ ಯಾವ ಆಧಾರದ ಮೇಲೆ ಮಾತುಕತೆ ಆಡಿದಿರಿ? ಮುಂದೆ ಬರುವ ದಿನಗಳಲ್ಲಿ ಟ್ರಿಬ್ಯುನಲ್ 205 ಟಿ.ಎಂ.ಸಿ. ನೀರು ಬಿಡಬೇಕೆಂದು ಹೇಳಿದಾಗ ಡಿಸ್ಟ್ರೆಸ್ ಫಾರ್ಮುಲ ಮುಂದೆ ಇಟ್ಟಾಗ ಯಾವ ಯಾವ ತಿಂಗಳುಗಳಲ್ಲಿ ನೀರು ಬಿಡಬೇಕೆಂದು ಹೇಳಿದಾಗ ನಮ್ಮ ಜಲಾಶಯದಲ್ಲಿ ನೀರಿಲ್ಲದ ಪ್ರಶ್ನೆ ಬಂದಾಗ ಹೇಗೆ ಮಾಡಬೇಕು ನಾವು? ನೀವು ಅಲ್ಲಿಗೆ ಹೋದ ಮೇಲೆ ಏನು ಮಾತನಾಡಿದಿರಿ ಎಂದು ಗೊತ್ತಾಗಬೇಕಲ್ಲಾ ಸದನಕ್ಕೆ. ಇಲ್ಲಿಯವರೆಗೆ ನಮಗೆ ಒಂದೂ ಅರ್ಥವಾಗಲಿಲ್ಲ.

ಶ್ರೀ ಜೆ.ಹೆಚ್. ಪಟೇಲ್:- ಕೊಟ್ಟು ತೆಗೆದುಕೊಳ್ಳುವುದು ಏನು ಎಂಬ ಬಗ್ಗೆ ಮಾತುಕತೆ ಇವತ್ತು ಏನೂ ಆಗಿಲ್ಲ. ಸದ್ಭಾವನೆಯಿಂದ ಅವರು ಇದ್ದಾರೆ, ನಾವು ಸದ್ಭಾವನೆಯಿಂದ ಇದ್ದೇವೆ. ನಾವು ನೀರು ಕೊಟ್ಟಿಲ್ಲ ಅವರು ನೀರು ತೆಗೆದುಕೊಂಡಿಲ್ಲ. ನಾವು ನೀರು ಬಿಡಬೇಕಾಗುತ್ತದೆ, ಅವರಿಗೆ ನೀರು ಬೇಕಾಗುತ್ತದೆ. ಇದು ಪ್ರಕೃತಿ ನಿಯಮ. ತಾನಾಗಿ ಬಂದು ಅವರಿಗೆ ಮಳೆಯಾಗಿ ನಮಗೆ ಎಲ್ಲಾ ಮಳೆಯಾದರೆ ಯಾವ ಟ್ರಿಬ್ಯುನಲ್ ಬೇಕಾಗಿಲ್ಲ, ಹೈಕೋರ್ಟು ಬೇಕಾಗಿಲ್ಲ, ಸುಪ್ರೀಂಕೋರ್ಟು ಬೇಕಾಗಿಲ್ಲ. ಇವತ್ತು ನಾವು ಕಷ್ಟದ ಪರಿಸ್ಥಿತಿಯಲ್ಲಿದ್ದರೆ ಇಲ್ಲ, ನಾವು ನಿಮಗೆ ಸಹಾಯ ಮಾಡುವ ಪರಿಸ್ಥಿತಿಯಲ್ಲಿದ್ದರೆ ಮಾಡುತ್ತೇವೆ. ಹಿಂದೆ ಮಾಡಿದ್ದೇವೆ, ಮುಂದೆ ಮಾಡುತ್ತೇವೆಂದು ಹೇಳಿದ್ದೇವೆ. ಅವರು ನೀವು ಕೇಳಿದ ಹಾಗೆ ಟ್ರಿಬ್ಯುನಲ್ ಸೆಕ್ಷನ್ (4) ಎಂದು ಏನು ಹೇಳುತ್ತೀರಿ ಅದೆಲ್ಲಾ ಕೇಳುವುದಕ್ಕೆ ಅವರು ಹೋಗಲಿಲ್ಲ. ನಾವು ಹೇಳುವುದಕ್ಕೂ ಹೋಗಲಿಲ್ಲ. That is their goodness. ಆ ಪ್ರಸ್ತಾಪ ಇಲ್ಲ. ನಾವು ತೀರಾ ಉದ್ದ ಎಳೆದು ಕೇಳಲಿಲ್ಲ. ಅವರು ಹಾಗೆ ಅಂದಕೂಡಲೇ ಅವರ ಅಸೆಂಬ್ಲಿಯಲ್ಲಿ ಪ್ರಸ್ತಾಪ ಮಾಡಿಲ್ಲವೆಂದು ಹೇಳಿದ್ದಾರೆ. ಅದಲ್ಲ ಇದು. ಈ ವಾತಾವರಣದೊಳಗೆ ಇರತಕ್ಕ ಸದ್ಭಾವನೆ ಏನಿದೆ ಅದನ್ನು ಕೆಡಿಸಬಾರದು. ರಾಜ್ಯಕ್ಕೆ ದ್ರೋಹ ಬಗೆಯುತ್ತಾರೆ ಎಂಬ ಬಹಳ ತೀಕ್ಷ್ಣವಾದ ಪದಗಳನ್ನು ಉಪಯೋಗಿಸಿದರು. ಅದು ನೀವು ಏನಾದರೂ ಹೇಳಿಕೊಳ್ಳಿ. ರಾಜ್ಯದ ಹಿತಕ್ಕೆ ಧಕ್ಕೆ ಬರುವ ಭಯ ಇದೆ ಅಂದಾಕ್ಷಣ ಏನಾದರೂ ಸಿಕ್ಸ್ತ್ ಸೆನ್ಸ್ ಹೇಳಲಿ. I will call you all.

ಶ್ರೀ ಬಿ.ಎಸ್. ಯಡಿಯೂರಪ್ಪ:- ನೀವು ಎಷ್ಟು ನೀರು ಬಿಡುತ್ತೀರಿ ಹೇಳಿ? ನೀವು ಏನು ಒಪ್ಪಿಕೊಂಡು ಬಂದಿದ್ದೀರಿ ಎನ್ನುವುದು ನಮಗೆ ಬೇಕಲ್ಲಾ. ಇಲ್ಲದಿದ್ದರೆ ನಾವು ಏತಕ್ಕೆ ಇಲ್ಲಿ ಕುಳಿತಿರಬೇಕು? ಬರೀ ಮಾತನಾಡಿಕೊಂಡು ಬಂದಿರಾ? ಸದ್ಭಾವನಾ ಯಾತ್ರೆಯೇ ಇದು? ಏನೂ ಮಾತುಕತೆ ಆಗಲಿಲ್ಲವೇ?

ಶ್ರೀ ಜೆ.ಹೆಚ್. ಪಟೇಲ್:- ಏನೂ ಒಪ್ಪಿಕೊಂಡು ಬಂದಿಲ್ಲ. ಇಷ್ಟು ಹೊತ್ತಿನ ತನಕ ಹೇಳಿದ್ದೇನು? ಇದನ್ನು ಅವರೂ ಅವರ ಸದನದಲ್ಲಿ ಓದಿ ಹೇಳಿದರು, ನಾನೂ ಓದಿ ಹೇಳಿದ್ದೇನೆ. ಇದನ್ನು ಬಿಟ್ಟು ಏನೂ ಇಲ್ಲ. ಎಕ್ಸ್‌ಟ್ರಾ ಒಂದು ಶಬ್ದ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಸುಮ್ಮನೆ ವ್ಯರ್ಥವಾಗಿ ಮಾತುಕತೆ ಆಡಿದಿರಾ? ಸುಮ್ಮನೆ ಸದ್ಭಾವನೆ, ಮಾತುಕತೆ ಅಷ್ಟೇನಾ? ಅದೇ ಕೋರ್ಟು, ಅದೇ ಟ್ರಿಬ್ಯುನಲ್, ಅದೇ ನೇಣು ಹಾಕಿಕೊಳ್ಳುವುದು. ಕತ್ತಿ ತೂಗಾಡುವುದು ಅದೇನೂ ತಪ್ಪಿದ್ದಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೆ, ನಾನು ಬಹಳ ಗಂಭೀರವಾಗಿ ಮತ್ತು ಬಹಳ ತಾಳ್ಮೆಯಿಂದ ಅವರು ಹೇಳಿದಂಥ ಮಾತುಗಳನ್ನು ಕೇಳಿದೆ. ಬಹಳ ಸೀರಿಯಸ್ಸಾಗಿಯೂ ಹೇಳಿದರು, ಕೆಲವು ಲಘುವಾಗಿಯೂ ಹೇಳಿದರು. ಕೆಲವು ನಮ್ಮ ಕಡೆ ಸ್ವಲ್ಪ ಕುಚೇಷ್ಟೆಯಿಂದ ಮಾತನಾಡತಕ್ಕ ಪ್ರಯತ್ನವನ್ನೂ ಮಾಡಿದರು.

ಶ್ರೀ ಎ. ರುಕ್ಮಯ್ಯ ಪೂಜಾರಿ:- ನೀವೇ ಅವರನ್ನು ಬದುಕಿಸಿದ್ದೀರಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸ್ವಲ್ಪ ಕೇಳಿ. ನೀವೂ ಒಂದು ಕಾಲದಲ್ಲಿ ಬದುಕಿಸಿದ್ದಿರಿ. ಇವತ್ತು ನಮ್ಮ ಕಾಲ ಬಂದಿದೆ, ನಾವು ಬದುಕಿಸಿದ್ದೇವೆ.

ಉಪಾಧ್ಯಕ್ಷರು:- ಇಬ್ಬರೂ ಒಂದೇ ಕೆಲಸ ಮಾಡಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಆದರೆ ಒಂದು ಮಾತು ಅವರಿಗೆ ಗೊತ್ತಾಗಿಲ್ಲ. ಏಕೆಂದರೆ ಹಿಂದೆ ಹೇಳುತ್ತಾ ಇದ್ದರು. ಇವತ್ತು ನಮ್ಮ ಪ್ರಧಾನಮಂತ್ರಿಗಳು ಅಲ್ಲಿದ್ದಾರೆ. ಅದಕ್ಕೆ ಇವತ್ತು ನನಗೆ ಬಹಳ ಶಕ್ತಿ ಬಂದಿದೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ, ಯಮಬಲ ಬಂದಿದೆ. ಅದಕ್ಕೆ ಈ ಶಕ್ತಿಯನ್ನು ಉಪಯೋಗ ಮಾಡಿಕೊಂಡು ರಾಜ್ಯಕ್ಕೆ ಒಳ್ಳೆಯದನ್ನು ಮಾಡಬೇಕು ಎನ್ನತಕ್ಕದ್ದನ್ನು ಮಾಡಿದ್ದೇನೆ. ಅದಕ್ಕೆ ನಿಮ್ಮ ಅವಶ್ಯಕತೆ ನನಗೇನೂ ಇಲ್ಲ ಎಂಬ ಧಾಟಿಯಲ್ಲಿ ಮಾತನಾಡಿದರು. ಇದೇ ಮಾತನ್ನು ಕರುಣಾನಿಧಿಯವರು ಮೊದಲಿನಿಂದಲೂ ಹೇಳುತ್ತಿದ್ದರು, ಈಗಲೂ ಅವರು ಹೇಳುತ್ತಿದ್ದಾರೆ. ಇವರು ನನಗೆ ಹೇಗೆ ಶಕ್ತಿ ಇದೆ ಅನ್ನುತ್ತಾರೆ ಹಾಗೆ ಕರುಣಾನಿಧಿಯವರೂ ಕೂಡ ಏನು ಹೇಳುತ್ತಾರೆಂದರೆ ಇವತ್ತು ದೇವೆಗೌಡರನ್ನು ಪ್ರಧಾನಮಂತ್ರಿ ಮಾಡಿದ್ದು ನಾವು, ಒಂದು ವೇಳೆ ನಾಳೆ ಅವರು ನಾನು ಹೇಳಿದಹಾಗೆ ಕೇಳದೇ ಹೋದರೆ ಅವರು ನಾಳೆ ಆ ಸ್ಥಾನದಲ್ಲಿ ಇರುವುದಕ್ಕೆ ಸಾಧ್ಯ ಇಲ್ಲ ಎಂಬ ಮಾತನ್ನು ಇಟ್ಟುಕೊಂಡೇ ಅವರೂ ಕೂಡ ಇವತ್ತು ಮಾತುಕತೆಗೆ ಇವರನ್ನು ಕರೆಸಿದ್ದು. ನಾನು ಕೇಳುತ್ತೇನೆ ಇವರು ಹೇಳಿದರಲ್ಲಾ ಈ ವಾತಾವರಣ ಯಾವಾಗ ಆಗಿದ್ದು? ಸ್ವಾಮಿ, ನಾವು ಮಾಡಿದ ತಪ್ಪಲ್ಲ. ನೀವು ಪದೇಪದೇ ಚುಚ್ಚಿ ಹೇಳುತ್ತಿದ್ದೀರಿ. ವಿಶ್ವನಾಥ್ ಪ್ರತಾಪ್‌ಸಿಂಗ್ ಅವರಿದ್ದಾಗ ಕಾವೇರಿ ವಾಟರ್ ಟ್ರಿಬ್ಯುನಲ್ ಕಾನ್‌ಸ್ಟಿಟ್ಯೂಟ್ ಆಯಿತು. ಇವತ್ತು ಡಿಸ್ಟ್ರೆಸ್ ಫಾರ್ಮುಲಾ ಆಗಲೀ ಇಂಟೆರಿಂ ಆರ್ಡರ್ ಆಗಲೀ ಇದೆಲ್ಲವೂ ಕೂಡ ಬಂದಿತ್ತು. ಆಗ ನಿಮ್ಮ ಸರ್ಕಾರ ಅಲ್ಲಿತ್ತು. ಇಲ್ಲೂ ಇತ್ತು. ನೀವು ಮಾಡಿದ್ದನ್ನು ಇನ್ನೊಬ್ಬರಿಗೆ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಸಿದ್ಧರಾಮಯ್ಯ:- ಇಲ್ಲಿ ನಮ್ಮ ಸರ್ಕಾರ ಇರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಆಯಿತು ಒಪ್ಪಿಕೊಂಡೆ. ಅಲ್ಲಿ ನಿಮ್ಮ ಸರ್ಕಾರ ಇತ್ತು. ಆದರೆ ಕರುಣಾನಿಧಿಯವರು ಆಗಲೂ ಕೂಡ ವಿಶ್ವನಾಥ್ ಪ್ರತಾಪಸಿಂಗ್ ಅವರನ್ನು ಉಪಯೋಗ ಮಾಡಿಕೊಂಡು ಈ ಟ್ರಿಬ್ಯುನಲ್ ನೀವು ಮಾಡಿ ಎಂದು ಹೇಳಿ ಟ್ರಿಬ್ಯುನಲ್ ಮಾಡಿಸಿದಂಥವರೇ ಅವರು. ಅಂದಾಗ ಇವತ್ತು ಯಾವ ಧಾಟಿಯಲ್ಲಿ ಹೇಳುತ್ತೀರಿ? ಎಲ್ಲವನ್ನೂ ಕೂಡ ಹಿಂದಿನ ಸರ್ಕಾರ ಮಾಡಿತು, ನಾವೇ ಬಹಳ ಒಳ್ಳೆಯದನ್ನು ಮಾಡಿದ್ದೇವೆ ಎಂದು. ಆಗಲೂ ವಿಶ್ವನಾಥ್ ಪ್ರತಾಪ್‌ಸಿಂಗ್ ಅವರೇ ಮಾಡಿದ್ದುದು, ನಿಮ್ಮ ಪಾರ್ಟಿಯವರೇ ಮಾಡಿದ್ದುದು, ಇರಲಿ. ಆ ಮಾತು ಒಂದು ಕಡೆ.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಉಪಾಧ್ಯಕ್ಷರೆ, ವಿಶ್ವನಾಥ್ ಪ್ರತಾಪ್‌ಸಿಂಗ್ ಅವರು ಟ್ರಿಬ್ಯುನಲ್ ಮಾಡಿದರು ಎನ್ನುವುದಲ್ಲ. ಅವತ್ತು ಅಂಥ ಪರಿಸ್ಥಿತಿ ಉದ್ಭವ ಆಯಿತು. ಅವತ್ತು ಇಲ್ಲಿ ಕರ್ನಾಟಕದಲ್ಲಿ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದರು. ಮಾತುಕತೆ ಮುರಿದುಬಿತ್ತು. ಅವರು ನೀರು ಕೇಳಿದಾಗ ಕೊಡುವುದಿಲ್ಲ ಎಂದು ಹೇಳಿ, ಇಲ್ಲಿಗೆ ಬಂದಂಥ ಮಂತ್ರಿಗಳನ್ನು ವಾಪಸ್ ಕಳುಹಿಸಿದರು. ಆಗ ಎರಡೂ ರಾಜ್ಯದ ಮುಖ್ಯಮಂತ್ರಿಗಳಿಗೆ ಮಾತುಕತೆ ಮುರಿದು ಬಿದ್ದಿದ್ದರಿಂದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿತ್ತು. ವಿ.ಪಿ. ಸಿಂಗ್ ಅವರು ಬಂದು ಮಾಡಿದ್ದಲ್ಲ ಇದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗ ನಾನು ಹೇಳುತ್ತಿದ್ದೇನೆ, ಇದು ಅವರ ಕಾಲದಲ್ಲಿ ಆಯಿತು. ಏಕಾಯಿತು ಅಂದರೆ ಆಗ ಒತ್ತಾಯ ಮಾಡಿ ಕರುಣಾನಿಧಿಯವರು ಟ್ರಿಬ್ಯುನಲ್ ಕಾನ್‌ಸ್ಟಿಟ್ಯೂಟ್ ಮಾಡಲೇಬೇಕು ಎಂದು ಹೇಳಿ ಕಾನ್‌ಸ್ಟಿಟ್ಯೂಟ್ ಮಾಡಿಕೊಂಡು ತನ್ನ ಪರ ಮಾಡಿಕೊಳ್ಳುವ ರೀತಿಯಲ್ಲಿ ನಡೆಯಿತು. ಅದಕ್ಕೆ ನೀವು ಅದನ್ನೂ ಕೂಡ ಒಪ್ಪಿಕೊಳ್ಳಿ. ಬರೀ ಇದನ್ನು ಹೇಳಿಕೊಂಡು ಹೋಗಬೇಡಿ. ಎರಡನೆಯದು, ಮೂವತ್ತೊಂದೂವರೆ ಲಕ್ಷ ಎಕರೆ ಇಲ್ಲಿ ನೀರಾವರಿ ಇರಬಹುದು, ಮೂವತ್ತು ಲಕ್ಷ ಎಕರೆ ನೀರಾವರಿ ಅಲ್ಲಾಗಿರಬಹುದು. ಆದರೆ ನಮಗೆ ಗೊತ್ತಿದೆ ಯಾವ ಸರ್ಕಾರ ಬಂದರೂ ಕೂಡ, ತಾವು ಏಳು ವರ್ಷ ಎಂಟು ವರ್ಷ ಮಧ್ಯದಲ್ಲಿದ್ದಿರಿ. ಪುನಃ ಈಗ ಬಂದಿದ್ದೀರಿ. 8-9 ವರ್ಷ ಆಯಿತು. ಅದಕ್ಕೆ ನೀವು ಅದು ಇದು ಎಂದು ಹೇಳಿಕೊಳ್ಳುವಹಾಗೇ ಇಲ್ಲ. ಈಗ 55 ಲಕ್ಷ ಎಕರೆ ಏನು ಆಗಬೇಕಾಗಿತ್ತು ಅದರಲ್ಲಿ ಸುಮಾರು ಸಮೀಪ ಸಮೀಪ 26-27 ಲಕ್ಷ ಎಕರೆ ನೀರಾವರಿ ಈ ರಾಜ್ಯದಲ್ಲಾಗಿದೆ. ಅಂದರೆ 50 ಪರ್ಸೆಂಟಿಗಿಂತ ಹೆಚ್ಚು. ಅಂದರೆ ಯಾವುದಕ್ಕೂ ಯಾವ ಕಾಲದಲ್ಲಿ ಏನಾಗಿತ್ತು ಎಂದು ಹೇಳುವುದಕ್ಕಿಂತಲೂ ನಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮಾತುಕತೆ ಆಡುವುದಕ್ಕೆ ಹೋಗುತ್ತೇನೆ ಎಂದು ಹೇಳುವುದು ಬಿಟ್ಟು ನಾನು ಏತಕ್ಕೆ ಹೋಗಿದ್ದೆ ಎಂದು ನೀವು ಯಾರು ಕೇಳುವವರು? ಅಲ್ಲಿ ಹೋಗಿ ಏನು ಮಾತನಾಡಲಿ, ಇದಲ್ಲ ಮಾತು. ನಮಗೆ ಸಂಶಯ ಬಂದಿದ್ದು ಏನೆಂದರೆ ಸುಪ್ರೀಂಕೋರ್ಟಿನ ಮುಂದೆ ಇರತಕ್ಕ ಪಿಟೀಷನ್ ಏನಿತ್ತು ಅದು 25ನೇ ಜೂನ್ 91ರ ಇಂಟೆರಿಂ ಡಿಸ್ಟ್ರೆಸ್ ಫಾರ್ಮುಲಾ ಆರ್ಡರ್ ಪ್ರಕಾರ ನೀವು ಪ್ರತಿ ತಿಂಗಳು ಇಷ್ಟು ನೀರು ಬಿಡಿ ಇಷ್ಟು ನೀರು ಬಿಡಿ ಎಂದು ಏನು ಕ್ವಾಂಟಿಟಿ ಫಿಕ್ಸ್ ಮಾಡಿದ್ದರು ಆ ಕ್ವಾಂಟಿಟಿ ಪ್ರಕಾರ ಅವರಿಗೆ ನೀರು ಬರದೇ ಇದ್ದಾಗ ಅವರು ಹೋಗಿ ಅಪ್ಲಿಕೇಷನ್ಸ್ ಹಾಕಿಕೊಂಡು

ಒತ್ತಾಯ ತರುವುದಕ್ಕೋಸ್ಕರ ಅಲ್ಲಿಗೆ ಹೋಗಿದ್ದುದು. ಅದರ ಆಧಾರದ ಮೇಲೆ ಇವತ್ತು ನೀವು ಚರ್ಚೆ ಮಾಡಿಕೊಳ್ಳಿ ಅಂತ ಹೇಳಿ ನಿಮ್ಮನ್ನು ಕಳುಹಿಸಿದ್ದುದು. ಅದಾದ ಮೇಲೆ ನಮಗೆ ಮುಂದೆ ಏನೂ ಹಾದಿ ಇಲ್ಲ ಅಂತಲೂ ಅಲ್ಲ. 3ನೇ ಏಪ್ರಿಲ್ 1992ರಲ್ಲಿ ಕೂಡ ನಮಗೆ ಕೊಟ್ಟಂಥ ಕ್ಲಾರಿಫಿಕೇಟರಿ ಆರ್ಡರ್‌ನಲ್ಲೂ ಏನು ಹೇಳಿದ್ದಾರೆ? ನಿಮಗೆ ಇದೇ ರೀತಿಯಾಗಿ ಡಿಸ್ಟ್ರೆಸ್ ಬಂದರೆ ನಿಮ್ಮಲ್ಲಿ ನೀರಿಲ್ಲದೇ ಇದ್ದಾಗ ನೀವು ಪುನಃ ನಮ್ಮ ಮುಂದೆ ಬಂದು ಅಪ್ರೋಚ್ ಮಾಡಬಹುದು ಎನ್ನತಕ್ಕಂಥ ಮಾತನ್ನು ಕೂಡ ಅವರೇ ಹೇಳಿದ್ದುದು. ಅದಕ್ಕೆ ಏನೂ ನಮ್ಮ ಕೈಯಲ್ಲಿ ಇರಲಿಲ್ಲ, ನಾವು ಬಹಳ ಹತಾಶರಾಗಿ-ದ್ದೇವೆ, ಅದಕ್ಕಾಗಿ ನಾವು ಹೋಗಬೇಕಾಗಿತ್ತು ಎಂದು ಹೇಳಿಕೊಳ್ಳತಕ್ಕಂಥದ್ದು ಅಷ್ಟೊಂದು ಸಮಂಜಸ ಆಗುವುದಿಲ್ಲ. ನಮ್ಮಲ್ಲಿ ಕಾನೂನು ಪ್ರಕಾರ ನಮಗೂ ಕೂಡ ಪುನಃ ಟ್ರಿಬ್ಯುನಲ್ ಮುಂದೆ ಹೋಗತಕ್ಕ ಸಾಧ್ಯತೆಯೂ ಇತ್ತು. ಅದೆಲ್ಲವನ್ನೂ ಬದಿಗಿಟ್ಟು ಈ ಸದನದಲ್ಲಿ ಒಂದು ಅಭಿಪ್ರಾಯ ಏನು ಬಂದಿತ್ತು ಇವತ್ತು ಟ್ರಿಬ್ಯುನಲ್ ಹೊರಗಡೆಯೇ ತಮಿಳುನಾಡಿನವರು ಮಾತನಾಡುವುದಕ್ಕೆ ಸಿದ್ಧರಿದ್ದರೆ ಮಾತ-ನಾಡಬೇಕು, ಸೌಹಾರ್ದತೆಯಿಂದ ಮಾತುಕತೆ ಮಾಡಿ ಬಗೆಹರಿಸಿಕೊಳ್ಳಬೇಕು ಎನ್ನುವುದಕ್ಕೆ ಯಾರ ಅಭ್ಯಂತರ ಕೂಡ ಇರಲಿಲ್ಲ. ಆದರೆ ಏನು? 1991ರ ಆರ್ಡರ್ ಎದುರುಗಡೆ ಇರಬಾರದು. ಅಥವಾ 92ರ ಇಂಟೆರಿಂ ಡಿಸ್ಟ್ರೆಸ್ ಫಾರ್ಮುಲಾ ಆಗಲೀ ಅಥವಾ ಕ್ಲಾರಿಫಿಕೇಟರಿ ಆರ್ಡರ್ ಆಗಲೀ ಇದಕ್ಕೆ ಸಂಬಂಧಪಟ್ಟಂತೆ ಅಲ್ಲ. ಇಡೀ ಕಾವೇರಿ ವಾಟರ್ ಡಿಸ್‌ಪ್ಯೂಟ್ ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ಟ್ರಿಬ್ಯುನಲ್ ಹೊರಗಡೆ ಹೋಗಿದ್ದರೆ ಅದು ಸ್ವಾಗತಾರ್ಹ. ಅದಕ್ಕೆ ನಾಗೇಗೌಡರು ಕೂಡ ಹೇಳಿದರು, ಅದನ್ನು ಬಿಟ್ಟು ಕೂಡ ಚರ್ಚೆ ಮಾಡುವುದಕ್ಕೆ ಅವಕಾಶ ಸುಪ್ರೀಂಕೋರ್ಟಿನವರು ತಿಳಿಸಿದ್ದಾರೆ ಎನ್ನ-ತಕ್ಕದ್ದನ್ನು ಹೇಳಿದ್ದಾರೆ. ಆ ಆರ್ಡರ್ ನಮ್ಮ ಹತ್ತಿರವೂ ಇಲ್ಲ, ನಿಮ್ಮ ಹತ್ತಿರ ಇದೆಯೋ ಇಲ್ಲವೋ ಗೊತ್ತಿಲ್ಲ. ಅದರ ಬಗ್ಗೆ ತಾವು ಸ್ಪಷ್ಟೀಕರಣ ಕೂಡ ಕೊಡಲಿಲ್ಲ. ಅಂದರೆ ಇವತ್ತು ಆ 91ರ ಆರ್ಡರ್ ಪ್ರಕಾರ ತಾವು ಮಾತುಕತೆ ಆಡುವಾಗ ವಿರೋಧಪಕ್ಷದವರನ್ನು ತಾವು ವಿಶ್ವಾಸದಲ್ಲಿ ತೆಗೆದುಕೊಂಡು ಹೋಗಬೇಕು ಎನ್ನತಕ್ಕದ್ದೇ ಹೊರತಾಗಿ ನಾನು ಹೋಗಿ ಏನೂ ಮಾಡಲಿಲ್ಲ, ನಾನು ಏತಕ್ಕೆ ನಿಮ್ಮನ್ನು ಪದೇಪದೇ ಕೇಳಬೇಕು ಅಂದರೆ ಎಷ್ಟೋ ಕಾಲ ಈ ಸದನದಲ್ಲಿ ಒಂದು ಪಾಯಿಂಟ್ ಆಫ್ ಆರ್ಡರ್ ಎತ್ತಿದರೆ ಎರಡೆರಡು ದಿವಸ ಅವರೇ ಅವರ ಕಾಲದಲ್ಲಿ ಚರ್ಚೆ ಮಾಡಿದ್ದಾರೆ. ಇಲ್ಲೇ ಮಲ-ಗಿದ್ದಾರೆ ಧರಣಿಗಳನ್ನು ಮಾಡಿ. ಎರಡೆರಡು ದಿವಸ ಮೂರುಮೂರು ದಿವಸ ಸದನದಲ್ಲೇ ರಾತ್ರಿ ಹಗಲು ಮಾಡಿದ್ದಾರೆ. ಇಂಥ ಸಮಯವನ್ನು ಕೂಡ ಅವರು ನೋಡಿಕೊಂಡಿದ್ದಾರೆ. ಅದಕ್ಕಾಗಿ ಇವತ್ತು ಸುಮ್ಮನೆ ವಿರೋಧಪಕ್ಷದವರು ಪದೇಪದೇ ಕಾವೇರಿ ವಾಟರ್ ಡಿಸ್‌ಪ್ಯೂಟ್ ಇಲ್ಲಿ ರೈಸ್ ಮಾಡು-ವುದು ಕಾಲ ಹರಣ ಮಾಡುತಕ್ಕದ್ದು ಮಾಡುತ್ತಾ ಇದ್ದಾರೆ ಎನ್ನತಕ್ಕ ಅಭಿಪ್ರಾಯ, ಚುಚ್ಚು ಮಾತು-ಗಳನ್ನು ಹೇಳತಕ್ಕದ್ದನ್ನು ದಯವಿಟ್ಟು ಅವರು ಬಿಡಬೇಕು. ಅವರಿಗೆ ಎಷ್ಟು ಆಸಕ್ತಿ ಇದೆ ಈ ದೇಶದ ರೈತರ ಬಗ್ಗೆ, ನಮ್ಮ ರಾಜ್ಯದ ಬಗ್ಗೆ ಅದರಷ್ಟೇ ಕಾಳಜಿ ವಿರೋಧಪಕ್ಷದವರಿಗೂ ಇದೆ. ಅದಕ್ಕಿಂತ ಹೆಚ್ಚಿನ ಕಾಳಜಿ ಇದೆ ಎನ್ನತಕ್ಕ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಅದಕ್ಕಾಗಿ ಅವರು ತಮ್ಮ ಚುಚ್ಚು ಮಾತುಗಳನ್ನು ಬಿಟ್ಟು ವಿಶಾಲವಾಗಿ ಸಲಹೆಗಳನ್ನು ಕೊಟ್ಟರೆ ಅದನ್ನು ಒಪ್ಪಿಕೊಳ್ಳೋಣ. ಇನ್ನೊಂದು

ಏನೆಂದರೆ ಈ ಟ್ರಿಬ್ಯೂನಲ್ ಬಗ್ಗೆ ಈಗ ನಾವು ಹೋಗಬೇಕೋ ಬಿಡಬೇಕೋ? ಈಗ ಅವರು ಏನೋ ಹೇಳಿದರು, ಬಹಳ ಒಳ್ಳೆಯ ರೀತಿಯಿಂದ ಮಾತುಕತೆ ನಡೆದಿದೆ. ಅಲ್ಲಿ ತಮಿಳುನಾಡು ಅಸೆಂಬ್ಲಿಯಲ್ಲೂ ಕೂಡ ಕರುಣಾನಿಧಿಯವರು ಕೊಟ್ಟಂಥ ಹೇಳಿಕೆಯ ಮೇಲೆ ಇವತ್ತು ಅವರೂ ಸಂತೋಷ ಪಟ್ಟಿದ್ದಾರೆ ಆ ಸದನದ ಸದಸ್ಯರು ಎಂದು. ಅವರು ಸಂತೋಷಪಟ್ಟದ್ದು ಏತಕ್ಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಕೇಳದೆ 5 ಟಿ.ಎಂ.ಸಿ. ನೀರು ಬಿಟ್ಟರು ಎಂದು. ಬಹಳ ಒಳ್ಳೆಯದು, ಶಹಭಾಸ್ ಅಂದರು ಅವರು. ಸುಪ್ರೀಂಕೋರ್ಟ್ ಹೇಳಿದ ತಕ್ಷಣವೇ 6ನೇ ತಾರೀಖಿನೊಳಗಾಗಿಯೇ ನೀವು ಹೇಳಿ ಅಂದರೆ ಇವರು 5ನೇ ತಾರೀಖು ಹೋಗಿ ಏನು ಹೇಳಿದರು ಅಂದರೆ ನೀವು ನೀರು ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದೀರಿ, ನಾನು ಕೊಡುವುದಕ್ಕೆ ಸಿದ್ಧನಿದ್ದೇನೆ, ಬೇರೆ ಅವಶ್ಯಕತೆಯೇ ಇಲ್ಲ ಎನ್ನತಕ್ಕ ಮಾತಿನಲ್ಲಿ ಅವರು ಹೇಳಿದರು. ಅಂದರೆ ನೀರು ಕೊಡುವುದಕ್ಕೆ ಅವರು ಸಿದ್ಧರಿದ್ದಾಗ ನಾವು ಏತಕ್ಕೆ ಜಗಳ ತೆಗೆದುಕೊಳ್ಳಬೇಕು ಎನ್ನತಕ್ಕದ್ದು ಸಹಜವಾಗಿ ಬರುತ್ತದೆ. ಅದಕ್ಕೆ ನಾವು, ನಿಮ್ಮಲ್ಲಿ ನೀರು ಎಕ್ಸೆಸ್ ಇದ್ದರೆ, ನಮಗೆ ಬೇಕಾಗದಿದ್ದರೆ ನೀವು ನೀರು ಬಿಡಬೇಡಿ ಎಂದು ಯಾರೂ ಹೇಳುವುದಿಲ್ಲ. ತಮಿಳುನಾಡಿನವರು ಏನು ಪಾಕಿಸ್ಥಾನದವರೇ? ಅವರೇನು ನಮ್ಮ ವಿರೋಧಿಗಳೇ? ಈ ದೇಶದಲ್ಲಿ ನೀವು ಹೇಳಿದಹಾಗೆ ಯೂನಿಯನ್ ಟೆರಿಟರಿ ಇದ್ದಮೇಲೆ ಅನೇಕ ಸಾರಿ ಡಿಸ್ಟ್ರೆಸ್‌ನಲ್ಲಿ ನಾವು ಭಾಗಿಗಳಾಗಬೇಕಾಗುತ್ತದೆ, ಈ ದೇಶದಲ್ಲಿ ಎಷ್ಟೋ ಸಾರಿ ಯಾವುದಾದರೂ ರಾಜ್ಯದಲ್ಲಿ ಫ್ಲಡ್ ಬಂದರೆ ಅವರಿಗೆ ಹಣ ಕಳುಹಿಸತಕ್ಕದ್ದು, ಬಟ್ಟೆ ಕಳುಹಿಸತಕ್ಕದ್ದು ಎಷ್ಟೋ ಸಾರಿ ಮಾಡಿದ್ದಾರೆ. ಸೌಹಾರ್ದತೆಯಿಂದ ನಡೆದುಕೊಳ್ಳುವುದಕ್ಕೆ ಯಾರದೂ ಅಡ್ಡಿ ಇಲ್ಲ. ಆದರೆ ತಾವು ಹೇಳಿಕೊಳ್ಳತಕ್ಕದ್ದು ಏನಿದೆ ನಾವು ಬಂದಮೇಲೆ ಇದು ನಡೆಯಿತು, ಹಿಂದೆ ಇರಲೇ ಇಲ್ಲ, ಮತ್ತು ಈ ಪ್ರಧಾನಮಂತ್ರಿಯವರೇ ಇದಕ್ಕೆ ಕಾರಣ ಎಂದು ಹೇಳಿದರೆ, ಅದು ಸರಿಯಲ್ಲ. ಅವರಿಗೆ ಎಷ್ಟು ಗೌರವ ಕೊಡಬೇಕೋ ಅದನ್ನು ಕೊಡೋಣ. ಇವತ್ತು ನಮ್ಮ ಪಕ್ಷವೂ ಸಪೋರ್ಟ್ ಮಾಡುತ್ತಾ ಇದೆ. ಅದಕ್ಕೋಸ್ಕರ ತಾವು ಎಷ್ಟು ಪ್ರಯತ್ನ ಮಾಡುತ್ತೀರಿ? ದಿನಾ ಬೆಳಿಗ್ಗೆ ಎದ್ದು ಎಷ್ಟು ಜನರ ಮನೆ ಮನೆಗೆ ಅಡ್ಡಾಡುತ್ತೀರಿ, ಅದೂ ಗೊತ್ತಿದೆ. ನಮ್ಮ ಪ್ರಧಾನಮಂತ್ರಿಗಳು ಕುರ್ಚಿ ಇಟ್ಟುಕೊಳ್ಳುವುದಕ್ಕೆ ಎಷ್ಟು ಪ್ರಯತ್ನ ಮಾಡಿದರು? ನಿಮ್ಮವರು ಕುರ್ಚಿ ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಿದರು ಎನ್ನುವಂತಹ ಚುಚ್ಚುಮಾತನ್ನು ನಾನು ಇವತ್ತು ಹೇಳಬೇಕಾಗುತ್ತದೆ, ನಿಮ್ಮ ಪ್ರಧಾನಮಂತ್ರಿಗಳು ಕುರ್ಚಿ ಇಟ್ಟುಕೊಳ್ಳುವುದಕ್ಕೋಸ್ಕರ ದಿನಾ ಎಷ್ಟು ಓಣಿ ತಿರುಗಬೇಕಾಗುತ್ತದೆ ಅದನ್ನು ಲೆಕ್ಕಹಾಕಿ.

ಶ್ರೀ ಜೆ.ಹೆಚ್. ಪಟೇಲ್:- ನಮ್ಮ ಪ್ರಧಾನಮಂತ್ರಿಗಳು ಎಲ್ಲರ ಯೋಗಕ್ಷೇಮ ಕೇಳುವುದಕ್ಕೆ ಎಲ್ಲರ ಮನೆಗೆ ಹೋಗುತ್ತಾರೆ ಅಂದಿರಲ್ಲಾ, ಬರೀ ಯೋಗಕ್ಷೇಮ ಕೇಳೋಕೆ ಅಲ್ಲ. ನಿಮ್ಮ ಸ್ವಭಾವದ ಪ್ರಕಾರ ಮನೆಯಲ್ಲಿ ಇದ್ದೀರೋ ಅಥವ ಇಲ್ಲವೊ ಎಂದು ನೋಡುವುದಕ್ಕೆ ಹೋಗಿದ್ದಾರೆ. ಏಕೆಂದರೆ ನಿಮ್ಮ ಸ್ವಭಾವದಲ್ಲಿ ನಾವು ನೋಡಿದ್ದೇವೆ. ಮನೆಯಲ್ಲಿ ಇರುತ್ತಾರೋ ಇಲ್ಲವೆನ್ನುವ ಅನುಮಾನ ಇದ್ದರೆ ನೋಡುವುದಕ್ಕೆ ಹೋಗುತ್ತಾರೆ. ಇಲ್ಲದಿದ್ದರೆ ಏಕೆ ನೋಡುವುದಕ್ಕೆ ಹೋಗುತ್ತೇವೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ದಿನವೂ ಎದ್ದು? ಪರವಾಗಿಲ್ಲ ಅದು ಒಳ್ಳೆಯ ಗುಣ ಇದೆ. ಹೋಗಿ ಭೇಟಿಯಾಗಿ. ಆದರೆ ಕುರ್ಚಿ ಉಳಿಸಿಕೊಳ್ಳುವುದಕ್ಕೆನ್ನುವುದನ್ನು ಮಾತ್ರ ಮರೆಯಬೇಡಿ. ಇವತ್ತು ಅವರು ಟ್ರಿಬ್ಯುನಲ್ ಹೊರಗಡೆ ಸಂಪೂರ್ಣವಾಗಿ ಮಾತನಾಡುವುದಕ್ಕೆ ಅವರು ತಯಾರು ಇದ್ದಾರೆಯೆ? ಬರೀ ಇಂಟೆರಿಮ್ ಆರ್ಡರ್ ಮೇಲೆ ಇವತ್ತು ಪುನಃ ಅವರು ಇಲ್ಲಿಗೆ 15ನೇ ಆಗಸ್ಟ್ ಆದಮೇಲೆ ಬರುತ್ತೇನೆಂದು ಹೇಳಿದ್ದಾರೆ. ಬಂದಾಗ ಕೂಡ ಇದೇ ಹೇಳುತ್ತಾರೋ ಹೇಗೆ ಅದನ್ನೂ ಕೂಡ ತಾವು ಕ್ಲಾರಿಫೈ ಮಾಡಲಿಲ್ಲ. ಅಧ್ಯಕ್ಷರೇ, ತಮಗೂ ಕೂಡ ಗೊತ್ತಿದೆ, ಸುಪ್ರೀಂಕೋರ್ಟ್ ಆದೇಶ ಬಂದಿದೆ. ನಾನು ತಮಿಳುನಾಡಿಗೆ ಹೋಗಿ ಈ ಡಿಸ್‌ಪ್ಯೂಟ್ ಬಗ್ಗೆ ಮಾತನಾಡಿ ಬರುತ್ತೇನೆಂದು ಹೇಳಿದ್ದೇನೆಯೇ ಹೊರತಾಗಿ ನಾನು ಏನು ಮಾತನಾಡುತ್ತೇನೆ, ಮೋಡ್ ಆಫ್ ಟಾಕ್ಸ್ ಏನು ಅಥವಾ ಗೈಡ್‌ಲೈನ್ಸ್ ಏನು ಯಾವರೀತಿಯಾಗಿ ಹೋಗಬೇಕು ಎನ್ನತಕ್ಕದ್ದನ್ನು ಯಾರಿಗೂ ಹೇಳಿಲ್ಲ. ಇಲ್ಲದಿದ್ದರೆ ಏನು ಮೆಸೇಜ್ ಹೋಗುತ್ತದೆ? ಮೊನ್ನೆ ಇದೇ ರೀತಿಯಾಗಿ 5 ಟಿ.ಎಂ.ಸಿ ನೀರು ಬಿಡುವಾಗ ಇದೇ ರೀತಿ ಮಾಡಿದರು. ಒಂದೊಂದು ಸಾರಿ ಬಹಳ ಬುದ್ದಿವಂತಿಕೆ ಉಪಯೋಗ ಮಾಡುತ್ತೀರಿ. ಒಂದು ಸಣ್ಣ ಚೀಟಿ ಬರೆದುಕೊಟ್ಟರು ನನಗೊಂದು ಮತ್ತು ಮಾನ್ಯ ಯಡಿಯೂರಪ್ಪನವರಿಗೊಂದು ಏನು? ನಾನು ನೀರು ಬಿಡುವುದನ್ನು ನಿರ್ಧಾರ ಮಾಡಿದ್ದೇನೆ. ಇದು for information ಅಂದರೆ ನಾನು ಮಾಡುವುದು ಮಾಡುತ್ತೇನೆ ಅದರ ಪರಿಣಾಮವಾಗುವುದು ಆಗುತ್ತದೆ ಅದನ್ನು ತಿಳಿಸುತ್ತಿದ್ದೇನೆ ಅಷ್ಟೆ, ಅಂದರೆ ಇದರ ಅರ್ಥ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡ ಹಾಗೆಯೇ? ನಮ್ಮನ್ನು ಕನ್ಸಲ್ಟ್ ಮಾಡಿದ ಹಾಗೆಯೇ? "I am intending to release 5 T.M.C. of water. This is for your information" ಎಂದು ಬರೆದು ತಿಳಿಸಿದ್ದರು. ಅದೇ ರೀತಿಯಾಗಿ "I am going to Madras, this is for your information" ಅಂದರೆ ಅದರ ಅರ್ಥ ನೀವು ನಮ್ಮನ್ನು ಕನ್ಸಲ್ಟ್ ಮಾಡಿದ ಹಾಗೆ. ಹಾಗೂ ಕಾನ್ಫಿಡೆನ್ಸ್‌ಗೆ ತೆಗೆದುಕೊಂಡ ಹಾಗೆ ಆಗುತ್ತದೆಯೇ? ಅದಕ್ಕೆ ಮಾನ್ಯ ಕೆ.ಹೆಚ್. ಪಾಟೀಲರು ಒಂದು ಕತೆಯನ್ನು ಹೇಳುತ್ತಿದ್ದರು. "ಮಗ ಬಹಳ ಹಠವಾದಿ ಇದ್ದ, ತಂದೆಗೆ ಕೇಳಿದ, ಅಪ್ಪ ಪಕ್ಕದೂರಿನಲ್ಲಿ ಜಾತ್ರೆಯಾಗುತ್ತಿದೆ ನಾನು ಹೋಗಲಾ ಬೇಡವಾ ಅಂತ. ತಂದೆ ಹೇಳಿದ ಬೇಡಪ್ಪಾ; ಎರಡನೆಯ ಸಾರಿ ಕೇಳಿದ ಅಪ್ಪ ನಾನು ಹೋಗಬೇಕು ಹೇಗೆ ಮಾಡಲಿ ಅಂತ, ಬೇಡಪ್ಪಾ ಅಂತ ಹೇಳಿದ್ದೇನೆ ಮತ್ತೆ ಹೋಗುತ್ತೇನೆ ಅಂತಿಯಾ ಅಂದ. ಕೊನೆಯಲ್ಲಿ ಮೂರನೆಯ ಸಲ ನೋಡಪ್ಪ ನಾನು ಎರಡು ಸಲ ಕೇಳಿದ್ದೇನೆ ಇದು ಮೂರನೆಯ ಸಲ. ನೀನು ಹೋಗು ಅಂದರೂ ಹೋಗುತ್ತೇನೆ ಬೇಡ ಅಂದರೂ ಹೋಗುತ್ತೇನೆ ಏನೂ ಹೇಳುತ್ತಿಯಾ ಹೇಳು ಅಂದ. ಹಾಗೆ ಮಾನ್ಯ ಜೆ.ಹೆಚ್. ಪಟೇಲರು ನಮ್ಮ ಮುಖ್ಯಮಂತ್ರಿಗಳು ಮಾತುಗಾರರು, ಅವರು ಏನು ಹೇಳಿದರು ಅಂದರೆ ನೀವು ಮದ್ರಾಸಿಗೆ ಹೋಗು ಅಂದರೂ ಹೋಗುತ್ತೇನೆ, ಬೇಡವೆಂದರೂ ಹೋಗುತ್ತೇನೆ ಏನು ಹೇಳುತ್ತೀರಿ ಹೇಳಿ ಎಂದು. ಅಂದರೆ ಇದು ಅಪೊಸಿಷನ್‌ನವರನ್ನು ಕಾನ್ಫಿಡೆನ್ಸ್‌ಗೆ ತೆಗೆದುಕೊಂಡ ಹಾಗೆ ಆಗುತ್ತದೆಯೇ? ಇಂತಹ ಒಂದು ಹೇಳಿಕೆಯನ್ನು ಹೇಳಿ, ಅದಕ್ಕೆ ಎಷ್ಟು ಅನ್ವಯಿಸುತ್ತದೆಯೋ ಅಷ್ಟು ಹೇಳಬೇಕು. ಈಗ ನಾನು ಅಸೆಂಬ್ಲಿಯಲ್ಲಿದ್ದೇವೆ ಕಾಡಿನಲ್ಲಿ ಇಲ್ಲ. ಮಾನ್ಯ ಕಾಡುಮಂತ್ರಿಗಳು ಏಕೆ

ಮಾತನಾಡುತ್ತಾರೆ? ಅದಕ್ಕಾಗಿ ಇದರ ಬಗ್ಗೆ ಅವರು ಏನೂ ಕೂಡ ಹೇಳಿಲ್ಲ, ತಪ್ಪು ತಿಳುವಳಿಕೆ ಈ ಮಾಹಿತಿ ಜನರಿಗೆ ಹೋಗುವುದು ಬೇಡ. ನಾನು ಅಪೊಸಿಷನ್‌ದವರಿಗೆ ಕನ್ಸಲ್ಟ್ ಮಾಡಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗಿದ್ದೇನೆನ್ನತಕ್ಕ ಮಾತನ್ನು ಹೇಳತಕ್ಕದ್ದಲ್ಲ. ತಾವು ಈ ಸಂದರ್ಭದಲ್ಲಿ ವಿರೋಧಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಇನ್ನೂ ಸೀಕ್ರೆಟ್ ಇದ್ದಾವೆ ಕೇಳಿ ಅಂದರು. ಆ ಸಿಕ್ರೆಟ್ ಏನಿದೆ ಅದು ಇನ್ನು ನಮಗೆ ಗೊತ್ತಿಲ್ಲ. ಅಂದರೆ ಸೀಕ್ರೆಟ್ ನಮಗೆ ಗೊತ್ತಿಲ್ಲದಾಗ ನಾವೇನು ಹೇಳತಕ್ಕದ್ದು? ಈ ಹೌಸ್‌ಗೆ ಸೀಕ್ರೆಟ್ ಗೊತ್ತಿಲ್ಲವೆಂದರೆ ಮತ್ತೆ ಯಾರಿಗೆ ಗೊತ್ತಾಗಬೇಕು? ನಿಮ್ಮಿಬ್ಬರ ಸೀಕ್ರೆಟ್ ಟಾಕ್ಸ್ ಡಿಸ್‌ಕ್ಲೋಸ್ ಮಾಡಿಲ್ಲ. ಕೊನೆಗೆ ನೀರು ಬಿಟ್ಟಾಗ ಅದು ಡಿಸ್‌ಕ್ಲೋಸ್ ಹಾಗೆ ಆಗು-ತ್ತದೆ. ನೀರಂತೂ ಯಾರೂ ಹಿಡಿದು ಇಡುವುದಕ್ಕಾಗುವುದಿಲ್ಲ. ನೀವು ಹೇಳಿದಿರಿ ನಾನು ಜೇಬಿನಲ್ಲಿ ಒಯ್ದಿದ್ದೇನೆಯೇ ಎಂದು. ಜೇಬಿನಲ್ಲಿ ಒಯ್ಯಕ್ಕೆ ಆಗುವುದಿಲ್ಲ. ಅದನ್ನು ಕೈಯಲ್ಲೂ ಹಿಡಿದುಕೊಂಡು ಹೋಗುವುದಕ್ಕಾಗುವುದಿಲ್ಲ. ನೀರು ಹೋಗುವುದಂತೂ ಗೊತ್ತೇ ಆಗುತ್ತದೆ. ಈಟ್ ಈಸ್ ಎ ಫ್ಯಾಕ್ಟ್ ಅದಕ್ಕಾಗಿ ಅದೇನು ನಿಮ್ಮ ಸೀಕ್ರೆಸಿ ಇದೆ ಅದು ಡಿಸ್‌ಕ್ಲೋಸ್ ಮಾಡಿ near the truth ಬನ್ನಿ. ಏಕೆಂದರೆ ಬಹಳ ಗಂಭೀರವಾದ ವಿಷಯವನ್ನು ನಾನು ಇಟ್ಟುಕೊಂಡಿದ್ದೇನೆಂದು ನೀವು ಹೇಳಿದಿರಿ. Near to truth ಅದು ಬರಲಿ. ಅದೆಲ್ಲವನ್ನೂ ತಾವು ಸ್ಪಷ್ಟಪಡಿಸಲಿಕ್ಕೆ ಅವಕಾಶ ಮಾಡಿ ಕೊಡ-ಬೇಕು ಚರ್ಚೆ ಮಾಡುವುದಕ್ಕೆ. ಏಕೆಂದರೆ ಇದು ಡೆಫನೆಟ್ ವಿಷಯವಿದೆ. ಮೊನ್ನೆ 5ನೇ ತಾರೀಖು ಆದಂತಹ ವಿಷಯವಿದೆ. ತಾವು ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಪರ್ಮಿಷನ್ ಕೊಡಬೇಕು. ಏಕೆಂ-ದರೆ ಚರ್ಚೆಯಲ್ಲಿ ಅನೇಕ ವಿಷಯಗಳು ಬರುತ್ತವೆ. ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ಇನ್ನೊಮ್ಮೆ ತಮ್ಮ ಮುಖಾಂತರ ಅವರಿಗೆ ಕೇಳಿಕೊಳ್ಳುತ್ತೇನೆ. ಅವರೂ ಕೂಡ ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಉಪಾಧ್ಯಕ್ಷರು:- ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿರುವುದರಿಂದ ನಮ್ಮ ಅನುಮತಿ-ಯನ್ನು ನಿರಾಕರಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಇದೇನಿದು?

ಶ್ರೀ ಯು.ಆರ್. ಸಭಾಪತಿ:- ಇದು ಬೇಜವಾಬ್ದಾರಿಯ ಉತ್ತರ. ಇದು ಬೇಜವಾಬ್ದಾರಿಯ ನಿರ್ಧಾರ. ಇದನ್ನು ನಾವು ವಿರೋಧ ಮಾಡಲೇಬೇಕಾಗುತ್ತದೆ. ಇಲ್ಲಿ ಹಾರಿಕೆಯ ಉತ್ತರ ಕೊಡುತ್ತೇವೆ ಅಂದರೆ ಹೇಗೆ? ನಾವು ವಿರೋಧ ಮಾಡಿ ಧರಣಿ ಕುಳಿತುಕೊಳ್ಳುತ್ತೇವೆ.

(ಈ ಹಂತದಲ್ಲಿ ಕರ್ನಾಟಕ ಕಾಂಗ್ರೆಸ್ ಪಕ್ಷದ ಸದಸ್ಯರು, ಯು.ಆರ್. ಸಭಾಪತಿಯವರು ಹಲವಾರು ವಿರೋಧಪಕ್ಷದ ಸದಸ್ಯರು ಅಧ್ಯಕ್ಷಪೀಠದ ಮುಂದಿದ್ದರು)

(ಗೊಂದಲ)

ಉಪಾಧ್ಯಕ್ಷರು:- ಈಗಾಗಲೇ ಇದರ ಬಗ್ಗೆ ತೀರ್ಪು ಕೊಡಲಾಗಿದೆ. ನೀವು ಈ ರೀತಿ ಪ್ರಶ್ನೆ ಕೇಳಬಾರದು? ನೀವು ಚೇರ್‌ಗೆ ಈ ರೀತಿ ಮಾಡಬಾರದು. ನೀವು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ. ಯಾರೂ ಅಧ್ಯಕ್ಷಪೀಠದ ಮುಂದೆ ನಿಂತು ಮಾತನಾಡಬಾರದು. ನೀವು ಛೇರ್‌ಗೆ ಕೊಶ್ಚನ್ ಮಾಡಬಾರದು. ತಾವು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ಗೌರವಯುತವಾಗಿ ಮಾತನಾಡಿ. ತಾವು ಇಲ್ಲಿಯವರೆಗೆ ಬರಬಾರದು. ತಾವು ನಿಮ್ಮ ನಿಮ್ಮ ಸ್ಥಾನಗಳಲ್ಲಿ ನಿಂತು ಮಾತನಾಡಿರಿ. ಈಗಾಗಲೇ ಅದರ ಬಗ್ಗೆ ತೀರ್ಪು ಕೊಡಲಾಗಿದೆ. ಅದರ ಬಗ್ಗೆ ತೀರ್ಮಾನವಾಗಿದೆ. ಈಗ ಸಭಾನಾಯಕರು ಆಯವ್ಯಯದ ಬಗ್ಗೆ ಉತ್ತರವನ್ನು ಕೊಡಬೇಕು.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ:- ಸಭಾಧ್ಯಕ್ಷರೇ, ತಾವು ರೂಲಿಂಗ್ ಕೊಟ್ಟಮೇಲೆ ಅದರ ಬಗ್ಗೆ ಮಾತನಾಡುತ್ತಿದ್ದಾರೆ ಅದು ತಪ್ಪು. ತಮ್ಮ ತೀರ್ಮಾನವನ್ನು ಈ ತರಹ ಮಾನ್ಯ ಸದಸ್ಯರು ವಿರೋಧ ಮಾಡುತ್ತಿದ್ದರೆ ಸಭೆಯನ್ನು ನಡೆಸಬೇಕೋ ಬೇಡವೊ?

ಶ್ರೀ ಎಸ್. ಗುರುಪಾದಪ್ಪ ನಾಗಮಾರಪಲ್ಲಿ:- ನಿಮ್ಮ ನಿಮ್ಮ ಜಾಗಗಳಲ್ಲಿ ಕುಳಿತುಕೊಂಡು ಮಾತನಾಡಿ.

ಉಪಾಧ್ಯಕ್ಷರು:- ನಾನು ದಯಮಾಡಿ ವಿರೋಧಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಈಗಾಗಲೇ ತೀರ್ಪುಕೊಡಲಾಗಿದೆ. ತಾವು ದಯಮಾಡಿ ಕೂರಬೇಕು. ಸಭಾನಾಯಕರು ಉತ್ತರವನ್ನು ಕೊಡುತ್ತಾರೆ.

ಶ್ರೀ ಎಂ. ಶ್ರೀನಿವಾಸ್:- ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕದ ನಾಲ್ಕು ಕೋಟಿಯ ಜನರ ವಿಚಾರದಲ್ಲಿ ಇಷ್ಟು ಆತುರವಾಗಿ ಇಲ್ಲಿ ಹೇಳಿಬಿಟ್ಟರೆ ಅದನ್ನು ಕೇಳಿಕೊಂಡು ಕುಳಿತುಕೊಳ್ಳುವುದಕ್ಕಲ್ಲ ನಾವು ಇಲ್ಲಿ ಬಂದಿರುವುದು. ಈ ಸದನದಲ್ಲಿ ನಾವು ಮಾತನಾಡುವುದಕ್ಕೆ ಹಕ್ಕಿದೆ. ಉತ್ತರ ಸಮಂಜಸವಾಗಿ ಬಂದಿಲ್ಲ.

ಉಪಾಧ್ಯಕ್ಷರು:- ಈಗ ಸಭಾನಾಯಕರು ಉತ್ತರ ಕೊಡಲಿ.

ಶ್ರೀ ಎಂ. ಶ್ರೀನಿವಾಸ್:- ಸರಿಯಾದಂತಹ ಉತ್ತರ ಕೊಡಲಿ. ಇಲ್ಲದಿದ್ದರೆ ನಾವು ಧರಣಿ ಕೂಡುತ್ತೇವೆ, ಇಲ್ಲದಿದ್ದರೆ ವಾಕ್‌ಔಟ್ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೇ, ಕೆಲವು ವಿಚಾರಗಳನ್ನು ನಾವು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಬೇಕೆಂದು ಇದ್ದೇವೆ.

ಉಪಾಧ್ಯಕ್ಷರು:- ಈಗ ನಾನು ಸಭಾನಾಯಕರನ್ನು ಕರೆದಿದ್ದೇನೆ; ಅವರು ಉತ್ತರವನ್ನು ಕೊಡುತ್ತಾರೆ. ತಾವೆಲ್ಲರೂ ದಯವಿಟ್ಟು ಕೂರಬೇಕು.

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ಖರ್ಗೆಯವರು ಒಂದು ಒಳ್ಳೆಯ ಉದಾಹರಣೆಯನ್ನು ಕೊಟ್ಟರು. ನೀವು ಹೇಳಿದರೂ ಹೋಗುವವರೇ ಹೇಳದಿದ್ದರೂ ಹೋಗುವವರೇ ಎಂದು ಹೇಳಿದರು. ತಾವು ಕುಳಿತುಕೋಬಹುದು ನನ್ನದೇನೂ ಅಭ್ಯಂತರವಿಲ್ಲ. ಆದರೆ ಒಂದು ಮಾನ್ಯ ಉಪಾಧ್ಯಕ್ಷರ ತೀರ್ಮಾನವಾದ ಮೇಲೆ ಅದನ್ನು ಕೊಶ್ಚನ್ ಮಾಡಬಾರದು.

ಉಪಾಧ್ಯಕ್ಷರು:- ನಾನು ಮಾನ್ಯ ವಿರೋಧಪಕ್ಷದ ನಾಯಕರಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾವು ತಮ್ಮ ರೂಲಿಂಗನ್ನು ಪ್ರಶ್ನೆ ಮಾಡುತ್ತಿಲ್ಲ. ತಾವು ನಿಲುವಳಿ ಸೂಚನೆಗೆ ಅವಕಾಶ ಸಿಗುವುದಿಲ್ಲವೆಂದಿರಿ, ನಿಮಗೆ ಕನ್ವಿನ್ಸ್ ಆಗಲಿಲ್ಲ. ಅದಕ್ಕೆ ಒಪ್ಪಿಗೆಯಿಲ್ಲ ಎಂದಿದ್ದೀರಿ. ಅದರ ಬಗ್ಗೆ ನನ್ನ ಅಭ್ಯಂತರವಿಲ್ಲ. ನಾನು ನಿಂತಿರುವುದು ಏಕೆಂದರೆ, ಐದಾರು ಗಂಟೆಗಳ ಕಾಲ ಎಲ್ಲಾ ವಿಷಯಗಳನ್ನು ಬದಿಗೊತ್ತಿ ನಿಲುವಳಿ ಸೂಚನೆ ಮೂಲಕ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದಾಗ ಯಾವುದೇ ಒಂದು ಸಂದರ್ಭದಲ್ಲಿ ಈವೊಂದು ಪ್ರತಿಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಜನಹಿತದೃಷ್ಟಿಯಿಂದ ನಾವೇನು ಕೆಲವು ಪ್ರಶ್ನೆಗಳನ್ನು ಕೇಳಿದೆವು ಕೆಲವು ಕ್ಲಾರಿಫಿ-ಕೇಷನ್ ಕೇಳಿದೆವು. ಈ ಸರ್ಕಾರ ರೈತರಿಗೆ ದ್ರೋಹ ಮಾಡುತ್ತಿದೆ ನಾವು ಕೇಳಿದ ಪ್ರಶ್ನೆಗೆ ಉತ್ತರ ಕೊಡಲಿಲ್ಲ.

ಉಪಾಧ್ಯಕ್ಷರು:- ತಾವು ಮಾತನಾಡಿ.

(INTERRUPTION)

Sri M.C. NANAIAH:- Sir, I am raising a point of order.

5.50 ಪಿ.ಎಂ.

(ಗೊಂದಲ)

ಉಪಾಧ್ಯಕ್ಷರು:- ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. . .

ಶ್ರೀ ಬಿ.ಎಸ್. ಯಡಿಯೂರಪ್ಪ:- ಕಾವೇರಿ ನದಿನೀರಿನ ಬಗ್ಗೆ ನಾವೂ ಹೋರಾಟ ಮಾಡಿ-ದ್ದೇವೆ, ಪ್ರಾಣ ಕೊಟ್ಟಿದ್ದೇವೆ. ನಿಮ್ಮಷ್ಟೇ ಕಳಕಳಿ ನಮಗೂ ಇದೆ.

ಉಪಾಧ್ಯಕ್ಷರು:- ಯಡಿಯೂರಪ್ಪನವರೇ, ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅದು ಏನು ಎಂದು ತಾವು ಸೌಜನ್ಯದಿಂದ ಕೇಳಿ. ಏನು ಹೇಳುತ್ತಾರೋ ಕೇಳಿ.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಸಭಾಧ್ಯಕ್ಷರೇ . .

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ.

ಶ್ರೀ ಎಂ.ಸಿ. ನಾಣಯ್ಯ:- ನಾನು ಹೇಳಿದ ಮೇಲೆ ಅವರು ಹೇಳಲಿ. ಮಾನ್ಯ ಸಭಾಧ್ಯಕ್ಷರೇ, ಈಗ ಮಾನ್ಯ ವಿರೋಧಪಕ್ಷದ ನಾಯಕರು ತಾವು ನಿಲುವಳಿ ಸೂಚನೆಗೆ ಸಮ್ಮತಿಯನ್ನು ನಿರಾಕರಿಸಿದ

ಮೇಲೆ ಕೆಲವು ವಿಚಾರಗಳನ್ನು ಹೇಳಲಿಕ್ಕೆಂದು ಅವರು ಎದ್ದುನಿಂತರು. ಆ ಸಂದರ್ಭದಲ್ಲಿ ಮಾನ್ಯ ಮಿತ್ರರಾಗಿರತಕ್ಕಂಥ ಶ್ರೀನಿವಾಸ್‌ರವರು ತಮ್ಮ ತೀರ್ಪನ್ನು ಪ್ರತಿಭಟಿಸುವುದರ ಮುಖಾಂತರ . . .

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ:- ನಾನು ಹೇಳುವುದನ್ನು ಸ್ವಲ್ಪ ಕೇಳಬೇಕಲ್ಲಾ?

ಉಪಾಧ್ಯಕ್ಷರು:- ತಾವು ಅವರು ಹೇಳುವುದನ್ನು ಕೇಳಿ. ಅವರು ಪಾಯಿಂಟ್ ಆಫ್ ಆರ್ಡರ್ ಏನು ಹೇಳುತ್ತಾರೆ ಕೇಳಿ.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ:- ನೀವು ಮಾಡಿರತಕ್ಕಂಥಾದ್ದು ಹೇಳುತ್ತೇನೆ ಕೇಳಿ. ಇಲ್ಲಿ ಗೂಂಡಾಗಿರಿ ಮಾಡುವುದಲ್ಲ.

(ಗೊಂದಲ)

ಉಪಾಧ್ಯಕ್ಷರು:- ತಾವು ಸಮಾಧಾನದಿಂದ ಕೇಳಬೇಕು. ತಾವು ವೀರಾವೇಷದಿಂದ ಮಾತನಾಡಿದರೆ ಹೇಗೆ? ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ, ಎಲ್ಲರೂ ಸಮಾಧಾನದಿಂದ ಮಾತನಾಡಬೇಕು.

ಶ್ರೀ ಎಂ. ಶ್ರೀನಿವಾಸ್:- ತಾವು ರೆಕಾರ್ಡ್ಸ್ ತರಿಸಿ ನೋಡಿ.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ವಿರೋಧಪಕ್ಷದ ನಾಯಕರು.

(ಗೊಂದಲ)

ಉಪಾಧ್ಯಕ್ಷರು:- ಅವರು ಏನು ಹೇಳುತ್ತಾರೆ ಎಂದು ತಾವು ಕೇಳಬೇಕು. ಶ್ರೀನಿವಾಸ್‌ರವರೇ, ನೀವು ಕುಳಿತುಕೊಳ್ಳಿ.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ವಿರೋಧಪಕ್ಷದ ನಾಯಕರು ಕೇಳಬೇಕಾಗುತ್ತದೆ. ನಾನು ಕ್ರಿಯಾಲೋಪ ಎತ್ತಿದ್ದೇನೆ, ಕೇಳಿ. ಹೀಗೆ ಕೈಯಾಡಿಸುವುದನ್ನು ಬಿಟ್ಟುಬಿಡಿ. ಯಾರಿಗೆ ಕೈಯಾಡಿಸುವುದು?

ಉಪಾಧ್ಯಕ್ಷರು:- ಈ ರೀತಿ ಮಾತನಾಡಿದರೆ ಸರಿಯಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:- ನನ್ನದು ಕ್ರಿಯಾಲೋಪ ಇದೆ.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ:- ನಾನು ಹೇಳುವುದನ್ನು ಮೊದಲು ಕೇಳಿ. ನಂತರ ನೀವು ಮಾತನಾಡಿ.

ಶ್ರೀ ಎಂ. ಶ್ರೀನಿವಾಸ್:- ನೀವು ಕುಳಿತುಕೊಳ್ಳಿ.

ಶ್ರೀ ಎಂ.ಸಿ. ನಾಣಯ್ಯ:- ನಾನು ಕುಳಿತುಕೊಳ್ಳುವುದಕ್ಕೆ ಇರತಕ್ಕಂಥಾದ್ದು ಅಲ್ಲ. ವಾಟಾಳ್ ನಾಗರಾಜ್‌ರವರೇ ತಾವು ಕ್ರಿಯಾಲೋಪ ಎತ್ತಿದ್ದೀರಿ.

ಉಪಾಧ್ಯಕ್ಷರು:- ದಯವಿಟ್ಟು ತಾವು ಕುಳಿತುಕೊಳ್ಳಿ. ನಾಗರಾಜ್‌ರವರೇ, ತಾವು ದಯಮಾಡಿ ಕುಳಿತುಕೊಳ್ಳಿ. ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು:- ನಾನು ಅವರನ್ನು ಕರೆದಿದ್ದೇನೆ. ಅವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ. ಸಂಸದೀಯ ಸಚಿವರು ಏನು ಹೇಳುತ್ತಾರೆ ಎಂಬುದನ್ನು ತಾವು ದಯಮಾಡಿ ಕೇಳಬೇಕು.

ಶ್ರೀ ವಾಟಾಳ್ ನಾಗರಾಜ್:- ತಾವು ಏತಕ್ಕೆ ಈ ತರಹ.

ಉಪಾಧ್ಯಕ್ಷರು:- ಯಾವ ತರಹಾನೂ ಇಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ:- ಈಗ ನನ್ನ ಕ್ರಿಯಾಲೋಪ ಆದ ಮೇಲೆ ವಾಟಾಳ್‌ರು ತಮ್ಮ ಕ್ರಿಯಾಲೋಪವನ್ನು ಎತ್ತಲಿ. ತಾವು ಅದಕ್ಕೆ ತೀರ್ಪನ್ನು ಕೊಡಿ. ನಾನು ಕ್ರಿಯಾಲೋಪ ಎತ್ತಿರತಕ್ಕಂಥಾದ್ದು, ನಿಲುವಳಿ ಸೂಚನೆಗೆ ತಾವು ತಮ್ಮ ಸಮ್ಮತಿಯನ್ನು ನಿರಾಕರಿಸಿಯಾದ ಮೇಲೆ, ಸರ್ಕಾರದಿಂದ ಬಂದಿರತಕ್ಕಂಥ ಉತ್ತರ ಅವರಿಗೆ ಸಮಾಧಾನ ತಂದಿರಲಿಕ್ಕಿಲ್ಲ. ನಿಜವಾಗಿಯೂ, ಯಾವಾಗಲೂ ಆಡಳಿತ ಪಕ್ಷ ಕೊಡತಕ್ಕಂಥ ಉತ್ತರ ವಿರೋಧಪಕ್ಷದವರಿಗೆ ಸಮಾಧಾನ ತರುವುದಿಲ್ಲ. ಸಾಧಾರಣವಾಗಿ ಸಮಾಧಾನ ಆಗುವುದಿಲ್ಲ. ಆದರೆ ನಾವು ಸರ್ಕಾರದಿಂದ, ವಾಸ್ತವಿಕವಾಗಿರತಕ್ಕಂಥ ವಿಚಾರವನ್ನು ಎತ್ತಿ ರಾಜ್ಯದ ಹಿತದೃಷ್ಟಿಯಿಂದ, ರೈತರ ಹಿತದೃಷ್ಟಿಯಿಂದ ತೆಗೆದುಕೊಂಡಿರತಕ್ಕಂಥ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ವಿವರಿಸಿಯಾದ ಮೇಲೆ, ಅವರಿಗೆ ಅದು ಸಮಾಧಾನ ತರಲಿಲ್ಲ. ಆದ್ದರಿಂದ ಅವರು ಅದರ ಬಗ್ಗೆ ಒಂದು ವಿಚಾರವನ್ನು ಎತ್ತಿ, ಬಹುಶಃ ಅವರ ಮುಂದಿನ ಕ್ರಮ ಏನು ಹೇಳುತ್ತಾ ಇರತಕ್ಕಂಥಾದ್ದಕ್ಕೆ ಅವರು ಮಾತುಕತೆಯಾಡಲಿಕ್ಕೆ ಹೊರಟರು. ನಮಗೆ ಅದಕ್ಕೆ ಅಭ್ಯಂತರ ಇಲ್ಲ. ಏಕೆಂದರೆ ಅವರು ಏನಾದರೂ ಸಭಾತ್ಯಾಗ ಮಾಡಬೇಕಾದರೂ ಒಂದು ಕ್ರಮ ತೆಗೆದುಕೊಳ್ಳಬೇಕಾದರೂ ಹೇಳಿ ಹೋಗಬೇಕಲ್ಲಾ. ಹಾಗೆ ಹೇಳುವುದಕ್ಕೆ ಮಾನ್ಯ ವಿರೋಧಪಕ್ಷದ ನಾಯಕರು ಎದ್ದಂಥ ಸಂದರ್ಭದಲ್ಲಿ, ಮಾತುಕತೆ ಆಡುತ್ತಾ ಇರತಕ್ಕಂಥ ಸಂದರ್ಭದಲ್ಲಿ, ಮಿತ್ರರಾಗಿರತಕ್ಕಂಥ ಶ್ರೀನಿವಾಸ್‌ರವರು, ತಾವು ದಯವಿಟ್ಟು ಆಮೇಲೆ ಮಾತನಾಡಬೇಡಿ. ನಾನು ಇಲ್ಲಿಂದ ನೋಡಿರತಕ್ಕಂಥಾದ್ದು. ನಾನು ಬಹಳ ವರ್ಷ ವಿರೋಧಪಕ್ಷದಲ್ಲಿ ಕೆಲಸ ಮಾಡಿದ್ದೇನೆ. ದಯವಿಟ್ಟು ಇದನ್ನು ತಿಳಿದುಕೊಳ್ಳಿ. ನೀವು ಈಗ ವಿರೋಧಪಕ್ಷಕ್ಕೆ ಬಂದಿದ್ದೀರಿ. ನೀವು ನಮ್ಮ ಜೊತೆಯಲ್ಲೇ ಇದ್ದವರು, ಕಡೆಗೆ ಹೋದವರು ತಾನೇ. ಆದ್ದರಿಂದ ನಾನು ಹೇಳುತ್ತೇನೆ, ಅವರು ಮಾತನಾಡುತ್ತಾ ಇರತಕ್ಕಂಥ ಸಂದರ್ಭದಲ್ಲಿ, ತಾವು ಅನುಮತಿಯನ್ನು ನಿರಾಕರಣೆ ಮಾಡಿರತಕ್ಕಂಥ ವಿಚಾ-

ರಕ್ಕೆ ಸಂಬಂಧಪಟ್ಟ ಹಾಗೆ, ಪ್ರತಿಭಟನೆಯನ್ನು ವ್ಯಕ್ತ ಮಾಡಿ, ಮೇಜಿನ ಮೇಲಿರತಕ್ಕಂಥ ಅವರ ಕಾಗದ ಪತ್ರಗಳನ್ನು ತೆಗೆದು ಬಿಸಾಡಿರತಕ್ಕಂಥಾದ್ದು... ಅಂದರೆ, ಇದು ನಾನು ಹೇಳುತ್ತೇನೆ. ತಮ್ಮ ಈ ಸ್ಥಾನದ ಗೌರವಕ್ಕೆ ತಾವು ಕೊಟ್ಟಿರತಕ್ಕಂಥ ತೀರ್ಪಿಗೆ ಅವರ ಪ್ರತಿಭಟನೆಯನ್ನು ಮೇಜಿನ ಮೇಲಿರುವ ಕಾಗದ ಪತ್ರಗಳನ್ನು ಎಸೆಯುವುದರ ಮುಖಾಂತರ ಮಾಡಿದರೆ ಇದು ಸದನದ ಹಕ್ಕುಚ್ಯುತಿಯಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು:- ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ.ಸಿ. ನಾಣಯ್ಯ:- ಹೌದು, ಹಕ್ಕುಚ್ಯುತಿಯಾಗುತ್ತದೆ.

ಶ್ರೀ ಎಂ. ಶ್ರೀನಿವಾಸ್:- ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಉಪಾಧ್ಯಕ್ಷರು:- ಅವರು ಮಾತನಾಡಿ ಮುಗಿದ ಕೂಡಲೇ ತಾವು ಮಾತನಾಡಿ.

ಶ್ರೀ ಎಂ. ಶ್ರೀನಿವಾಸ್:- ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಉಪಾಧ್ಯಕ್ಷರು:- ತಾವು ಕೂಡಿರಿ. ಪದೇಪದೇ ಎದ್ದುನಿಂತರೆ ನಾನು ಎಷ್ಟು ಸಲ ಹೇಳುವುದು? ಅವರು ಮಾತನಾಡುತ್ತಿದ್ದಾಗ ತಾವು ಕುಳಿತುಕೊಳ್ಳಬೇಕು.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಸಭಾಧ್ಯಕ್ಷರೇ, ನಾನು ಎತ್ತುತ್ತಿರತಕ್ಕಂಥ ವಿಚಾರ, ಈ ಸದನದ ಅತ್ಯುತ್ತಮವಾಗಿರತಕ್ಕಂಥ ಆ ಸ್ಥಾನಕ್ಕೆ ಹಕ್ಕುಚ್ಯುತಿ ಎಸಗಿರತಕ್ಕಂಥದ್ದು. ಅವರು ಮಾತನಾಡುತ್ತಾ ಇರುವಾಗ, ಯಡಿಯೂರಪ್ಪನವರು ನೋಡಲಿಲ್ಲ. ಶ್ರೀಮಾನ್ ಯಡಿಯೂರಪ್ಪನವರು ಅವರು ಮಾತನಾಡುತ್ತಾ ಇರತಕ್ಕಂಥಾದ್ದು ಸರಿ. ಅವರು ಪಕ್ಷದ ವತಿಯಿಂದ ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತಾ ಇರತಕ್ಕಂಥಾದ್ದು ಸರಿ. ಹೌದು, ಅದನ್ನು ನಾನು ನೋಡಿದ್ದೇನೆ. ಆ ಸಂದರ್ಭದಲ್ಲಿ ತಾವೂ ಕೂಡ ನೋಡಿದ್ದೀರಿ. ಒಂದು ನಿಮಿಷ ಕೇಳಿ. ನಾನು ಈ ಭಾಗದಿಂದ ನೋಡಿದ್ದೇನೆ. ತಾವು ಕೊಟ್ಟಿರತಕ್ಕಂಥ ತೀರ್ಪಿಗೆ.

(ಗೊಂದಲ)

ಶ್ರೀ ಗುರುಪಾದಪ್ಪ ಎಸ್. ನಾಗಮಾರಪಲ್ಲಿ:- ಹೌದು, ಅವರು ಎಸೆದಿದ್ದನ್ನು ನಾವು ನೋಡಿದ್ದೇವೆ.

ಉಪಾಧ್ಯಕ್ಷರು:- ಗುರುಪಾದಪ್ಪನವರೇ, ತಾವು ದಯಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ:- ಯಡಿಯೂರಪ್ಪನವರೇ ನಾನು ಮುಗಿಸಿಬಿಡುತ್ತೇನೆ.

ಶ್ರೀ ಎಂ. ಶ್ರೀನಿವಾಸ್:- ನಾನು ದಯವಿಟ್ಟು ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು:- ಶ್ರೀನಿವಾಸ್‌ರವರೇ, ಅವರದ್ದು ಮುಗಿಯಲಿ ಇರಿ.

ಶ್ರೀ ಎಂ.ಸಿ. ನಾಣಯ್ಯ:- ಏಕೆ ಇಷ್ಟು ಆತುರ? ನೀವು ಸಭಾಧ್ಯಕ್ಷರಿಗೆ ತಪ್ಪು ಮಾಡಿಲ್ಲ ಎಂದು ಹೇಳುವುದಕ್ಕೆ ಇರತಕ್ಕಂಥ ಅವಕಾಶ ನಿಮಗೆ ಇದೆ. ಆದರೆ ಈ ಸದನದ ಈ ಭಾಗದಿಂದ ನೋಡಿರ-ತಕ್ಕಂಥಾದ್ದನ್ನು ನಾನು ಹೇಳಬೇಕಾಗುತ್ತದೆ.

ಶ್ರೀ ಎಂ. ಶ್ರೀನಿವಾಸ್:- ಅಧ್ಯಕ್ಷರೇ,

ಉಪಾಧ್ಯಕ್ಷರು:- ತಾವು ಕುಳಿತುಕೊಳ್ಳಿ.

ಶ್ರೀ ಎಂ. ಶ್ರೀನಿವಾಸ್:- ಕೇಳಿದ ಮಾಹಿತಿ ಬರಲಿಲ್ಲವೆಂದರೆ ಇನ್ನೇನು, ಹೇಗೆ ಮಾತನಾಡ-ಬೇಕಾಗಿತ್ತು?

ಉಪಾಧ್ಯಕ್ಷರು:- ಅವರು ಕ್ರಿಯಾಲೋಪ ಎತ್ತಿದ್ದಾರೆ. ಅವರು ಮಾತು ಮುಗಿಸಿದ ಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ:- ಏನಾದರೂ ಅಚಾತುರ್ಯ ಆದರೆ, ಅದನ್ನು ಸಮರ್ಥನೆ ಮಾಡ-ತಕ್ಕಂಥ ಶಕ್ತಿ ನಿಮಗೂ ಇದೆ, ನಿಮ್ಮ ನಾಯಕರಿಗೂ ಇದೆ. ನಿಮ್ಮ ನಾಯಕರು ಎದ್ದು ನಿಂತು ಮಾತ-ನಾಡುತ್ತಾ ಇರತಕ್ಕಂಥ ಸಂದರ್ಭದಲ್ಲಿ, ಏನು ಮುಂದಿನ ಕ್ರಮವನ್ನು ಕೈಗೊಳ್ಳಬೇಕೆಂದು ನಿಮ್ಮ ನಾಯಕರು ಸದನದಲ್ಲಿ ಪ್ರತಿಪಾದನೆ ಮಾಡುತ್ತಾ ಇದ್ದರು, ನಾಯಕರು ಎದ್ದು ನಿಂತಿರತಕ್ಕಂಥ ಸಂದರ್ಭದಲ್ಲಿ ನೀವೂ ಕೂಡ ಇದನ್ನು ಕುಳಿತುಕೊಂಡು ಕೇಳಬೇಕಾಗಿತ್ತು. ನಾಯಕರ ತೀರ್ಮಾನ ಏನೆಂಬುದನ್ನು ನೀವು ಕೇಳಬೇಕಾಗಿತ್ತು.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್:- ನಮಗೆ ಗೊತ್ತಿದೆ.

ಶ್ರೀ ಎಂ.ಸಿ. ನಾಣಯ್ಯ:- ಗೊತ್ತಿಲ್ಲದೇ ಹೋದರೆ ಇನ್ನೂ ಕೂಡ ಕಲಿಯಬೇಕಾಗುತ್ತದೆ. ಇವತ್ತು ನಿಮ್ಮ ನಾಯಕರು ಎದ್ದುನಿಂತು ಕೆಲವು ವಿಷಯಗಳನ್ನು ಪ್ರತಿಪಾದನೆ ಮಾಡುತ್ತಾ ಇರ-ತಕ್ಕಂಥ ಸಂದರ್ಭದಲ್ಲಿ, ಬೇರೆಯವರು ಕುಳಿತುಕೊಳ್ಳಬೇಕಾಗುತ್ತದೆ. ಆದರೆ ಆ ಸಂದರ್ಭದಲ್ಲಿ, ನಾನು ನೋಡಿರತಕ್ಕಂಥಾದ್ದು, ತಾವೂ ಕೂಡ ಗಮನಿಸಿದಿರಿ. ಈ ಭಾಗದಲ್ಲಿ ಇರತಕ್ಕಂಥ ನಾವೆಲ್ಲರೂ ಗಮನಿ-ಸಿದ್ದೇವೆ. ತಮ್ಮ ತೀರ್ಪಿಗೆ ಪ್ರತಿಭಟನೆಯನ್ನು ವ್ಯಕ್ತಮಾಡುವುದನ್ನು, ಅವರು ಯಾವರೀತಿ ಪ್ರದರ್ಶನ ಮಾಡಬೇಕು ಎಂದು ಹೇಳಿ ಮೇಜಿನ ಮೇಲಿರತಕ್ಕಂಥ ಕಾಗದಪತ್ರಗಳನ್ನು ಬಿಸಾಡಿರತಕ್ಕಂಥಾದ್ದು, ಇದರ ಅರ್ಥ ಏನಾಗುತ್ತದೆ ಎಂದರೆ, ನಿಮ್ಮ ತೀರ್ಪಿಗೆ ಮಾಡಿರತಕ್ಕಂಥ ಪ್ರತಿಭಟನೆಯ ಪ್ರದರ್ಶನ. ಈ ಸದನದ ಹಕ್ಕುಚ್ಯುತಿ, ತಮ್ಮ ಹಕ್ಕುಚ್ಯುತಿಯಾಗುತ್ತದೆ. ಅವರು ಆಗಿಲ್ಲ, ತಾವು ಆ ರೀತಿ ಮಾಡಿಲ್ಲ, ಎಂದು ಹೇಳುವುದಕ್ಕೆ ಅವರಿಗೆ ಅವಕಾಶ ಇದೆ. ಆದರೆ ಅದನ್ನು ಸಂಸದೀಯ ವ್ಯವಹಾರ ಸಚಿವನಾಗಿ ಎತ್ತಬೇಕಾಗಿರತಕ್ಕಂಥಾದ್ದು ನನ್ನ ಕೆಲಸ. ಸದನದಲ್ಲಿ ತಾವು ಕೊಟ್ಟಂಥ ತೀರ್ಪಿಗೆ ತಲೆ ಬಾಗಬೇಕು. ಆ ತೀರ್ಪು ಎಲ್ಲರಿಗೂ ಸಮಾಧಾನ ಕೊಡಲಿಕ್ಕಿಲ್ಲ. ನಿಮಗೆ ಸಮಾಧಾನ ಆಗಿರಲಿಕ್ಕಿಲ್ಲ. ಒಂದು ನಿಮಿಷ ಕೇಳಿ. ತಾವು ಕೊಟ್ಟಿರತಕ್ಕಂಥ ತೀರ್ಪು ವಿರೋಧಪಕ್ಷದವರಿಗೆ ಸಮಾಧಾನ ತಂದಿರಲಿಕ್ಕಿಲ್ಲ. ಆದರೆ

ತೀರ್ಪಿಗೆ ತಲೆಬಾಗಬೇಕಾಗಿರತಕ್ಕಂಥ ನಿರ್ವಿವಾದವಾದ ಕಟ್ಟಳೆಯನ್ನು ನಾವು ಮಾಡಲೇಬೇಕಾಗುತ್ತದೆ. ಅದನ್ನೇ ವಿರೋಧಪಕ್ಷದ ನಾಯಕರು ಮಾಡಿದ್ದಾರೆ. ನಿಮ್ಮ ತೀರ್ಪಿಗೆ ನಾವು ತಲೆಬಾಗುತ್ತೇವೆ ಎಂದು ಅವರು ಹೇಳಿದರು. ಅವರು ವಿಚಾರಗಳನ್ನು ಎತ್ತಲಿಕ್ಕೆ ಹೊರಟಿದ್ದಂಥ ಸಂದರ್ಭದಲ್ಲಿ ಅವರು ಮುಂದಿನ ಕಾರ್ಯಕ್ರಮದ ಬಗ್ಗೆ ಹೇಳಬೇಕು. ಆದರೆ ಪ್ರತಿಭಟನೆಯನ್ನು ವ್ಯಕ್ತಮಾಡುತ್ತಾ ಇರತಕ್ಕಂಥ ಸಂದರ್ಭದಲ್ಲಿ, ಈ ತರಹದ ಪ್ರದರ್ಶನಗಳು, ಅದು ತಮ್ಮ ತೀರ್ಪಿಗೆ ಪ್ರತಿಭಟನೆಯನ್ನು ವ್ಯಕ್ತ ಮಾಡಿ, ಆ ಕಾಗದಪತ್ರಗಳನ್ನು ಎಸೆದು, ಆ ಪ್ರದರ್ಶನ ವ್ಯಕ್ತಮಾಡಿರತಕ್ಕಂಥಾದ್ದು ಏನಿದೆ, ನಾನು ಹೇಳುತ್ತೇನೆ, ಸಂಸದೀಯ ವ್ಯವಹಾರದಲ್ಲಿ, ಸಂಸದೀಯ ವ್ಯವಸ್ಥೆಯಲ್ಲಿ ಖಂಡಿತವಾಗಿಯೂ ಆಗಬಾರದು, ಇದು ಸದನದ ಹಕ್ಕುಚ್ಯುತಿಯಾಗುತ್ತದೆ, ನಮ್ಮ ಗೌರವಕ್ಕೆ ಚ್ಯುತಿಯಾಗುತ್ತದೆ. ಆದ್ದರಿಂದ ಮಿತ್ರರಾಗಿರ-ತಕ್ಕಂಥ ಶ್ರೀನಿವಾಸ್ ಅವರನ್ನು ನಾನು ಕೇಳುತ್ತಿದ್ದೇನೆ, ತಾವು ಮಾಡಿರತಕ್ಕಂಥ ಕ್ರಮವನ್ನು ನಾವು ಈ ಭಾಗದಿಂದ ನೋಡಿದ್ದೇವೆ. ಬೇರೆ ಸಂದರ್ಭವಾಗಿದ್ದರೆ ನಾನು ಇದನ್ನು ಎತ್ತುತ್ತಿರಲಿಲ್ಲ. ತಾವು ದಯವಿಟ್ಟು ಅದನ್ನು ಮಾಡಬಾರದು, ತಾವು ದಯವಿಟ್ಟು ಮಾಡಿರುವುದಕ್ಕೆ ವಿಷಾದ ವ್ಯಕ್ತ ಮಾಡಿ. ವಿಷಾದ ವ್ಯಕ್ತ ಪಡಿಸಿ, ಸಭಾಧ್ಯಕ್ಷರ ಕ್ಷಮಾಪಣೆಯನ್ನು ಕೇಳಿ. ನೀವು ಕೇಳಲೇಬೇಕಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಹೌದು, ಅವರು ಕ್ಷಮೆ ಕೇಳಲೇಬೇಕು.

(ಗೊಂದಲ)

ಉಪಾಧ್ಯಕ್ಷರು:- ಈಗ ವಾಟಾಳ್ ನಾಗರಾಜರು ಮಾತನಾಡಬೇಕೆಂದು ನಿಂತಿದ್ದಾರೆ, ಅವರು ಮಾತನಾಡಲಿ, ಎರಡು ನಿಮಿಷ ಅವರು ಮಾತನಾಡಲು ಅವಕಾಶ ಕೊಡಿ. ಅವರದು ಕ್ರಿಯಾಲೋಪ ಎಂದು ಹೇಳುತ್ತಿದ್ದಾರೆ. ತಾವೆಲ್ಲರೂ ಸಮಾಧಾನದಿಂದ ಕೇಳಿ.

ಶ್ರೀ ವಾಟಾಳ್ ನಾಗಾರಾಜ್:- ಮಾನ್ಯ ಉಪಾಧ್ಯಕ್ಷರೇ, ಮುಖ್ಯಮಂತ್ರಿಗಳು ನಾವು ಯಾರೂ ಒಂದು ಅಕ್ಷರ ಬಾಯಿಬಿಡಲಿಲ್ಲ. ನಾನಂತೂ ಸ್ಪಷ್ಟವಾಗಿ ಕುಳಿತಿದ್ದೆ. ಆದಾದ ನಂತರ, ನಾನು ಒಂದೆ-ರಡು ವಿಚಾರಗಳನ್ನು ಕೇಳಬೇಕೆಂದಿರುವಾಗ, ನೀವು ನಮಗೆ ಅವಕಾಶ ಕೊಡಲಿಲ್ಲ. ನೀವು ಕೊಡಲಿಲ್ಲ-ವೆನ್ನುವುದಕ್ಕೆ ನನ್ನ ವಿರೋಧ ಇಲ್ಲ. ನನಗೆ ಕೊಡಬೇಕೆಂದು ಒತ್ತಾಯ ಅಷ್ಟೆ. ಆದರೆ, ಈ ಸಂದರ್ಭ-ದಲ್ಲಿ ಮುಖ್ಯಮಂತ್ರಿಗಳು ಅನೇಕ ವಿಚಾರಗಳನ್ನು ಹೇಳಿಕೊಂಡು ಬಂದಾಗ ನಾವು ಅದಕ್ಕೆ ತಕ್ಕಂತೆ ಪ್ರತಿಕ್ರಿಯೆಗಳು ಏನೇನಿದೆ, ಯಾವ ತರಹ ಎಂದು ಮಾತನಾಡಬೇಕಾಗಿದೆ. ನಾನು ಒಬ್ಬ ಭಾಷಣ ಮಾಡಿದ ಮನುಷ್ಯ, ನನ್ನ ಭಾಷಣದ ಅನೇಕ ವಿಚಾರಗಳು, ಮುಖ್ಯಮಂತ್ರಿಗಳ ಉತ್ತರದಲ್ಲಿ ಬರದೇ ಇದ್ದಾಗ, ನಾನು ಕೇಳಬೇಕಾಗಿದೆ. ನಿಮ್ಮ ಗೋಪ್ಯತಾ ಒಪ್ಪಂದ ಏನು, ಇವೆಲ್ಲಾ ಅನೇಕ ವಿಚಾರಗಳನ್ನು ಕೇಳಬೇಕಾದ ಪ್ರಶ್ನೆ ಬಂದಾಗ, ನನಗೆ ಅವಕಾಶ ಸಿಕ್ಕಲಿಲ್ಲ. ತಾವು ಆಮೇಲೆ ಕ್ರಿಯಾಲೋಪ ಇಲ್ಲ-ವೆಂದು ಹೇಳಿ.

ಉಪಾಧ್ಯಕ್ಷರು:- ತಾವು ಯಾವ ವಿಷಯದ ಬಗ್ಗೆ ಮಾತನಾಡುತ್ತಿದ್ದೀರಿ.

ಶ್ರೀ ವಾಟಾಳ್ ನಾಗಾರಾಜ್:- ನಾನು ಶ್ರೀನಿವಾಸ್ ಬಗ್ಗೆ ಬರುತ್ತಾ ಇದ್ದೇನೆ.

ಉಪಾಧ್ಯಕ್ಷರು:- ನೀವು ಶ್ರೀನಿವಾಸ್ ಬಗ್ಗೆ ಮಾತ್ರ ಮಾತನಾಡಿ. ಉಳಿದ ವಿಷಯಗಳ ಬಗ್ಗೆ ಮಾತನಾಡಬೇಡಿ.

(ಗೊಂದಲ)

ಶ್ರೀ ವಾಟಾಳ್ ನಾಗಾರಾಜ್:- ನನ್ನ ಕ್ರಿಯಾಲೋಪ ಕೇಳಿ. ಆಮೇಲೆ ಬೇಕಾದರೆ ಸರಿ ಇಲ್ಲವೆಂದು ನೀವು ತಳ್ಳಿಹಾಕಿ.

ಉಪಾಧ್ಯಕ್ಷರು:- ದಯಮಾಡಿ ಹೇಳಿ. ಈಗಾಗಲೇ ನಿಲುವಳಿ ಸೂಚನೆಯನ್ನು ತಿರಸ್ಕರಿಸಲಾಗಿದೆ. ಈಗ ಜಡ್ಜ್‌ಮೆಂಟ್ ಕೊಡಲಾಗಿದೆ. ತಾವು ಮತ್ತೆ ಯಾವ ವಿಷಯದ ಬಗ್ಗೆ ಚರ್ಚೆ ಮಾಡುತ್ತಿದ್ದೀರಿ?

ಶ್ರೀ ವಾಟಾಳ್ ನಾಗಾರಾಜ್:- ನಿಮ್ಮ ತೀರ್ಪಿನ ವಿರುದ್ಧ ನನ್ನ ಕ್ರಿಯಾಲೋಪ ಅಲ್ಲ. ಮಾನ್ಯ ಶ್ರೀನಿವಾಸ್‌ರವರು ನಿಮ್ಮ ವಿರುದ್ಧ ಧಾಳಿ ನಡೆಸಿದ್ದಾರೆಂದು ಏನು ನಾಣಯ್ಯನವರು ಹೇಳಿದ್ದಾರೆ, ಅದು ನಿಮ್ಮ ವಿರುದ್ಧ ಅಲ್ಲ. ಸರ್ಕಾರದ ವಿರುದ್ಧ ಕೋಪತಾಪಗಳ ಪ್ರದರ್ಶನವೇ ಹೊರತು ನಿಮ್ಮ ವಿರುದ್ಧ ಅಲ್ಲ.

ಉಪಾಧ್ಯಕ್ಷರು:- ಈಗ ಶ್ರೀನಿವಾಸ್‌ರವರು ತಮ್ಮ ಅಭಿಪ್ರಾಯವೇನು ಎಂಬುದನ್ನು ಹೇಳಿ.

ಶ್ರೀ ಎಂ. ಶ್ರೀನಿವಾಸ್:- ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಆ ಕಡೆಯೂ ಎರಡು ಸಲ ಕುಳಿತಿದ್ದೆ. 1983 ಮತ್ತು 1989ರಲ್ಲಿ ಸರ್ಕಾರ ನಡೆಸಿದಾಗ ಕುಳಿತಿದ್ದೆ. ಆ ಪೀಠಕ್ಕೆ ಬಹಳ ಗೌರವ ಕೊಡತಕ್ಕಂಥವನು ನಾನು. ಬೇಕಾದಷ್ಟು ಸಾರಿ ಮೈಕನ್ನು ಬಿಸಾಕಿ, ಕಿತ್ತು ಹಾಕಿದ್ದನ್ನು ನೋಡಿದ್ದೇನೆ. ಆದರೂ ಆವತ್ತಿನ ದಿವಸ ನಾನು ನೊಂದುಕೊಂಡೆ. ಹಿರಿಯ ಸದಸ್ಯರು ಮಾತನಾಡಬೇಕೇ ಹೊರತು ಕಿತ್ತು ಹಾಕಬಾರದು ಎಂದು. ಆದರೆ, ಇವತ್ತು ಸರ್ಕಾರ ಉತ್ತರ ಕೊಟ್ಟಂಥಾದ್ದರಲ್ಲಿ ನನಗೆ ಬೇಸರ ಆಯಿತು. ಆ ಬೇಸರದಿಂದ ಪೇಪರನ್ನು, ಸರ್ಕಾರದ ವಿರುದ್ಧ ಕಿತ್ತುಬಿಸಾಕಿದೆನೇ ಹೊರತು, ನಿಮ್ಮ ವಿರುದ್ಧ ಅಲ್ಲ.

ಉಪಾಧ್ಯಕ್ಷರು:- ಈಗ ವಿರೋಧಿಪಕ್ಷದ ನಾಯಕರು ಮಾತನಾಡುತ್ತಾರೆ. ಅವರನ್ನು ಕರೆದಿದ್ದೇನೆ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ. ಸೋಮಶೇಖರ್:- ಮಾನ್ಯ ಉಪಾಧ್ಯಕ್ಷರೇ, ನಮ್ಮ ವಾಟಾಳ್ ನಾಗರಾಜರು ಮತ್ತು ಶ್ರೀನಿವಾಸ್‌ರವರು ಹೇಳಿದರು, ಸರ್ಕಾರ ಉತ್ತರ ಕೊಡಬೇಕಾದರೆ ಅಥವಾ ಅವರು ಮಾತನಾಡಬೇಕಾದರೆ, ಸರ್ಕಾರದ ವಿರುದ್ಧವಾಗಿ ಕೋಪತಾಪ ವ್ಯಕ್ತಮಾಡುವುದಕ್ಕೆ ವಿರೋಧಪಕ್ಷದವರಿಗೆ ಅವಕಾಶವಿದೆ, ಮಾಡಬಹುದು. ಆದರೆ, ಆ ಸಂದರ್ಭದಲ್ಲಿ ಅದು ಮಾಡಿದ್ದಲ್ಲ. ತಾವು ತಮ್ಮ ತೀರ್ಪು ಕೊಟ್ಟಾದ ಮೇಲೆ ಮಾಡಿದುದರಿಂದ ಅವರು ಏನು ಹೇಳಿದ್ದಾರೆ,

(ಗೊಂದಲ)

ಶ್ರೀ ವಾಟಾಳ್ ನಾಗಾರಾಜ್:- ಹಾಗಾದರೆ ಅವರನ್ನು ಗಲ್ಲಿಗೆ ಏರಿಸಿಬಿಡಿ. . . ಈಗ ಒಂದು ಗಲ್ಲು ನಿರ್ಮಾಣ ಮಾಡಿ, ಅವರನ್ನು ಏರಿಸಿಬಿಡೋಣ. . ಶ್ರೀನಿವಾಸ್‌ರವವನ್ನು ಗಲ್ಲಿಗೆ ಹಾಕಿಬಿಡೋಣ. . .

(ಗೊಂದಲ)

ಉಪಾಧ್ಯಕ್ಷರು:- ತಾವು ಕುಳಿತುಕೊಳ್ಳಿ, ನೀವು ಮಾತನಾಡುವಾಗ ಎಲ್ಲರೂ ಸಮಾಧಾನದಿಂದ ಇದ್ದರು. ಈಗ ತಾವು ಕೂರಬೇಕು. ಯಡಿಯೂರಪ್ಪನವರೇ, ತಾವು ದಯಮಾಡಿ ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಪ್ರತಿಪಕ್ಷದಲ್ಲಿದ್ದುಕೊಂಡು, ಎಲ್ಲಾ ವಿಷಯದಲ್ಲಿ ಜನಹಿತ ದೃಷ್ಟಿಯಿಂದ ನಮ್ಮದೇ ಆದಂಥ ರೀತಿಯಲ್ಲಿ ಇಲ್ಲಿ ಕಾರ್ಯಕಲಾಪ ನಡೆಸುತ್ತಿದ್ದೇವೆ. ಇದನ್ನು ತಡೆಯುವುದಕ್ಕೆ ಅಡ್ಡಿ ಮಾಡುವುದಕ್ಕೆ ಯಾರಿಗೂ ಅಧಿಕಾರ ಇಲ್ಲ. ಅದು ನಮ್ಮ ದಾರಿ, ನಿಮ್ಮದು ನಿಮ್ಮ ದಾರಿ. ಇವತ್ತು ನಾನು ಎದ್ದುನಿಂತುಕೊಂಡಾಗ ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದೆ, ನಾನು ಅಥವಾ ಇಲ್ಲಿರುವಂಥ ಯಾವುದೇ ಸದಸ್ಯರು, ಸನ್ಮಾನ್ಯ ಅಧ್ಯಕ್ಷಪೀಠದಲ್ಲಿ ಕುಳಿತಂಥವರು ಯಾರೇ ಒಂದು ತೀರ್ಮಾನ ಕೊಟ್ಟಮೇಲೆ, ಅದನ್ನು ಪ್ರಶ್ನೆ ಮಾಡುವಂಥ ಪ್ರಶ್ನೆ ಬರುವುದಿಲ್ಲ. ಆ ಸ್ಥಾನಕ್ಕೆ ಗೌರವವನ್ನು ಕೊಡಬೇಕಾದ್ದು ನಮ್ಮ ಕರ್ತವ್ಯ. ಅದನ್ನು ಪಾಲನೆ ಮಾಡಿಕೊಂಡು ನಾವು ಬರುತ್ತಾ ಇದ್ದೇವೆ. ನಾನು ಎದ್ದುನಿಂತಾಗ ಸ್ಪಷ್ಟಮಾಡಿದೆ. ಇಲ್ಲಿರುವಂಥ ನಾವು ಯಾರೂ ಸಹ ಸನ್ಮಾನ್ಯ ಉಪಾಧ್ಯಕ್ಷರು ಕೊಟ್ಟಂಥ ತೀರ್ಪನ್ನು ಪ್ರಶ್ನೆ ಮಾಡುತ್ತಾ ಇಲ್ಲ ಎನ್ನುವುದನ್ನು ಸ್ಪಷ್ಟಮಾಡಿ, ನಾನು ಏನು ಹೇಳುವುದಕ್ಕೆ ಹೊರಟಿದ್ದೆ. ಯಾವ ಪ್ರಶ್ನೆಗಳನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ತಮಿಳುನಾಡಿಗೆ ಹೋಗಿಬಂದ ಮೇಲೆ, ಏನು ಮಾತುಕತೆಯಾಯಿತು ಎಂಬ ಬಗ್ಗೆ ವಿವರವನ್ನು ನಾವು ಬಯಸಿದೆವೋ ಯಾವುದೇ ವಿವರಗಳಿಗೆ ನಮಗೆ ಸರಿಯಾದಂಥ ಉತ್ತರಗಳು ಸಿಗಲಿಲ್ಲ. ಸನ್ಮಾನ್ಯ ನಾಣಯ್ಯನವರು ಸಂಸದೀಯ ಸಚಿವರಾಗಿ ಈ ರೀತಿಯ ಸಂದರ್ಭಗಳು ಬಂದಾಗ, ನಾಳೆ ಪತ್ರಿಕೆಗಳಲ್ಲಿ ಯಾವ ಮಹತ್ತರವಾದಂಥ ವಿಷಯವನ್ನು ನಾವು ಚರ್ಚೆ ಮಾಡಿದೆವೋ ಅದಕ್ಕೆ, ಅದರ ಗಂಭೀರತೆಗೆ ಹೆಚ್ಚು ಮಹತ್ವ ಬರದೇ, ಇನ್ನಾವುದೋ ಒಂದು ಗೊಂದಲವನ್ನುಂಟು ಮಾಡಿ, ಸದನವನ್ನು ತಪ್ಪು ದಾರಿಗೆ ಎಳೆದು . . .

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ:- ನಾನು, ಏನು ತಪ್ಪು ದಾರಿಗೆ ಎಳೆದೆ . . . ನಾನು ತಪ್ಪು ದಾರಿಗೆ ಎಳೆದಿದ್ದರೆ ನನ್ನ ವಿರುದ್ಧ ನೀವು ಪ್ರಿವಿಲೇಜ್ ಮೂವ್ ಮಾಡಿ. ಸದನವನ್ನು ತಪ್ಪುದಾರಿಗೆ ಎಳೆಯತಕ್ಕ ಕೆಲಸವನ್ನು ಯಾರು ಮಾಡಿದರೂ, ಅವರ ವಿರುದ್ಧ ಪ್ರಿವಿಲೇಜ್ ಮೂವ್ ಮಾಡಬಹುದು.

(ಗೊಂದಲ)

ಉಪಾಧ್ಯಕ್ಷರು:- ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ.ಸಿ. ನಾಣಯ್ಯ:- ಸದನವನ್ನು ತಪ್ಪು ದಾರಿಗೆ ಎಳೆದು, ಗೊಂದಲವನ್ನು ಮಾಡುತ್ತಿದ್ದೇನೆಂದು ಹೇಳಿದರು. ಹಾಗಾದರೆ, ಅವರು ನನ್ನ ವಿರುದ್ಧ ಪ್ರಿವಿಲೇಜ್ ಮೂವ್ ಮಾಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಹೌದು, ಹೌದು.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ:- ರಾಜಕಾರಣ ಮಾಡುವುದಕ್ಕೋಸ್ಕರ ಈ ತರಹ ಮಾಡುವುದು. ನಾವು ಈಗ ಇದನ್ನು ಸುಲಲಿತವಾಗಿ ಬಗೆಹರಿಸುತ್ತಿದ್ದೇವೆ. ಸಧ್ಯ ಇವರಿಗೆ ಚರ್ಚೆ ಮಾಡುವುದಕ್ಕೆ ವಸ್ತು ಸಿಗುತ್ತಾ ಇಲ್ಲ. ರಾಜಕಾರಣ ಮಾಡುವುದನ್ನು ಬಿಟ್ಟು ಬೇರೆ ವಿಚಾರ ಇಲ್ಲ. ಅದಕ್ಕೋಸ್ಕರ ರಾಜಕಾರಣ. ಅವರಿಗೆ ಇದೊಂದೇ. ಅಯೋಧ್ಯೆ ಆಯಿತು, ಈದ್ಗಾ ಮೈದಾನ ಆಯಿತು, ಈಗ ಕಾವೇರಿ. ನಾಳೆ ಇದನ್ನು ಬಗೆಹರಿಸುತ್ತಾ ಇದ್ದೇವೆ. ಅವರಿಗೆ ಇದು ಸಮಾಧಾನ ಇಲ್ಲ. ಇದು ಬಗೆಹರಿಯುತ್ತದಲ್ಲಾ, ಚರ್ಚೆ ಮಾಡುವುದಕ್ಕೆ ವಸ್ತು ಏನು? ಈ ರಾಜಕಾರಣ ಮಾಡಿಕೊಂಡು, ಎಷ್ಟು ದಿವಸ, ನೀವು ಎಷ್ಟು ದಿವಸ ಈ ರಾಜಕಾರಣ ಮಾಡುತ್ತೀರಿ? ಎಷ್ಟು ದಿವಸ ಬೆಂಕಿ ಹಚ್ಚುತ್ತೀರಿ? ಎಷ್ಟು ದಿವಸ ಜನರನ್ನು ಎತ್ತಿಕಟ್ಟುತ್ತೀರಿ? ಜನರನ್ನು ಎತ್ತಿಕಟ್ಟತಕ್ಕಂಥ ಕಾಲ ಮುಗಿದು ಹೋಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇದು ನಿಮ್ಮ ಸ್ಥಾನಕ್ಕೆ ಗೌರವ ತರುವಂತಾದ್ದಲ್ಲ.

ಶ್ರೀ ಎಂ.ಸಿ. ನಾಣಯ್ಯ:- ನನ್ನ ಸ್ಥಾನದಲ್ಲಿ ಏನು ಹೇಳಬೇಕೋ ಅದನ್ನು ಹೇಳುತ್ತಿದ್ದೇನೆ. ನಿಮ್ಮ ಸ್ಥಾನದಲ್ಲಿ ನೀವು ಆಡಿರತಕ್ಕ ಮಾತುಗಳು, ನಿಮಗೆ ಗೌರವ ತರುತ್ತದೆಯೇ? ನೀವೇನು ಹೇಳಿದಿರಿ. ನಾನು ಸದನವನ್ನು ತಪ್ಪು ದಾರಿಗೆ ಎಳೆದಿದ್ದೇನೆಂದು ಹೇಳಿದಿರಿ. ನಾನು ತಪ್ಪು ದಾರಿಗೆ ಎಳೆದಿದ್ದರೆ, ಅಧ್ಯಕ್ಷರಿದ್ದಾರೆ, ಅವರು ಹೇಳಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅವರು ರೆಕಾರ್ಡ್ ತರಿಸಿ ನೋಡಲಿ.

ಶ್ರೀ ಎಂ.ಸಿ. ನಾಣಯ್ಯ:- ನಿಮಗೆ ಇವತ್ತು ಚರ್ಚೆಗೆ ವಸ್ತು ಇಲ್ಲದಂತಾಗುತ್ತದಲ್ಲಾ. ಸರ್ಕಾರ ಇದಕ್ಕೆಲ್ಲಾ ಪರಿಹಾರ ಕೊಡುತ್ತಿದೆಯಲ್ಲಾ. ನಿಮಗೇನು ಮಾಡಬೇಕೆಂದು ಇದೆಯೋ ಅದನ್ನು ಮಾಡಿಕೊಂಡು ಹೋಗಿ. ಆದರೆ, ಈ ತರಹ ನಾನು ತಪ್ಪು ದಾರಿಗೆ ಎಳೆದಿದ್ದೇನೆಂದು ಹೇಳುವುದಾದರೆ ನನ್ನ ಮೇಲೆ ಪ್ರಿವಿಲೇಜ್ ಮೂವ್ ಮಾಡಿ. ಸದನದಲ್ಲಿ ಯಾರಾದರೊಬ್ಬರು ಸದನವನ್ನು ತಪ್ಪು ದಾರಿಗೆ ಎಳೆದರೆ, ಅದು ಸದನದ ಹಕ್ಕುಚ್ಯುತಿಯಾಗುತ್ತದೆ. ಆದ್ದರಿಂದ, ನೀವು ನನ್ನ ವಿರುದ್ಧ ಪ್ರಿವಿಲೇಜ್ ಮೂವ್ ಮಾಡಿ. ದಯಮಾಡಿ ಆ ಕೆಲಸ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಉಪಾಧ್ಯಕ್ಷರೇ, ತಾವು ನಮ್ಮ ರಕ್ಷಣೆಗೆ ಬರಬೇಕು. ನಾನೇನಾದರೂ ಅನ್‌ಪಾರ್ಲಿಮೆಂಟರಿ ಮಾತನಾಡಿದ್ದರೆ, ಅವರಿಗೆ ಇನ್ನೇನಾದರೂ ಬೇರೆ ರೀತಿ ಮಾತನಾಡಿದ್ದರೆ, ಯಡಿಯೂರಪ್ಪನವರೇ, ನೀವು ಮಾತನಾಡಿದ್ದು ಸರಿಯಲ್ಲವೆಂದು ಹೇಳಲಿ, ನಾನು

ತಲೆಬಾಗುತ್ತೇನೆ. ನಾನು ಮಾತನಾಡಬೇಕಾದರೆ, ನಾನು ಯೀಲ್ಡ್ ಆಗುವುದಕ್ಕೆ ಮುಂಚೆ, ಅವರು ನಿಂತಾಗ ಗೌರವದಿಂದ ನಾನು ಯಾವ ರೀತಿ ಕುಳಿತೆನೋ, ಅದೇ ರೀತಿ ಅವರೂ ನನ್ನ ಮಾತನ್ನು ಹೇಳಬೇಕಾಗುತ್ತದೆ. ನನ್ನ ಸ್ಪಷ್ಟವಾದಂಥ ಅಭಿಪ್ರಾಯ ಈ ರೀತಿ ಇದೆ. ನನ್ನ ಅಭಿಪ್ರಾಯ ಏನೆಂದರೆ, ಇವತ್ತು ನಾನು ಎದ್ದು ನಿಂತುಕೊಂಡಂತಾದ್ದು, ಕೆಲವು ಸಂಗತಿಗಳನ್ನು, ಕೆಲವು ಕ್ಲಾರಿಫಿಕೇಷನ್ ಕೇಳು-ವುದಕ್ಕೆ ನಿಂತೆ. ಅಷ್ಟು ಹೊತ್ತಿಗೆ ನೀವು ರೂಲಿಂಗ್ ಕೊಟ್ಟಿದ್ದೀರಿ, ಈಗ ನಾವು ಕ್ಲಾರಿಫಿಕೇಷನ್ ಹೇಳುವ ಪ್ರಶ್ನೆ ಉದ್ಭವವಾಗುವುದಿಲ್ಲ. ಅದು ಬೇಡ. ನಮ್ಮ ನಾಣಯ್ಯನವರು ಸಂಸದೀಯ ಸಚಿವರಾಗಿ, ಈ ಮನೆಯ ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡಿ, ಸಾಕಷ್ಟು ಅನುಭವ ಇರುವುದರಿಂದ, ಯಾವ ಸಮಯದಲ್ಲಿ, ಯಾವ ವಿಷಯವನ್ನು ಯಾವ ರೀತಿ ತಿರುಚಬೇಕೆನ್ನುವುದರಲ್ಲಿ ಅವರು ಯಶಸ್ವಿಯಾಗಿ ಕೆಲಸ ಮಾಡಿದ್ದಾರೆ. ವಿರೋಧಪಕ್ಷದ ನಾಯಕರಾಗಿಯೂ ಕೆಲಸ ಮಾಡಿದ್ದಾರೆ, ಇವತ್ತೂ ಸಹ, ಯಾವ ವಿಷಯ ನಾಳೆ ಪತ್ರಿಕೆಯ ಮುಖಪುಟದಲ್ಲಿ ಬರಬೇಕೋ, ನಿಮ್ಮ ಕೊರತೆ, ಲೋಪದೋಷಗಳು ತಮಿಳುನಾಡಿಗೆ ಹೋಗಿ, ಯಾವುದೇ ಸಾಧನೆಯನ್ನು ಮಾಡದೇ, ದೊಡ್ಡ ಸಾಧನೆಯಾಯಿತು ಎಂದು ನೀವು ಹೇಳಿಕೊಂಡು ಬಂದಿರೋ, ಅದನ್ನು ಸ್ಪಷ್ಟೀಕರಣ ಕೇಳುವುದರ ಮೂಲಕ, ಉತ್ತರವನ್ನು ಪಡೆಯುವಂಥ ಪ್ರಯತ್ನ ಮಾಡಿದ ಕಾಲದಲ್ಲಿ ಅಧ್ಯಕ್ಷರು ರೂಲಿಂಗ್‌ನ್ನು ಕೊಟ್ಟರು. ಆಗ ಸನ್ಮಾನ್ಯ ಶ್ರೀನಿವಾಸ್‌ರವರು ಹಿರಿಯ ಸದಸ್ಯರಾಗಿ, ಸರ್ಕಾರದ ವಿರುದ್ಧ, ಆಕ್ರೋಶ-ಗೊಂಡು, ಪತ್ರಿಕೆಗಳನ್ನು ಹರಿದು ಹಾಕಿದೆ ಎಂದು ಅವರೇ ಸ್ಪಷ್ಟೀಕರಣ ಕೊಟ್ಟ ಮೇಲೆ, ಅಲ್ಲಿಗೆ ಅದು ಮುಗಿಯಿತು. ನಾವು ವಾಕ್ ಔಟ್ ಮಾಡುವುದಕ್ಕಾದರೂ ಏನಾದರೂ ಹೇಳಬೇಕಲ್ಲಾ ಸುಮ್ಮನೆ ಹೋಗುವುದಕ್ಕೆ ಬರುವುದಿಲ್ಲ. ನಾಳೆ ಪತ್ರಿಕೆಯಲ್ಲಿ ಯಡಿಯೂರಪ್ಪನವರು ಹಾಗೆ ಹೊರಗೆ ಹೊರಟು ಹೋದರು ಎಂದು ಬರೆಯುತ್ತಾರೆ. ಧರಣಿ ಮಾಡುವುದಕ್ಕೆ ಏನಾದರೂ ಹೇಳಬೇಕಲ್ಲಾ. ಸುಮ್ಮ-ಸುಮ್ಮನೆ ಏನಾದರೂ ಹೇಳುವುದಕ್ಕೆ ಬರುತ್ತದೆಯೇ?

ಉಪಾಧ್ಯಕ್ಷರು:- ವಿರೋಧಪಕ್ಷದ ನಾಯಕರು ಮಾತನಾಡುವಾಗ ಎಲ್ಲರೂ ಸುಮ್ಮನೇ ಇದ್ದು ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದವರು ಏನಾದರೂ ಮುಂದಿನ ಕ್ರಿಯೆ ಮಾಡಲು ಹೊರಟಾಗ ಏನಾದರೂ ಹೇಳಬೇಕಲ್ಲಾ. ಅದಕ್ಕೂ ನೀವು ಅವಕಾಶ ಕೊಡದಿದ್ದರೆ ಹೇಗೆ? ನಾನು ಏನು ಹೇಳಿದೆ ಸನ್ಮಾನ್ಯ ಸಂಸದೀಯ ಸಚಿವರು ಬಹಳ ಒಳ್ಳೆಯ ರೀತಿ-ಯಲ್ಲಿ ಸನ್ಮಾನ್ಯ ಶ್ರೀನಿವಾಸ ಅವರು ಆ ಕಾಗದವನ್ನು ಹರಿದು ಹಾಕಿದ್ದನ್ನು ತಿರುಚಿ ಹಾಕಿ ಅದಕ್ಕೆ ಒಂದು ಬೇರೆ ಬಣ್ಣವನ್ನು ಕೊಡುವಂತಹ ಪ್ರಯತ್ನ ಮಾಡಿ ಪತ್ರಿಕೆಯ ಮುಖಪುಟದಲ್ಲಿ ಬೇರೆ ವಿಷಯ ಪ್ರಿಂಟ್ ಆಗಬೇಕೆಂದು ಅವರು ಪ್ರಯತ್ನ ಮಾಡಿ ಅದರಲ್ಲಿ ಅವರು ವಿಫಲರಾದರು.

ಉಪಾಧ್ಯಕ್ಷರು:- ಅವರು ಮಾತನಾಡುವಾಗ ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಡಿ.ಟಿ. ಜಯಕುಮಾರ್:- ಮಾನ್ಯ ಅಧ್ಯಕ್ಷರೇ, ಅವರು ಬರೀ ಪ್ರಚಾರಕೋಸ್ಕರ ಈ ಎಲ್ಲಾ ನಾಟಕಗಳನ್ನು ಆಡುತ್ತಿದ್ದಾರೆ. ಬೇರೇನೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಯಾವ ಪರಿಸ್ಥಿತಿ ಬಂತು ಅಂದರೆ ನಾವು ಎಲ್ಲರಿಂದಲೂ ಬುದ್ಧಿ ಹೇಳಿಸಿಕೊಳ್ಳುವಂತಹ ಪರಿಸ್ಥಿತಿ ಬಂತಲ್ಲಾ.

ಉಪಾಧ್ಯಕ್ಷರು:- ಅವರು ಮಾತನಾಡುವಾಗ ದಯಮಾಡಿ ತಾವು ಮಾತನಾಡಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ:- ತಾವು ಅಪರೂಪಕ್ಕೆ ಒಗ್ಗಟ್ಟಾಗಿದ್ದೀರಿ, ನಾವು ನಿಮ್ಮ ಮೇಲೆ ಬಿದ್ದರೆ ಹೇಗೆ ಆಗುತ್ತದೆ?

SRI. J.H. PATEL:- Tell me sincerely, were you not convinced by my arguments?

ವಿರೋಧಪಕ್ಷದ ಸದಸ್ಯರು:- ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮುಖ್ಯಮಂತ್ರಿಗಳೇ, ಎಲ್ಲವನ್ನೂ ವಿರೋಧ ಮಾಡುವಂತಹ ಪ್ರವೃತ್ತಿ ನಮ್ಮದಲ್ಲ. ನಾನು ಏನು ಹೇಳುತ್ತೇನೆಂದು ಪೂರ್ತಿ ಕೇಳದಿದ್ದರೆ ಹೇಗೆ? ಆ ಸೌಜನ್ಯವನ್ನು ತೋರಿಸದಿದ್ದರೆ ಹೇಗೆ? ನಾನು ಒಂದು ಎರಡು ಮೂರು ಸಂಗತಿಗಳನ್ನು ಆಗಲೂ ಕೇಳಿದೆ ಈಗಲೂ ಕೇಳಿದೆ. ಇವತ್ತು ಸುಪ್ರೀಂಕೋರ್ಟ್‌ನವರ ಆದೇಶದ ಮೇಲೆ ನೀವು ತುರ್ತಾಗಿ ಮಾತುಕತೆಗೆ ತಮಿಳು-ನಾಡಿಗೆ ಹೋದಿರಿ.

ಉಪಾಧ್ಯಕ್ಷರು:- ವಿಷಯ ಏಕೆ ಮತ್ತೆ ಪ್ರಸ್ತಾಪ ಮಾಡುತ್ತಿದ್ದೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಸ್ವಾಮಿ, ನಾವು ವಾಕ್ ಔಟ್ ಮಾಡುವುದಕ್ಕೆ ಹೇಳ-ಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳೇ, ಈ ಮಾತುಕತೆ ಆದ ಮೇಲೆ ಸುಪ್ರೀಂಕೋರ್ಟಿನ ಮುಂದೆ ತಮಿಳುನಾಡಿನ ಸರ್ಕಾರದ ಮಾತುಕತೆ ಆಯಿತು, ನಾವು ನಾವು ಮಾತನಾಡಿ ಮುಗಿಸಿಕೊಂಡಿದ್ದೇವೆ. ನಿಮ್ಮ ಅಗತ್ಯ ಏನೂ ಇಲ್ಲ ಬಂದು ಅವರಾದರೂ ಸುಪ್ರೀಂಕೋರ್ಟ್ ಮುಂದೆ ಹೇಳಬೇಕು, ಅಥವಾ ತಾವು ಮತ್ತು ತಮಿಳುನಾಡು ಸರ್ಕಾರದವರು ಸೇರಿ ಒಂದು ಜಾಯಿಂಟ್ ಸ್ಟೇಟ್‌ಮೆಂಟ್‌ನ್ನು ಹಾಕ-ಬೇಕಾಗುತ್ತದೆ. ಅದೂ ಇಲ್ಲ. ಇನ್ನು ಮುಂದೆ ಬರುವಂತಹ ದಿವಸಗಳಲ್ಲಿ, ಟ್ರಿಬ್ಯುನಲ್ ಮುಂದೆ ಹೋಗುವಂತಹ ಪರಿಸ್ಥಿತಿ ಬರುತ್ತದೆಯೋ ಇಲ್ಲವೋ ಎಂದು ಕೇಳಿದ್ದಕ್ಕೆ ಅದರ ಬಗ್ಗೆ ಕೂಡ ತಾವು ಏನೂ ಹೇಳಲಿಲ್ಲ. ಸುಪ್ರೀಂಕೋರ್ಟ್ ಮುಂದೆ ನೀವು ಹೋಗುತ್ತೀರೋ ಅಥವಾ ಇಲ್ಲವೋ ಎನ್ನುವು-ದನ್ನೂ ಸಹ ಹೇಳಲಿಲ್ಲ. ನಿಮ್ಮ ಉತ್ತರದಲ್ಲಿ ಯಾವುದೇ ಒಂದು ತಿರುಳು ಇಲ್ಲದೇ ಏನೋ ಒಂದು ಹರಿಕಥೆ ರೀತಿಯಲ್ಲಿ ನಿಮ್ಮ ಉತ್ತರ ಇತ್ತು. ನಮಗೆ ನಿಮ್ಮ ಉತ್ತರದಿಂದ ಕನ್‌ವಿನ್ಸ್ ಆಗಲಿಲ್ಲ. ರಾಜ್ಯದ ಹಿತವನ್ನು ಸಂಪೂರ್ಣ ಬಲಿ ಕೊಡುವಂತಹ ಒಂದು ಷಡ್ಯಂತರ. ಪ್ರಧಾನಿ ಕುರ್ಚಿಯನ್ನು ಬಧ್ರಗೊಳಿ-ಸುವುದಕ್ಕೋಸ್ಕರ ನಮ್ಮ ಹಿತವನ್ನು ಬಲಿ ಕೊಟ್ಟಿದ್ದೀರಿ? ನಿಮ್ಮ ಕುರ್ಚಿ ಉಳಿಸಿಕೊಳ್ಳುವುದಕ್ಕೆ ಪ್ರಧಾನಿ ಕುರ್ಚಿ ಉಳಿಸಿಕೊಳ್ಳುವುದಕ್ಕೆ ಈ ಮಾತುಕತೆಯ ನಾಟಕ ಆಡುತ್ತಿದ್ದೀರಿ. ಇದನ್ನು ಪ್ರತಿಭಟಿಸಿ ನಾವು ವಾಕ್ ಔಟ್ ಮಾಡಿ ಹೊರಗೆ ಹೋಗುತ್ತಿದ್ದೇವೆ.

(ಬಿ.ಜೆ.ಪಿ. ಪಕ್ಷದ ಸದಸ್ಯರು ವಾಕ್ ಔಟ್ ಮಾಡಿದರು)

(ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡಿ ಕಾವೇರಿ ಬಗ್ಗೆ ತಮಿಳುನಾಡಿನಲ್ಲಿ ನಡೆದಂತಹ ಗೋಪ್ಯ ಚರ್ಚೆಯನ್ನು ಬಹಿರಂಗಪಡಿಸಲಿಲ್ಲ. ಅವರು ಬಹಿರಂಗಪಡಿಸದೆ ಈ ಸದನವನ್ನು ಕಡೆಗಾಣಿಸಿದ್ದಾರೆ. ಈ ರಾಜ್ಯವನ್ನು ಕಡೆಗಾಣಿಸಿದ್ದಾರೆ. ಈ ರಾಜ್ಯರ ರೈತರನ್ನು ಕಡೆಗಾಣಿಸಿದ್ದಾರೆ. ಆದರೆ ಅವರು ನನಗೆ ಯಮಬಲ ಬಂದಿದೆ ಎಂಬ ಒಂದು ಮಾತು ಹೇಳಿದರು, ಯಾವ ಸಂದರ್ಭದಲ್ಲಿ ಆ ಮಾತು ಹೇಳಿದರೋ ನನಗೆ ಗೊತ್ತಾಗಲಿಲ್ಲ. ಏಕೆ ಹೇಳಿದರೋ ನನಗೆ ಗೊತ್ತಾಗಲಿಲ್ಲ. ಈ ಯಮದರ್ಶನ ಕರ್ನಾಟಕಕ್ಕೆ ಆಗುತ್ತದೆಯೋ ಅಥವಾ ತಮಿಳುನಾಡಿಗೆ ಆಗುತ್ತದೆಯೋ ನನಗಂತೂ ಗೊತ್ತಿಲ್ಲ. ಆ ಪ್ರಶ್ನೆ ಬೇರೆ. ಆದರೆ ಇವತ್ತು ಗೋಪ್ಯವಾಗಿ ಇಟ್ಟಿರತಕ್ಕಂಥ ವಿಚಾರವನ್ನು ನನಗನ್ನಿಸುತ್ತದೆ, ಅವರ ಸಂಪೂರ್ಣವಾದ ಉತ್ತರದಲ್ಲಿ ನ್ಯಾಯ-ಮಂಡಲಿಯನ್ನು ಬಹಿಷ್ಕರಿಸಿದ್ದೇವೆ ಎಂದು ಹೇಳಲಿಲ್ಲ. ನ್ಯಾಯಮಂಡಲಿಯನ್ನು ಬಿಟ್ಟು ಮಾತನಾಡು-ತ್ತೇವೆಂದು ಹೇಳಲಿಲ್ಲ. ಆದ್ದರಿಂದ ಸರ್ಕಾರದ ಉತ್ತರ ಪ್ರಾಮಾಣಿಕವಾದ ಉತ್ತರ ಅಲ್ಲ ಎಂದು ಹೇಳಿ ನಾನು ಧರಣಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇನೆ ಸ್ವಾಮಿ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಧರಣಿ ಕುಳಿತರು)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೇ, ಆಡಳಿತ ಪಕ್ಷದಿಂದ ಜವಾಬ್ದಾರಿ ಉತ್ತರ ಇಲ್ಲದೇ ವಿರೋಧಪಕ್ಷಗಳನ್ನು ಕಡೆಗಣಿಸಿದ್ದಾರೆ ಹಾಗೂ ಇನ್ನೊಂದು ವಿಷಯವನ್ನು ಹೇಳಿದರು. ರೈತ ಸಂಘದ ಮೇಲೆ ಚೈನು ಅದೇನೋ ಹೊಡೆದು ಹಾಕುತ್ತಾರೆ ಎನ್ನುವಂತಹ ವಿಚಾರ ಬಂದಿದೆ ಎಂದು ಆ ಅಪಾದನೆಗಳ ವಿರುದ್ಧ ಆಡಳಿತ ಪಕ್ಷದ ನೀತಿಯ ವಿರುದ್ಧ ನಾನೂ ಸಹ ಧರಣಿ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ಧರಣಿ ಕುಳಿತರು)

ಶ್ರೀ ಬಿ. ಮುನಿಯಪ್ಪ:- ಮಾನ್ಯ ಅಧ್ಯಕ್ಷರೇ, ಸುಪ್ರೀಂಕೋರ್ಟ್ ಆದೇಶದಂತೆ ಕರ್ನಾಟಕ ರಾಜ್ಯ ಸರ್ಕಾರ ತಮಿಳುನಾಡಿನ ಜೊತೆಯಲ್ಲಿ ಮಾತುಕತೆ ನಡೆಸಿ ಸರ್ಕಾರದ ನಿಲುವನ್ನು ಈ ಸಭೆ-ಯಲ್ಲಿ ಮಂಡಿಸಬೇಕೆಂದು ಒಂದು ನಿಲುವಳಿ ಸೂಚನೆಯನ್ನು ಮಂಡಿಸಿದ ಸಂದರ್ಭದಲ್ಲಿ ಪಕ್ಕದ ರಾಜ್ಯವಾದ ಆಂಧ್ರಪ್ರದೇಶ ಆಗಿರಬಹುದು, ತಮಿಳುವಾಡು ಆಗಿರಬಹುದು, ಅವರ ಜೊತೆಯಲ್ಲಿ ಮಾತುಕತೆ ಮುಖಾಂತರ ನದಿನೀರಿನ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದು ಒಳ್ಳೆಯ ವಾತಾವರಣ ಎನ್ನುವುದನ್ನು ನಾನು ಸಂಪೂರ್ಣವಾಗಿ ಒಪ್ಪಿದರೂ ಕೂಡ ಇಲ್ಲಿರತಕ್ಕಂಥ ವಿರೋಧಪಕ್ಷಗಳನ್ನು ನಂಬಿಕೆಗೆ ತೆಗೆದುಕೊಳ್ಳದೇ ಮತ್ತು ನಾನು ಮಾತನಾಡುವಾಗ ಒಂದು ಮಾತನ್ನು ಹೇಳಿದೆ ನಮ್ಮ ರಾಜ್ಯದ ನಾಲ್ಕು ಜನ ಮಂತ್ರಿಗಳು ಹೋಗಿದ್ದಾರೆ. ತಮಿಳುನಾಡು ಸರ್ಕಾರದ ಜೊತೆಯಲ್ಲಿ ಮಾತ-ನಾಡುವಾಗ ಕೇಂದ್ರದ ಸಚಿವರುಗಳು ಭಾಗವಹಿಸಿದ್ದರು ಅದು ತಪ್ಪು ಎಂದು ಹೇಳುವಾಗ ಸನ್ಮಾನ್ಯ

ಮುಖ್ಯಮಂತ್ರಿಗಳು ನಮ್ಮ ರಾಜ್ಯದ ಕೇಂದ್ರ ಮಂತ್ರಿಯಾದ ಜಾಲಪ್ಪನವರೂ ಸಹ ಬಂದಿದ್ದರು ಎನ್ನುವಂತಹ ಮಾತನ್ನು ಹೇಳಿದರು; ಮಾನ್ಯ ಜಾಲಪ್ಪನವರು ಆ ಮಾತುಕತೆಯಲ್ಲಿ ಭಾಗವಹಿಸಿದ್ದ ಛಾಯಚಿತ್ರವಾಗಲಿ, ಅಥವಾ ಬೇರೆ ಯಾವುದೇ ಸುದ್ದಿ ಪ್ರಕಟವಾಗಿಲ್ಲ ಸರ್ಕಾರ ಈ ವಿಚಾರ ಚರ್ಚೆ ಮಾಡಬೇಕು ಎನ್ನುವುದನ್ನು ತಿರಸ್ಕರಿಸಿ. . .

ಶ್ರೀ ಜೆ.ಎಚ್. ಪಟೇಲ್:- ಮಾನ್ಯ ಅಧ್ಯಕ್ಷರೇ, ಅವರು ಕೇಂದ್ರದ ಮಂತ್ರಿಗಳಾಗಿ ಅವರಿಗೆ ಏನು ಕೆಲಸ ಇತ್ತೋ ಅವರು ಬಂದಿದ್ದರು. ನಮ್ಮ ಟೆಕ್ಸ್‌ಟೈಲ್ ಮಂತ್ರಿಗಳು ಬಂದಿದ್ದರು ಅವರೂ ಬಂದಿದ್ದರು. ಅವರು ತಮ್ಮ ಕಣ್ಣಿನ ಟ್ರೀಟ್‌ಮೆಂಟ್‌ಗೆ ಬಂದಿದ್ದರು. ಅಲ್ಲಿ ಅವರು ಇರಬೇಕು ಇವರು ಇರಬೇಕು ಎಂದು ಏನೂ ಇರಲಿಲ್ಲ. ನಮ್ಮ ಮಂತ್ರಿಗಳೂ ಇದ್ದರು. ನಾವು ಅವರನ್ನು ಕರೆದೆವು. But he had other engagements. ಏಕೆಂದರೆ ತಪ್ಪಾಗಬಾರದು.

ಶ್ರೀ ಬಿ. ಮುನಿಯಪ್ಪ:- ಮಾನ್ಯ ಅಧ್ಯಕ್ಷರೇ, ಈ ಒಂದು ಚರ್ಚೆಯನ್ನು ಮಾಡಬೇಕೆಂಬ ಪ್ರಸ್ತಾಪವನ್ನು ತಿರಸ್ಕರಿಸಲ್ಪಟ್ಟಿತು. ಸರ್ಕಾರದ ಪ್ರಯತ್ನದಲ್ಲಿ ನನಗೆ ವಿಶ್ವಾಸವಿದ್ದರೂ ಕೂಡ ವಿರೋಧ-ಪಕ್ಷದವರನ್ನು ಗಣನೆಗೆ ತೆಗೆದುಕೊಂಡಿಲ್ಲ ಎನ್ನುವಂತಹ ವಿಚಾರವನ್ನು ಹೇಳಿ ನಾನು ಸಭೆಯಿಂದ ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ವಿ. ಮುನಿಯಪ್ಪನವರು ಸಭಾತ್ಯಾಗ ಮಾಡಿದರು)

ಶ್ರೀ ಯು.ಆರ್. ಸಭಾಪತಿ:- ಮಾನ್ಯ ಅಧ್ಯಕ್ಷರೇ, ಮುಖ್ಯವಾಗಿ ಸರಿಯಾದ ಮಾಹಿತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಲಿಲ್ಲ. ತಾತ್ಕಾಲಿಕವಾದ ಒಪ್ಪಂದವನ್ನು ಮಾಡಿದ್ದೇವೆಂದು ಹೇಳಿದ ಮೇಲೆ ಯಾವುದೇ ರೀತಿಯ ಮಾಹಿತಿಯನ್ನು ನಮಗೆ ಒದಗಿಸದೇ ಮದ್ರಾಸ್‌ನಲ್ಲಿ ನಡೆದ ಮಾತುಕತೆ ಏನು ಎನ್ನುವುದನ್ನು ಸ್ಪಷ್ಟಪಡಿಸಲಿಲ್ಲ. ನಮಗೆ ಪ್ರಧಾನಿಯವರು ಇದ್ದಾರೆ ಎನ್ನುವ ಯಮಪ್ರದರ್ಶನ ನಮ್ಮ ಹತ್ತಿರ ತೋರಿಸುವುದು ಇದ್ದರೆ ನಮ್ಮ ಹತ್ತಿರ ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವುದ-ಕ್ಕೋಸ್ಕರ ಭೀಮ ಬಲ ಇದೆ ಎನ್ನುವುದನ್ನು ಸಾಬೀತು ಪಡಿಸಬೇಕಾಗುತ್ತದೆ ಅಷ್ಟೇ ಅಲ್ಲ ಅದನ್ನು ಪ್ರತಿಭಟಿಸಿ ನಾವೂ ಧರಣಿ ಮಾಡುತ್ತೇವೆ

(ಕೆ.ಸಿ.ಪಿ. ಸದಸ್ಯರು ಧರಣಿ ಕುಳಿತರು)

ಪ್ರಕಟಣೆ

ಅಧ್ಯಕ್ಷರು:- ನಾಳೆಯಿಂದ ಸದನವು 9-30 ಗಂಟೆಯಿಂದ ರಾತ್ರಿ 7-30 ಗಂಟೆಯವರೆಗೂ ಸಭೆ ಸೇರುವುದು. ದಿನಾಂಕ 10ನೇ ಆಗಸ್ಟ್ 96ರ ಶನಿವಾರ ಸಹ ಸಭೆ ಸೇರುವುದು. ಎಲ್ಲಾ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವ ಕಾರ್ಯಕಲಾಪವು ದಿನಾಂಕ 12ನೇ ಆಗಸ್ಟ್ 1996ಕ್ಕೆ ಮುಕ್ತಾಯಗೊಳಿಸಲಾಗುವುದು. ಧನವಿನಿಯೋಗ ವಿಧೇಯಕಗಳು ಹಾಗೂ ತೆರಿಗೆ ವಿಧೇ-